ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಗುರುವಾರ, 26 ಫೆಬ್ರವರಿ 2026
ಸಂಪುಟ 15, ಸಂಚಿಕೆ 339, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ಭಾರತ-ಇಸ್ರೇಲ್ ಬಂಧ • ಪುಟ ೩

ಕಿರುಸುದ್ದಿ

ಕುಸುಮ ರೋಗಿಗಳಿಗೆ ಡಿಸಿಎಂ ಡಿಕೆಶಿ ಅಭಯ

ಬೆಂಗಳೂರು: ದೀರ್ಘಕಾಲದ ರಕ್ತ ಹೆಪ್ಪುಗಟ್ಟುವಿಕೆಯ ಅಸ್ವಸ್ಥತೆಯಿಂದ ಬಳಲುತ್ತಿರುವ ಹಿಮೋಫಿಲಿಯಾ ರೋಗಿಗಳ ಜತೆಗೆ ಸರ್ಕಾರ ನಿಲ್ಲಲಿದೆ. ರೋಗಿಗಳಿಗೆ ಶಾಶ್ವತ ಪರಿಹಾರ ಮತ್ತು ಘನತೆಯ ಬದುಕು ಒದಗಿಸುವುದು ಕುಸುಮ ಸಂಜೀವಿನಿ ಯೋಜನೆಯ ಧ್ಯೇಯೋದ್ದೇಶವಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಧೈರ್ಯ ತುಂಬಿದರು.

• ಪುಟ ೩

ರಾಹುಲ್ ವಿದೇಶಿ ಶಕ್ತಿಗಳ ಕೈಗೊಂಬೆ: ಪಿಯೂಷ್

ಹೊಸದಿಲ್ಲಿ: ಪ್ರಧಾನಿ ಮೋದಿಯವರು ದೇಶಹಿತದ ವಿಷಯದಲ್ಲಿ ಎಂದೂ ರಾಜಿ ಮಾಡಿಕೊಳ್ಳುವ ಪ್ರಶ್ನೇ ಇಲ್ಲ. ಆದರೆ ರಾಹುಲ್ ಗಾಂಧಿ,ಅವರ ಗಾಂಧಿ ಕುಟುಂಬ ಮತ್ತು ಕಾಂಗ್ರೆಸ್ ವಿದೇಶಿ ಶಕ್ತಿಗಳ ಕೈಗೊಂಬೆಯಾಗಿ ಈಗ ದೇಶದಲ್ಲಿ ಕಾರ್ಯಾಚರಿಸುವ ಮೂಲಕ ದೇಶಹಿತದೊಂದಿಗೆ ರಾಜಿ ಮಾಡಿಕೊಳ್ಳುತ್ತಿರುವುದೇ ವಾಸ್ತವ ಸಂಗತಿ ಎಂದು ವಾಣಿಜ್ಯೋದ್ಯಮ ಸಚಿವ ಪಿಯೂಷ್ ಗೋಯಲ್ ತರಾಟೆಗೆತ್ತಿಕೊಂಡಿದ್ದಾರೆ.

• ಪುಟ ೭

ಎನ್‌ಸಿಇಆರ್‌ಟಿ ವಿವಾದಿತ ಅಧ್ಯಾಯಕ್ಕೆ ಶೀಘ್ರ ಕತ್ತರಿ?

• ಪುಟ ೭

ಮೈಕ್ ನಿಷೇಧಗೊಳಿಸುವಂತೆ ಪೊಲೀಸರಿಗೆ ದೂರು

ದೇಗುಲದ ಗಂಟೆ, ಜಾಗಟೆ ಸದ್ದಿಗೆ ಮುಸ್ಲಿಮನ ತಂಟೆ!

ಚಿಕ್ಕಮಗಳೂರು: ದೇವಸ್ಥಾನದಲ್ಲಿ ಪೂಜೆ ವೇಳೆ ಗಂಟೆ, ಜಾಗಟೆ ಬಾರಿಸುವುದಕ್ಕೆ ಮುಸ್ಲಿಂ ವ್ಯಕ್ತಿಯೊಬ್ಬ ಆಕ್ಷೇಪಿಸಿದ್ದು, ಪೊಲೀಸರ ಎದುರೇ ವಾಗ್ವಾದ ನಡೆದ ಘಟನೆ ನಗರದ ಹಳೇ ಉಪ್ಪಳ್ಳಿ ಬಡಾವಣೆಯಲ್ಲಿ ನಡೆದಿದೆ.

ಪುರಾತನ ಕಾಲದ ಈಶ್ವರ ದೇವಾಲಯದ ನವೀಕರಣ ಕಾರ್ಯ ನಡೆಯುತ್ತಿದೆ. ದೇವಸ್ಥಾನದ ಅಕ್ಕಪಕ್ಕದಲ್ಲಿ ಹಿಂದುಗಳು ವಾಸವಿದ್ದಾರೆ. ಸ್ವಲ್ಪ ದೂರದಲ್ಲೇ ಫಾರೂಕ್ ಮನೆಯೂ ಇದೆ. ಈಶ್ವರ ದೇವಸ್ಥಾನದಲ್ಲಿ ಬೆಳಗ್ಗೆ, ಸಂಜೆ ಪೂಜೆ ಮಾಡುವಾಗ ಗಂಟೆ, ಜಾಗಟೆ ಬಾರಿಸುತ್ತಾರೆ, ದೊಡ್ಡದಾಗಿ ಭಜನೆ, ಹಾಡುಗಳನ್ನು ಹಾಕುತ್ತಾರೆ. ಇದರಿಂದ ನಮಗೆ ತೊಂದರೆಯಾಗುತ್ತಿದೆ ಎಂದು ಫಾರೂಕ್ ತಕರಾರು ಎತ್ತಿದ್ದಾರೆ.ಬೆಳಗ್ಗೆ 6 ಗಂಟೆಗೆ ಗಂಟೆ, ಜಾಗಟೆ ಬಾರಿಸುವುದರಿಂದ ನಿದ್ದೆ ಹಾಳಾಗುತ್ತಿದೆ. ಮಕ್ಕಳು ಓದಿಕೊಳ್ಳಲು ಆಗುವುದಿಲ್ಲ ಎಂದು ಕ್ಯಾತೆ ತೆಗೆದಿದ್ದು, 112 ಪೊಲೀಸರಿಗೆ ಕರೆಮಾಡಿ ಧ್ವನಿವರ್ಧಕ ನಿಲ್ಲಿಸಬೇಕೆಂದು ಒತ್ತಾಯಿಸಿದ್ದಾರೆ.

ಈ ಬಗ್ಗೆ ದೇವಸ್ಥಾನದ ಅರ್ಚಕ ಜಗದೀಶ್ ಭಟ್ ಪ್ರತಿಕ್ರಿಯಿಸಿ, ನಮ್ಮ ಆರಾಧನೆಯಿಂದ ಇನ್ನೊಬ್ಬರಿಗೆ ತೊಂದರೆಯಾಗಲು ನಾವು ಅವಕಾಶ ಕೊಡುವುದಿಲ್ಲ. ಗಂಟೆ, ಜಾಗಟೆಯಿಂದ ಬೇರೆಯವರಿಗೆ ತೊಂದರೆ ಆಗುವಷ್ಟರಮಟ್ಟಿನ ಶಬ್ದ ಬರುವುದಿಲ್ಲ ಎಂದು ಸ್ಪಷ್ಟನೆ ನೀಡಿದ್ದಾರೆ. ಬಸವನಹಳ್ಳಿ ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಮಾಹಿತಿ ಪಡೆದುಕೊಂಡಿದ್ದಾರೆ. ನಾವು ಧ್ವನಿವರ್ಧಕವನ್ನು ನಿಧಾನವಾಗಿ ಬಳಸುತ್ತೇವೆ. ಭಜನೆ ಮತ್ತು ಜಾಗಟೆ ದೇವಾಲಯದ ಭಕ್ತಿಯ ಭಾಗ. ಇದನ್ನು ನಿಲ್ಲಿಸಲು ಸಾಧ್ಯವಿಲ್ಲ ಎಂದು ಅರ್ಚಕ ಜಗದೀಶ್ ಭಟ್ ಪೊಲೀಸರಿಗೆ ತಿಳಿಸಿದ್ದಾರೆ. ಆದರೆ ಫಾರೂಕ್ ತಮ್ಮ ಮನೆಗೆ ಶಬ್ದ ಬರುತ್ತದೆ. ➡ ಪುಟ ೪



ಬಸ್ ನಿರ್ವಾಹಕನ ಮೇಲೆ ಮುಸ್ಲಿಮರಿಂದ ತೀವ್ರ ಹಲ್ಲೆ

ಕೊಳ್ಳೇಗಾಲ: ಪಟ್ಟಣದ ಹೊರ ವಲಯದ ಪಾಪನಕೆರೆ ಬಳಿ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಕರಿಬ್ಬರು ಬಸ್ ನಿರ್ವಾಹಕನ ಮೇಲೆ ಗಲಾಟೆ ಮಾಡಿ ಹಲ್ಲೆ ಮಾಡಿರುವ ಘಟನೆ ಬುಧವಾರ ನಡೆದಿದೆ. ಕನಕಪುರ ತಾಲೂಕಿನ ದೊಡ್ಡಕಬ್ಬಳ್ಳಿ ಗ್ರಾಮದ ಬಸ್ ನಿರ್ವಾಹಕ ಮುನಿ ಮಾದಯ್ಯ (42) ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದಾರೆ. ➡ ಪುಟ ೪

ಮೊಬೈಲ್ ವಿಚಾರ: ಹಿಂದು ಯುವಕನಿಗೆ ಇರಿತ

ಚಿತ್ರದುರ್ಗ: ಕ್ಷುಲ್ಲಕ ಕಾರಣಕ್ಕೆ ಯುವಕನ ಮೇಲೆ ಹಲ್ಲೆ ಮಾಡಿ ಚಾಕು ಇರಿದಿರುವ ಘಟನೆ ಚಿತ್ರದುರ್ಗ ನಗರದ ಸಂತೆಹೊಂಡದ ಬಳಿ ಬುಧವಾರ ಮಧ್ಯಾಹ್ನ ನಡೆದಿದೆ. ಗಾಯಗೊಂಡ ಯುವಕನನ್ನು ಮೊಬೈಲ್ ಅಂಗಡಿ ಮಾಲೀಕ ವಿಕ್ರಮ್ ಚೌಧರಿ ಎಂದು ಗುರುತಿಸಲಾಗಿದೆ. ➡ ಪುಟ ೪

ಮೋದಿ ಆಡಳಿತಕ್ಕೆ ಟ್ರಂಪ್ ಪರೋಕ್ಷ ಮೆಚ್ಚುಗೆ

ಯುದ್ಧದಲ್ಲಿ ಪಾಕ್ ಪಿಎಂ ಸಾವಾಗ್ತಿತ್ತು

ವಾಷಿಂಗ್ಟನ್: ಭಾರತ ಮತ್ತು ಪಾಕಿಸ್ತಾನ ಯುದ್ಧ ಸಂಘರ್ಷದಲ್ಲಿ ತಾನು ಮಧ್ಯ ಪ್ರವೇಶಿಸದೆ ಇದ್ದಿದ್ದರೆ ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಮೃತಪಡುತ್ತಿದ್ದರು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದು, ಭಾರತದ ಅಪರೇಷನ್ ಸಿಂದೂರ ತೀವ್ರತೆ ಬಹಿರಂಗವಾಗಿದೆ. ಅಲ್ಲದೆ, ಭಾರತೀಯ ಸಶಸ್ತ್ರ ಪಡೆಗಳ ಯುದ್ಧ ಸಾಮರ್ಥ್ಯವನ್ನು ಟ್ರಂಪ್ ಜಗತ್ತಿಗೆ ಸಾರಿದ್ದಾರೆ.

ಅಮೆರಿಕ ಸಂಸತ್ತಿನ ಸ್ಟೇಟ್ ಆಫ್ ದಿ ಯೂನಿಯನ್ ಭಾಷಣದಲ್ಲಿ ಅಧ್ಯಕ್ಷ ಟ್ರಂಪ್, ಜಾಗತಿಕವಾಗಿ ಒಟ್ಟು



8 ಯುದ್ಧಗಳನ್ನು ನಿಲ್ಲಿಸಿದ್ದೇನೆ. ಇದರಲ್ಲಿ ಭಾರತ ಮತ್ತು ಪಾಕ್ ಸಂಘರ್ಷ ಬಹಳ ಪ್ರಮುಖ ಮತ್ತು ಅತ್ಯಂತ ಅಪಾಯಕಾರಿ ಸಂಘರ್ಷ. ಇವರ ನಡುವಿನ ಪರಮಾಣು ಯುದ್ಧವನ್ನು ತಡೆ ದಿದ್ದೇನೆ. ಭಾರತ ಮತ್ತು ಪಾಕ್ ನಡುವಿನ ಸಂಘರ್ಷ ದಲ್ಲಿ ನಾನು ಮಧ್ಯಪ್ರವೇಶಿಸದಿದ್ದರೆ, ಪಾಕ್ ಪ್ರಧಾನಿ ಷರೀಫ್ ಮೃತಪಟ್ಟಿರುತ್ತಿದ್ದರು ಎನ್ನುವ ಮೂಲಕ ಸಿಂದೂರದ ಕಾರ್ಯಾಚರಣೆಯ ತೀವ್ರತೆಯನ್ನು ಪರೋಕ್ಷವಾಗಿ ಒಪ್ಪಿಕೊಂಡಿದ್ದಾರೆ.

11 ಫೈಟರ್ ಜೆಟ್ಸ್ ನಾಶ: 2025ರ ಮೇನಲ್ಲಿ ನಡೆದಿದ್ದ ಸಿಂದೂರ ಕಾರ್ಯಾಚರಣೆ ಕುರಿತು ಕೆಲವು ದಿನಗಳ ಹಿಂದಷ್ಟೇ ಮಾತನಾಡಿದ್ದ ಅಧ್ಯಕ್ಷ ಟ್ರಂಪ್, ಭಾರತ, ಪಾಕ್ ನಡುವಿನ ಸಂಘರ್ಷದಲ್ಲಿ 11 ಯುದ್ಧ ವಿಮಾನಗಳು ಉರುಳಿದ್ದವು. ➡ ಪುಟ ೪



- ಯುದ್ಧ ನಿಲ್ಲಿಸಿದ್ದು ನಾನೇ ಎಂಬ ಟ್ರಂಪ್ ವರಸೆ ಬದಲು
- ಈಗ ಭಾರತಕ್ಕೆ ಹೊಗಳಿಕೆ
- ನಾನು ಮಧ್ಯ ಪ್ರವೇಶಿಸದಿದ್ದರೆ, ಮೃತಪಡುತ್ತಿದ್ದರು ಪಾಕಿಸ್ತಾನದ ಪ್ರಧಾನಿ

ಸಿಂದೂರದ ತೀವ್ರತೆ ಒಪ್ಪಿಕೊಂಡ ಟ್ರಂಪ್

ಕಳೆದ 10 ತಿಂಗಳಲ್ಲಿ 8 ಯುದ್ಧಗಳನ್ನು ನಿಲ್ಲಿಸಿದ್ದೇನೆ. ಒಂದು ವೇಳೆ ಪಾಕಿಸ್ತಾನ ಮತ್ತು ಭಾರತ ಪರಮಾಣು ಯುದ್ಧ ನಡೆಸಿದ್ದರೆ, ಸುಮಾರು 35 ದಶಲಕ್ಷ (ಮೂರೂವರೆ ಕೋಟಿ) ಜನರು ಮೃತಪಡುತ್ತಿದ್ದರು. ನಾನು ಮಧ್ಯಪ್ರವೇಶಿಸದಿದ್ದರೆ ಪಾಕ್ ಪ್ರಧಾನಿ ಶೆಹಬಾಜ್ ಅವರೇ ಮೃತಪಡುತ್ತಿದ್ದರು ಎಂದು ಟ್ರಂಪ್ ಹೇಳಿದ್ದಾರೆ. ➡ ಪುಟ ೪

ಕಿರುಸುದ್ದಿ

ಸಾರ್ವಜನಿಕ ವಿಚಾರಣೆ ಸಭೆ

ಹುಬ್ಬಳ್ಳಿ: ಕರ್ನಾಟಕ ವಿದ್ಯುಚ್ಛಕ್ತಿ ಆಯೋಗ, ಬೆಂಗಳೂರು ಅವರು ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತದ, ಆರ್ಥಿಕ ವರ್ಷ2024-25 ರ ವಾರ್ಷಿಕ ಕಾರ್ಯಕ್ಷಮತೆ ಪರಿಶೀಲನೆ ಅರ್ಜಿಯ ಸಂಬಂಧ ಇಲ್ಲಿಯ ಗೋಪನಕೊಪ್ಪದಲ್ಲಿ ಸಾರ್ವಜನಿಕ ವಿಚಾರಣೆ ಸಭೆಯನ್ನು ಫೆ.26ರಂದು ಬೆಳಗ್ಗೆ 10 ಗಂಟೆಗೆ ಏರ್ಪಡಿಸಲಾಗಿದ್ದು, ಆಸಕ್ತರು ಸಾರ್ವಜನಿಕ ವಿಚಾರಣೆಯಲ್ಲಿ ಭಾಗವಹಿಸಿ, ತಮ್ಮ ಸಲಹೆ, ಆಕ್ಷೇಪಣೆಗಳನ್ನು ಮೌಖಿಕ ಅಥವಾ ಲಿಖಿತರೂಪದಲ್ಲಿ ಸಲ್ಲಿಸಲು ಹು.ವಿ.ಸ.ಕಂ.ನಿ. ನಿಯಂತ್ರಣಾಧಿಕಾರಿಗಳು ತಿಳಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

ಧಾರವಾಡ: ತಾಲೂಕಿನ ತಬಕದಹೊನ್ನಳ್ಳಿಯ 110 ಕೆ.ವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ 10 ಎಂವಿಎ ಪವರ್ ಟ್ರಾನ್ಸ್‌ಫಾರ್ಮರ್‌ನ ತುರ್ತು ಕಾಮಗಾರಿಯ ಹಿನ್ನೆಲೆ ಫೆ.26ರಂದು ಬೆಳಗ್ಗೆ 7 ರಿಂದ ಸಂಜೆ 7 ಗಂಟೆಯ ವರೆಗೆ ವಿವಿಧೆಡೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ. 11 ಕೆವಿ ಮಾರ್ಗಗಳಾದ ತಬಕದಹೊನ್ನಳ್ಳಿ, ಮುಕ್ಕಲ, ಬಿರವಳ್ಳಿ, ಬೆಂಡಲಗಟ್ಟಿ, ಮಲಕನಕೊಪ್ಪ, ಜಿನ್ನೂರ, ಪರಸಾಪುರ, ದ್ಯಾವನಕೊಂಡ, ಗುಡ್ಡದ ಹುಲಿಕಟ್ಟಿ, ಸೋಲಾರಗೊಪ್ಪ, ಹುಣಸಿಕಟ್ಟಿ, ಗರಡಹೊನ್ನಳ್ಳಿ, ಬಿದರಗಡ್ಡಿ, ಆಸ್ತಕಟ್ಟಿ, ನೆಲ್ಲಿಹರವಿ, ಗಂಜಿಗಟ್ಟಿ, ನಾಗನೂರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸುತ್ತುಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಮಾಹಿತಿ ತಂತ್ರಜ್ಞಾನ ಉತ್ಸವ

ಹುಬ್ಬಳ್ಳಿ: ಕೆ.ಎಲ್.ಇ ಸಂಸ್ಥೆಯ ಪಿ.ಸಿ. ಜಾಬಿನ್ ವಿಜ್ಞಾನ ಮಹಾವಿದ್ಯಾಲಯ ಬಿಸಿಯ ವಿಭಾಗದಲ್ಲಿ ಅಕ್ಯೂಮನ್-2026 ರಾಷ್ಟ್ರೀಯ ಮಟ್ಟದ ಮಾಹಿತಿ ತಂತ್ರಜ್ಞಾನ ಉತ್ಸವವನ್ನು ಫೆ.27ರಂದು ಬೆಳಗ್ಗೆ 9 ಗಂಟೆಗೆ ಆಯೋಜಿಸಲಾಗಿದೆ

ವಿದ್ಯಾರ್ಥಿಗಳಿಗೆ ಮೈಂಡ್- ಕ್ಲಾಶ್, ಕಂಟೇಕ್ಸಟ್ -ಫ್ಯುಜನ್, ಗ್ಲಿಚ್-ಕ್ರಾಫ್ಟ್, ಟೆಕ್‌ಟ್ರಿವಿಯಥಾನ್, ಎಕ್ಸೆಡ್ ದಿಆನ್‌ಎಕ್ಸೆಡ್ ಎಂಬ ಎಈ ತಂತ್ರಜ್ಞಾನದ ಅತ್ಯುತ್ತಮ ಚಟುವಟಿಕೆಗಳ ಮುಖಾಂತರ ವಿದ್ಯಾರ್ಥಿಗಳ ಪ್ರತಿಭೆಯನ್ನು ಹೊರತರುವ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ವೀರಾಗ್ರಹಣಿತಂಡಕ್ಕೆ ರೂ.10.000 ಸಾವಿರರೂಪಾಯಿ ನಗದು, ಪಾರಿತೋಷಕ ಮತ್ತು ಪ್ರಮಾಣ ಪತ್ರ ಬಹುಮಾನ ವಿತರಣಾ ಸಮಾರಂಭವೂ ಸಂಜೆ 5.30 ಗಂಟೆಗೆ ಜರುಗಲಿದೆ. ನಗರದ ಸ್ವರ್ಣ ಸಮೂಹ ಸಂಸ್ಥೆಗಳ ಸಂಸ್ಥಾಪಕ ವಿ.ಎಸ್.ವಿ. ಪ್ರಸಾದ ಹುಬ್ಬಳ್ಳಿ ಆಗಮಿಸಲಿದ್ದು, ಅಧ್ಯಕ್ಷತೆಯನ್ನು ಪ್ರಾಚಾರ್ಯ ಡಾ. ಸಂಧ್ಯಾಕುಲಕರ್ಣಿ ವಹಿಸಲಿದ್ದಾರೆ. ಈ ಉತ್ಸವ ನೂತನತಂತ್ರಜ್ಞಾನ ಚಟುವಟಿಕೆಗಳಿಂದ ಕೂಡಿದ್ದು, ವಿದ್ಯಾರ್ಥಿಗಳಿಗೆ ಉಜ್ವಲ ಭವಿಷ್ಯ ಅವರ ಪ್ರತಿಭೆ, ಮೌಲ್ಯಾಧಾರಿತ ವ್ಯಕ್ತಿತ್ವಕೌಶ್ಯಲತೆ ಮತ್ತು ಆಧುನಿಕ ತಾಂತ್ರಿಕ ಜ್ಞಾನ, ವೈಜ್ಞಾನಿಕ ಮತ್ತು ಸಾಮಾನ್ಯ ಜ್ಞಾನವನ್ನು ಬೆಳೆಸಿಕೊಳ್ಳಲು ಉತ್ತಮ ವೇದಿಕೆಯಾಗಿದೆ ಎಂದು ಬಿಸಿ ಸಂಯೋಜಕ ಪ್ರೊ. ಸಿದ್ದಲಿಂಗಪ್ಪ ಸಿ. ಕಡಕೋಳ ತಿಳಿಸಿದ್ದಾರೆ.

ಇಂದು ಸಮ್ಮೇಳನ

ಧಾರವಾಡ: ಕನ್ನಡ ಸಾಹಿತ್ಯ ಪರಿಷತ್ ಧಾರವಾಡ ತಾಲೂಕು 12ನೇ ಕನ್ನಡ ಸಾಹಿತ್ಯ ಸಮ್ಮೇಳನ ನಗರದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಭವನದಲ್ಲಿ ಜುರುಗಲಿದೆ. ಡಾ.ಚಂದ್ರಶೇಖರ ರೊಟ್ಟಿಗವಾಡ ಸರ್ವಾಧ್ಯಕ್ಷತೆಯಲ್ಲಿ ನಡೆಯುವ ಸಮ್ಮೇಳನದಲ್ಲಿ ಬೆಳಗ್ಗೆ 8.30ಕ್ಕೆ ಗಣ್ಯರು ರಾಷ್ಟ್ರಧ್ವಜ, ನಾಡಧ್ವಜ ಹಾಗೂ ಪರಿಷತ್ ಧ್ವಜಾರೋಹಣ ನೆರವೇರಿಸಲಿದ್ದಾರೆ. ಬೆಳಗ್ಗೆ 9ಕ್ಕೆ ಸರ್ವಾಧ್ಯಕ್ಷರ ಭವ್ಯ ಮೆರವಣಿಗೆ ಹಾಗೂ ಕನ್ನಡಕ್ಕಾಗಿ ನಡಿಗೆ ಬಳಿಕ ಬೆಳಗ್ಗೆ 10ಕ್ಕೆ ಹಿರಿಯ ಸಾಹಿತಿ ಪ್ರೊ.ಶಾಂತಿನಾಥ ದಿಬ್ಬದ ಸಮ್ಮೇಳನಕ್ಕೆ ಚಾಲನೆ ನೀಡಲಿದ್ದಾರೆ.

ಹಿಂದೂ ಬಂಧು ಸಮಾವೇಶ

ಹುಬ್ಬಳ್ಳಿ: ಹಿಂದೂ ಶಕ್ತಿ ಸೇನಾ ವತಿಯಿಂದ ವೀರ ಸಾವರ್ಕರ್ ಪುಣ್ಯತಿಥಿ ಅಂಗವಾಗಿ ಫೆ.26 ರಂದು ಸಂಜೆ 6ಕ್ಕೆ ಮೂರುಸಾವಿರ ಮಠದ ಶಾಲಾ ಮೈದಾನದಲ್ಲಿ ಹಿಂದೂ ಬಂಧು ಸಮಾವೇಶ ಏರ್ಪಡಿಸಲಾಗಿದೆ ಎಂದು ಸೇನಾ ಅಧ್ಯಕ್ಷ ಈರಣ್ಣ ಶಿರಗುಪ್ಪಿ ಹೇಳಿದರು.

ನಗರದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಾವೇಶದ ಸಾನ್ನಿಧ್ಯವನ್ನು ಕುಂದಗೋಳ ಕಲ್ಯಾಣಪುರ ಮಠದ ಅಭಿನವ ಬಸವಣ್ಣಜ್ಜನವರು ವಹಿಸುವರು. ಶಾಸಕ ಬಸನಗೌಡ ಪಾಟೀಲ ಯತ್ನಾಳ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಶ್ರೀರಾಮ ಸೇನೆ ಮುಖ್ಯಸ್ಥ ಪ್ರಮೋದ ಮುತಾಲಿಕ್ ಮುಖ್ಯ ಭಾಷಣಕಾರರಾಗಿ ಆಗಮಿಸುವರು ಎಂದರು. ಸಾಯಿಕುಮಾರ ಸಂತಬಾ, ನಿತಿನ್ ನಾಶಿ, ರಾಜೀವ ಇನಾಂದಾರ, ಮಹೇಂದ್ರ ಗಿಣಿಮಾವ ಇದ್ದರು.

ಪಾರ್ವತೆವ್ವ ಯರಿಬ್ಯೆಲ್ ನಿಧನ

ಹುಬ್ಬಳ್ಳಿ: ಕಲಘಟಗಿ ತಾಲೂಕಿನ ಮುಕ್ಕಲ ಗ್ರಾಮದ ನಿವಾಸಿ ಪಾರ್ವತೆವ್ವ ಯರಿಬ್ಯೆಲ್ (84) ಮಂಗಳವಾರ ನಿಧನರಾದರು. ಅವರಿಗೆ ಪತ್ರಕರ್ತ ಬಸವರಾಜ ಯರಿಬ್ಯೆಲ್ ಸೇರಿ ಮೂವರು ಪುತ್ರರು, ನಾಲ್ವರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.





ಧಾರವಾಡ: ಇಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿ ಕೇಂದ್ರ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ಕಡಲೆಕಾಳು ಖರೀದಿಗೆ ಎಪಿಎಂಸಿ ಅಧ್ಯಕ್ಷ ರಾಮಣ್ಣ ಕಣಾಜಿ ಚಾಲನೆ ನೀಡಿದರು.

ವಿದ್ಯಾರ್ಥಿಗಳಲ್ಲಿ ರಾಷ್ಟ್ರ ಭಕ್ತಿ ಅಗತ್ಯ: ಡಾ.ಹಂಡಿಗಿ

ನವಲಗುಂದ: ವಿದ್ಯಾರ್ಥಿ ಜೀವನ ಸ್ಪರ್ಧಾತ್ಮಕತೆಯಿಂದ ಕೂಡಿದ್ದು, ಹೊಸತನದ ಶಿಕ್ಷಣದ ಜೊತೆಗೆ ಮೌಲ್ಯಯುತ ನೈತಿಕ ಶಿಕ್ಷಣ ನೀಡಿ ಅವರಲ್ಲಿ ರಾಷ್ಟ್ರ ಭಕ್ತಿ ತುಂಬಿ ಸಿದ್ಧಗೊಳಿಸಬೇಕಾಗಿದೆ ಎಂದು ಶಿಕ್ಷಕ ಸಾಹಿತಿ ಡಾ. ಸಿದ್ಧಲಿಂಗೇಶ ಹಂಡಿಗಿ ಹೇಳಿದರು.

ಸ್ಥಳೀಯ ವಿಶ್ವವಿಜೇತ ಶೈಕ್ಷಣಿಕ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಶಾಲೆಯಲ್ಲಿ ಜರುಗಿದ ಶಾಲಾ ವಾರ್ಷಿಕೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಸುಹಾಸ ಆನೇಗುಂದಿ ಮಾತನಾಡಿ, ಮಕ್ಕಳಲ್ಲಿ ದೇಶಪ್ರೇಮ ಬೆಳೆಸಿ, ಗುರು ಹಿರಿಯರನ್ನು ಗೌರವಿಸುವ ಪರಂಪರೆ ಬೆಳೆಸುವಲ್ಲಿ ಈ ಶಾಲೆಯ ಕೊಡುಗೆ ಗಮನಾರ್ಹವಾಗಿದೆ ಎಂದರು.

ಕರ್ನಾಟಕ ವಿಶ್ವವಿದ್ಯಾಲಯದ ಮಾಜಿ ಸಿನೆಟ್ ಸದಸ್ಯ ಜಯಪ್ರಕಾಶ ಬಾದಾಮಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ನಾವಿನ್ಯಯುತ ಕೌಶಲ್ಯಗಳ ಮೂಲಕ ಶಿಕ್ಷಣ ಕೊಡಬೇಕಾಗಿದ್ದು, ಆ ನಿಟ್ಟಿನಲ್ಲಿ ಸೇವಾ ಭಾರತಿ ವತಿಯಿಂದ ಇಲ್ಲಿ ಕ್ರಮ ಕೈಗೊಳ್ಳಲಾಗಿದೆ ಎಂದರು. ವೈದ್ಯರಾದ ಡಾ. ಬಿ.ಎಲ್.ಪಾಟೀಲ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಭಾರತೀಯ ಪರಂಪರೆಯ ಶಿಕ್ಷಣದ ಜೊತೆಗೆ ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಆಸಕ್ತಿ ಬರುವಂತಹ ವಾತಾವರಣ ಈ ಶಾಲೆಯಲ್ಲಿದೆ ಎಂದರು. ಈ ವೇಳೆ ನಿಂಗಪ್ಪ ಸುಳ್ಳದ, ನಾಗಪ್ಪ ತೋಟಪ್ಪನವರ, ಸ್ವಪ್ನಾ ಸರ್ವದೆ, ಮಂಜುಳಾ ಕೊಟಗಿ, ನಿಂಗಪ್ಪ ಕುಂಬಾರ, ಶಿವಲೀಲಾ ತೋಟಪ್ಪನವರ ಹಾಗೂ ಶಾಲಾ ಸಿಬ್ಬಂದಿ ಉಪಸ್ಥಿತರಿದ್ದರು.ನಂತರ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.



ನವಲಗುಂದ: ಸ್ಥಳೀಯ ವಿಶ್ವವಿಜೇತ ಶೈಕ್ಷಣಿಕ ಹಾಗೂ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಶಾಲೆಯಲ್ಲಿ ಜರುಗಿದ ಶಾಲಾ ವಾರ್ಷಿಕೋತ್ಸವ ಉದ್ಘಾಟಿಸಿದ ಶಿಕ್ಷಕ ಸಾಹಿತಿ ಡಾ. ಸಿದ್ಧಲಿಂಗೇಶ ಹಂಡಿಗಿ.ನಿಂಗಪ್ಪ ಸುಳ್ಳದ, ನಾಗಪ್ಪ ತೋಟಪ್ಪನವರ, ಸ್ವಪ್ನಾ ಸರ್ವದೆ, ಮಂಜುಳಾ ಕೊಟಗಿ, ನಿಂಗಪ್ಪ ಕುಂಬಾರ, ಶಿವಲೀಲಾ ತೋಟಪ್ಪನವರ ಹಾಗೂ ಶಾಲಾ ಸಿಬ್ಬಂದಿ ಉಪಸ್ಥಿತರಿದ್ದರು.ನಂತರ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಸಂಶೋಧನೆಗಳು ರಾಷ್ಟ್ರಕ್ಕೆ ಪೂರಕವಿರಲಿ

ಧಾರವಾಡ: ಕೃತಕ ಬುದ್ಧಿಮತ್ತೆಯಿಂದ ಎಲ್ಲವನ್ನೂ ಸುಲಭ ಮಾಡಿದೆ. ಯುವ ಸಂಶೋಧಕರು ರಾಷ್ಟ್ರ ಹಾಗೂ ಸಮಾಜಕ್ಕೆ ಪೂರಕವಾಗುವ ಸಂಶೋಧನೆಯಲ್ಲಿ ತೊಡಗಬೇಕು ಎಂದು ಕವಿವಿಯ ವಿಶ್ರಾಂತ ಕುಲಪತಿ ಡಾ.ಎಸ್.ಕೆ. ಸೈದಾಪುರ ಹೇಳಿದರು.

ಭಾರತ ಸರ್ಕಾರದ ಪಿಎಂ ರೂಷಾ ಯೋಜನೆಯಡಿ ನಗರದ ಕರ್ನಾಟಕ ವಿಶ್ವವಿದ್ಯಾಲಯದ ರಸಾಯನಶಾಸ್ತ್ರ ವಿಭಾಗದ ಪ್ರೊ. ಸಿದ್ದಪ್ಪ ಭವನದಲ್ಲಿ ಬುಧವಾರ ನಡೆದ ಅತ್ಯಾಧುನಿಕ ವಿಶ್ಲೇಷಣಾತ್ಮಕ ಉಪಕರಣಗಳ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು. ದತ್ತಾಂಶಗಳ ಸಹಾಯದಿಂದ ಕೃತಕ ಬುದ್ಧಿಮತ್ತೆ ಬಳಿಸಿ ಬೇಕಾದ ಫಲಿತಾಂಶ ಕ್ಷಣಮಾತ್ರದಲ್ಲಿ ಪಡೆಯಬಹುದು. ಇಂತಹ ಎಐ ತಂತ್ರಜ್ಞಾನ ಯುವದಲ್ಲಿ ಎಲ್ಲ ಸರಳವಾಗಿದೆ. ಆದರೆ, ತಂತ್ರಜ್ಞಾನ ದುರ್ಬಳಕೆ ಬದಲು, ಸದ್ಬಳಕೆಯಾಗಬೇಕಿದೆ ಎಂದರು.

ಕವಿವಿ ಕುಲಪತಿ ಡಾ. ಎ.ಎಂ.ಖಾನ್ ಮಾತನಾಡಿ, ಮಾನವ ಸಮಾಜಕ್ಕೆ ಅವಶ್ಯದ ಅನ್ವಯಿಕ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಲು ಪೂರಕವಾದ ವೈಜ್ಞಾನಿಕ ಉಪಕರಣಗಳು ನಮ್ಮ ವಿಶ್ವವಿದ್ಯಾಲಯದಲ್ಲಿ ಸುವ್ಯವಸ್ಥಿತವಾಗಿಯೇ ಸ್ಥಾಪಿಸಲಾಗಿದೆ ಎಂದರು. ಕವಿವಿಯ ವೈಜ್ಞಾನಿಕ ಉಪಕರಣ ಕೇಂದ್ರದ ನಿರ್ದೇಶಕ ಪ್ರೊ. ರವೀಂದ್ರ ಕಾಂಬಳೆ ಮಾತನಾಡಿ, ವೈಜ್ಞಾನಿಕ ಉಪಕರಣಗಳ ಕೇಂದ್ರದಲ್ಲಿ ಇರುವ ಅತ್ಯಾಧುನಿಕ ವಿಶ್ಲೇಷಣಾತ್ಮಕ ಉಪಕರಣಗಳು ಯುವ ಸಂಶೋಧಕರು ಬಳಸಿಕೊಳ್ಳಬಹುದು ಎಂದರು. ಪ್ರೊ. ಅರವಿಂದ ಮೂಲಿಮನಿ, ಡಾ.ರವೀಂದ್ರ ಚೌಗಲೆ, ಡಾ.ಲೋಕೇಶ ಶಾಸ್ತ್ರಿ, ಪ್ರೊ. ಮಲ್ಲೂರ, ಪ್ರೊ. ಡೇವಿಡ್, ಪ್ರೊ. ವೇದಮೂರ್ತಿ, ಗಣೇಶ ಕುಂದರಗಿ, ಶಿವಕುಮಾರ ಮ್ಯಾಗೋಟಿ, ಸಿದ್ದರಾಮ ಹಿಪ್ಪರಗಿ, ಪವನ ಬೆನ್ನೂರ ಅನೇಕರು ಇದ್ದರು. ದೇಶದ ವಿವಿಧ ಭಾಗಗಳ ಯುವ ಸಂಶೋಧಕರು ಪಾಲ್ಗೊಂಡಿದ್ದರು. ಅಮೃತಾ ಮತ್ತು ಮಲ್ಲಿಕಾ ಪ್ರಾರ್ಥಿಸಿದರು. ಪ್ರಾಧ್ಯಾಪಕ ಪ್ರೊ. ಆರ್.ಎಫ್.ಭಜಂತ್ರಿ ಸ್ವಾಗತಿಸಿದರು. ಡಾ.ಪ್ರವೀಣಕುಮಾರ ಎಸ್.ಕೆ. ನಿರೂಪಿಸಿದರು. ಡಾ.ವಿಶ್ವನಾಥ ಚಟಡಿ ವಂದಿಸಿದರು.



ಯುವ ಸಂಶೋಧಕರು ಈ ಉಪಕರಣಗಳ ಬಳಕೆಯಿಂದ ನಿತ್ಯದ ಬದುಕಿಗೂ ಉಪಯುಕ್ತ ಸಂಶೋಧನೆಗಳು ಕೂಗೊಳ್ಳಬೇಕು. ಜಾಗತಿಕ ಮಟ್ಟದಲ್ಲಿ ಪೇಟೆಂಟ್ ಪಡೆಯುವ ಉತ್ಕೃಷ್ಟ ಸಂಶೋಧನೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಲಾಗುವುದು.
■ ಡಾ. ಎ.ಎಂ.ಖಾನ್, ಕವಿವಿ ಕುಲಪತಿ

ಬಂಜಾರ ಸಮುದಾಯಕ್ಕೆ ಸೇವಾಲಾಲರು ಸ್ಫೂರ್ತಿ

ಕಲಘಟಗಿ: ಸಂತ ಸೇವಾಲಾಲರು ಒಬ್ಬ ಪವಾಡ ಪುರುಷರಾಗಿದ್ದರು.ಆರ್ಥಿಕವಾಗಿ ಹಿಂದುಳಿದ ಸಮುದಾಯವನ್ನು ಒಗ್ಗೂಡಿಸಿ ಸಾಮಾಜಿಕ ಆರ್ಥಿಕ ನ್ಯಾಯ ಒದಗಿಸಿದ ಸಂತ ಸೇವಾಲಾಲರ ಬೋಧನೆ ತ್ಯಾಗವು ಇಂದಿಗೂ ಲಕ್ಷಾಂತರ ಬಂಜಾರ ಸಮುದಾಯದ ಜನರಿಗೆ ಸ್ಫೂರ್ತಿಯಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಹೇಳಿದರು.

ತಾಲೂಕಿನ ಮಡಕಿಹೊನ್ನಳ್ಳಿ ಗ್ರಾಮದ ಸಚಿವರ ಅಮೃತ ನಿವಾಸದಲ್ಲಿ ಆಯೋಜಿಸಿದ್ದ ಬಂಜಾರ ಬಾಂಧವರಿಂದ ಅಭಿನಂದನಾ ಸಮರ್ಪಣಾ ಸಮಾರಂಭ ಹಾಗೂ ಬೃಹತ್ ಬಂಜಾರ ಸಮಾವೇಶದಲ್ಲಿ ನಗಾರಿ ಬಡೆಯುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ನಿಮ್ಮ ಸಮಾಜದಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ಕುಟುಂಬದಲ್ಲಿ ಸಮಸ್ಯೆ ಇದ್ದರೆ ನಮ್ಮ ಫೌಂಡೇಶನಿಂದ್ ಶಿಕ್ಷಣದ ವೆಚ್ಚ ನೋಡಿಕೊಳ್ಳುವ ಭರವಸೆ ನೀಡಿದರು.

ಕೃಷ್ಣಾಪುರ ಮಠದ ಸ್ವಾಮೀಜಿ ಕುಮಾರ ಮಹಾರಾಜರು ಆಶೀರ್ವಚನ ನೀಡಿ, ಸಚಿವ ಲಾಡ್ ಅವರು ಸಂತ ಸೇವಾಲಾಲ್ ಸಮುದಾಯ ಭವನದ ನಿರ್ಮಾಣದ ಜಾಗ ತೆಗೆದುಕೊಳ್ಳಲು ಸಹಾಯಹಸ್ತ ಚಾಚಿದ್ದನ್ನು ಸಮಾಜ ಅವರಿಗೆ ಗೌರವಿಸುತ್ತದೆ ಎಂದರು.

ವಿಧಾನಸಭೆ ಉಪ ಸಭಾಪತಿ ರುದ್ರಪ್ಪ ಲಮಾಣಿ ಮಾತನಾಡಿ, ಜಾಗ ಖರೀದಿ ನಂತರ ತಾಲೂಕು ಮಟ್ಟದ ಬಂಜಾರ ಭವನ ನಿರ್ಮಾಣಕ್ಕಾಗಿ ತಾಂಡಾ ಅಭಿವೃದ್ಧಿ ನಿಗಮದ ವತಿಯಿಂದ ಸರ್ಕಾರ ಮಟ್ಟದಲ್ಲಿ ಅನುದಾನ ನೀಡುವಲ್ಲಿ ಶ್ರಮಿಸಲಾಗುವುದು ಎಂದರು

ತಾಲ್ಲೂಕ ಬಂಜಾರ ಸಮುದಾಯ ಭವನದ ನಿವೇಶನ ಖರೀದಿಗೆ ಸಚಿವ ಸಂತೋಷ ಲಾಡ್ ಅವರು ವೈಯಕ್ತಿಕವಾಗಿ 20 ಲಕ್ಷ ರೂ. ದೇಣಿಗೆ ನೀಡಿದ ಪ್ರಯುಕ್ತ ಜಂಜನಬೈಲ್, ನೆಲ್ಲಿಹರವಿ, ಆಸ್ತಕಟ್ಟಿ,ಬೆಂಡಲಗಟ್ಟಿ, ಬಿ.ಶೀಗಿಗಟ್ಟಿ, ದೇವಿಕೊಪ್ಪ ಹುಲಗಿನಕಟ್ಟಿ,ಮಾಚಾಪುರ,ಈಚನಳ್ಳಿ ,ಮುಮ್ಮಿಗಟ್ಟಿ ತಾಂಡೆಯ ಸಮಾಜಬಾಂಧವರು ಬಂಜಾರ ಸಾಂಪ್ರದಾಯಿಕ ಉಡುಗೆ ತೊಡಿಸಿ ಸನ್ಮಾನಿಸಿದರು. ಮುಖಂಡರಾದ ಎ.ಎಂ ಹಿಂಡಸಗೇರಿ, ಐ.ಜಿ ಸನದಿ, ಅನಿಲಕುಮಾರ್ ಪಾಟೀಲ್,ಅಜ್ಜಂಪೀರ್ ಖಾದ್ರಿ, ಮೋಹನ್ ಲಿಂಬಿಕಾಯಿ, ಕುಸುಮಾವತಿ ಶಿವಳ್ಳಿ, ದೀಪಕ ಚಿಂಚೊರೆ, ಇಸ್ಮಾಯಿಲ್ ತಮಟಗಾರ, ಹನುಮಂತ ಕೊರವರ, ಗೌರಮ್ಮ ಬಾರೋಗಿ, ಎಸ್.ಆರ್ ಪಾಟೀಲ್, ರಾಜಶೇಖರ್ ಮೆಣಸಿನಕಾಯಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜುನಾಥ ಮುರಳ್ಳಿ,ಬಾಬಣ್ಣ ಅಂಚಟಗೇರಿ,ಬಾಳು ಖಾನಾಪೂರ, ಅಜಮತ್ ಜಾಗೀರದಾರ, ಕುಮಾರ ಖಂಡೇಕರ ಸುಧೀರ ಬೋಳಾರ, ಹರಿಶಂಕರ ಮಠದ,ಸೋಮಶೇಖರ ಬೆನ್ನೂರ, ಶ್ರೀಕಾಂತ ಗಾಯಕವಾಡ ಇದ್ದರು.



3.69 ಲಕ್ಷ ರೂ. ಉಳಿತಾಯ ಬಜೆಟ್

ಅಳ್ನಾವರ: ಇಲ್ಲಿನಪಟ್ಟಣಪಂಚಾಯತಿಯ2026-27ನೇಸಾಲಿನಆಯ-ವ್ಯಯವನ್ನು ಪ.ಪಂ ಆಡಳಿತಾಧಿಕಾರಿ ಹಾಗೂ ತಹಶೀಲ್ದಾರ್ ಡಾ.ಡಿ.ಎಚ್.ಹೂಗಾರ ಅವರು ಬುಧವಾರ ಮಂಡಿಸಿ ಅನುಮೋದನೆ ಪಡೆದರು.

ರಾಜಸ್ವ,ಬಂಡವಾಳ ಹಾಗೂ ವಿಶೇಷ ವಸೂಲಾತಿಗಳು ಸೇರಿ ಒಟ್ಟು 19.96 ಕೋಟಿ ಜಮೇ ಮತ್ತು 19.92 ಕೋಟಿ ವೆಚ್ಚದ ಆಯವ್ಯಯದಲ್ಲಿ ರೂ 3.69 ಲಕ್ಷ ಉಳಿತಾಯ ನಿರೀಕ್ಷಿಸಲಾಗಿದೆ. ಬಜೆಟ್ ಮಂಡನೆ ನಂತರ ಮಾತನಾಡಿದ ತಹಶೀಲ್ದಾರ್ ಡಾ.ಡಿ.ಎಚ್. ಹೂಗಾರ ಅವರು, ಆಸ್ತಿ ತೆರಿಗೆ, ನೀರಿನ ಕಂದಾಯ, ಅಭಿವೃದ್ಧಿ ಶುಲ್ಕಗಳು, ಮಳಿಗೆ ಬಾಡಿಗೆ ಪ.ಪಂ ಸ್ವಂತ ಆದಾಯದಮೂಲಗಳಾಗಿದ್ದು ಇವುಗಳಿಂದಹೆಚ್ಚಿನ ಆದಾಯ ನಿರೀಕ್ಷಿಸಲಾಗಿದೆ. ನೀರು ಶುದ್ದೀಕರಣ ಹಾಗೂ ಸರಬರಾಜಿಗೆ ಹೆಚ್ಚಿನ ಸಂಪನ್ಮೂಲ ವ್ಯಯವಾಗುತ್ತಿದ್ದು, ಇದನ್ನು ಕಡಿಮೆ ಮಾಡಲು ನೀರು ಸರಬರಾಜು ವ್ಯವಸ್ಥೆಯಲ್ಲಿ ಸುಧಾರಣಾ ಕ್ರಮಗಳನ್ನು ಜಾರಿಗೊಳಿಸಲಾಗುವುದು ಎಂದರು.



ರಾಜ್ಯ ಹಣಕಾಸು ಯೋಜನೆಯಡಿ ರೂ 50 ಲಕ್ಷ, ಮುಕ್ತ ನಿಧಿ 200 ಲಕ್ಷ ವೇತನ ನಿಧಿ 120 ಲಕ್ಷ, ವಿದ್ಯುತ್ ಬಿಲ್ ಪಾವತಿ ಅನುದಾನ, ಎಸ್.ಎಫ್.ಸಿ ವಿಶೇಷ ಅನುದಾನ 50 ಲಕ್ಷ ಕುಡಿಯುವ ನೀರಿನ ಅನುದಾನ 5 ಲಕ್ಷ ಒಟ್ಟು 740 ಲಕ್ಷಗಳ ರಾಜಸ್ವ ಅನುದಾನ ಸರ್ಕಾರದಿಂದ ನಿರೀಕ್ಷಿಸಲಾಗಿದೆ ಮತ್ತು ಕೇಂದ್ರ ಹಣಕಾಸು ಆಯೋಗದ ಅನುದಾನದಿಂದ 100 ಲಕ್ಷ ಅಂದಾಜಿಸಲಾಗಿದೆ ಎಂದು ಆಯವ್ಯದಲ್ಲಿ ನಮೂದಿಸಲಾಗಿದೆ ಎಂದರು. ಮುಖ್ಯಾಧಿಕಾರಿ ಪ್ರಕಾಶ ಮಗದುಮ್, ಸಮುಧಾಯ ಸಂಘಟನಾಧಿಕಾರಿಗಳಾದ ನಾಗರಾಜ ಗುರ್ಲಹೋಸುರ, ಮಾಂತೇಶ ಬೆಂತೂರ ಹಾಗೂ ಸಿಬ್ಬಂದಿ, ಸಾರ್ವಜನಿಕರು ಇದ್ದರು.

ವಿದ್ಯಾಭವನ ಉದ್ಘಾಟನೆ ನಾಳೆ: ಯರಗಟ್ಟಿ

ಧಾರವಾಡ: ಇಲ್ಲಿನ ಕರ್ನಾಟಕ ಯುನಿವರ್ಸಿಟಿ ಪಬ್ಲಿಕ್ ಸ್ಕೂಲ್‌ನಲ್ಲಿ ದಿ.ರಾಜೇಶ್ವರಿ ಮಹೇಶ ಮಾಮಲೇದೇಸಾಯಿ ಸ್ಮರಣೆಗೆ ನಿರ್ಮಿಸಿದ ವಿದ್ಯಾಭವನದ ಉದ್ಘಾಟನಾ ಸಮಾರಂಭ ಫೆ.27ರಂದು ಯುನಿವರ್ಸಿಟಿ ಪಬ್ಲಿಕ್ ಸ್ಕೂಲ್ ದಾನದಲ್ಲಿ ಹಮ್ಮಿಕೊಳ್ಳಲಾಗಿದೆ.

ಬುಧವಾರ ಸುದ್ದಿಗೋಷ್ಠಿ ಮಾಹಿತಿ ನೀಡಿದ ಯುಪಿಎಸ್ ಹಳೆಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಅಶೋಕ ಯರಗಟ್ಟಿ, ಯುನಿವರ್ಸಿಟಿ ಪಬ್ಲಿಕ್ ಸ್ಕೂಲ್ ಮತ್ತು ಯುಪಿಎಸ್ ಹಳೆಯ ವಿದ್ಯಾರ್ಥಿ ಸಂಘದಿಂದ ಈ ಕಾರ್ಯಕ್ರಮ ನಡೆಯಲಿದೆ. ಅಂದು ಬೆಳಗ್ಗೆ 11ಕ್ಕೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ವಿದ್ಯಾಭವನ ಉದ್ಘಾಟಿಸಲಿದ್ದು, ಕವಿವಿ ಕುಲಪತಿ ಡಾ. ಎ.ಎಂ. ಖಾನ್ ಅಧ್ಯಕ್ಷತೆ ವಹಿಸುವರು. ಕುಲಸಚಿವ ಡಾ.ಶಂಕರಪ್ಪ ವಣಿಕ್ಯಾಳ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಭವನದ ನಿರ್ಮಾತೃ ಮಹೇಶ ಮಾಮಲೇದೇಸಾಯಿ ಮಾತನಾಡಿ, ಯುಪಿಎಸ್ ಶಾಲೆ 1968ರ ವಿದ್ಯಾರ್ಥಿಯಾಗಿದ್ದು, ತಮ್ಮ ಪತ್ನಿ ಸ್ಮರಣಾರ್ಥ ರೂ.45 ಲಕ್ಷ ವೆಚ್ಚದಲ್ಲಿ ನಿರ್ಮಿಸಿದ ವಿದ್ಯಾಭವನ ಸ್ಮಾರ್ಟ್‌ಕ್ಲಾಸ್‌ಗೆ ಪರಿವರ್ತಿಸುವುದಾಗಿಯೂ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಶಾಲೆಯ ಪ್ರಾಚಾರ್ಯೆ ಎ.ಬಿ.ನಾಯಕ, ಹಳೆಯ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಮಹಾಂತೇಶ ಮಂಟಾ ಇದ್ದರು.



ವಿಜ್ಞಾನ ಸಂಭ್ರಮ ನಾಳೆ: ಡಾ.ವೀರಣ್ಣ

ಧಾರವಾಡ: ಕರ್ನಾಟಕ ವಿಜ್ಞಾನ-ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಹಯೋಗದಲ್ಲಿ ವಿಜ್ಞಾನ ಸಂಭ್ರಮ ಫೆ.27 ಹಾಗೂ 28ರಂದು ಎರಡು ದಿನಗಳ ಕಾಲ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿದೆ.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರದ ನಿರ್ದೇಶಕ ಡಾ.ವೀರಣ್ಣ ಬೋಳಿಶೆಟ್ಟಿ, ಫೆ.27ರ ಬೆಳಗ್ಗೆ 10.30ಕ್ಕೆ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಡಾ. ಎ.ಎಂ.ಖಾನ್ ಉದ್ಘಾಟಿಸಲಿದ್ದಾರೆ. ವಿಜ್ಞಾನಿ ಡಾ.ಎಸ್.ಎಂ.ಶಿವಪ್ರಸಾದ ಪಾಲ್ಗೊಳ್ಳಲಿದ್ದಾರೆ. ಮೊದಲ ದಿನ ಬಾಹ್ಯಾಕಾಶ ವಿಜ್ಞಾನ, ಹವಾಮಾನ ಬದಲಾವಣೆ ಮತ್ತು ಇಂಧನ ಸಂರಕ್ಷಣೆ, ಆರೋಗ್ಯ ಮತ್ತು ನೈರ್ಮಲ್ಯ, ಕೃತಕ ಬುದ್ಧಿಮತ್ತೆ, ತಳಿ ಬೆಳಗಳು ಮತ್ತು ಸಾವಯವ ಕೃಷಿ ವಿಷಯ ಕುರಿತು ತಜ್ಞರು ಉಪನ್ಯಾಸ ನೀಡಲಿದ್ದಾರೆ. ಫೆ.28ರ ಬೆಳಗ್ಗೆ ನವೀಕರಿಸಬಹುದಾದ ಇಂಧನ ಮತ್ತು ಭಾರತದ ಇಂಧನ ಭದ್ರತೆ, ಕೃತಕ ಬುದ್ಧಿಮತ್ತೆ, ಇಸ್ರೋದ ಸಾಧನಗಳು, ಸಾಮಾಜಿಕ ಪ್ರಯೋಜನಗಳು ಮತ್ತು ಅವಕಾಶ, ಹೀಗೆ ವಿವಿಧ ವಿಷಯಗಳಲ್ಲಿ ಉಪನ್ಯಾಸ ಜರುಗಲಿದೆ ಎಂದರು. ಸಂಜೆ 4.15ಕ್ಕೆ ಸಮಾರೋಪ ಸಂಭ್ರಮದ ಜರುಗಲಿದೆ. ಎರಡೂ ದಿನ ಪ್ರಾದೇಶಿಕ ವಿಜ್ಞಾನ ಕೇಂದ್ರದ ನಿರ್ದೇಶಕ ಡಾ.ವೀರಣ್ಣ ಬೋಳಿಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ಭಾಗವಹಿಸಿದವರಿಗೆ ಉಚಿತ ವಸತಿ, ಊಟದ ಜೊತೆ ಪ್ರಮಾಣ ಪತ್ರ ವಿತರಿಸಲಾಗುವುದು ಎಂದರು. ಶಿಕ್ಷಣ ಸಲಹೆಗಾರ ಸಿ.ಎಫ್.ಚಂಡೂರ, ವಿಶಾಲಕ್ಷಿ ಎಸ್ .ಜಿ., ಅಡಿವೆಪ್ಪ ಅಂತಣ್ಣವರ ಇದ್ದರು.



ಯುವಕರ ಕಾರ್ಯ ಶ್ಲಾಘನೀಯ



ಕುಂದಗೋಳ: ಶಿಶುನಾಳಕ್ಕೂ ಕುಂದಗೋಳಕ್ಕೂ ಅವಿನಾಭಾವ ಸಂಬಂಧವಿದೆ. ಶರೀಫಜ್ಜನ ಜಾತ್ರೆಗೆ ಬಂಡಿ ತೆಗೆದುಕೊಂಡು ಹೊಗುವ ಸಂಪ್ರದಾಯವನ್ನು ಹಿರಿಯರ ಮಾರ್ಗದರ್ಶನದಲ್ಲಿ ಯುವಕರು ಮಾಡುತ್ತಿರುವ ಕಾರ್ಯ ಶ್ಲಾಘನಿಯ ಎಂದು ಕಲ್ಯಾಣಪುರ ಅಭಿನವ ಬಸವಣ್ಣಜ್ಜನವರು ಹೇಳಿದರು.

ಅವರು ಪಟ್ಟಣದ ಗಣಪತಿ ದೇವಸ್ಥಾನದಿಂದ ಶಿಶುನಾಳ ಜಾತ್ರೆಗೆ ತೆರಳುವ ಭಂಡಿಗೆ ಪೂಜೆ ಸಲ್ಲಿಸಿ ಚಾಲನೆ ನಿಡಿ ಮಾತನಾಡಿದರು. ನೂತನ ಬಂಡಿ ತಯಾರಿಸಿದ ಬಡಿಗೇರ ಹಾಗೂ ಸಹಾಯ ಮಾಡಿದವರನ್ನು ಸನ್ಮಾನಿಸಲಾಯಿತು. ಮುಖಂಡರಾದ ಅರವಿಂದ ಕಟಗಿ, ಅರ್ಜುನ ನಾಡಗೀರ, ಮಲ್ಲಿಕಾರ್ಜುನ ಬಾಳಿಕಾಯಿ, ನಾಗರಾಜ ದೇಶಪಾಂಡೆ, ವಾಯ್.ಎಮ್. ತಹಶಿಲ್ದಾರ, ರಾಜಣ್ಣ ದೇಸಾಯಿ, ಶಂಕ್ರಣ್ಣ ಗೌರಿ, ಬಾಬಾಜಾನ ಮಿಶ್ರಿಕೋಟಿ, ಸಲಿಂ ಕಡ್ಲಿ ಮತ್ತಿತರರಿದ್ದರು. ಬಸವರಾಜ ಗೌರಿ ನಿರೂಪಿಸಿದರು.

ಸರ್. ಸಿದ್ದಪ್ಪ ಕಂಬಳಿ ಪ್ರತಿಮೆ ಅನಾವರಣ

ಧಾರವಾಡ: ನಗರದ ಸರ್ ಸಿದ್ದಪ್ಪ ಕಂಬಳಿ ಕಾನೂನು ಮಹಾವಿದ್ಯಾಲಯದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಸರ್ ಸಿದ್ದಪ್ಪ ಕಂಬಳಿ ಕಂಚಿನ ಪ್ರತಿಮೆ ಅನಾವರಣ ಸಮಾರಂಭ ಫೆ.27ರಂದು ಮಧ್ಯಾಹ್ನ 12ಕ್ಕೆ ಹಮ್ಮಿಕೊಳ್ಳಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಸಿದ್ದಪ್ಪ ಕಂಬಳಿ ಪ್ರತಿಷ್ಠಾನದ ಅಧ್ಯಕ್ಷ ಶಶಿಧರ ತೋಡಕರ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಪ್ರತಿಮೆ ಅನಾವರಣಗೊಳಿಸಲಿದ್ದಾರೆ. ಕರ್ನಾಟಕ ಕುಲಪುರೋಹಿತ ಆಲೂರು ವೆಂಕಟರಾವ್ ಸಭಾಂಗಣದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಶಾಸಕ ಅರವಿಂದ ಬೆಲ್ಲದ, ಕವಿವಿಯ ಕುಲಪತಿ ಡಾ. ಎ.ಎಂ.ಖಾನ್ ಪಾಲ್ಗೊಳ್ಳಿದ್ದಾರೆ. ಶಾಸಕ ಜಿ.ಎಸ್.ಪಾಟೀಲ, ನೀರು ಸರಬರಾಜು-ಒಳಚರಂಡಿ ಮಂಡಳಿ ಅಧ್ಯಕ್ಷೆ ಶಿವಲೀಲಾ ಕುಲಕರ್ಣಿ, ಚಿತ್ರದುರ್ಗ ವಿವಿ ಕುಲಪತಿ ಪ್ರೊ. ಕೆ.ಬಿ.ಗುಡಸಿ, ವಿಶ್ರಾಂತ ಕುಲಪತಿ ಎಚ್.ಬಿ.ವಾಲೀಕಾರ ಭಾಗವಹಿಸಲಿದ್ದಾರೆ ಎಂದರು. ಕಂಬಳಿ ಅವರ ಜೀವನ, ಸಾಧನೆ ಕುರಿತು ಕವಿವಿ ಪಠ್ಯದಲ್ಲಿ ಸೇರಿಸಬೇಕು. ಪ್ರತಿಷ್ಠಾನದಿಂದ ಪ್ರತಿವರ್ಷ ಓರ್ವ ವಿದ್ಯಾರ್ಥಿಗೆ ಶಿಷ್ಯವೇತನ ನೀಡಲು ನಿರ್ಧರಿಸಿದೆ ಎಂದರು. ಪ್ರತಿಷ್ಠಾನದ ಪದಾಧಿಕಾರಿಗಳಾದ ಶಿವಶರಣ ಕಲಬಶೆಟ್ಟರ್, ಗೌರವ ಉಪಾಧ್ಯಕ್ಷ ಚನ್ನಬಸಪ್ಪ ಮರದ, ನಾಗರಾಜ ಪಟ್ಟಣಶೆಟ್ಟಿ, ಸಿ.ಎಸ್ .ಪಾಟೀಲ, ಬಸವರಾಜ ಗೋಲಪ್ಪನವರ ಇತರರಿದ್ದರು.



ಬದುಕಿಗೆ ಜೀವನ ಕೌಶಲ್ಯ ಮುಖ್ಯ: ಪ್ರೊ. ಕ್ಲೆಮೆಂಟ್

ಧಾರವಾಡ: ಸತ್ತೂರಿನ ಎಸ್‌ಡಿಎಂ ಜೈವಿಕ ವಿಜ್ಞಾನಗಳ ಸಂಶೋಧನಾ ಸಂಸ್ಥೆಯ ರಾಷ್ಟ್ರೀಯ ಸ್ವಯಂಸೇವಕ ಘಟಕದಿಂದ ವಿದ್ಯಾರ್ಥಿಗಳಿಗೆ ಮಾನಸಿಕ ಆರೋಗ್ಯ ನಿರ್ವಹಣೆಯಲ್ಲಿ ಜೀವನ ಕೌಶಲ್ಯಗಳ ಬಗ್ಗೆ ಕಾರ್ಯಾಗಾರ ಜರುಗಿತು.

ಉದ್ಘಾಟಿಸಿದ ಎಸ್‌ಡಿಎಂ ವಿವಿ ಉಪಕುಲಸಚಿವ ಪ್ರೊ. ಕ್ಲೆಮೆಂಟ್ ಚಿಲ್ಲಿ ಮಾತನಾಡಿ, ಬದುಕಿನಲ್ಲಿ ಮಾನಸಿಕ ಆರೋಗ್ಯ ಸಮಸ್ಯೆಗಳನ್ನು ನಿಭಾಯಿಸಲು ವಿದ್ಯಾರ್ಥಿಳಿಗೆ ಜಿವನ ಕೌಶಲ್ಯಗಳಲ್ಲಿ ತರಬೇತಿ ಬಹಳಷ್ಟು ಪ್ರಮುಖ ಪಾತ್ರವೂ ವಹಿಸಲಿದೆ ಎಂದರು. ಎಸ್‌ಡಿಎಂ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿ ವಿ.ಜಿ.ಪ್ರಭು, ಉಪವೈದ್ಯಕೀಯ ಅಧೀಕ್ಷಕ ಡಾ.ಮಖ್ಯೂಮ್ ಕಿಲ್ಲೇದಾರ್, ಜೈವಿಕ ವಿಜ್ಞಾನಗಳ ಸಂಶೋಧನಾ ಸಂಸ್ಥೆ ಪ್ರಾಚಾರ್ಯ ಅಜಯಕುಮಾರ ಓಲಿ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸಿದರು. ಎನ್‌ಎಸ್‌ಎಸ್ ಸಂಯೋಜಕ ಡಾ. ರಾಕೇಶ ನಾಯಕ, ಕಾರ್ಯಕ್ರಮ ಅಧಿಕಾರಿ ಡಾ. ರೇಣುಕಾರಾಧ್ಯ ಮಠ, ನರ್ಸಿಂಗ್ ಕಾಲೇಜಿನ ಪ್ರಾಧ್ಯಾಪಕ ಮಲ್ಲಿಕಾರ್ಜುನ ಪಿ., ಯೋಗ ವಿಭಾಗದ ಮುಖ್ಯಸ್ಥ ಡಾ.ಮಲ್ಲಿಕಾರ್ಜುನಗೌಡ ಅರಹಳ್ಳಿ ಸೇರಿ ಅನೇಕರು ಪಾಲ್ಗೊಂಡಿದ್ದರು.



ಕುಂದಗೋಳ ಬಂಡಿಗೆ ಹೊಸ ಕಳೆ

▸ ರವಿ.ಸಿ.ಕಮಡೊಳ್ಳಿ

ಕುಂದಗೋಳ: ನಡೆಯೋ ದೇವರ ಚಾಕರಿಗೆ, ಕಾಣದ ದೇವರ ಹುಣಕೋಣ ಎಂಬ ಪದದಂತೆ ಶಿಶುನಾಳ ಶರೀಫಜ್ಜನವರ ಸ್ಮರಣೆಯ ಜಾತ್ರೆಗೆ ಹೋಗುವ ಕುಂದಗೋಳದ ಬಂಡಿಗೆ ಈ ವರ್ಷ ಹೊಸತನ ಮೂಡಿದೆ.

ಶಿಶುನಾಳ ಶರೀಫಜ್ಜನವರ ಪುಣ್ಯಸ್ಮರಣೆಯ ಜಾತ್ರೆಗೆ ಕುಂದಗೋಳದಿಂದ ಬಂಡಿಯಲ್ಲಿ ಅನ್ನಸಂತರ್ಪಣೆಗೆ ಬೇಕಾದ ಸಜ್ಜಕ, ಅನ್ನ, ಸಾಂಬಾರು ಮೊದಲಾದ ಆಹಾರ ಸಾಮಗ್ರಿಗಳನ್ನು ಸಿದ್ಧಪಡಿಸಿ ಜಾತ್ರೆಗೆ ತೆರಳುವುದು ಹಳೆಯ ವಾಡಿಕೆ. ಪಟ್ಟಣದ ನಾಡಗೀರ ವಾಡೆಯ ಅಂದಿನ ಧಣಿ ನಾನಾಸಾಹೇಬ ನಾಡಗೇರ ಅವರು ಬಂಡಿ ತಯಾರಿಕೆಗೆ ಸಹಾಯ-ಪ್ರೋತ್ಸಾಹ ನೀಡಿದ್ದು, ಈ ಪರಂಪರೆ ನಿರಂತರವಾಗಿ ಮುಂದುವರಿಯಲು ಕಾರಣವಾಗಿದ್ದಾರೆ ಎಂಬುದು ಹಿರಿಯರ ನೆನಪು. ಇತ್ತೀಚಿನ ವರ್ಷಗಳಲ್ಲಿ ಪಟ್ಟಣದ ಕುಷ್ಣಪ್ಪನವರ ಮನೆತನ ಬಂಡಿಯನ್ನು ಹಾಗೂ ಬಂಡಿಯ ಕಲ್ಲಿನ ಗಾಲಿಗಳನ್ನು ಗುಡ್ಡದಕೇರಿ ಮನೆತನ ನೀಡಿದ್ದರು. ಸರ್ವ ಜನಾಂಗದವರು ಒಂದಾಗಿ ಬಂಡಿ ಹೂಡಿ ಭಜನೆಗಳೊಂದಿಗೆ ಶಿಶುನಾಳಕ್ಕೆ ತೆರಳುವುದು ವಿಶೇಷತೆ. ಈ ಬಾರಿ ಹಳೆಯ ಬಂಡಿ ಜೀರ್ಣಾವಸ್ಥೆಗೆ ತಲುಪಿದ್ದರಿಂದ ಊರಿನ ಹಿರಿಯರು, ಯುವಕರು ಹಾಗೂ ನಾಡಗೇರ ಮನೆತನದವರು ಸೇರಿ ಹೊಸ ಬಂಡಿ ನಿರ್ಮಾಣಕ್ಕೆ ಮುಂದಾದರು. ಸಾಗವಾನಿ ಕಟ್ಟಿಗೆಯಿಂದ ಸುಮಾರು ನಾಲ್ಕು ಲಕ್ಷ ರೂ. ವೆಚ್ಚದಲ್ಲಿ ಹೊಸ ಬಂಡಿ ಸಿದ್ಧಗೊಂಡಿದೆ. ಬಂಡಿಯಲ್ಲಿ ಸರ್ವಧರ್ಮ ಪೂಜ್ಯರ ಭಾವಚಿತ್ರಗಳು, ನಾನಾಸಾಹೇಬ ನಾಡಗೇರರ ಚಿತ್ರ ಹಾಗೂ ಕುಂದಗೋಳದ ದಿ. ಬಸವಣ್ಣಜ್ಜನವರ ಚಿತ್ರ ಅಳವಡಿಸಿರುವುದು ವಿಶೇಷ ಆಕರ್ಷಣೆಯಾಗಿದೆ. ಆರಂಭದಿಂದಲೂ ಈ ಬಂಡಿಯ ಜವಾಬ್ದಾರಿಯನ್ನು ಪಟ್ಟಣದ ಗಣಪತಿ ದೇವಸ್ಥಾನ ಭಜನಾ ಮಂಡಳಿ ಹಾಗೂ ಊರಿನ ಹಿರಿಯರು ವಹಿಸಿಕೊಂಡು ಜಾತ್ರೆ ದಿನ ಅನ್ನಸಂತರ್ಪಣೆ ನಡೆಸುತ್ತಿದ್ದಾರೆ.



▸▸ ಫೆ. 26ರಂದು ಶಿಶುನಾಳದಲ್ಲಿ ನಡೆಯುವ ಜಾತ್ರೆಯಲ್ಲಿ ಅನ್ನಸಂತರ್ಪಣೆ ನೆರವೇರಿಸಿ ಮರಳಿ ಪಟ್ಟಣಕ್ಕೆ ಆಗಮಿಸಿ ಜಾತ್ರೆ ಸಂಪನ್ನ

ಕಲಾಕೃತಿ ಉದ್ಘಾಟನಾ ಸಮಾರಂಭ

ಹುಬ್ಬಳ್ಳಿ: ವಿದ್ಯಾರ್ಥಿಗಳು ತಮ್ಮಲ್ಲಿರುವ ಕಲಾಪ್ರತಿಭೆಯನ್ನು ಗುರುತಿಸುವ ಅತ್ಯುತ್ತಮ ವೇದಿಕೆಯಾಗಿದ್ದು, ಇಂತಹ ಅವಕಾಶವನ್ನುವಿದ್ಯಾರ್ಥಿಗಳು ಉಪಯೋಗಿಸಿಕೊಂಡು ಉನ್ನತಸ್ಥಾನಕ್ಕೆ ಬೆಳೆಯಬೇಕು ಎಂದು ಪ್ರಾಚಾರ್ಯೆ ಡಾ.ಸಂಧ್ಯಾ ಆರ್. ಕುಲಕರ್ಣಿ ಹೇಳಿದರು.

ಕೆ .ಎಲ್.ಇ. ಸಂಸ್ಥೆಯ ಪಿ.ಸಿಜಾಬಿನ ವಿಜ್ಞಾನ ಮಹಾವಿದ್ಯಾಲಯದ ಬಿಸಿಎ ವಿಭಾಗದಲ್ಲಿ ಕಲಾಕೃತಿ 2026 ಕಾರ್ಯಕ್ರಮವನ್ನು ಮಹಾವಿದ್ಯಾಲಯದ ಆವರಣದಲ್ಲಿ ಉದ್ಘಾಟಿಸಿ ಮಾತನಾಡಿದರು. ಕೆ.ಎಲ್.ಇ ಸಂಸ್ಥೆಯ ಪಿ.ಸಿಜಾಬಿನ ವಿಜ್ಞಾನ ಪಿ.ಯು. ಮಹಾವಿದ್ಯಾಲಯದ ಪ್ರಾಚಾರ್ಯ ಪ್ರೊ. ವಿ.ಎಂ.ವಾಘಮೋಡೆ ಮಾತನಾಡಿ, ಸ್ಪರ್ಧೆಯಲ್ಲಿ ಸೋಲು ಗೆಲವು ಮುಖ್ಯವಲ್ಲ, ಜ್ಞಾನವನ್ನು ತಿಳಿದು ಕೊಂಡು ಓದುವುದರ ಜೊತೆಗೆ ಇಂತಹ ಸ್ಪರ್ಧೆಯಲ್ಲಿ ಭಾಗವಹಿಸಬೇಕು ಎಂದರು. ಬಿಸಿಎ ವಿಭಾಗದ ಸಂಯೋಜಕ ಪ್ರೊ. ಸಿದ್ದಲಿಂಗಪ್ಪಾ ಕಡಕೋಳ ಮಾತನಾಡಿ, ವಿದ್ಯಾರ್ಥಿ ಜೀವನದಲ್ಲಿ ಆತ್ಮವಿಶ್ವಾಸ, ದೃಡನಿರ್ಧಾರ, ಸಮಯಪ್ರಜ್ಞೆ,ಮುಖ್ಯ ಎಂದರು. ಶ್ರೀರಕ್ಷಾ ಸ್ವಾಗತಿಸಿದರು. ಸಾನ್ವಿ ಜೋಶಿ ಪ್ರಾರ್ಥಿಸಿದರು. ಪ್ರೊ. ಸೋನಿಯಾ ಕಲಾಕೃತಿಸ್ಪರ್ಧೆಗಳ ವಿವರಣೆಯನ್ನು ನೀಡಿದರು. ಅಭಯ ಆರ್.ವಂದಿಸಿದರು. ಸಂಯೋಜಕರಾದ ಕೃಪಾಶ್ವಿನಿ, ವಿದ್ಯಾರ್ಥಿ ಸಂಯೋಜಕರಾದ ದೀಶಾ, ಸಹನಾ ಮತ್ತು ವಿಷ್ಣು ಉಪಸ್ಥಿತರಿದ್ದರು. ಬಿಂದುಶ್ರೀ ಮತ್ತು ಸ್ವಾತಿಜೆ ನಿರೂಪಿಸಿದರು.



ಧಾರವಾಡದಲ್ಲಿ ಎಸ್ಸೆಸ್ಸೆಲ್ಸಿ ಮಕ್ಕಳಿಗೆ ದಿಕ್ಸೂಚಿ ಪುಸ್ತಕ ವಿತರಣೆ

ಧಾರವಾಡ: ವಿದ್ಯಾಕಾಶಿ ಧಾರವಾಡದ ಎಸ್ಸೆಸ್ಸೆಲ್ಸಿ ಫಲಿತಾಂಶ ಕುಸಿಯುವುದು ಸಲ್ಲ, ಶಿಕ್ಷಕರು ಉತ್ತಮ ಬೋಧನೆ ಮೂಲಕ ಶಾಲೆಯಲ್ಲಿ ಮಕ್ಕಳಿಗೆ ಕಲಿಕೆ ವಾತಾವರಣ ನಿರ್ಮಿಸಬೇಕು ಎಂದು ಜನತಾ ಶಿಕ್ಷಣ ಸಮಿತಿ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಹೇಳಿದರು.

ಇಲ್ಲಿನ ಜನತಾ ಶಿಕ್ಷಣ ಸಮಿತಿ ಕಾರ್ಯಾಧ್ಯಕ್ಷ ಡಾ. ಡಿ.ವೀರೇಂದ್ರ ಹೆಗ್ಗಡೆ ಅವರು, ಎಸ್ಸೆಸ್ಸೆಲ್ಸಿ ಮಕ್ಕಳಿಗೆ ಬಿಡುಗಡೆ ಮಾಡಿದ ದಿಕ್ಸೂಚಿ ಪುಸ್ತಕ ವಿತರಿಸಿ ಮಾತನಾಡಿದ ಅವರು, ಈ ದಿಕ್ಸೂಚಿ ಪುಸ್ತಕ ವಿದ್ಯಾರ್ಥಿ ಸಾಧನೆಗೆ ದಿಕ್ಸೂಚಿಯಾಗಲಿದೆ. ಕನ್ನಡ, ಹಿಂದಿ, ವಿಜ್ಞಾನ, ಇಂಗ್ಲಿಷ್, ಸಮಾಜ ವಿಜ್ಞಾನ ಮತ್ತು ಗಣಿತ ವಿಷಯದ ಮುಖ್ಯಾಂಶ ಒಳಗೊಂಡ ದಿಕ್ಸೂಚಿ ಪುಸ್ತಕವು ವಿದ್ಯಾರ್ಥಿಗಳಿಗೆ ಬಹಳ ಸಹಕಾರಿ. ಅಂಕಗಳಿಗೆ ಧಾವಂತಕ್ಕೆ ವಿದ್ಯಾರ್ಥಿಗಳು ಬೇರೆ ಬೇರೆ ಜಿಲ್ಲೆಗಳಿಗೆ ವಿದ್ಯಾಭ್ಯಾಸಕ್ಕೆ ಮೊರೆ ಹೋಗುವುದು ವಿಷಾದದ ಸಂಗತಿ ಎಂದರು.

ಇಂಟರ್‌ನೆಟ್ ಹಾಗೂ ಮೊಬೈಲ್‌ಗಳಿಂದ ಮಕ್ಕಳನ್ನು ದೂರವಿಸಬೇಕು. ಅಲ್ಲದೇ ಬಹುಮುಖ್ಯವಾಗಿ ಮನೆಯಲ್ಲಿ ಪಾಲಕರು ಮತ್ತು ಶಾಲೆಯಲ್ಲಿ ಶಿಕ್ಷಕರು ಮಕ್ಕಳಿಗೆ ಕಲಿಕಾ ವಾತಾವರಣ ನಿರ್ಮಿಸಬೇಕು. ಪುಸ್ತಕದ ಜ್ಞಾನ ಬೆಳೆಸಲು ಪ್ರಯತ್ನಿಸಲು ಹೇಳಿದರು.

ಕೇವಲ ಕಂಠಪಾಠದಿಂದ ಅಂಕಗಳಿಗೆ ಅಸಾಧ್ಯ. ಗುರುಗಳ ಪಠ್ಯಕ್ರಮ, ಶಿಸ್ತು, ಸಂಯಮ ಕಲಿಸುವ ಜೊತೆ ಅರ್ಥಪೂರ್ಣ ಓದು, ಓದಿದ ವಿಷಯ ಮನನ ಮಾಡಿಕೊಳ್ಳುವುದು ಹಾಗೂ ಬರೆಯುವ ರೂಢಿಯನ್ನೂ ಕೂಡ ಮಾಡಿಸಬೇಕಿದೆ ಎಂದರು.

ಶಿಕ್ಷಣ ಇಲಾಖೆ ಆಯುಕ್ತರ ಕಚೇರಿ ಉಪನಿರ್ದೇಶಕ ಗಿರೀಶ ಪದಕಿ ಮಾತನಾಡಿ, ಉನ್ನತ ಶಿಕ್ಷಣ ಕನಸು ಈಡೇರಿಕೆಗೆ ಜೆಎಸ್ಸೆಸ್ 30 ಶಾಲೆಗಳ 1250 ಮಕ್ಕಳಿಗೆ ದಿಕ್ಸೂಚಿ ಪುಸ್ತಕ ನೀಡಿದ್ದನ್ನು ಶ್ಲಾಘಿಸಿದರು.

ಗ್ರಾಮೀಣ ಬಿಇಒ ಉಮೇಶ ಬೊಮ್ಮಕ್ಕನವರ, ಜನತಾ ಶಿಕ್ಷಣ ಸಮಿತಿ ಆಡಳಿತಾಧಿಕಾರಿ ಅರಿಹಂತ ಪ್ರಸಾದ, ಐಟಿಐ ಕಾಲೇಜಿನ ಪ್ರಾಚಾರ್ಯ ಮಹಾವೀರ ಉಪಾಧ್ಯೆ ಸೇರಿ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಇದ್ದರು.



ಹುಬ್ಬಳ್ಳಿ
ಗುರುವಾರ, 26 ಫೆಬ್ರವರಿ 2026
ಸಂಪುಟ 15, ಸಂಚಿಕೆ 339, ಪುಟಗಳು 14
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಐಇಡಿ ದಾಳಿ ಸಂಚು ವಿಫಲ | ೦೭
ಬಿಎಸ್ಸೆನ್ನೆಲ್: ಬನ್ಸಾಲ್‌ಗೆ ಕೇಂದ್ರ ಸರ್ಕಾರ ನೋಟಿಸ್ | ೦೭
ಸೆಮಿ ನಿರ್ಧರಿಸುವ 2 ಪಂದ್ಯ ಇಂದು | ೧೦

ಶುಭ ದಿನ

ಕಲಿಯುಗಾಬ್ಧ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಮೃಗಶಿರೆ

ದಿನದ ಮಾತು

ನಿಮ್ಮ ಮಕ್ಕಳು ಏನನ್ನು ಅನುಸರಿಸಬೇಕೆಂದು ಬಯಸುತ್ತಿರೋ ಅದನ್ನು ಆಚರಿಸಿ ತೋರಿಸಿ.
▲ಲೋಕೋಕ್ತಿ

ಹೆದರಿಕೆಯಿಂದ ಜಗತ್ತು ಗೆಲ್ಲಲು ಸಾಧ್ಯವೇ ಇಲ್ಲ

ಗುರುತರ
• ಸೋಮಶೇಖರ ಸಿ.ಜಿ.

• ಪುಟ ೬

ಕಿರುಸುದ್ದಿ

ಮಾರ್ಚ್ 14ರಂದು ನೌಕಾಪಡೆಗೆ ತಾರಾಗಿರಿ



• **ಹೊಸದಿಲ್ಲಿ:** ಸೂಪರ್‌ಸಾನಿಕ್ ಬ್ರಹ್ಮೋಸ್ ಕ್ಷಿಪಣಿಯನ್ನು ಸಾಗಿಸುವ ಸಾಮರ್ಥ್ಯವಿರುವ ಸ್ಟೆಲ್ತ್ ಫ್ರಿಗೇಟ್ ತಾರಾಗಿರಿಯನ್ನು ಮಾ.14 ರಂದು ಭಾರತೀಯ ನೌಕಾಪಡೆಗೆ ನಿಯೋಜಿಸಲಾಗುತ್ತಿದೆ. ಇದು ದೇಶದ ಕಡಲ ದಾಳಿ ಸಾಮರ್ಥ್ಯ ಮತ್ತು ರಕ್ಷಣಾ ಸಾಮರ್ಥ್ಯಗಳನ್ನು ಬಲಪಡಿಸುವ ನಿರೀಕ್ಷೆಯಿದೆ.

• ಪುಟ ೭

ಯುದ್ಧಕ್ಕೆ ಕೊಟ್ಟ ಸಾಲ ವಾಪಸ್ ಕೊಡಿ!

• **ಭೋಪಾಲ್:** 'ಸೂರ್ಯ ಅಸ್ತಮಿಸದ ಸಾಮ್ರಾಜ್ಯ'ವೆಂದು ಹೆಮ್ಮೆಪಟ್ಟುಕೊಂಡಿದ್ದ ಬ್ರಿಟಿಷ್ ಸಾಮ್ರಾಜ್ಯಕ್ಕೂ ಒಮ್ಮೆ ಸ್ಥಳೀಯ ವ್ಯಾಪಾರಿಯ ನೆರವು ಬೇಕಾಗಿತ್ತು ಎಂಬ ಕುತೂಹಲಕಾರಿ ಸಂಗತಿ ಮಧ್ಯಪ್ರದೇಶದ ಸಿಹೋರ್ ಪಟ್ಟಣದಲ್ಲಿ ಮತ್ತೆ ಬೆಳಕಿಗೆ ಬಂದಿದೆ. 1917ರಲ್ಲಿ ಬ್ರಿಟಿಷ್ ಸರ್ಕಾರವು ಸೇಠ್ ಜುಮ್ಮಾಲಾಲ್ ರುಥಿಯಾ ಅವರಿಂದ 35,000 ರೂ. ಸಾಲ ಪಡೆದಿದ್ದು, ಇಂದಿಗೂ ಅದನ್ನು ವಾಪಸು ನೀಡಿಲ್ಲವೆಂದು ಅವರ ಕುಟುಂಬ ಆರೋಪಿಸಿದೆ.

• ಪುಟ ೭

ಏ.1ರಿಂದ ಆರ್‌ಒಎನ್ 95 ಇ20 ಪೆಟ್ರೋಲ್ ಕಡ್ಡಾಯ

• ಪುಟ ೭

ನೀರಿನ ಗುಣಮಟ್ಟಕ್ಕೆ ಆದ್ಯತೆ: ಪ್ರಿಯಾಂಕ್ ಖರ್ಗೆ

• ಪುಟ ೪

ಬೆಳಗಾವಿ ಪಾಲಿಕೆ: ನೀರಿಗಿಂತ ನಾಯಿ ವೆಚ್ಚವೇ ಹೆಚ್ಚು!

• ಪುಟ ೪



ಸ್ವಸ್ಥ ನಾರಿ ಅಭಿಯಾನ

• ಪುಟ ೭

ಸುದ್ದಿ ಸಮಗ್ರ

ಇಸ್ರೇಲ್‌ಗೆ ಪ್ರಧಾನಿ ನರೇಂದ್ರ ಮೋದಿ ಭೇಟಿ ಪರಿಣಾಮ

ಭಾರತ-ಇಸ್ರೇಲ್ ಬಂಧ





ಮೋದಿಗೆ ನೆಸೆಟ್ ಅತ್ಯುನ್ನತ ಪದಕ

ಇಸ್ರೇಲ್ ಸಂಸತ್ತು ನೆಸೆಟ್‌ನಲ್ಲಿ ಮಾತನಾಡಿದ ಪ್ರಧಾನಿ ಮೋದಿಯವರಿಗೆ ಇಸ್ರೇಲ್ ಸಂಸತ್ತಿನ ಅತ್ಯುನ್ನತ ಗೌರವವಾದ ಸ್ಪೀಕರ್ ಆಫ್ ದಿ ನೆಸೆಟ್ ಪದಕವನ್ನು ನೀಡಿ ಗೌರವಿಸಲಾಯಿತು. ಭಾರತ ಮತ್ತು ಇಸ್ರೇಲ್ ನಡುವಿನ ಸ್ನೇಹ, ಪಾಲುದಾರಿಕೆ ಬಲವರ್ಧನೆಯಲ್ಲಿ ಮೋದಿಯವರ ವೈಯಕ್ತಿಕ ಕೊಡುಗೆಗಾಗಿ ಈ ಗೌರವ ಸಂದಿದೆ. ಮೋದಿ, ನೆಸೆಟ್ ಅತ್ಯುನ್ನತ ಪದಕ ಸ್ವೀಕರಿಸಿದ ಭಾರತದ ಮೊದಲ ಪ್ರಧಾನಿಯಾಗಿದ್ದಾರೆ.

• **ಜೆರುಸಲೇಂ:** ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಭಾರತವು ಇಸ್ರೇಲ್‌ನೊಂದಿಗೆ ಸದಾ ನಿಲ್ಲುತ್ತದೆ. ಅಕ್ಟೋಬರ್ 7ರಂದು ಹಮಾಸ್ ನಡೆಸಿದ ಅನಾಗರಿಕ ಭಯೋತ್ಪಾದಕ ದಾಳಿಯಲ್ಲಿ ಪ್ರಾಣ ಕಳೆದುಕೊಂಡ ಪ್ರತಿಯೊಬ್ಬರಿಗೂ ಭಾರತದ ಪ್ರತಿ ನಾಗರಿಕನ ಪರವಾಗಿ ನಾನು ಸಂತಾಪ ಸೂಚಿಸುತ್ತೇನೆ. ನಿಮ್ಮ ನೋವನ್ನು ನಾವು ಅನುಭವಿಸುತ್ತಿದ್ದೇವೆ. ನಿಮ್ಮ ದುಃಖವನ್ನು ನಾವು ಹಂಚಿಕೊಳ್ಳುತ್ತೇವೆ. ಭಾರತವು ಈ ಕ್ಷಣದಲ್ಲಿ ಮತ್ತು ಅದರಾಚೆಗೂ ದೃಢ ನಿಶ್ಚಯದಿಂದ ಇಸ್ರೇಲ್‌ನೊಂದಿಗೆ ನಿಲ್ಲುತ್ತದೆ ಎಂದು ಪ್ರಧಾನಿ ಮೋದಿ ಹೇಳಿದರು.



ನೆಸೆಟ್ (ಇಸ್ರೇಲಿ ಸಂಸತ್ತು) ಉದ್ದೇಶಿಸಿ ಭಾಷಣ ಮಾಡಿದ ಮೋದಿ ಅವರು, ನಾಗರಿಕರ ಹತ್ಯೆಯನ್ನು ಯಾವುದೇ ಕಾರಣಕ್ಕೂ ಸಮರ್ಥಿಸಲು ಸಾಧ್ಯವಿಲ್ಲ. ಯಾವುದೂ ಭಯೋತ್ಪಾದನೆಯನ್ನು ಸಮರ್ಥಿಸಲು ಸಾಧ್ಯವಿಲ್ಲ. ಭಾರತವು ಭಯೋತ್ಪಾದನೆಯ ನೋವನ್ನು ದೀರ್ಘಕಾಲದಿಂದ ಸಹಿಸಿಕೊಂಡಿದೆ. ನಾವು ಮುಂಬೈ ದಾಳಿ ಮತ್ತು ಇಸ್ರೇಲಿ ನಾಗರಿಕರು ಸೇರಿದಂತೆ ಪ್ರಾಣ ಕಳೆದುಕೊಂಡ ಅಮಾಯಕ ಜೀವಗಳನ್ನು ನೆನಪಿಸಿಕೊಳ್ಳುತ್ತೇವೆ ಎಂದು ಮೋದಿ ಹೇಳಿದರು.

ಸದಾ ಭಾರತದ ಬೆಂಬಲ: ಇಸ್ರೇಲ್‌ನಂತೆಯೇ, ಭಾರತವೂ ಭಯೋತ್ಪಾದನೆಯ ವಿರುದ್ಧ ಶೂನ್ಯ ಸಹಿಷ್ಣುತೆಯ ಸ್ಥಿರ ಮತ್ತು ರಾಜಿಯಾಗದನೀತಿಯನ್ನು ಹೊಂದಿದ್ದು, ಯಾವುದೇದ್ವಂದ್ವಮಾನದಂಡಗಳಿಲ್ಲ ಎಂದು ಪ್ರಧಾನಿ ಮೋದಿ ಪ್ರತಿಪಾದಿಸಿದರು. ➡ಪುಟ ೪

ಮೋದಿಗೆ ಅದ್ದೂರಿ ಸ್ವಾಗತ

ನೆಸೆಟ್‌ನಲ್ಲಿ ಪ್ರಧಾನಿ ಮೋದಿಯವರನ್ನು ಇಸ್ರೇಲಿ ಸಂಸದರು ಅದ್ದೂರಿಯಾಗಿ ಸ್ವಾಗತಿಸಿದ್ದಾರೆ. ಅಲ್ಲದೆ, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರನ್ನು ಸಹೋದರ ಎಂದು ಕರೆದು, ಅವರ ನಡುವಿನ ವಿಶೇಷ ಸಂಬಂಧವನ್ನು ಶ್ಲಾಘಿಸಿದರು. ಇಸ್ರೇಲ್‌ನ ಶ್ರೇಷ್ಠ ಸ್ನೇಹಿತ, ಭಾರತ-ಇಸ್ರೇಲಿ ಮೈತ್ರಿಯ ಶ್ರೇಷ್ಠ ಚಾಂಪಿಯನ್ ಮತ್ತು ವಿಶ್ವ ವೇದಿಕೆಯ ಶ್ರೇಷ್ಠ ನಾಯಕನಾಗಿ ನೀವು ನಮ್ಮೊಂದಿಗೆ ಇಲ್ಲಿಗೆ ಭೇಟಿ ನೀಡಿದ್ದಕ್ಕಿಂತ ಹೆಚ್ಚು ನಾನು ಎಂದಿಗೂ ಪ್ರಭಾವಿತನಾಗಲಿಲ್ಲ ಎಂದು ನೆತನ್ಯಾಹು ಮೋದಿಗೆ ಹೇಳಿದರು. ಇಂದು ಎರಡೂ ದೇಶಗಳು ಹಿಂದೆಂದಿಗಿಂತಲೂ ಬಲಶಾಲಿಯಾಗಿವೆ. ಹಮಾಸ್ ದಾಳಿ ಬಳಿಕ ಕುಗ್ಗಿ ಹೋಗಿದ್ದ ಇಸ್ರೇಲ್‌ಗೆ ಭಾರತ ನೀಡಿದ ಬೆಂಬಲಕ್ಕಾಗಿ ಮೋದಿಗೆ ಧನ್ಯವಾದ ಅರ್ಪಿಸಿದರು.

ಕೇಸರಿ ಬಟ್ಟೆ ಧರಿಸಿ ಮೋದಿ ಸ್ವಾಗತಿಸಿದ ನೆತನ್ಯಾಹು ಪತ್ನಿ

ಪ್ರಧಾನಿ ಮೋದಿ ಟೆಲ್ ಅವೀವ್‌ನಲ್ಲಿ ಬುಧವಾರ ಬಂದಿಳಿದಂತೆ ಅದ್ದೂರಿ ಕೆಂಪು ಹಾಸಿನ ಸ್ವಾಗತ ಪಡೆದರು. ಮೋದಿ ವಿಮಾನದಿಂದ ಇಳಿಯುತ್ತಲೇ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಅವರ ಪತ್ನಿ ಸಾರಾ ನೆತನ್ಯಾಹು ಎರಡೂ ಕೈಗಳನ್ನು ಜೋಡಿಸಿ ನಮಿಸುತ್ತಲೇ ಆತ್ಮೀಯವಾಗಿ ಸ್ವಾಗತಿಸಿದರು. ಮೋದಿ ಯವರ ಜಾಕೆಟ್‌ನ ಪಾಕೆಟ್ ಸ್ಕ್ವೇರ್ ಮತ್ತು ಸಾರಾ ಧರಿಸಿದ್ದ ಪ್ಯಾಂಟ್‌ಸೂಟ್ ಎರಡೂ ಒಂದೇ ಬಣ್ಣವೆಂದು ನೆತನ್ಯಾಹು ಹೇಳಿದರು. ➡ಪುಟ ೪



ಕಿಸಾನ್ ಸಭಾ ಟ್ರಸ್ಟ್ ವತಿಯಿಂದ ಕಾರ್ಕಳದ ಬಂಡಿಮಠದ ಬಳಿ ನಿರ್ಮಿಸಲಾದ ಕಿಸಾನ್ ಸಭಾ ಸಭಾಂಗಣವನ್ನು ಸಿಎಂ ಸಿದ್ದರಾಮಯ್ಯ ಅವರು ಬುಧವಾರ ಉದ್ಘಾಟಿಸಿದರು. ಮಾಜಿ ಮುಖ್ಯಮಂತ್ರಿ ಎಂ.ವೀರಪ್ಪ ಮೊಯ್ಲಿ, ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್, ಮಧು ಬಂಗಾರಪ್ಪ, ವಿಧಾನಪರಿಷತ್ ಸದಸ್ಯರಾದ ಐವಾನ್ ಡಿಸೋಜ, ಎಸ್‌ಸಿಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಡಾ. ರಾಜೇಂದ್ರ ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ

ಹುದ್ದೆ ಭರ್ತಿ ಶೀಘ್ರ

• **ಮೈಸೂರು:** ಒಳಮೀಸಲಾತಿ ಗೊಂದಲದಿಂದ ಸರಕಾರಿ ಇಲಾಖೆಗಳಲ್ಲಿ ಖಾಲಿಯಿರುವ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ವಿಳಂಬವಾಗಿದ್ದರೂ, ಈಗ ಸಮಸ್ಯೆ ಇತ್ಯರ್ಥಗೊಂಡಿದ್ದು ಶೀಘ್ರದಲ್ಲೇ ನೇಮಕಾತಿ ಆರಂಭವಾಗಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಉದ್ಯೋಗ ನೇಮಕಾತಿ ಕುರಿತಾಗಿ ಬಜೆಟ್‌ನಲ್ಲಿ ಮಹತ್ವದ ಘೋಷಣೆ ಮಾಡುವ ಸುಳಿವು ನೀಡಿದರು. ಕಾಂಗ್ರೆಸ್ ಕೊಟ್ಟ ಮಾತಿಗೆ ತಪ್ಪಲ್ಲ. ಸರಕಾರಿ ಉದ್ಯೋಗ ನೇಮಕಾತಿ ಮಾಡೇ ಮಾಡ್ತೀವಿ ಎಂದು ಸ್ಪಷ್ಟಪಡಿಸಿದರು. ಬಿಜೆಪಿಯವರು ಅಧಿಕಾರದಲ್ಲಿದ್ದ 4 ವರ್ಷಗಳಲ್ಲಿ ಒಂದೇ ಒಂದು ನೇಮಕಾತಿಯನ್ನೂ ಮಾಡಲಿಲ್ಲ. ಅಧಿಕಾರ ಕಳೆದುಕೊಂಡ ನಂತರ ಆಡಳಿತ ಪಕ್ಷದ ವಿರುದ್ಧ ಪ್ರತಿಭಟನೆ ನಡೆಸುವುದು ಬಿಜೆಪಿಗೆ ಚಾಳಿ ಆಗಿದೆ ಎಂದು ವ್ಯಂಗ್ಯವಾಡಿದರು. ಧಾರವಾಡದಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆ ವೇಳೆ ಬಿಜೆಪಿ ನಾಯಕರನ್ನು ಸ್ಥಳದಿಂದ ಹೊರಹಾಕಿದ ಘಟನೆಗೆ ಇದೇ ಕಾರಣ ಎಂದರು. ➡ಪುಟ ೪

ಕಾಡಂಚಿನಲ್ಲಿ ಬೃಹತ್ ಬ್ಯಾರಿಕೇಡ್ ಅಳವಡಿಕೆ

• **ಕಾರ್ಕಳ(ದಕ್ಷಿಣ ಕನ್ನಡ):** ರಾಜ್ಯದಲ್ಲಿ ಹೆಚ್ಚುತ್ತಿರುವ ಮಾನವ- ವನ್ಯಜೀವಿ ಸಂಘರ್ಷ ತಡೆಗೆ ಕಾಡಂಚಿನಲ್ಲಿ ಬೃಹತ್ ಪ್ರಮಾಣದ ಬ್ಯಾರಿಕೇಡ್ ಅಳವಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ರಾಜ್ಯದಲ್ಲಿ ಆನೆ, ಹುಲಿ, ಚಿರತೆಗಳು ಜನವಸತಿ ಪ್ರದೇಶಗಳಲ್ಲೂ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿದ್ದು, ಜೀವಹಾನಿಗೂ ಕಾರಣವಾಗಿವೆ. ಈ ವನ್ಯಜೀವಿಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಜನವಸತಿ ಪ್ರದೇಶಗಳಲ್ಲೂ ಅವು ಸಂಚರಿಸುತ್ತಿವೆ. ಇದರಿಂದ ಮಾನವ ವನ್ಯಜೀವಿ ಸಂಘರ್ಷಗಳು ಹೆಚ್ಚುತ್ತಿವೆ. ➡ಪುಟ ೪

ಹಿಮೋಫಿಲಿಯಾ ರೋಗ ನಿರೋಧಕ, ಆಂಬುಲೆನ್ಸ್‌ಗೆ ಚಾಲನೆ

ಕುಸುಮ ರೋಗಿಗಳಿಗೆ ಡಿಕೆಶಿ ಅಭಯ

• **ಬೆಂಗಳೂರು:** ದೀರ್ಘಕಾಲದ ರಕ್ತ ಹೆಪ್ಪುಗಟ್ಟುವಿಕೆಯ ಅಸ್ವಸ್ಥತೆಯಿಂದ ಬಳಲುತ್ತಿರುವ ಹಿಮೋಫಿಲಿಯಾ ರೋಗಿಗಳ ಜತೆಗೆಸರ್ಕಾರನಿಲ್ಲಲಿದೆ. ರೋಗಿಗಳಿಗೆಶಾಶ್ವತಪರಿಹಾರಮತ್ತು ಘನತೆಯ ಬದುಕು ಒದಗಿಸುವುದು ಕುಸುಮ ಸಂಜೀವಿನಿ ಯೋಜನೆಯ ಧ್ಯೇಯೋದ್ದೇಶವಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಧೈರ್ಯ ತುಂಬಿದರು.


ಬುಧವಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನೆಹರೂ ತಾರಾಲಯದಲ್ಲಿ ಆಯೋಜಿಸಿದ್ದ ಕುಸುಮ ಸಂಜೀವಿನಿ ಹಿಮೋಫಿಲಿಯಾ ರೋಗಿಗಳಿಗೆ ರೋಗ ನಿರೋಧಕ ಚಿಕಿತ್ಸೆ, 108 ಆಂಬುಲೆನ್ಸ್ ಸೇವೆಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಣ್ಣ ಏಟುಗಳಾದರೂ ಜೀವಭಯದ ಪರಿಸ್ಥಿತಿ ಉಂಟಾಗುವ ಸ್ಥಿತಿ ಬದಲಾಗಬೇಕು. ಹೊಸ ರೋಗನಿರೋಧಕ ಚಿಕಿತ್ಸೆಯಿಂದ ರೋಗಿಗಳು ಸಾಮಾನ್ಯರಂತೆ ಸಕ್ರಿಯ ಜೀವನ ನಡೆಸಲು ಸಾಧ್ಯವಾಗುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ➡ಪುಟ ೪



ಗ್ಯಾರಂಟಿಗಳಿಂದ ಉಂಟಾದ ಹಣದ ಕೊರತೆ ಕಾರಣ

ಕೈಗೆ ಹುದ್ದೆ ಭರ್ತಿ ಮನಸಿಲ್ಲ: ಬಿವೈವಿ

• **ಬೆಂಗಳೂರು:** ಪಂಚ ಗ್ಯಾರಂಟಿಗಳನ್ನು ನಿರ್ವಹಣೆ ಮಾಡಲು ಹಣಕಾಸಿನಸಮಸ್ಯೆ ಕಾಡುತ್ತಿರುವುದರಿಂದ ಯಾವುದೇ ನೇಮಕಾತಿ ಮಾಡಲು ಕಾಂಗ್ರೆಸ್ಸಿನವರಿಗೆ ಮನಸ್ಸು ಬರುತ್ತಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದರು. ಬಿಜೆಪಿ



ರಾಜ್ಯ ಕಾರ್ಯಾಲಯದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ನೇಮಕಾತಿ ವಿಚಾರದಲ್ಲಿ ವಾಸ್ತವಿಕ ಸತ್ಯವನ್ನು ಬಿಚ್ಚಿಟ್ಟು ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದ ಜನರ ಕ್ಷಮೆ ಕೇಳಬೇಕು ಮತ್ತು ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕು ಎಂದು ಒತ್ತಾಯಿಸಿದರು.

ಮುಖ್ಯಮಂತ್ರಿಗಳೇ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದು 3 ವರ್ಷವಾಗುತ್ತಿದ್ದರೂ, ಇನ್ನೂ ಬಿಜೆಪಿ ಸರ್ಕಾರವನ್ನು ದೂರುವುದನ್ನು ಮುಂದುವರಿಸಿದ್ದೀರಾ? ಪ್ರಣಾಳಿಕೆಯಲ್ಲಿ ಅಧಿಕಾರಕ್ಕೆ ಬಂದ1 ವರ್ಷದಲ್ಲಿನೇಮಕಾತಿಭರವಸೆಕೊಟ್ಟಿದ್ದಿರಿ. ಈರೀತಿಸುಳ್ಳು ಹೇಳುವುದು, ಆರೋಪ ಬಿಟ್ಟು ಕೇವಲ ಪತ್ರಿಕಾ ಹೇಳಿಕೆಗೆ ಸೀಮಿತವಾಗದೆ ನೇಮಕಾತಿ ಕೂಡಲೇ ಪ್ರಾರಂಭಿಸಬೇಕು. ನೇಮಕಾತಿ ಪ್ರಕ್ರಿಯೆ ತಕ್ಷಣ ಪ್ರಾರಂಭಿಸದಿದ್ದರೆ ಬಿಜೆಪಿ ಹೋರಾಟಕ್ಕೆ ಇಳಿಯಲಿದೆ ಎಂದು ಎಚ್ಚರಿಸಿದರು. ➡ಪುಟ ೪

ಪರಿಗಣಿಸಲು ಎರಡು ವರ್ಷ ಬೇಕಾಯಿತೇ?

ಮುಖ್ಯಮಂತ್ರಿಗಳೇ, ಯುವಜನರ ಪ್ರತಿಭಟನೆ ಪ್ರಾರಂಭವಾಗಿ ಒಂದೂವರೆ, ಎರಡು ವರ್ಷವಾಗಿದೆ. ಪ್ರತಿಭಟನೆಯನ್ನು ಗಂಭೀರವಾಗಿ ಪರಿಗಣಿಸಿದ್ದೇವೆ ಎನ್ನಲು ಮುಖ್ಯಮಂತ್ರಿಗಳಿಗೆ 2 ವರ್ಷ ಬೇಕಾಯಿತೇ? ಯಾಕಿಷ್ಟು ದಿನ ನೀವು ಇದರ ಬಗ್ಗೆ ಚಕಾರ ಎತ್ತಿಲ್ಲ? ನಿರುದ್ಯೋಗಿಗಳ ಸಂಕಷ್ಟ ಅರ್ಥ ಮಾಡಿಕೊಳ್ಳಲು ನಿಮಗೆ ಇಷ್ಟು ದಿನ ಬೇಕಾಯಿತೇ ಎಂದು ಬಿ.ವೈ.ವಿಜಯೇಂದ್ರ ಪ್ರಶ್ನಿಸಿದರು.

ಕಬ್ಬು ಪೂರೈಸಿದ ರೈತರಿಗೆ ಆರ್ಥಿಕ ನೆರವು

• **ಬೆಂಗಳೂರು:** ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಪೂರೈಕೆ ಮಾಡಿದ ರಾಜ್ಯದ ರೈತರಿಗೆ ಪ್ರತಿ ಟನ್‌ಗೆ 50 ರೂ.ಗಳ ಆರ್ಥಿಕ ನೆರವಿನ ಮೊತ್ತವಾದ 300 ಕೋಟಿ ರೂ.



ಬಿಡುಗಡೆ ಮಾಡಲಾಗಿದೆ ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ. ಕಳೆದ ವರ್ಷ ನ.8 ರಂದು ಮುಖ್ಯಮಂತ್ರಿಗಳು ಕರೆದಿದ್ದ ಸಕ್ಕರೆ ಕಾರ್ಖಾನೆಗಳ ಮಾಲೀಕರು ಹಾಗೂ ಕಬ್ಬು ಬೆಳೆಗಾರರ ಸಭೆಯಲ್ಲಿ ಪ್ರತಿ ಟನ್ ಕಬ್ಬಿಗೆ ಎಫ್‌ಆರ್‌ಪಿ ಮೇಲೆ 100 ರೂ. ಆರ್ಥಿಕ ನೆರವು ನೀಡುವ ನಿರ್ಧಾರ ಪ್ರಕಟಿಸಿದ್ದರು. 100 ರೂ. ಆರ್ಥಿಕ ನೆರವಿನಲ್ಲಿ ರಾಜ್ಯ ಸರ್ಕಾರ 50 ರೂ. ಹಾಗೂ ಸಕ್ಕರೆ ಕಾರ್ಖಾನೆಗಳು 50 ರೂ. ನೀಡಬೇಕು ಎಂಬ ತೀರ್ಮಾನವನ್ನು ಕೈಗೊಳ್ಳಲಾಗಿದ್ದು, ಈ ನಿರ್ಧಾರದಂತೆ ರಾಜ್ಯ ಸರ್ಕಾರ ತನ್ನ ಪಾಲಿನ ಆರ್ಥಿಕ ನೆರವಿನ ಹಣ 300 ಕೋಟಿ ರೂ. ಬಿಡುಗಡೆ ಮಾಡಿದೆ ಎಂದು ಪ್ರಕಟಿಸಿದ್ದಾರೆ.

• ವಿವರ ಪುಟ ೮

ಇಬ್ಬರು ಮುಸ್ಲಿಂ ಸಹೋದರಿಯರು ಸೇರಿ 3 ಸೆರೆ

ಡ್ರಗ್ಸ್ ನೀಡಿ ಸಾಮೂಹಿಕ ಅತ್ಯಾಚಾರ, ಮತಾಂತರ!

• **ಭೋಪಾಲ್:** ಉದ್ಯೋಗ ಆಮಿಷವೊಡ್ಡಿ ಹಿಂದು ಯುವತಿಯರಿಗೆ ಡ್ರಗ್ಸ್ ನೀಡಿ ಅತ್ಯಾಚಾರವೆಸಗಿ ಬಳಿಕ ಮತಾಂತರ ಮಾಡುತ್ತಿದ್ದ ಜಾಲವೊಂದನ್ನು ಮಧ್ಯಪ್ರದೇಶ ಪೊಲೀಸರು ಭೇದಿಸಿದ್ದು, ಈ ಸಂಬಂಧ ಇಬ್ಬರು ಮುಸ್ಲಿಂ ಸಹೋದರಿಯರು ಸೇರಿ ಮೂವರನ್ನು ಬಂಧಿಸಿದ್ದಾರೆ.

ಮುಸ್ಲಿಂ ಸಹೋದರಿಯರೇ ಈ ಜಾಲದ ಪ್ರಮುಖ ಸೂತ್ರಧಾರರಾಗಿದ್ದು, ಆರ್ಥಿಕವಾಗಿ ಹಿಂದುಳಿದ ಹಿಂದು ಯುವತಿಯರಿಗೆ ನೌಕರಿ ಆಮಿಷವೊಡ್ಡಿ ಬಲವಂತದ ಮತಾಂತರ ನಡೆಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಉದ್ಯೋಗ ಆಮಿಷ, ಲೈಂಗಿಕ ಮತಾಂತರ ಜಾಲ(ಸೆಕ್ಸ್ ಟ್ರಾಫಿಕಿಂಗ್) ಡ್ರಗ್ಸ್ ಮತ್ತು ಬಲವಂತದ ಮತಾಂತರ ಜಾಲದ ಮಾಸ್ಟರ್ ಮೈಂಡ್ ಅಮ್ರೀನ್ ಖಾನ್, ಅಫ್ರೀನ್ ಖಾನ್ ಮತ್ತು ಚಂದನ್ ಯಾದವ್ ಬಂಧಿತ ಆರೋಪಿಗಳು. ಚಂದನ್ ಯಾದವ್ ಅಮ್ರೀನ್‌ಳ ಪ್ರಿಯಕರನೆಂಬುದು ಪೊಲೀಸ್ ವಿಚಾರಣೆ ವೇಳೆ ಗೊತ್ತಾಗಿದೆ. ➡ಪುಟ ೪

ಹಿಂದು ಯುವತಿಯರೇ ಟಾರ್ಗೆಟ್



ಬುರ್ಖಾ ಧರಿಸಲು, ಮುಸ್ಲಿಂ ವ್ಯಕ್ತಿ ವರಿಸಲು ಒತ್ತಾಯ

ಸಂತ್ರಸ್ತೆಗೆ ಬುರ್ಖಾ ಧರಿಸಲು, ಇಸ್ಲಾಂ ಗ್ರಂಥಗಳನ್ನು ಪಠಿಸಲು ಹಾಗೂ ಮತಾಂತರ ಜಾಲದ ಸಂಪರ್ಕದಲ್ಲಿರುವ ಮುಸ್ಲಿಂ ವ್ಯಕ್ತಿಗಳೊಂದಿಗೆ ವಿವಾಹ ಆಗಬೇಕೆಂದೂ, ಮತಾಂತರ ಆಗಬೇಕೆಂದೂ ಒತ್ತಡ ಹಾಕುತ್ತಿದ್ದರು. ಜಾಲದ ಪ್ರಮುಖ ಉದ್ದೇಶ ಮತಾಂತರವೆಂಬುದು ಸ್ಪಷ್ಟವಾಗಿದೆ.

ಎಂಎಲ್‌ಸಿಗಳಿಂದಲೂ ಸಚಿವ ಸ್ಥಾನಕ್ಕೆ ಬೇಡಿಕೆ

• **ಬೆಂಗಳೂರು:** ಸಚಿವಸ್ಥಾನಕ್ಕೆ ಒತ್ತಾಯಿಸಿ ಮೊದಲ ಬಾರಿ ಆಯ್ಕೆಯಾಗಿರುವ ಶಾಸಕರು ಹೈಕಮಾಂಡ್‌ಗೆ ಪತ್ರ ಬರೆದ ಬೆನ್ನಲ್ಲೇ ವಿಧಾನ ಪರಿಷತ್‌ನ ಸದಸ್ಯರು ಸಹ ಸಚಿವ ಸ್ಥಾನ ಬೇಡಿಕೆಯಿಟ್ಟು ಹೈಕಮಾಂಡ್‌ಗೆ ಮನವಿ ಮಾಡಿದ್ದಾರೆ. ವಿಧಾನ ಪರಿಷತ್ ಸದಸ್ಯರಾದ ಪುಟ್ಟಣ್ಣ, ನಾಗರಾಜ್ ಯಾದವ್, ಬಲ್ಕಿಸ್ ಬಾನು, ಎಸ್.ಎಫ್. ಜಕ್ಕಪ್ಪನವರ್, ಶಿವಕುಮಾರ್ ಸೇರಿದಂತೆ



ಹಲವು ಸದಸ್ಯರ ನಿಯೋಗವು ಗುರುವಾರ ದಿಲ್ಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆರನ್ನು ಭೇಟಿ ಮಾಡಿ ಸಚಿವ ಸ್ಥಾನಕ್ಕೆ ಮನವಿ ಸಲ್ಲಿಸಿದ್ದಾರೆ. ಕಾಂಗ್ರೆಸ್ ಹೈಕಮಾಂಡ್‌ಗೆ ಕರ್ನಾಟಕದಿಂದ ಒಂದಲ್ಲ ಒಂದು ಮನವಿ ಬರುತ್ತಿರುವುದರ ನಡುವೆಯೇ ಹೊಸ ಸಮಸ್ಯೆ ತಂದೊಡ್ಡಿದೆ. ವಿಧಾನಪರಿಷತ್‌ನ 24 ಸದಸ್ಯರು ಈ ಪತ್ರಕ್ಕೆ ಸಹಿ ಹಾಕಿದ್ದು, ಕನಿಷ್ಠ 5 ಸಚಿವ ಸ್ಥಾನಗಳನ್ನು ನೀಡಬೇಕು, ಇದರಲ್ಲಿ ಸ್ಥಳೀಯ ಸಂಸ್ಥೆಗಳ ಕ್ಷೇತ್ರ, ಪದವೀಧರ ಕ್ಷೇತ್ರ ಅಥವಾ ಶಿಕ್ಷಕರ ಕ್ಷೇತ್ರ, ವಿಧಾನಸಭೆಯಿಂದ ನಾಮನಿರ್ದೇಶನಗೊಂಡ ತಲಾ ಒಬ್ಬರನ್ನು ಆಯ್ಕೆ ಮಾಡಬೇಕೆಂದು ಮನವಿ ಮಾಡಲಾಗಿದೆ. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,85,000** (2,85,000) ಅಪರಂಜಿ ಚಿನ್ನ: **1,61,890** (1,61,780) ಆಭರಣ ಚಿನ್ನ: **1,48,400** (1,48,300) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ **82,276** (50↑) ಎನ್‌ಎಸ್‌ಇ **25,482** (57↑)

$1 = ₹90.95

ಪಾಲಿಕೆ ಬಜೆಟ್: ನೀರಿಗಿಂತ ನಾಯಿಗಳಿಗೇ ಹೆಚ್ಚು ವೆಚ್ಚ!


ಬೆಳಗಾವಿ: ಸ್ಮಾರ್ಟ್‌ಸಿಟಿಯಲ್ಲಿ ಕಳೆದೊಂದು ದಶಕಗಳಿಂದಲೂ ಬೀದಿನಾಯಿಗಳ ಕಾಟ ವಿಪರೀತವಾಗಿದೆ. ಸಾವಿರಾರು ಸಂಖ್ಯೆಯ ನಾಯಿಗಳು ಪ್ರತಿ ವರ್ಷವೂ ಹೆಚ್ಚುತ್ತಲೇ ಇವೆ. ಪ್ರಸಕ್ತ ಬಜೆಟ್‌ನಲ್ಲಿ ಕೂಡ ನಾಯಿಗಳ ಉಪಟಳ ನಿಯಂತ್ರಣ ಹಾಗೂ ಸಂತಾನಶಕ್ತಿ ಹರಣ ಶಸ್ತ್ರಚಿಕಿತ್ಸೆಗೆ 2.10 ಕೋಟಿ ಅನುದಾನ ಮೀಸಲು ಇಡಲಾಗಿದೆ.

ಮಹಾನಗರ ಪಾಲಿಕೆಯ ಮೇಯರ್ ಮಂಗೇಶ ಪವಾರ್ ಅಧ್ಯಕ್ಷತೆಯಲ್ಲಿ ನಡೆದ ಬಜೆಟ್ ಸಭೆಯಲ್ಲಿ ಪಾಲಿಕೆಯ ತೆರಿಗೆ, ಹಣಕಾಸು, ಅಪೀಲುಗಳ ಸ್ಥಾಯಿ ಸಮಿತಿ ಅಧ್ಯಕ್ಷೆ ರೇಷ್ಮಾ ಹೂಗಾರ ಅವರು, ನಗರದ ಅಭಿವೃದ್ಧಿಗೆ ದಿಕ್ಕು ತೋರಿಸುವ 2026-27ನೇ ಸಾಲಿನ ಬಜೆಟ್ ಮಂಡಿಸಿದರು. ಬುಧವಾರ ಮಹಾನಗರ ಪಾಲಿಕೆಯ ಸಭೆಯಲ್ಲಿ ಬೆಳಗಾವಿ ನಗರದಲ್ಲಿರುವ ಆಯಾ ಅಭಿವೃದ್ಧಿ ಕ್ಷೇತ್ರಗಳಿಗೆ ಬೇಕಾಗಿರುವ ಅನುದಾನವನ್ನು ಬಜೆಟ್‌ನಲ್ಲಿ ಮಂಡಿಸಲಾಯಿತು. ಆದರೆ, ಪಾಲಿಕೆಗೆ ದೊಡ್ಡ ತಲೆನೋವು ಆಗಿರುವುದು ಒಂದೇ ನೀರಿಗಿಂತ ಬೀದಿನಾಯಿಗಳ ಖರ್ಚು ಅಂತಿ ಹೆಚ್ಚು ಆಗಿರುವುದರಿಂದ ಪಾಲಿಕೆಯು ತಲೆ ಬಿಸಿ ಮಾಡಿಕೊಂಡಿದೆ.

2024-25ನೇ ಸಾಲಿನ ಹಾಗೂ 2025-26ನೇ ಸಾಲಿನ ಬಜೆಟ್‌ನಲ್ಲಿಯೂ ಅಂದಾಜು ರೂ.2 ಕೋಟಿ ಮೀಸಲು ಇಡಲಾಗಿತ್ತು. ಆದರೆ, ನಾಯಿಗಳ ಸಂತಾನ ಮಾತ್ರ ಕಡಿಮೆ ಆಗಿಲ್ಲ, ಅಚ್ಚರಿಯೆಂದರೆ ಕುಡಿಯುವ ನೀರಿಗಿಂತಲೂ ನಾಯಿಗಳೇ ಹೆಚ್ಚು ಹಣ ನುಂಗುತ್ತಿವೆ.

ಇದರಿಂದಾಗಿ ಮಹಾನಗರ ಪಾಲಿಕೆಗೆ ನಾಯಿಗಳ ಸಂತಾನವನ್ನು ಯಾವ ರೀತಿ ಕಡಿಮೆ ಮಾಡಬೇಕೆಂದು ತಲೆ ಬಿಸಿ ಮಾಡಿಕೊಂಡಿದ್ದಾರೆ. ನಾಯಿಗಳ ಖರ್ಚು ಹೆಚ್ಚಾಗಿರುವುದರಿಂದ ಸಾರ್ವಜನಿಕ ಜೇಬಿಗೆ ಕತ್ತರಿ ಬೀಳುವ ಸಾಧ್ಯತೆ ಹೆಚ್ಚಾಗಿದೆ. ನೀರಿನ ದರ, ಆಸ್ತಿ ತೆರಿಗೆ ಸೇರಿದಂತೆ ವಿವಿಧ ತೆರಿಗೆಗಳನ್ನು ಹೆಚ್ಚಿಗೆ ಮಾಡುವ ಸಾಧ್ಯತೆಗಳಿಗೆ ಎಂದು ಕೆಲ ಕಾರ್ಪೊರೇಟರ್‌ಗಳು ಅಸಮಾಧಾನ ಹೊರಹಾಕಿದ್ದಾರೆ ಎನ್ನಲಾಗಿದೆ.

ರಾಮ ಬಾಣ



ಭಾರತ-ಇಸ್ರೇಲ್ ಬಂಧ

ಪುಟ ೧➜ ಭಯೋತ್ಪಾದನೆಯು ಸಮಾಜಗಳನ್ನು ಅಸ್ಥಿರಗೊಳಿಸುವ, ಅಭಿವೃದ್ಧಿಯನ್ನು ತಡೆಯುವ ಮತ್ತು ವಿಶ್ವಾಸವನ್ನು ಕುಗ್ಗಿಸುವ ಗುರಿಯನ್ನು ಹೊಂದಿದೆ. ಭಯೋತ್ಪಾದನೆಯನ್ನು ಎದುರಿಸಲು ಸುಸ್ಥಿರ ಮತ್ತು ಸಂಘಟಿತ ಜಾಗತಿಕ ಕ್ರಮದ ಅಗತ್ಯವಿದೆ. ಏಕೆಂದರೆ ಭಯೋತ್ಪಾದನೆಯು ಎಲ್ಲೆಡೆ ಶಾಂತಿಗೆ ಅಪಾಯವನ್ನುಂಟುಮಾಡುತ್ತದೆ. ಅದಕ್ಕಾಗಿಯೇ, ಶಾಂತಿ ಮತ್ತು ಪ್ರಾದೇಶಿಕ ಸ್ಥಿರತೆಗೆ ಕೊಡುಗೆ ನೀಡುವ ಎಲ್ಲಾ ಪ್ರಯತ್ನಗಳನ್ನು ಭಾರತ ಬೆಂಬಲಿಸುತ್ತದೆ ಎಂದು ಮೋದಿ ತಮ್ಮ ಭಾಷಣದಲ್ಲಿ ಹೇಳಿದರು.

ತಾನು ಜನಿಸಿದ ದಿನವೇ ಇಸ್ರೇಲ್‌ಗೆ ಔಪಚಾರಿಕ ಮಾನ್ಯತೆ: 1950ರ ಸೆಪ್ಟೆಂಬರ್ 17ರಂದು ಭಾರತವು ಇಸ್ರೇಲ್‌ಗೆ ಔಪಚಾರಿಕವಾಗಿ ಮಾನ್ಯತೆ ನೀಡಿದ ದಿನವೇ ತಾನು ಜನಿಸಿದ್ದರಿಂದ ತಾನು ಯಾವಾಗಲೂ ಇಸ್ರೇಲ್ ಕಡೆಗೆ ಆಕರ್ಷಿತನಾಗಿದ್ದೇನೆ ಎಂದು ಪ್ರಧಾನಿ ಮೋದಿ ಬುಧವಾರ ಇಸ್ರೇಲ್ ಸಂಸತ್ತಿಗೆ ತಿಳಿಸಿದರು.

ಕೇಸರಿ ಬಟ್ಟೆ ಧರಿಸಿ ಮೋದಿ ಸ್ವಾಗತಿಸಿದ ನೆತನ್ಯಾಹು ಪತ್ನಿ

ಪುಟ ೧➜ ಅದು ಕೇಸರಿ ಬಣ್ಣ ಎಂದು ಮೋದಿ ನಕ್ಕರು.

ಜೆರುಸಲೇಂ ಮೇ ಆಪ್ ಕಾ ಸ್ವಾಗತ್ ಹೇ!: ಜೆರುಸಲೇಂ ಮೇ ಆಪ್ ಕಾ ಸ್ವಾಗತ್ ಹೇ, ನೆಸೆಟ್ ಮೇ ಆಪ್ ಕಾ ಸ್ವಾಗತ್ ಹೇ (ಜೆರುಸಲೇಂಗೆ ನಿಮಗೆ ಸ್ವಾಗತ, ಸಂಸತ್ತಿಗೆ ನಿಮಗೆ ಸ್ವಾಗತ) ಎಂದು ಇಸ್ರೇಲ್ ಸಂಸತ್ತಿನ ಸ್ಪೀಕರ್ ಅಮಿರ್ ಒಹಾನ ಹಿಂದಿಯಲ್ಲೇ ಪ್ರಧಾನಿ ಮೋದಿಯವರನ್ನು ಸ್ವಾಗತಿಸಿದರು.

ಮೋದಿ ಅಪ್ಪುಗೆ ಬಹಳ ವಿಶೇಷ!: ಪ್ರಧಾನಿ ಮೋದಿ ಅವರ ಅಪ್ಪುಗೆಯಲ್ಲಿ ಏನೋ ವಿಶೇಷತೆಯಿದೆ. ಅದನ್ನು ಮೋದಿ ಅಪ್ಪುಗೆಯೆಂದು ಕರೆಯಲಾಗುತ್ತದೆ. ವಿಶ್ವದೆಲ್ಲೆಡೆ ಮೋದಿ ಅಪ್ಪುಗೆ ಪ್ರಸಿದ್ಧಿ ಪಡೆದಿದೆ. ಬಹಳ ಆತ್ಮೀಯವಾಗಿ, ನಿಷ್ಕಲ್ಮಶವಾಗಿ ಯಾರನ್ನಾದರೂ ಅಪ್ಪುವಾಗ ನಟಿಸಬೇಕಿಲ್ಲ. ಈ ನಿಜವಾದ ಅಪ್ಪುಗೆಯನ್ನು ಎಲ್ಲಾ ನೆಸೆಟ್ ಸದಸ್ಯರಿಗೆ ಹಿಂದಿರುಗಿಸಲು ಬಯಸುತ್ತೇನೆ. ಇದು ವೈಯಕ್ತಿಕ ಗೆಳೆತನವಷ್ಟೇ ಅಲ್ಲ, ನಮ್ಮ ಜನರ ನಡುವಿನ ಸ್ನೇಹ ಸಂಬಂಧವೂ ಆಗಿದೆ ಎಂದು ನೆತನ್ಯಾಹು ನುಡಿದರು. ಪ್ರಧಾನಿ ಮೋದಿಯವರ ಭೇಟಿ ಹಿನ್ನೆಲೆ ಇಸ್ರೇಲ್‌ನ ಜೆರುಸಲೇಂ ಪೋಸ್ಟ್ ಪತ್ರಿಕೆಯು ತನ್ನ ಮುಖಪುಟದಲ್ಲಿ ನಮಸ್ತೇ, ಮೋದಿ ಶೀರ್ಷಿಕೆಯೊಂದಿಗೆ ಆತ್ಮೀಯ ಸ್ವಾಗತ ಕೋರಿದೆ.

ಕಿಡಿ ನುಡಿ

ವಾಸುದೇವರಾವ್ ಕಕ್ಕೇನೇಜಿ

ಪಕ್ಷದ ಹೈಕಮಾಂಡ್ ಸೂಚಿಸಿದರೆ ಬೀದಿ ದಾಸಯ್ಯನೂ ಸಿಎಂ ಆಗಬಹುದು
- ಜಮೀರ್ ಅಹ್ಮದ್ ಖಾನ್
- ಅಂದರೆ ಯೋಗ್ಯತೆ, ಅರ್ಹತೆಯ ಅವಶ್ಯಕತೆ ಇಲ್ಲ, ಹೈಕಮಾಂಡ್ ಕೃಪಾಕಟಾಕ್ಷವೇ ಎಲ್ಲಾ!

ದಿನ ಭವಿಷ್ಯ

ಮೇಷ
ಸಣ್ಣ ವಿಷಯಕ್ಕೂ ಹೆಚ್ಚು ಗಮನ ಕೊಡಿ. ನಿಮ್ಮ ಮೇಲೆ ಪರಿಣಾಮ ಬೀರಬಹುದು. ಕೆಲಸ ವಿಳಂಬಕ್ಕೆ ಅಸಹನೆ ಬೇಡ. ತಾಳ್ಮೆಯಿಂದ ಕಾಯಿರಿ.

ವೃಷಭ
ನಿಮ್ಮ ಪ್ರಯತ್ನದಿಂದ ಉದ್ದೇಶ ಸಾಧನೆ. ಧನ ಪ್ರಾಪ್ತಿ. ಅನಿರೀಕ್ಷಿತ ಲಾಭ ಖುಷಿ ತರಲಿದೆ. ಕೌಟುಂಬಿಕ ಅಸಹಕಾರ ನಿವಾರಣೆ, ನೆಮ್ಮದಿ.

ಮಿಥುನ
ಎಲ್ಲರ ದೃಷ್ಟಿ ನಿಮ್ಮ ಮೇಲೆ. ನಿರ್ವಹಣೆಯಲ್ಲಿ ಸೋಲಬೇಡಿ. ನಿಮ್ಮ ಸೋಲನ್ನ ಕೆಲವರು ಬಯಸುವರು. ಆಪ್ತ ಸಂಬಂಧದಲ್ಲಿ ಒಡಕು.

ಕಟಕ
ಎಂದಿನಂತೆ ಸಹಜ ದಿನವಾಗಿ ಕಂಡರೂ ಬಳಿಕ ಕೆಲವು ಪ್ರಮುಖ ಬೆಳವಣಿಗೆ ಆಗಲಿದೆ. ಅದಕ್ಕೆ ಹೊಂದಿಕೊಳ್ಳಿ. ವಿರೋಧಿಸಿದರೆ ತೊಡಕು.

ಸಿಂಹ
ವೃತ್ತಿಯಲ್ಲಿ ಏನೋ ಅಸಹಜ ಬೆಳವಣಿಗೆ ಸಂಭವಿಸಬಹುದು. ಆ ಬಗ್ಗೆ ಎಚ್ಚರದಿಂದಿರಿ. ಆರೋಗ್ಯ ಕಾಳಜಿ ವಹಿಸಿ.

ಕನ್ಯಾ
ಬಂಧುಗಳ ಭೇಟಿ ನಿಮ್ಮ ದಿನದ ಸಂತೋಷ ಹೆಚ್ಚಿಸಲಿದೆ. ಆರ್ಥಿಕ ಬೆಳವಣಿಗೆ. ನಿಮ್ಮ ಕಾರ್ಯದಲ್ಲಿ ತೃಪ್ತಿಕರ ಫಲಿತಾಂಶ ಕಾಣುವಿರಿ.

ತುಲಾ
ಜವಾಬ್ದಾರಿ ಹೆಚ್ಚಳ. ಇಷ್ಟವಿಲ್ಲದಿದ್ದರೂ ಮಾಡಲೇ ಬೇಕು. ಆತ್ಮೀಯರ ಜತೆ ಭಾವನೆ ಹಂಚಿಕೊಳ್ಳಿ. ಹಿರಿಯರಿಗೆ ಆರೋಗ್ಯ ಸಮಸ್ಯೆ.

ವೃಶ್ಚಿಕ
ವೃತ್ತಿಯಲ್ಲಿ ಒತ್ತಡ. ಸಹನೆಯ ವರ್ತನೆ ನಿಮ್ಮ ನೆರವಿಗೆ ಬರಲಿದೆ. ಆರ್ಥಿಕ ಲಾಭ. ಆರೋಗ್ಯ ಸಮಸ್ಯೆ ಕಾಡಬಹುದು. ಮಿತಾಹಾರ ಒಳಿತು.

ಧನು
ಒತ್ತಡ ತುಂಬಿದ ದಿನ. ಕಾಲಮಿತಿಯಲ್ಲಿ ಕೆಲಸ ಪೂರೈಸಬೇಕು. ಆಪ್ತರ ಜತೆಗಿನ ಭಿನ್ನಮತ ನಿವಾರಿಸಿಕೊಳ್ಳಿ. ದೈಹಿಕ ಆಲಸ್ಯ ಕಾಡಬಹುದು.

ಮಕರ
ನಿಮ್ಮ ಪಾಲಿಗೆ ಉತ್ತಮ ದಿನ. ಆರ್ಥಿಕ ಅಭಿವೃದ್ಧಿ. ಮಹತ್ವದ ಉದ್ದೇಶ ಸಾಧಿಸುವಿರಿ. ವಿರೋಧಿಗಳು ಮೌನ. ಆಪ್ತರಿಂದ ಸಹಕಾರ.

ಕುಂಭ
ಎಲ್ಲವೂ ಕೃತಕ, ಭಾವನೆಗೆ ಬೆಲೆಯಿಲ್ಲ ಎಂಬಂತಹ ಅನಿಸಿಕೆ ಉಂಟಾದೀತು. ವಾಸ್ತವದ ಜತೆ ಹೊಂದಿಕೊಂಡು ಬಾಳುವುದೇ ಒಳಿತು.

ಮೀನ
ಸವಾಲಿನ ದಿನ. ಏಳು-ಬೀಳು ಎರಡನ್ನೂ ಎದುರಿಸುವಿರಿ. ಆಪ್ತರ ಜತೆ ಭಾವನೆ ಹಂಚಿಕೊಂಡು ಸಮಾಧಾನ ಪಡೆಯುವಿರಿ.

ರಾಹುಕಾಲ: 1.30-3.00
ಗುಳಿಕಕಾಲ: 9.00-10.30
ಅದೃಷ್ಟ ಸಂಖ್ಯೆ: 0,6,1,5

ಬೆಳಗಾವಿ-ಮುಂಬೈ ನಡುವೆ ವಿಮಾನ ಹಾರಾಟ ಪುನರಾರಂಭ

ಬೆಳಗಾವಿ: ಬೆಳಗಾವಿ-ಮುಂಬೈ ನಡುವೆ ಇಂಡಿಗೋ ಸಂಸ್ಥೆಯು ನೂತನ ವಿಮಾನಯಾನ ಸೇವೆಯನ್ನು ಪ್ರಾರಂಭ ಮಾಡಲಿದೆ ಎಂದು ಬೆಳಗಾವಿ ಲೋಕಸಭಾ ಸದಸ್ಯ ಜಗದೀಶ ಶೆಟ್ಟರ ತಿಳಿಸಿದ್ದಾರೆ. ಕೆಲವು ತಿಂಗಳ ಹಿಂದೆಯಷ್ಟೆ ಸ್ಟಾರ್ ಏರ್ ಸಂಸ್ಥೆಯು ಬೆಳಗಾವಿ-ಮುಂಬೈ ನಡುವೆ ವಿಮಾನಯಾನ ಸೇವೆಯನ್ನು ರದ್ದುಗೊಳಿಸಿತ್ತು. ಇದರಿಂದಾಗಿ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿತ್ತು. ಈ ಹಿನ್ನೆಲೆಯಲ್ಲಿ ಸಂಸದರು ಕೇಂದ್ರ ವಿಮಾನಯಾನ



ಸಚಿವ ಕೆ.ರಾಮಮೋಹನ್ ನಾಯ್ಡು ಅವರನ್ನು ಬಜೆಟ್ ಅಧಿವೇಶನ ನಡೆದ ಸಮಯದಲ್ಲಿ ಭೇಟಿ ಮಾಡಿ ವಿನಂತಿಸಿದ್ದು ಇಲ್ಲಿ ಸ್ಮರಣೀಯ. ಅದಲ್ಲದೆ, ಇಂಡಿಗೋ ಸಂಸ್ಥೆಯ ಹಿರಿಯ ಅಧಿಕಾರಿಗಳೊಂದಿಗೆ ಸಹ ನವದೆಹಲಿಯಲ್ಲಿ ಸಭೆ ನಡೆಸಿ, ಬೆಳಗಾವಿಯಿಂದ ಮುಂಬೈ, ಚೆನ್ನೈ ಹಾಗೂ ಪುಣೆ ಮಾರ್ಗದಲ್ಲಿ ವಿಮಾನಯಾನ ಸೇವೆಯನ್ನು ಒದಗಿಸಲು ಕೋರಿದ್ದರು. ಇದಕ್ಕನುಗುಣವಾಗಿ 29ನೇ ಮಾರ್ಚ್ 2026ರಿಂದ ಬೆಳಗಾವಿ-ನವಿಮುಂಬೈ ನಡುವೆ ಇಂಡಿಗೋ ವಿಮಾನ ಹಾರಾಟವನ್ನು ಪ್ರಾರಂಭಿಸಲಿದೆ. ಇದು ನವಿ ಮುಂಬೈಯನ್ನು ಬೆಳಗ್ಗೆ 10:20ಕ್ಕೆ ಬಿಟ್ಟು ಬೆಳಗಾವಿಯನ್ನು 11:35ಕ್ಕೆ ತಲುಪಿ, ನಂತರ ಬೆಳಗಾವಿಯನ್ನು ಸಂಜೆ 17:35ಕ್ಕೆ ಬಿಟ್ಟು ನವಿಮುಂಬೈಯನ್ನು 18.45ಕ್ಕೆ ತಲುಪುವುದು. ವಿಮಾನಯಾನ ಸೇವೆ ಪ್ರಾರಂಭಕ್ಕೆ ಸಹಕರಿಸಿದ ಕೇಂದ್ರ ವಿಮಾನಯಾನ ಸಚಿವ ಕೆ.ರಾಮಮೋಹನ್ ನಾಯ್ಡು ಅವರಿಗೆ ಮತ್ತು ಇಂಡಿಗೋ ಸಂಸ್ಥೆಯ ಅಧಿಕಾರಿಗಳಿಗೆ ಅಭಿನಂದನೆಗಳನ್ನು ತಿಳಿಸುವುದಾಗಿ ಹೇಳಿದ್ದಾರೆ.

ರಾಜ್ಯ ಸರ್ಕಾರದಿಂದ 52 ಕೋಟಿ ರೂ. ವೆಚ್ಚ: ಪ್ರಿಯಾಂಕ್ ಖರ್ಗೆ

ನೀರಿನ ಗುಣಮಟ್ಟಕ್ಕೆ ಆದ್ಯತೆ

ಬೆಂಗಳೂರು: ಶುದ್ಧ ಮತ್ತು ಸುರಕ್ಷಿತ ಕುಡಿಯುವ ನೀರು ನಿರ್ವಹಣೆ ಪ್ರಯೋಗಾಲಯಗಳ ಮೂಲಕ ನೀರಿನ ಗುಣಮಟ್ಟ ಪರೀಕ್ಷೆಗಳನ್ನು ಕೈಗೊಳ್ಳಲು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದ್ದು, 2024-25 ನೇ ಸಾಲಿನಲ್ಲಿ 23.52 ಕೋಟಿ ರೂ. ಮತ್ತು ಪ್ರಸಕ್ತ ಸಾಲಿನಲ್ಲಿ ಇಲ್ಲಿಯವರೆಗೂ 28.85 ಕೋಟಿ ರೂ. ವೆಚ್ಚ ಮಾಡಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.



ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಶುದ್ಧ ನೀರು ಸರಬರಾಜು ಮಾಡಲು ಕಾಲ-ಕಾಲಕ್ಕೆ ಇಲಾಖೆಯಿಂದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕ್ರಮ ವಹಿಸಿರುವುದರಿಂದ ಪ್ರಸಕ್ತ ಸಾಲಿನಲ್ಲಿ ರಾಜ್ಯದ ಗ್ರಾಮೀಣ ಜನವಸತಿ ಪ್ರದೇಶ ಗಳಲ್ಲಿ ಕಲುಷಿತ ನೀರಿನಿಂದ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿರುವಂತಹ ಪ್ರಕರಣಗಳು ಕಂಡುಬಂದಿರುವುದಿಲ್ಲ ಎಂದು ತಿಳಿಸಿದ್ದಾರೆ.

ರಾಜ್ಯಾದ್ಯಂತ ಗ್ರಾಮೀಣ ಜನವಸತಿ ಪ್ರದೇಶಗಳಲ್ಲಿನ ಕುಡಿಯುವ ನೀರಿನ ಮೂಲಗಳನ್ನು ನಿಗದಿಪಡಿಸಲಾಗಿರುವ ಮಾರ್ಗಸೂಚಿಗಳ ಅನುಗುಣವಾಗಿ ಬಿಐಎಸ್ 10500-2012 ಗುಣಮಟ್ಟದಂತೆ ಪ್ರಯೋಗಾಲಯಗಳಲ್ಲಿ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ, ರಾಜ್ಯದಲ್ಲಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಜಿಲ್ಲಾ ಮಟ್ಟದ ಪ್ರಯೋಗಾಲಯಗಳು ಮತ್ತು 47 ತಾಲ್ಲೂಕು ಮಟ್ಟದ ಪ್ರಯೋಗಾಲಯಗಳು ಕಾರ್ಯನಿರ್ವಹಿಸುತ್ತಿವೆ. ಈ ಪ್ರಯೋಗಾಲಯಗಳಲ್ಲಿ 2023-24ರಿಂದ ನೀರಿನ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಲಾಗುತ್ತಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ ಹಂಚಿಕೊಂಡಿದ್ದಾರೆ.

ನೀರಿನ ಗುಣಮಟ್ಟ ಮೇಲ್ವಿಚಾರಣೆ ಮತ್ತು ಕಣ್ಗಾವಲು ಕಾರ್ಯಕ್ರಮವನ್ನು ಸೂಕ್ತ ರೀತಿಯಲ್ಲಿ ಅನುಷ್ಠಾನಗೊಳಿಸಲು ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಟಾಸ್ಕ್ ಫೋರ್ಸ್ ಸಮಿತಿಗಳನ್ನು ರಚಿಸಲಾಗಿದೆ.

ಶುದ್ಧ ಕುಡಿಯುವ ನೀರನ್ನು ಸರಬರಾಜು ಮಾಡಲು ಮುನ್ನೆಚ್ಚರಿಕೆ ಕ್ರಮವಾಗಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಸಿಇಒಗಳಿಗೆ ಮಾಹಿತಿ ನೀಡಲಾಗಿದೆ ಎಂದು ಮಾಹಿತಿ ಹಂಚಿಕೊಂಡಿದ್ದಾರೆ.

ಈ ವರ್ಷ 2.46 ಲಕ್ಷ ನೀರಿನ ಮಾದರಿ ಸಂಗ್ರಹ

ರಾಜ್ಯದಲ್ಲಿ 2023-24ರಲ್ಲಿ ಲಕ್ಷ, 2025-25ರಲ್ಲಿ 3.90 ಲಕ್ಷ ಹಾಗೂ 2025-26ರಲ್ಲಿ 2.46 ಲಕ್ಷ ನೀರಿನ ಮಾದರಿಗಳನ್ನು ಸಂಗ್ರಹಿಸಸಲಾಗಿದ್ದು, ಇವುಗಳಲ್ಲಿ 9.34 ಲಕ್ಷ ಮಾದರಿಗಳಲ್ಲಿ ರಾಸಾಯನಿಕಗಳು, 7,244 ಮಾದರಿಗಳಲ್ಲಿ ಬ್ಯಾಕ್ಟೀರಿಯಾ ಪತ್ತೆಯಾಗಿದ್ದವು. ಈ ಪೈಕಿ ಕಲುಷಿತ ನೀರು ಎಂದು ಕಂಡು ಬಂದ 49,309 ನೀರಿನ ಮಾದರಿಗಳಿಗೆ ಪರ್ಯಾಯ ಕ್ರಮಗಳನ್ನು ಕೈಗೊಂಡು ನೀರು ಪೂರೈಸಲಾಗಿದೆ ಸಚಿವರು ವಿವರ ನೀಡಿದ್ದಾರೆ.

ರಾಯಚೂರು ಕೃಷಿ ವಿವಿ ಜತೆ ಒಪ್ಪಂದ

ಕಲ್ಯಾಣ ಕರ್ನಾಟಕ ಭಾಗದ ಗ್ರಾಮೀಣ ಜನವಸತಿ ಪ್ರದೇಶಗಳಲ್ಲಿ ಬರುವ ನೀರಿನ ಮಾದರಿಗಳ ಗುಣಮಟ್ಟದ ಪರೀಕ್ಷೆಗಳನ್ನು ಕೈಗೊಳ್ಳಲು ರಾಯಚೂರು ಕೃಷಿ ವಿಶ್ವವಿದ್ಯಾಲಯದೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿದ್ದು, ವಿಶ್ವವಿದ್ಯಾಲಯದ ಸೂಕ್ಷ್ಮ ಜೀವಾಣು ಪರೀಕ್ಷಾ ಪ್ರಯೋಗಾಲಯಗಳಲ್ಲಿ ಕಲಬುರಗಿ, ಬೀದರ್, ರಾಯಚೂರು, ಯಾದಗಿರಿ ಮತ್ತು ಬಳ್ಳಾರಿ ಜಿಲ್ಲೆಗಳ ನೀರಿನ ಮಾದರಿಗಳ ಗುಣಮಟ್ಟದ ಪರೀಕ್ಷೆಗಳನ್ನು ಕೈಗೊಳ್ಳಲಾಗುತ್ತಿದೆ ಎಂದೂ ಸಚಿವರು ತಿಳಿಸಿದ್ದಾರೆ.

ಕುಸುಮ ರೋಗಿಗಳಿಗೆ ಡಿಕೆಶಿ ಅಭಯ

ಪುಟ ೧➜ ಒಬ್ಬ ರೋಗಿಗೆ ಚುಚ್ಚುಮದ್ದು ನೀಡಲು ವರ್ಷಕ್ಕೆ 5 ಲಕ್ಷ ರೂ. ವೆಚ್ಚವಾಗಲಿದೆ. ಹಿಮೋಫಿಲಿಯಾದಂತಹ ಅಪರೂಪದ ಕಾಯಿಲೆಯಿಂದ ಬಳಲುತ್ತಿರುವ ರೋಗಿಗಳ ಬದುಕಿನಲ್ಲಿ ಭರವಸೆ ಮೂಡಿಸಬೇಕು. ಪೋಷಕರು ಮತ್ತು ರೋಗಿಗಳು ಎದೆಗುಂದಬಾರದು ಎಂದರು.

ಪ್ರತಿ ವರ್ಷ 13,940 ಹೊಸ ವೈದ್ಯರು: ರಾಜ್ಯದಿಂದ ಪ್ರತಿ ವರ್ಷ 13,940 ವೈದ್ಯರು ತಯಾರಾಗುತ್ತಿದ್ದಾರೆ. 3 ಸಾವಿರ ವೈದ್ಯರು ಎಂಡಿ ಪದವಿ ಪಡೆಯುತ್ತಿದ್ದಾರೆ. 70 ಮೆಡಿಕಲ್ ಕಾಲೇಜು ಹೊಂದಿದ್ದೇವೆ. ಪ್ರತಿ ಜಿಲ್ಲೆಯಲ್ಲೂ ಒಂದೊಂದು ಮೆಡಿಕಲ್ ಕಾಲೇಜುಗಳಿವೆ. ಸುಮಾರು 1 ಲಕ್ಷ ಪ್ಯಾರಾ ಮೆಡಿಕಲ್ ವಿದ್ಯಾರ್ಥಿಗಳು ಪ್ರತಿ ವರ್ಷ ಸೇವೆಗೆ ಸಜ್ಜಾಗುತ್ತಿದ್ದಾರೆ ಎಂದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾತನಾಡಿ, ರಾಜ್ಯದಲ್ಲಿ ಒಟ್ಟು 2,621 ಹಿಮೋಫಿಲಿಯಾ ರೋಗಿಗಳಿದ್ದಾರೆ. ಇವರಿಗಾಗಿ ಸರ್ಕಾರ ಕುಸುಮ ಸಂಜೀವಿನಿ ಯೋಜನೆಯ ಮೂಲಕ ಚಿಕಿತ್ಸೆ ನೆರವು ನೀಡಲು ಸಜ್ಜಾಗಿದ್ದು, ಈ ಯೋಜನೆಗೆ 42.55 ಕೋಟಿ ರೂ. ಅನುದಾನ ಮಂಜೂರು ಮಾಡಿದೆ. ಈ ಪೈಕಿ ಔಷಧಕ್ಕಾಗಿ 17 ಕೋಟಿ ರೂ. ಮೀಸಲಿಟ್ಟಿದ್ದು, ಕಡಿಮೆಯಾದಲ್ಲಿ ಇನ್ನೂ 50 ಕೋಟಿ ರೂ. ಮೀಸಲಿಡಲು ಸರ್ಕಾರ ಸಿದ್ಧವಿದೆ ಎಂದರು.

ಹಿಮೋಫಿಲಿಯಾ ಎ ರೋಗಿಗಳಿಗೆ ವಾರ್ಷಿಕವಾಗಿ ಸುಮಾರು 5 ಲಕ್ಷ ರೂ. ವೆಚ್ಚವಾಗುವ ಸಬ್ಕ್ಯುಟೇನಿಯಸ್ ಚುಚ್ಚುಮದ್ದನ್ನು ರಾಜ್ಯ ಸರ್ಕಾರ ಉಚಿತವಾಗಿ ಒದಗಿಸುತ್ತಿದೆ. ಈ ಮೊದಲು ಪದೇಪದೆ ರಕ್ತನಾಳದ ಮೂಲಕ ನೋವಿನ ಚುಚ್ಚುಮದ್ದನ್ನು ಪಡೆಯಬೇಕಾಗಿದ್ದ ರೋಗಿಗಳಿಗೆ ಈಗ ತಿಂಗಳಿಗೊಮ್ಮೆ ಚರ್ಮದ ಅಡಿಯಲ್ಲಿ ಸುಲಭವಾಗಿ ಪಡೆಯಬಹುದಾದ ಚಿಕಿತ್ಸೆ ಲಭ್ಯವಾಗುತ್ತದೆ ಎಂದು ತಿಳಿಸಿದರು.

ಇದೇ ವೇಳೆ, ಹಿಮೋಫಿಲಿಯಾ ರೋಗಿಗಳಿಗಾಗಿ ತಮ್ಮ ವೃತ್ತಿ ಜೀವನ ಮುಡಿಪಾಗಿಟ್ಟ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತ ಡಾ. ಸುರೇಶ್ ಹನಗವಾಡಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ರೋಶ್ ಫಾರ್ಮಾ ಇಂಡಿಯಾ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ರಾಜ್‌ವಿಂದರ್ (ರಾಜಿ) ಮೆಹ್ವಾನ್, ಡಾ. ಅವಿನಾಶ್ ಮೆನನ್ ರಾಜೇಂದ್ರನ್ ಇದ್ದರು.

> ರೋಗನಿರೋಧಕ ಚಿಕಿತ್ಸೆಗೆ ಆದ್ಯತೆ ನೀಡಿರುವುದು ರೋಗಿಗಳ ಜೀವನದಲ್ಲಿ ಪರಿವರ್ತನಾತ್ಮಕ ಹೆಜ್ಜೆಯಾಗಿದೆ. ಸಮಾಜ ಹಾಗೂ ಸರ್ಕಾರ ಹಿಮೋಫಿಲಿಯಾಪೀಡಿತರ ಬೆಳವಣಿಗೆ ಹಾಗೂ ಆರೋಗ್ಯಕ್ಕೆ ಪೂರಕ ವಾತಾವರಣ ಕಲ್ಪಿಸಬೇಕು.
> ■ ಡಾ. ಸುರೇಶ್ ಹನಗವಾಡಿ, ವೈದ್ಯ

ಡ್ರಗ್ಸ್ ನೀಡಿ ಸಾಮೂಹಿಕ ಅತ್ಯಾಚಾರ, ಮತಾಂತರ!

ಪುಟ ೧➜ **ಅತ್ಯಾಚಾರವೆಸಗಲು ಪ್ರಿಯತಮೆಯಿಂದಲೇ ವೇದಿಕೆ!:** ಹಿಂದು ಯುವತಿಯರಿಗೆ ಮನೆಗೆಲಸದ ನೌಕರಿ ನೀಡುವುದಾಗಿ ನಂಬಿಸಿ ಮನೆಗೆ ಕರೆದೊಯ್ದು, ಮಾದಕವಸ್ತು ನೀಡಿ ತನ್ನ ಪ್ರಿಯಕರನಿಂದಲೇ ಅಮ್ರೀನ್ ಅತ್ಯಾಚಾರ ಮಾಡಿಸುತ್ತಿದ್ದಳು. ಮನೆಯಲ್ಲಿ ಪಾರ್ಟಿ ಇತ್ಯಾದಿ ವೇಳೆ ಬಲವಂತದಿಂದ ಅಮಲು ಪದಾರ್ಥ ನೀಡಿ ಅಶ್ಲೀಲ ನೃತ್ಯ ಮಾಡಿಸುತ್ತಿದ್ದರು. ತನ್ನ ಪ್ರಿಯಕರನಿಂದ ಅಥವಾ ಸಹಚರರಿಂದ ಅತ್ಯಾಚಾರ ನಡೆಸುತ್ತಿದ್ದ ಅಮ್ರೀನ್, ವಿಡಿಯೋ ಚಿತ್ರೀಕರಿಸಿ ಇಸ್ಲಾಂಗೆ ಮತಾಂತರ ಆಗುವಂತೆ ಹಿಂದು ಯುವತಿಯರನ್ನು ಬೆದರಿಸುತ್ತಿದ್ದಳು ಎಂದು ಸಂತ್ರಸ್ತ ಯುವತಿ ದೂರಿನಲ್ಲಿ ತಿಳಿಸಿದ್ದಾಳೆ.

ಸಂತ್ರಸ್ತೆ ದೂರು, ಎಫ್‌ಐಆರ್: ವಾರದ ಹಿಂದೆ ಛತ್ತೀಸಗಢದಲ್ಲಿ 21 ವರ್ಷದ ಸೌಂದರ್ಯತಜ್ಞೆ ಮತ್ತು 32 ವರ್ಷದ ಭೋಪಾಲ್ ನಿವಾಸಿ ಮಹಿಳೆಯರ ವಿರುದ್ಧ ಪೊಲೀಸರು ತನಿಖೆ ಆರಂಭಿಸಿದಾಗ ಬಲವಂತದ ಮತಾಂತರ ಜಾಲ ಬೆಳಕಿಗೆ ಬಂದಿದೆ. ಇಬ್ಬರೂ ಸಹೋದರಿಯರು ಬಲವಂತದ ಮತಾಂತರ ಜಾಲ ನಡೆಸುತ್ತಿದ್ದರೆಂಬ ವಿಷಯ ಬಯಲಾಗಿದೆ. ಇವರಿಬ್ಬರ ವಿರುದ್ಧ ಸಂತ್ರಸ್ತೆಯೊಬ್ಬರು ದೂರು ನೀಡಲು ಧೈರ್ಯ ತೋರಿಸಿದ್ದರಿಂದ ದೊಡ್ಡ ಜಾಲವೊಂದು ಪತ್ತೆಯಾಗಿದೆ. ಸಂತ್ರಸ್ತೆ ಯುವತಿಯ ದೂರಿನ ಆಧಾರದಲ್ಲಿ ಭೋಪಾಲ್ ಪೊಲೀಸರು, ಮುಸ್ಲಿಂ ಸಹೋದರಿಯರು, 6 ಮಂದಿಯ ವಿರುದ್ಧ ಮಧ್ಯಪ್ರದೇಶ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆ ಅನ್ವಯ ಧಾರ್ಮಿಕ ಮತಾಂತರ, ಅತ್ಯಾಚಾರ ಪ್ರಕರಣಗಳನ್ನು ದಾಖಲಿಸಿದ್ದಾರೆ.

ಸಾಮೂಹಿಕ ಅತ್ಯಾಚಾರ: ಪ್ರಕರಣದಲ್ಲಿ ಹಲವು ಆರೋಪಿಗಳಿದ್ದರೂ, ಅಮ್ರೀನ್ ಪ್ರಿಯಕರ ಚಂದನ್ ಮತ್ತು ಪ್ರಮುಖ ಸಹಚರರಾದ ಬಿಲಾಲ್ ಮತ್ತು ಯಾಸಿರ್ ಸಾಮೂಹಿಕ ಅತ್ಯಾಚಾರ ನಡೆಸಿದ್ದಾರೆಂದು ಸಂತ್ರಸ್ತೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಭೋಪಾಲ್ ನಿವಾಸಿ 21ರ ಹರೆಯದ ಸಂತ್ರಸ್ತೆ, ತನ್ನ ಮೇಲೆ ಅಮ್ರೀನ್ ಸಹಚರ ಯಾಸಿರ್ ಅತ್ಯಾಚಾರ ನಡೆಸಿದ್ದಾನೆ. ತನ್ನನ್ನು ಚಂದನ್ ಮನೆಗೆ ಕರೆದೊಯ್ದು ಅಮ್ರೀನ್ ಅತ್ಯಾಚಾರ ನಡೆಸಲು ಅವಕಾಶ ಮಾಡಿಕೊಟ್ಟಿದ್ದಳು ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಕೈಗೆ ಹುದ್ದೆ ಭರ್ತಿ ಮನಸಿಲ್ಲ: ಬಿವೈವಿ

ಪುಟ ೧➜ ಅನುದಾನಿತ ಶಿಕ್ಷಣ ಸಂಸ್ಥೆಗಳಲ್ಲಿ ನಿವೃತ್ತರಾದವರ ಹುದ್ದೆಗಳಿಗೆ ನೇಮಕಾತಿಗೆ ಸರ್ಕಾರದ ಅನುಮತಿ ಕೇಳಿದ್ದಾರೆ. ಸರ್ಕಾರ ಅನುಮತಿ ನೀಡಿದೆ; ಒಂದು ವರ್ಷ ಎಂಟು ತಿಂಗಳಾದರೂ ಸರ್ಕಾರ ಒಂದು ಹೆಜ್ಜೆಯನ್ನೂ ಮುಂದಿಟ್ಟಿಲ್ಲ. ಪ್ರಕ್ರಿಯೆ ಮುಂದುವರೆಸಲು ಸಹಕಾರ ಕೊಡುತ್ತಿಲ್ಲ ಎಂದು ಟೀಕಿಸಿದರು. ವಿಧಾನಪರಿಷತ್ ಪ್ರತಿಪಕ್ಷ ಮುಖ್ಯ ಸಚೇತಕ ಎನ್. ರವಿಕುಮಾರ್, ವಿಧಾನಪರಿಷತ್ ಸದಸ್ಯ ಎಸ್.ವಿ. ಸಂಕನೂರು, ಮಾಜಿ ಸಂಸದ ಎಸ್.ಮುನಿಸ್ವಾಮಿ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್ ಸುದ್ದಿಗೋಷ್ಠಿಯಲ್ಲಿದ್ದರು.

ಎಂಎಲ್‌ಸಿಗಳಿಂದಲೂ ಸಚಿವ ಸ್ಥಾನಕ್ಕೆ ಬೇಡಿಕೆ

ಪುಟ ೧➜ ವಿಧಾನ ಪರಿಷತ್‌ನಿಂದ ಭೋಸರಾಜು ಅವರಿಗೆ ಮಾತ್ರ ಸಚಿವ ಸ್ಥಾನ ನೀಡಲಾಗಿದ್ದು, ಸಂಪುಟ ಪುನರ್ ರಚನೆ ಯಲ್ಲಿ ಅವರನ್ನು ಉಳಿಸಿಕೊಂಡರೆ ಬೇರೆಯವರಿಗೆ ಅವಕಾಶ ಸಿಗುವುದು ಕಷ್ಟವಾಗಲಿದೆ. ಅಲ್ಲದೆ ಬಿ.ಕೆ. ಹರಿಪ್ರಸಾದ್ ಅವರು ಸಂಪುಟಕ್ಕೆ ಬರುವ ಸಾಧ್ಯತೆ ಇರುವುದರಿಂದ ಪರಿಷತ್ ಇತರ ಸದಸ್ಯರಿಗೆ ಅವಕಾಶ ಸಿಗುವುದು ಸಂದೇಹವಾಗಿದೆ ಎಂದು ಹೇಳಿದರು.

ಯುದ್ಧದಲ್ಲಿ ಪಾಕ್ ಪಿಎಂ ಸಾವಾಗ್ತಿತ್ತು

ಪುಟ ೧➜ ಬಹಳ ದುಬಾರಿ ಯುದ್ಧ ವಿಮಾನಗಳು ಎಂದಿದ್ದರು. ಭಾರತ ನಡೆಸಿದ ಭಯೋತ್ಪಾದನಾ ವಿರೋಧಿ ಪ್ರತಿದಾಳಿ ವೇಳೆ ಇಷ್ಟೊಂದು ಹಾನಿಯಾಗಿದೆ ಎಂಬರ್ಥದಲ್ಲಿ ದಾಳಿ ತೀವ್ರತೆಯನ್ನು ಉಲ್ಲೇಖಿಸಿದ್ದರು. ಇದೀಗ ಪಾಕ್ ಪ್ರಧಾನಿ, 3.5 ಕೋಟಿ ಜನರ ರಕ್ಷಣೆಗೆ ಯುದ್ಧ ನಿಲ್ಲಿಸಲಾಗಿದೆ ಎಂಬ ಮಾತಿನಿಂದ ಭಾರತದ ದಾಳಿ ಸಾಮರ್ಥ್ಯ ಒಪ್ಪಿಕೊಂಡಿದ್ದಾರೆ. ಈ ನಿಟ್ಟಿನಲ್ಲಿ ಟ್ರಂಪ್ ಪರೋಕ್ಷವಾಗಿ ಮೋದಿ ಆಡಳಿತ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸಿಂದೂರದ ತೀವ್ರತೆ ಒಪ್ಪಿಕೊಂಡ ಟ್ರಂಪ್

ಪುಟ ೧➜ ಪಾಕ್ ಪ್ರಧಾನಿ ಷರೀಫ್ ಮೃತಪಡುವಷ್ಟು ತೀವ್ರತೆಯ ದಾಳಿಯನ್ನು ಅಥವಾ ಆಪರೇಷನ್ ಸಿಂದೂರ ಭಾರತ ನಡೆಸಿತ್ತೆಂಬ ವಿಷಯವನ್ನು ಟ್ರಂಪ್ ಒಪ್ಪಿಕೊಂಡಿದ್ದಾರೆ.

ದೇಗುಲದ ಗಂಟೆ, ಜಾಗಟೆ ಸದ್ದಿಗೆ ಮುಸ್ಲಿಮನ ತಂಟೆ!

ಪುಟ ೧➜ ಇದರಿಂದ ತೊಂದರೆಯಾಗುತ್ತಿದೆ ಎಂದು ಆಕ್ಷೇಪಿಸಿದ್ದಾರೆ. ಅಕ್ಕಪಕ್ಕದ ನಿವಾಸಿಗಳಿಗೆ ಶಬ್ದದಿಂದ ತೊಂದರೆಯಾಗದಂತೆ ನೋಡಿಕೊಳ್ಳುವಂತೆ ಅರ್ಚಕರಿಗೆ ಸೂಚನೆ ನೀಡಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಬಸ್ ನಿರ್ವಾಹಕನ ಮೇಲೆ ಮುಸ್ಲಿಮರಿಂದ ತೀವ್ರ ಹಲ್ಲೆ

ಪುಟ ೧➜ ಪ್ರಯಾಣಿಕರಾದ ಚಾ.ನಗರದ ಫಯಾಜ್ ಅಹಮ್ಮದ್(50), ಮಹಮ್ಮದ್ ಶಾರನ್ (25) ಎಂಬುವರು ಗಲಾಟೆ ಮಾಡಿದ್ದು, ಇವರು ಸಹ ಆಸ್ಪತ್ರೆಗೆ ದಾಖಲಾಗಿದ್ದಾರೆ ಎನ್ನಲಾಗಿದೆ. ಬಸ್ ಸಹಿತ ನಿರ್ವಾಹಕ ಕೊಳ್ಳೇಗಾಲಕ್ಕೆ ವಾಪಸ್ ಬಂದು ಪೊಲೀಸ್ ಠಾಣೆಗೆ ದೂರು ನೀಡಿ, ಆಸ್ಪತ್ರೆಗೆ ದಾಖಲಾಗಿದ್ದು, ಇಬ್ಬರು ಪ್ರಯಾಣಿಕರಾದ ಫಯಾಜ್ ಮತ್ತು ಮಹಮದ್ ಶಾರನ್ ನಮ್ಮ ಮೇಲೆ ಹಲ್ಲೆ ಮಾಡಿ, ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ ಎಂದು ದೂರು ನೀಡಿದ್ದಾರೆ. ಇದುವರೆಗೆ ಇವರ ವಿರುದ್ಧ ಪ್ರಕರಣ ದಾಖಲಾಗಿಲ್ಲ ಎಂಬ ಮಾಹಿತಿ ಇದೆ. ಈ ಇಬ್ಬರು ಪ್ರಯಾಣಿಕರು ಕಡ್ಲೆಕಾಯಿ ತಿಂದು ಸಿಪ್ಪೆಯನ್ನು ಬಸ್‌ನ ಒಳಗಡೆಯೇ ಇಡುತ್ತಿದ್ದರು ಎನ್ನಲಾಗಿದೆ. ಇದನ್ನು ನೋಡಿದ ನಿರ್ವಾಹಕ ಮುನಿಮಾದಯ್ಯ ಸಿಪ್ಪೆ ಹೊರಗಡೆ ಹಾಕಿ ಎಂದು ಹೇಳಿದ್ದಕ್ಕೆ ಹಲ್ಲೆ ನಡೆಸಿ ಗಾಯಗೊಳಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ನಿರ್ವಾಹಕನ ಮೇಲೆ ಹಲ್ಲೆ ನಡೆಸಿರುವ ಫೋಟೊಗಳು, ಪ್ರಯಾಣಿಕರು ನಿರ್ವಾಹಕನ ಕುತ್ತಿಗೆಗೆ ಕೈಹಾಕಿರುವುದು, ತಳ್ಳಾಟ, ನೂಕಾಟಗಳ ಕುರಿತು ವೈರಲ್ ಆಗಿವೆ.

ಘಟನೆ ವಿವರ: ಕೊಳ್ಳೇಗಾಲದಿಂದ ಕನಕಪುರ ಮಾರ್ಗವಾಗಿ ಬೆಂಗಳೂರು ಕಡೆಗೆ ಹೋಗುತ್ತಿರುವಾಗ ಇಲ್ಲಿನ ಹೊರವಲಯದ ಪಾಪನಕೆರೆ ಬಳಿ ಬಸ್ಸಿನಲ್ಲಿ ಕಡಲೆಕಾಯಿ ತಿಂದು ಸಿಪ್ಪೆಯನ್ನು ಬಸ್ಸಿನಲ್ಲಿ ಹಾಕುತ್ತಿದ್ದ ವೇಳೆ ಸಿಪ್ಪೆಯನ್ನು ಹೊರಗೆ ಹಾಕುವಂತೆ ಹೇಳಿದ್ದಕ್ಕೆ ಕಂಡಕ್ಟರ್ ಹಾಗೂ ಪ್ರಯಾಣಿಕರು ತಂದೆ ಮಗ ನಡುವೆ ಗಲಾಟೆ ಉಂಟಾಗಿದೆ.

ಮೊಬೈಲ್ ವಿಚಾರ: ಹಿಂದು ಯುವಕನಿಗೆ ಇರಿತ

ಪುಟ ೧➜ ಹಲ್ಲೆ ನಡೆಸಿರುವ ಆರೋಪಿ ಮುಸ್ಲಿಂ ಸಮುದಾಯದವನು ವಿಕ್ರಮ್ ಚೌಧರಿ ಅವರ ಮೊಬೈಲ್ ಅಂಗಡಿಯಲ್ಲಿ ಕಳೆದ ಕೆಲ ದಿನಗಳ ಹಿಂದೆ ತನ್ನ ಮೊಬೈಲ್‌ಗೆ ಸ್ಕೀನ್ ಗಾರ್ಡ್ ಖರೀದಿಸಿದ್ದ, ಗುರುವಾರ ಮತ್ತೆ ಬಂದು ಬೇರೆ ಬ್ರ್ಯಾಂಡ್ ಮೊಬೈಲ್ ಸ್ಕೀನ್ ಗಾರ್ಡ್ ಹಾಕಿ ಕೊಡುವಂತೆ ವಿಕ್ರಮ್ ಚೌಧರಿ ಅವರನ್ನು ಕೇಳಿದ್ದ ಎನ್ನಲಾಗಿದೆ. ಇದಕ್ಕೆ ಹೆಚ್ಚುವರಿ 100 ರೂ. ನೀಡುವಂತೆ ವಿಕ್ರಮ್ ಚೌಧರಿ ಕೇಳಿದ್ದರು. ಇದರಿಂದ ಸಿಟ್ಟಿಗೆದ್ದ ಆರೋಪಿ ವಿಕ್ರಮ್ ಚೌಧರಿ ಮೇಲೆ ಹಲ್ಲೆ ನಡೆಸಿ ಚಾಕುವಿನಿಂದ ಇರಿದಿದ್ದಾನೆ ಎಂದು ತಿಳಿದುಬಂದಿದೆ. ಗಾಯಾಳುವನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ಘಟನಾ ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು ಭೇಟಿ ನೀಡಿ ಪರಿಶೀಲಿಸಿದ್ದಾರೆ. ಜಿಲ್ಲಾಸ್ಪತ್ರೆಗೆ ಭೇಟಿ ನೀಡಿ ಗಾಯಾಳು ವಿಕ್ರಮ್ ಚೌಧರಿ ಆರೋಗ್ಯ ವಿಚಾರಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿ ಟಿವಿ ದೃಶ್ಯಾವಳಿ ಪರಿಶೀಲಿಸಿ ಶೀಘ್ರದಲ್ಲಿ ಆರೋಪಿಯನ್ನು ಬಂಧಿಸಲಾಗುವುದು. ಮಾದಕದ್ರವ್ಯ ಸೇವಿಸಿ ದಾಳಿ ನಡೆಸಿರುವ ಶಂಕೆ ವ್ಯಕ್ತವಾಗಿದೆ ಎಂಬ ಮಾಧ್ಯಮದವರ ಪ್ರಶ್ನೆಗೆ ತನಿಖೆಯ ನಂತರ ಸತ್ಯಾಂಶ ತಿಳಿಯಲಿದೆ ಎಂದು ಹೇಳಿದ್ದಾರೆ.

ಹಲ್ಲೆ ಆರೋಪಿ ಸೆರೆ: ನಗರದ ಸಂತೇಹೊಂಡದ ಬಳಿಯ ಚೌಧರಿ ಮೊಬೈಲ್ ಶಾಪ್ ಮಾಲೀಕ ವಿಕ್ರಮ್ ಚೌಧರಿ ಅವರ ಮೇಲೆ ಹಲ್ಲೆ ನಡೆಸಿ ಚಾಕುವಿನಿಂದ ಹಿರಿದು ಗಾಯಗೊಳಿಸಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ. ಜೆಸಿಆರ್ ಬಡಾವಣೆಯ 3ನೇ ಕ್ರಾಸ್ ನಿವಾಸಿ ಸುಮಾರು 24 ವರ್ಷದ ಮಹಮ್ಮದ್ ಅಮರ್ ಬಂಧಿತ ಆರೋಪಿ.

ಆರೋಪಿಯನ್ನು ಪತ್ತೆ ಮಾಡಲು ಎರಡು ತಂಡಗಳನ್ನು ರಚಿಸಲಾಗಿತ್ತು. ಪ್ರಕರಣದ ಹಿನ್ನೆಲೆಯಲ್ಲಿ ಗ್ರಾಮಾಂತರ ಠಾಣೆಯ ಪಿ.ಐ. ಬಾಲಚಂದ್ರನಾಯ್ಕ ಮತ್ತು ಮಹಿಳಾ ಠಾಣೆಯ ಪಿ.ಐ. ನಯೀಂ ಅಹಮ್ಮದ್ ಹಾಗೂ ಚಿತ್ರದುರ್ಗ ನಗರ ಠಾಣೆಯ ಸಿಬ್ಬಂದಿಗಳನ್ನೊಳಗೊಂಡ ತಂಡ ರಚಿಸಲಾಗಿತ್ತು.

ಕಾಡಂಚಿನಲ್ಲಿ ಬೃಹತ್ ಬ್ಯಾರಿಕೇಡ್ ಅಳವಡಿಕೆ

ಪುಟ ೧➜ ಈ ಸಮಸ್ಯೆಗೆ ಶಾಶ್ವತ ಪರಿಹಾರವಾಗಿ ಕಾಡಿನ ಅಂಚಿನಲ್ಲಿ ದೊಡ್ಡ ಪ್ರಮಾಣದಲ್ಲಿ ಬ್ಯಾರಿಕೇಡ್ ಅಳವಡಿಸುವ ಯೋಜನೆಯನ್ನು ಜಾರಿಗೆ ತರಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಕಾರ್ಕಳದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಗಾಂಜಾ ಮತ್ತು ಡ್ರಗ್ಸ್ ಹಾವಳಿ ಹೆಚ್ಚುತ್ತಿರುವ ಕುರಿತು ಶಿವಮೊಗ್ಗ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಘಟನೆಗಳನ್ನು ಉಲ್ಲೇಖಿಸಿದರು. ಡ್ರಗ್ಸ್ ಸಮಸ್ಯೆಯನ್ನು ಸಂಪೂರ್ಣ ಶೂನ್ಯ ಮಟ್ಟಕ್ಕೆ ತರುವುದು ಸರ್ಕಾರದ ಗುರಿಯಾಗಿದೆ. ಕರ್ನಾಟಕವನ್ನು ಡ್ರಗ್ಸ್ ಮುಕ್ತ ರಾಜ್ಯವನ್ನಾಗಿಸಲು ಪ್ರಯತ್ನಿಸಲಾಗುತ್ತಿದೆ ಎಂದರು.

ಉಡುಪಿಯ ವಿಶ್ವವಿದ್ಯಾಲಯವೊಂದರಲ್ಲಿ ಎಬಿವಿಪಿ ಕಾರ್ಯಕರ್ತರಿಂದ ನಡೆದ ದಾಳಿ ಪ್ರಕರಣದ ಕುರಿತು ಮಾತನಾಡಿದ ಸಿಎಂ, ಕಾನೂನನ್ನು ಯಾರೂ ಕೈಗೆ ತೆಗೆದುಕೊಳ್ಳಲು ಅವಕಾಶ ನೀಡುವುದಿಲ್ಲ ಎಂದರು. ಎಬಿವಿಪಿ ಅಥವಾ ಬೇರೆ ಯಾವುದೇ ಸಂಘಟನೆಗಳಾದರೂ ಕಾನೂನು ಉಲ್ಲಂಘಿಸಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು. ವಿನಾಕಾರಣ ಗಲಾಟೆ ಸೃಷ್ಟಿಸುವವರನ್ನು ಸಹಿಸಲಾಗುವುದಿಲ್ಲ ಎಂದರು.

ಸುರಂಗ ಮಾರ್ಗ: ಆಗುಂಬೆ ಸುರಂಗ ಮಾರ್ಗ ಯೋಜನೆ ಕುರಿತು ಮಾತನಾಡಿದ ಸಿಎಂ, ಈ ಯೋಜನೆಯನ್ನು ಸರ್ಕಾರ ಜಾರಿಗೆ ತರುವುದಾಗಿ ತಿಳಿಸಿದರು. ಪರಿಸರವಾದಿಗಳ ಆತಂಕಗಳನ್ನು ಮನವರಿಕೆ ಮಾಡಿಕೊಂಡು ಅವರೊಂದಿಗೆ ಸಂವಾದ ನಡೆಸಲಾಗುವುದು. ಅವರ ವಿರೋಧದ ಕಾರಣಗಳನ್ನು ತಿಳಿದು ಸಮನ್ವಯದಿಂದ ಪರಿಹಾರ ಕಂಡುಕೊಳ್ಳುವುದಾಗಿ ಹೇಳಿದರು. ಪರಶುರಾಮ ಥೀಮ್ ಪಾರ್ಕ್ ವಿವಾದಕ್ಕೆ ಸಂಬಂಧಿಸಿ, ಯೋಜನೆಯನ್ನು ಪೂರ್ಣಗೊಳಿಸಲಾಗುವುದು. ತಪ್ಪು ಮಾಡಿದವರ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಪ್ರಥಮ ಬಾರಿ ಶಾಸಕರಾದವರು ಮಂತ್ರಿಯಾಗಬೇಕು ಎನ್ನುವ ಆಸೆಯ ಬಗ್ಗೆ ಪ್ರತಿಕ್ರಿಯಿಸಿದ ಅವರು, ಆಸೆ ವ್ಯಕ್ತಪಡಿಸುವುದು ತಪ್ಪಲ್ಲ, ಆದರೆ ಮೊದಲ ಬಾರಿ ಶಾಸಕರಿಗೆ ಮಂತ್ರಿ ಸ್ಥಾನ ನೀಡಬಾರದು ಎಂಬ ನಿರ್ಣಯ ಕೈಗೊಂಡಿದ್ದೇವೆ. ಹೈಕಮಾಂಡ್ ಸೂಚನೆಗಳನ್ನು ಪಾಲಿಸಲಾಗುವುದು ಎಂದು ತಿಳಿಸಿದರು. ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧ ಕೊರತೆ ಇಲ್ಲ ಎಂದು ಸ್ಪಷ್ಟಪಡಿಸಿದ ಸಿಎಂ, ಯಾವುದೇ ಆಸ್ಪತ್ರೆಯಲ್ಲಿ ಸಮಸ್ಯೆ ಇಲ್ಲ ಎಂದರು. ಕಾರ್ಕಳ ನರ್ಸಿಂಗ್ ಕಾಲೇಜು ಅವಸ್ಥೆಯ ಬಗ್ಗೆ ಕೇಳಿದ ಪ್ರಶ್ನೆಗೆ ವಿದ್ಯಾರ್ಥಿಗಳ ಅಹವಾಲನ್ನು ಸ್ವೀಕರಿಸಿ, ಬಗೆಹರಿಸುವ ಬಗ್ಗೆ ಭರವಸೆ ನೀಡಿದರು.

ಗ್ಯಾರಂಟಿ ಭಾರವಾಗಿಲ್ಲ

ಗ್ಯಾರಂಟಿ ಯೋಜನೆಗಳು ಸರ್ಕಾರಕ್ಕೆ ಭಾರವಾಗಿವೆ ಎಂಬ ಉಪಮುಖ್ಯಮಂತ್ರಿ, ಡಿ.ಕೆ.ಶಿವಕುಮಾರ್ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಅವರು, ವರ್ಷಕ್ಕೆ ಸುಮಾರು 52 ಸಾವಿರ ಕೋಟಿಗೂ ಹೆಚ್ಚು ಹಣ ಬೇಕಾಗುತ್ತದೆ. ಅದನ್ನು ಭಾರವೆಂದು ಹೇಳಿರಬಹುದು. ಆದರೆ ಸರ್ಕಾರ ಅಭಿವೃದ್ಧಿ ಹಾಗೂ ಗ್ಯಾರಂಟಿ ಯೋಜನೆ ಎರಡನ್ನೂ ಸಮಾನವಾಗಿ ಮುಂದುವರಿಸುತ್ತಿದೆ ಎಂದು ಸ್ಪಷ್ಟಪಡಿಸಿದರು.

ಹುದ್ದೆ ಭರ್ತಿ ಶೀಘ್ರ

ಪುಟ ೧➜ ಪ್ರಧಾನಿ ನರೇಂದ್ರ ಮೋದಿ ಅಧಿಕಾರಕ್ಕೆ ಬರುವ ಮುನ್ನ ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುವ ಭರವಸೆ ನೀಡಿದ್ದರು. ಆದರೆ, ಹನ್ನೊಂದು ವರ್ಷವಾದರೂ ಭರವಸೆ ಈಡೇರಿಲ್ಲ. ಈ ಹಿಂದೆ ಯುವಕರು ಉದ್ಯೋಗ ವಿಚಾರವಾಗಿ ಕೇಳಿದಾಗ 'ಸರಕಾರಿ ಉದ್ಯೋಗಕ್ಕಾಗಿ ಕಾಯಬೇಡಿ, ಸ್ವಂತ ಉದ್ಯೋಗ ಮಾಡಿ, ಪಕೋಡ ಮಾರಿರಿ' ಎಂದು ಹೇಳಿದ ಮಾತನ್ನೂ ನೆನಪಿಸಿ, ಕೇಂದ್ರ ಸರ್ಕಾರದ ವಿರುದ್ಧವೂ ತೀಕ್ಷ್ಣವಾಗಿ ಟೀಕಿಸಿದರು. ಒಂದು ದೊಡ್ಡ ಪ್ರಮಾಣದ ಉದ್ಯೋಗ ಭರ್ತಿ ಮಾಡದ ಬಿಜೆಪಿ, ನಮ್ಮನ್ನು ಪ್ರಶ್ನಿಸುವ ನೈತಿಕತೆ ಏನು ಎಂದು ತರಾಟೆಗೆ ತೆಗೆದುಕೊಂಡರು. ಒಳ ಮೀಸಲಾತಿಯಲ್ಲಿ ಅನ್ಯಾಯವಾಗಿದೆ ಎಂದು ಕೆಲವರು ಪ್ರತಿಭಟನೆ ನಡೆಸುತ್ತಿರುವುದಕ್ಕೆ ಪ್ರತಿಕ್ರಿಯಿಸಲು ನಿರಾಕರಿಸಿದರು.

ಸಮಸ್ಯೆಗೆ ಸ್ಪಂದಿಸುವುದೇ ಶಿಕ್ಷಣದ ಉದ್ದೇಶ: ಸಿಎಂ

ಕಾರ್ಕಳ: ವೈಚಾರಿಕ ಮತ್ತು ವೈಜ್ಞಾನಿಕತೆಯ ಶಿಕ್ಷಣ ಇಂದಿನ ಅಗತ್ಯವಾಗಿದ್ದು, ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವುದೇ ಅದರ ಮೂಲ ಉದ್ದೇಶವಾಗಬೇಕು ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

ಅವರು ಬುಧವಾರ ಇಲ್ಲಿ ಕಿಸಾನ್ ಸಭಾ ಸಭಾಂಗಣದ ಉದ್ಘಾಟಿಸಿ, ಟ್ರಸ್ಟ್‌ನ ಮಹಾತ್ಮ ಗಾಂಧಿ ಪ್ರೌಢ ಶಾಲೆಯ 35 ನೇ ವರ್ಷದ ಸಮಾರಂಭವನ್ನು ಉದ್ಘಾಟಿಸಿದ ನಂತರ ಮಾತನಾಡಿದರು. ಸಮಾನ ಅವಕಾಶಗಳನ್ನು ಕೊಡುವುದು ಶಿಕ್ಷಣ ಮೂಲ ಉದ್ದೇಶವಾಗಬೇಕು. ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯ ಸಿಗದೆ, ರಾಜಕೀಯ ಸ್ವಾತಂತ್ರ್ಯಕ್ಕೆ ಅರ್ಥವಿಲ್ಲವೆಂದು ಡಾ.ಬಿ.ಆರ್.ಅಂಬೇಡ್ಕರ್ ಅವರು ತಿಳಿಸಿದ್ದರು ಎಂದರು.

ನಮ್ಮ ಸರ್ಕಾರ ನುಡಿದಂತೆ ನಡೆಯುತ್ತದೆ. ಕಾರ್ಕಾಳ ಜನತೆಯ ಬೇಡಿಕೆಗಳನ್ನು ಹಂತ ಹಂತವಾಗಿ ಪೂರೈಸಲಾಗುವುದು. 2013ರಲ್ಲಿ ಮೊದಲ ಬಾರಿಗೆ ಸಿಎಂಯಾಗಿದ್ದಾಗ ನೀಡಲಾಗಿದ್ದ 165 ಭರವಸೆಗಳಲ್ಲಿ 158 ಭರವಸೆಗಳನ್ನು ಈಡೇರಿಸಿದ್ದೇವೆ. 2023ರಲ್ಲಿ ಪುನ: ಅಧಿಕಾರಕ್ಕೆ ಬಂದು, 590 ಭರವಸೆಗಳನ್ನು ಕಳೆದ ಎರಡೂವರೆ ವರ್ಷದಲ್ಲಿ 243 ಭರವಸೆಗಳನ್ನು ಈಡೇರಿಸಿದ್ದೇವೆ. ಗ್ಯಾರಂಟಿ ಯೋಜನೆಗಳಿಗೆ ವಾರ್ಷಿಕ 52000 ಕೋ.ರೂ.ಗಳಿಗೂ ಹೆಚ್ಚು ವೆಚ್ಚ ಮಾಡಲಾಗುತ್ತಿದ್ದು, ಎಲ್ಲ ಜಾತಿಧರ್ಮಗಳ ಬಡವರಿಗೆ ಗ್ಯಾರಂಟಿಯ ಸವಲತ್ತುಗಳನ್ನು ನೀಡಲಾಗುತ್ತಿದೆ. ಎಲ್ಲ ಗ್ಯಾರಂಟಿಗಳನ್ನು ಯಶಸ್ವಿಯಾಗಿ ಜಾರಿಗೊಳಿಸಿ, ಇದುವರೆಗೆ 1.20 ಲ.ಕೋ.ರೂ.ಗಳನ್ನು ಗ್ಯಾರಂಟಿಗಳಿಗೆ ನೀಡಲಾಗಿದೆ ಎಂದರು.

ತಿಪ್ಪೆಯಲ್ಲಿ ರಾಶಿ ರಾಶಿ ಔಷಧಿ: ತನಿಖೆಗೆ ಆದೇಶ

• **ರಾಯಚೂರು:** ಸರ್ಕಾರಿ ಆಸ್ಪತ್ರೆಗಳಲ್ಲಿ ಅಗತ್ಯಕ್ಕೆ ತಕ್ಕಷ್ಟು ಔಷಧಿಗಳು ಸರಬರಾಜು ಆಗುತ್ತಿಲ್ಲ ಎಂಬ ಕಾರಣಕ್ಕೆ ಅನೇಕ ಸರ್ಕಾರಿ ಆಸ್ಪತ್ರೆಗಳ ವೈದ್ಯರು ಖಾಸಗಿ ಔಷಧಾಲಯಗಳಲ್ಲಿ ಔಷಧಿಗಳನ್ನು ತಗೆದುಕೊಳ್ಳುವಂತೆ ಹೇಳುವುದನ್ನು ನೋಡಿದ್ದೇವೆ. ಆದರೆ, ಸರ್ಕಾರ ಸರಬರಾಜು ಮಾಡಿರುವ ರಾಶಿ ರಾಶಿ ಔಷಧಿಗಳನ್ನು ತಿಪ್ಪೆಗೆ ಎಸೆದಿರುವ ಘಟನೆ ನಗರದ ಹೊರವಲಯದಲ್ಲಿ ನಡೆದಿದೆ.

ಹೀಗೆ ತಿಪ್ಪೆಗೆ ಎಸೆದಿರುವ ಔಷಧಿಗಳು 2026–2027 ಅವಧಿಯವರೆಗೂ ವ್ಯಾಲಿಡಿಟಿ ಇವೆ. ಜ್ವರದ ಸಿರಪ್, ಹೊಟ್ಟೆ ಹಸಿವು-ಪೌಷ್ಟಿಕಾಂಶದ ಸಿರಪ್, ಮಲ್ಟಿ ವಿಟಾಮಿನ್ ಟಾನಿಕ್, ಒಣ ಕೆಮ್ಮು, ಸಿರಂಜ್‌ಗಳು, ಚರ್ಮ ರೋಗದ ಮುಲಾಮು, ಆಸಿಡಿಟಿ ಸಿರಪ್‌ಗಳು ಪತ್ತೆಯಾಗಿವೆ. ಸಿರಪ್‌ಗಳ ಮೇಲೆ ಮಾರಾಟಕ್ಕಲ್ಲ ಎಂದು ಸ್ಪಷ್ಟವಾಗಿ ಬರೆಯಲಾಗಿದೆ. ಸಿರೇಂಜ್ ಮೇಲೆ ಗವರ್ನಮೆಂಟ್ ಸಪ್ಲೈ ಅಂತನೂ ಸ್ಪಷ್ಟವಾಗಿದೆ.

ಪಶುಸಂಗೋಪನಾ ಇಲಾಖೆಯಲ್ಲಿ ಹೆಚ್ಚಾಗಿ 18ನಂ ಸಿರೇಂಜ್ ಬಳಕೆ ಮಾಡಲಾಗುತ್ತದೆ ಎಂದು ಹೇಳಲಾಗುತ್ತಿದೆ. ಆದರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಔಷಧಿಗಳನ್ನು ಬಾಟಲಿಯಿಂದ ಪಡೆಯುವುದಕ್ಕೂ ಈ ಸಿರೇಂಜ್ ಬಳಕೆ ಮಾಡಲಾಗುತ್ತದೆ ಎನ್ನಲಾಗುತ್ತದೆ.

ದೊರೆತ ಸಿರೇಂಜ್‌ಗಳನ್ನು ಗಮನಿಸಿದರೆ ಇವು ಪಶುಸಂಗೋಪನಾ ಇಲಾಖೆಯ ಸಂಬಂಧಿಸಿದ್ದು ಎಂದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಆದರೆ, ಇದನ್ನು ಬೇರೆ ಇಲಾಖೆಯವರು ತರಿಸಿಕೊಂಡಿರುವ ಸಾಧ್ಯತೆಯೂ ಇರಬಹುದು.



ಈ ಕುರಿತು ಜಿಪಂ ಸಿಇಒ ಈಶ್ವರ ಕಾಂದೂ ಅವರು ಹೇಳುವಂತೆ. ಔಷಧಿಗಳನ್ನು ಸಂಗ್ರಹಿಸಲಾಗಿದೆ. ಈ ಕುರಿತು ಡಿಎಚ್ಒ ಅವರಿಗೆ ತನಿಖೆ ಮಾಡುವಂತೆ ಸೂಚಿಸಲಾಗಿದೆ. ತನಿಖೆ ಮಾಡುವುದಕ್ಕೆ ಅಸಿಸ್ಟಂಟ್ ಡ್ರಗ್ ಕಂಟ್ರೋಲರ್ ಹಾಗೂ ತಾಲೂಕು ವೈದ್ಯಾಧಿಕಾರಿಗಳನ್ನೊಳಗೊಂಡ ತಂಡ ರಚಿಸಲಾಗಿದೆ.

> ಬಡ ಜನತೆಗೆ ಉತ್ತಮ ಆರೋಗ್ಯ ಸೇವೆ ಸಿಗದೆ ಇಂದಿಗೂ ಪ್ರತಿ ನಿತ್ಯ ಸಾವಿರಾರು ಜನತೆ ಸಾವನ್ನಪ್ಪುವುದನು ಕೇಳುತ್ತಿದ್ದೇವೆ. ನಮ್ಮಲ್ಲರ ತೆರಿಗೆ ಹಣದಲ್ಲಿ ಖರೀದಿಸಿರುವ ಔಷಧಿಗಳನ್ನು ಬಡ ಜನತೆಗೆ ನೀಡದೇ ಹೀಗೆ ತಿಪ್ಪೆಯಲ್ಲಿ ಎಸೆದವರ ಮೇಲೆ ಕಠಿಣ ಕಾನೂನು ಕ್ರಮ ಜರುಗಲೇಬೇಕು.
> ■ **ನಾಗರಾಜ್**, ಸ್ಥಳೀಯರು

> ಪಶುಸಂಗೋಪನಾ ಇಲಾಖೆಯ ಇನ್‌ವೈಸ್ ಪ್ರಕಾರ ಜಾನುವಾರುಗಳಿಗೆ ಕಾಲು-ಬಾಯಿ ಬೇನೆ ಲಸಿಕೆ ಹಾಕುವುದಕ್ಕೆ ಸಿರೇಂಜ್ 2025-26ರಲ್ಲಿ 94500 ಸರಬರಾಜಾಗಿದ್ದವು. ಇವುಗಳಲ್ಲಿ 43900 ಲಸಿಕೆ ಹಾಕುವುದಕ್ಕೆ ಬಳಕೆ ಮಾಡಲಾಗಿದೆ. ಈ ಸಿರೇಂಜ್‌ಗಳನ್ನು ಜಿಲ್ಲೆಯ ಮೂರು ತಾಲೂಕುಗಳಿಗೆ ನೀಡಲಾಗಿತ್ತು. ಎರಡು ತಾಲೂಕಿನವಲ್ಲ, ಇನ್ನೊಂದು ತಾಲೂಕಿನ ಮಾಹಿತಿ ಕೇಳಲಾಗಿದೆ.
> ■ **ಎಲ್.ಪೋಮ್‌ಸಿಂಗ್**, ಡಿಡಿ ಪಶುಸಂಗೋಪನಾ ಇಲಾಖೆ

ಆರೋಗ್ಯ ಇಲಾಖೆಯವರು ಸರ್ಕಾರದ



ವ್ಯಾಪ್ತಿಗೆ ಬರುವುದರಿಂದ ಪ್ರಾಮಾಣಿಕವಾದ ತನಿಖೆ ಆಗಬೇಕೆಂದು ಜಿಲ್ಲಾ ಸರ್ವೇಕ್ಷಣಾಧಿಕಾರಿಯವರಿಗೆ ಜವಾಬ್ದಾರಿ ನೀಡಲಾಗಿದೆ. ಈ ತನಿಖೆಯಿಂದ ಸ್ಪಷ್ಟತೆ ದೊರೆಯದಿದ್ದರೆ ಅಥವಾ ತನಿಖೆಯಲ್ಲಿ ಸಂಶಯ ಕಂಡುಬಂದರೆ ಆರೋಗ್ಯ ಇಲಾಖೆಯ ಆಯುಕ್ತರಿಗೆ ವರದಿ ಸಲ್ಲಿಸಲಾಗುವುದು. ಇಲ್ಲವೆ ರಾಜ್ಯ ಮಟ್ಟದಲ್ಲಿನ ಮೂರನೇ ಸಂಸ್ಥೆಯಿಂದ ತನಿಖೆ ಮಾಡುವಂತೆ ಕೇಳಿಕೊಳ್ಳಲಾಗುವುದು ಎನ್ನುತ್ತಾರೆ ಜಿಪಂ ಸಿಇಒ.

ಶಿವಾಜಿ ಜಯಂತಿ ಮೆರವಣಿಗೆ ಮೇಲೆ ಕಲ್ಲು ತೂರಾಟ ಪ್ರಕರಣ

ಇಂದು ಹಿಂದೂಗಳಿಂದ ಬೃಹತ್ ಹೋರಾಟ

• **ಬಾಗಲಕೋಟೆ:** ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ನಿಮಿತ್ತ ನಗರದ ಪಂಕಾ ಮಸೀದಿ ಬಳಿ ನಡೆದ ಕಲ್ಲು ತೂರಾಟ ಘಟನೆ ಖಂಡಿಸಿ, ಘಟನೆ ನಡೆದ ಸಂದರ್ಭದಲ್ಲಿ ಮಸೀದಿಯಲ್ಲಿದ್ದವರ ಮೇಲೆ ಪ್ರಕರಣ ದಾಖಲಿಸಬೇಕು. ಮಸೀದಿಯ ಮುಖ್ಯಸ್ಥರ ಮೇಲೆ ಪ್ರಕರಣ ದಾಖಲಿಸಿ ಅವರನ್ನು ಬಂಧಿಸಬೇಕು ಎಂದು ಒತ್ತಾಯಿಸಿ ಹಮ್ಮಿಕೊಂಡಿರುವ ಹಿಂದೂಗಳ ಹೋರಾಟವನ್ನು ಬಾಗಲಕೋಟೆಯ ಬದಲಾಗಿ ಫೆ.26ರಂದು ನವನಗರದ ಜಿಲ್ಲಾ ಆಡಳಿತ ಭವನದ ಎದುರಿಗೆ ಹಮ್ಮಿಕೊಳ್ಳಲಾಗಿದೆ ಎಂದು ಹಿಂದೂ ರಕ್ಷಣಾ ಸಮಿತಿ ಅಧ್ಯಕ್ಷ ಮಾರುತಿರಾವ್ ಸಿಂಧೆ ಹೇಳಿದರು.

ನವನಗರದ ಪತ್ರಿಕಾಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿಭಟನೆಯು ಬೆಳಗ್ಗೆ 10.30ರಿಂದ ಮಧ್ಯಾಹ್ನದವರೆಗೆ ಜಿಲ್ಲಾಡಳಿತ ಭವನದ ಎದುರಿಗೆ ನಡೆಯಲಿದೆ. ಸ್ಥಳೀಯ ಹಿಂದೂ ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸುತ್ತಾರೆ ಎಂದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಹಾಗೂ ಹೋಳಿ ಹಬ್ಬ ಮತ್ತು ಹಳೆ ಬಾಗಲಕೋಟೆಯಲ್ಲಿ 163 ಕಲಂ ಜಾರಿ ಇರುವುದರಿಂದ ಜಿಲ್ಲಾಡಳಿತ ಮನವಿ ಮಾಡಿಕೊಂಡಿದ್ದರಿಂದ ಪ್ರತಿಭಟನೆಯ ಸ್ಥಳ ಬದಲಿಸಲಾಗಿದೆ. ಪ್ರತಿಭಟನೆಯಲ್ಲಿ ಐದು ಸಾವಿರ ಹಿಂದೂಗಳು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಹಿಂದೂ ರಕ್ಷಣಾ ಸಮಿತಿ ಮುಖಂಡ ಕಿರಣ್ ಪವಾಡಶೆಟ್ಟರ ಮಾತನಾಡಿ, ಮಸೀದಿಯಲ್ಲಿರುವವರು ಹಾಗೂ ಮಸೀದಿ ಮುಖ್ಯಸ್ಥರ ಮೇಲೆ ಪ್ರಕರಣ ದಾಖಲಿಸಿ ಜೈಲಿಗೆ ಹಾಕಬೇಕು ಎಂದು ಜಿಲ್ಲಾಡಳಿತ, ಪೊಲೀಸ್ ಇಲಾಖೆಗೆ ದೂರು ನೀಡಲಾಗಿತ್ತು. ನಮ್ಮ ದೂರು ಕೂಡ ಸ್ವೀಕಾರ ಮಾಡಿಕೊಂಡು ಹಿಂಬರಹ ಕೂಡ



> ಫೆ.26ರಂದು ನವನಗರದ ಡಿಸಿ ಕಚೇರಿ ಎದುರು ನಡೆಯುವ ಹೋರಾಟಕ್ಕೆ ಜಿಲ್ಲೆಯಿಂದ ಬರುವ ಹಿಂದೂಗಳನ್ನು ತಡೆದರೆ ಮುಂದೆ ಆಗುವ ಅನಾಹುತಕ್ಕೆ ಜಿಲ್ಲಾಡಳಿತ, ಪೊಲೀಸ್ ಇಲಾಖೆ ಹೊಣೆಯಾಗಲಿದೆ. ಶಾಂತಿಯುತವಾಗಿ ಹಿಂದೂಗಳು ಸಾಂಕೇತಿಕ ಹೋರಾಟ ನಡೆಸಲಿದ್ದು ಹೋರಾಟಗಾರರನ್ನು ಅಲ್ಲಲ್ಲಿ ತಡೆಯುವ ಕೆಲಸ ಆಗಬಾರದು.
> ■ **ಕಿರಣ್ ಪವಾಡಶೆಟ್ಟರ**, ಹಿಂದೂ ರಕ್ಷಣಾ ಸಮಿತಿ ಮುಖಂಡ

> ಫೆ.26ರಂದು ಹೋರಾಟ ಮುಕ್ತಾಯವಾಗುವುದಿಲ್ಲ. ಮೊದಲನೇ ಹಂತದ ಹೋರಾಟ ನಡೆಯಲಿದೆ. ನಮ್ಮ ಬೇಡಿಕೆ ಈಡೇರದಿದ್ದರೆ 2ನೇ ಭಾಗದ ಹೋರಾಟಕ್ಕೆ ಸಿದ್ಧರಾಗುತ್ತೇವೆ.
> ■ **ಕುಮಾರಸ್ವಾಮಿ ಹಿರೇಮಠ**, ಹಿಂದೂ ರಕ್ಷಣಾ ಹೋರಾಟ ಸಮಿತಿ ಸದಸ್ಯ

ನೀಡಿಲ್ಲ. ನಮ್ಮ ಬೇಡಿಕೆಯನ್ನು ಜಿಲ್ಲಾಡಳಿತ, ಪೊಲೀಸ್ ಇಲಾಖೆ ಈಡೇರಿಸಬೇಕು ಎಂದು ಆಗ್ರಹವಿದೆ ಎಂದರು.

ನಗರದ ಪಂಕಾ ಮಸೀದಿಯಿಂದಲೇ ಪದೇ ಪದೆ ಘಟನೆ ನಡೆಯುತ್ತಿದೆ ಅದನ್ನು ನಿರ್ಬಂಧಿಸಬೇಕು. ನವನಗರದಲ್ಲಿ ಅಲ್ಲಲ್ಲಿ ಅನಧಿಕೃತ ಮಸೀದಿಗಳು ನಿರ್ಮಾಣವಾಗುತ್ತಿವೆ. ನವನಗರದ ಸೆ,64,65,66, 50ರಲ್ಲಿರುವ ಕಾರ್ನರ್ ಪ್ಲಾಟ್‌ಗಳನ್ನು ಮಸೀದಿ ನಿರ್ಮಾಣಕ್ಕೆ ನೀಡಲಾಗಿದೆ. ಒಂದು ಪಂಕಾ ಮಸೀದಿಯಿಂದಲೇ ಇಷ್ಟೊಂದು ದೊಡ್ಡ ಘಟನೆ ನಡೆಯುತ್ತಿರುವಾಗ ನವನಗರದಲ್ಲಿ ಹದಿನಾರು ಮಸೀದಿಗಳಿಗೆಪರವಾನಗೆನೀಡಿದರೆಮುಂದೊಂದು ದಿನ ನವನಗರ ಹೊತ್ತಿ ಉರಿಯಲಿದೆ. ಇದಕ್ಕಾಗಿ ಅಧಿಕಾರಿಗಳು, ಬಿಟಿಡಿಎ ಎಚ್ಚೆತ್ತುಕೊಂಡು ಅನಧಿಕೃತವಾಗಿ ಮಸೀದಿಗೆ ನೀಡಿರುವ ಜಾಗೆಯನ್ನು ರದ್ದುಗೊಳಿಸಬೇಕು ಎಂದು ಹೋರಾಟ ಮೂಲಕ ಒತ್ತಾಯಿಸಲಾಗುವುದು ಎಂದರು.

ಮುಖಂಡ ಅಶೋಕ ಲಿಂಬಾವಳಿ ಮಾತನಾಡಿ, ಬಾಗಲಕೋಟೆಯಲ್ಲಿ ನಡೆಯುವ ಹಿಂದೂಗಳ ಹೋರಾಟದಲ್ಲಿ ಭಾಗವಹಿಸದಂತೆ ಹಿಂದೂ ಸಮಾಜದ ಮುಖಂಡರಿಗೆ, ಹೋರಾಟಗಾರರಿಗೆ ಜಮಖಂಡಿಯಿಂದ, ಹುನಗುಂದವರೆಗೆ ಇರುವವರಿಗೆ ನೋಟಿಸ್ ನೀಡಲಾಗಿದೆ. ಠಾಣೆ ಮುಖಾಂತರ ನೋಟಿಸ್ ನೀಡಿ ಹೋರಾಟವನ್ನು ಹತ್ತಿಕ್ಕುವ ಕೆಲಸ ನಡೆದಿದೆ. ಕೂಡಲೇ ಜಿಲ್ಲಾಡಳಿತ, ಪೊಲೀಸ್ ಇಲಾಖೆ ಹಿಂದೂಗಳಿಗೆ ನೀಡಿರುವ ನೋಟಿಸ್‌ನ್ನು ಬೇಷರತ್ತಾಗಿ ವಾಪಸ್ ಪಡೆಯಬೇಕು ಎಂದು ಒತ್ತಾಯಿಸಿದರು.

1500ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ನಿಯೋಜನೆ

ಲಾಕ್‌ಡೌನ್ ವಾತಾವರಣ ನಿರ್ಮಾಣ

• **ಬಾಗಲಕೋಟೆ:** ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ದಿನ ನಗರದಲ್ಲಿ ಹಮ್ಮಿಕೊಂಡಿದ್ದ ಭವ್ಯ ಮೆರವಣಿಗೆಯ ವೇಳೆ ಪಂಕಾ ಮಸೀದಿಯಿಂದ ಕಲ್ಲು ತೂರಾಟವಾಗಿದ್ದರಿಂದ ಹಿಂದೂ ಸಮಾಜದವರಿಂದ ಫೆ.26ರಂದು ನಗರದಲ್ಲಿ ಹೋರಾಟ ಹಮ್ಮಿಕೊಂಡಿದ್ದರ ಹಿನ್ನಲೆಯಲ್ಲಿ ಬಾಗಲಕೋಟೆಯಲ್ಲಿ ಪೊಲೀಸ್ ಇಲಾಖೆ ಭದ್ರತೆ ಹಾಗೂ ಬ್ಯಾರಿಕೇಡ್ ಹಾಕಿದ್ದನ್ನು ನೋಡಿದರೆ ಕೋವಿಡ್ ಸಂದರ್ಭದಲ್ಲಿ ಲಾಕ್‌ಡೌನ್ ಮಾಡಿದ ವಾತವಾರಣ ಕಂಡುಬಂದಿದೆ.

ಬಾಗಲಕೋಟೆ ನಗರದ ಕಿಲ್ಲಾ, ಚೌಡಿ, ತರಕಾರಿ ಮಾರುಕಟ್ಟೆ, ಕೃಷ್ಣಾ ಟಾಕೀಜ್ ಬಳಿ, ಟಂಟಂ ಸ್ಟ್ಯಾಂಡ್, ಬಸವೇಶ್ವರ ವೃತ್ತ, ಚರಂತಿಮಠ ಕಲ್ಯಾಣ ಮಂಟಪ ಸೇರಿದಂತೆ ಇನ್ನೂ ವಿವಿಧ ಕಡೆ ರಾತ್ರಿಯೇ ಬ್ಯಾರಿಕೇಡ್ ಹಾಕಿ ರಸ್ತೆಗಲ್ಲಿ ವಾಹನ ಸಂಚಾರ ಮಾಡದಂತೆ ಕಟ್ಟುನಿಟ್ಟಾಗಿ ಕ್ರಮ ವಹಿಸಿದ್ದರಿಂದ ಜನರಿಗೆ ಬೆಳಗ್ಗೆ ತೀವ್ರ ತೊಂದರೆ ಉಂಟಾಯಿತು.

ಕೋವಿಡ್ ಸಂದರ್ಭದಲ್ಲಿ ಅಲ್ಲಲ್ಲಿ ಓಣಿಗಳಲ್ಲಿ ಜನ ಮನೆಯಿಂದ ಹೊರಬರದಂತೆ ಬ್ಯಾರಿಕೇಡ್ ಹಾಕಿ ಲಾಕ್‌ಡೌನ್ ಮಾಡಿದ ರೀತಿ ಬೆಳಗ್ಗೆಯಾತ್ತಿದ್ದಂತೆ ನಗರದ ಜನತೆಗೆ ಕಂಡು ಬಂದಿದ್ದರಿಂದ ಮಕ್ಕಳನ್ನು ಶಾಲೆಗೆ ಕಳುಹಿಸಲು, ಕೆಲಸಕ್ಕೆ ವಾಹನಗಳನ್ನು ತೆಗೆದುಕೊಂಡು ಹೋಗುವವರಿಗೆ ಬ್ಯಾರಿಕೇಡ್ ರಸ್ತೆಯಲ್ಲಿ ಹಾಕಿ ಬಂದ್ ಮಾಡಿದ್ದರಿಂದ ತೊಂದರೆಯಾಗುತ್ತಿದ್ದಂತೆ ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಂತೆ ಒಂದೊಂದು ಬ್ಯಾರಿಕೇಡ್ ರಸ್ತೆಯ ಬಳಿ ಸರಿಸಿ ಜನರಿಗೆ ರಸ್ತೆ ಸಂಚಾರಕ್ಕೆ ಅನುಕೂಲ ಮಾಡಿಕೊಟ್ಟರು.

ಭಾರೀ ಭದ್ರತೆ ಬಾಗಲಕೋಟೆ, ನವನಗರದ ಪ್ರಮುಖ ಬೀದಿಗಳಲ್ಲಿ ಪೊಲೀಸ್ ಇಲಾಖೆ ಭಾರೀ ಪಥಸಂಚಲನ ನಡೆಸಿದರು. ಇನ್ನೂ ಪೊಲೀಸ್ ಇಲಾಖೆಯವರು ಮೈದಾನವೊಂದರಲ್ಲಿ ಪೊಲೀಸರು ಯಾವ ರೀತಿ ಪ್ರತಿಭಟನೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುತ್ತಾರೆ ಎಂದು ಗಾಳಿಯಲ್ಲಿ ಗುಂಡು ಹಾರಿಸುವುದು, ಹೊಗೆ ಸಿಡಿಸುವುದು ವಿಡಿಯೋ ವೈರಲ್ ಆಗಿದೆ. ಕಳೆದ ಎರಡು ದಿನಗಳಿಂದ ಪೊಲೀಸರು ಪಥಸಂಚಲನ ನಡೆಸುವುದು, ಪೊಲೀಸ್ ಪಡೆ ನೋಡಿ ನಗರ ಮಾತ್ರ ಆತಂಕದಲ್ಲಿರುವುದು ಕಾಣುತ್ತಿದೆ.



ಭದ್ರತೆಗೆ 12 ಡಿವೈಎಸ್‌ಪಿ, 32 ಸಿಪಿಐ ನಿಯೋಜನೆ

ಬಾಗಲಕೋಟೆ: ಹಿಂದೂಗಳು ನಗರದಲ್ಲಿ ಫೆ.26ರಂದು ಹೋರಾಟ ನಡೆಸುತ್ತಿರುವ ಹಿನ್ನೆಲೆಯಲ್ಲಿ ಬಂದೋಬಸ್ತ್‌ಗಾಗಿ ಜಿಲ್ಲಾ ಪೊಲೀಸ್ ಇಲಾಖೆ ಎಲ್ಲ ಸಿದ್ಧತೆ ಮಾಡಿಕೊಂಡಿದೆ. ಬಂದೋಬಸ್ತ್‌ಗಾಗಿ ಎಸ್ಪಿ, ಹೆಚ್ಚುವರಿ ಎಸ್ಪಿ ಶ್ರೇಣಿಯ ಅಧಿಕಾರಿಗಳು, 12 ಡಿವೈಎಸ್‌ಪಿಗಳು, 32 ಸಿಪಿಐ, 75 ಪಿಎಸ್ಐ ಮತ್ತು 1500ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ಧಾರ್ಥ ಗೋಯಲ್ ತಿಳಿಸಿದ್ದಾರೆ. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಟ್ಟುನಿಟ್ಟಾಗಿ ಕಾಪಾಡಿಕೊಳ್ಳುವುದನ್ನು ಮತ್ತು ಯಾವುದೇ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕೆ ವಹಿಸಿದೆ. ಕಾನೂನು ಉಲ್ಲಂಘಿಸುವ ಅಥವಾ ಶಾಂತಿ ಮತ್ತು ಸಾಮರಸ್ಯವನ್ನು ಕದಡಲು ಪ್ರಯತ್ನಿಸುವ ಯಾವುದೇ ವ್ಯಕ್ತಿಯನ್ನು ಕಾನೂನಿನ ಪ್ರಕಾರ ಕಠಿಣವಾಗಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದ್ದಾರೆ.

ಕಿರುಸುದ್ದಿ

ಚುನಾವಣೆ ನಡೆಸಲು ಆಯುಕ್ತರ ಪತ್ರ

• **ಬೆಳಗಾವಿ:** ಮಹಾನಗರ ಪಾಲಿಕೆಯ ಮೇಯರ್ ಮತ್ತು ಉಪಮೇಯರ್ ಅವಧಿ ಮುಕ್ತಾಯದ ಬೆನ್ನಲ್ಲೆ ಹೊಸ ಚುನಾವಣಾ ತಯಾರಿಗೆ ಭರದ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುತ್ತಿದೆ. ಪಾಲಿಕೆ ಆಯುಕ್ತರಾದ ಕಾರ್ತಿಕ್ ಎಂ.ಅವರು ಚುನಾವಣೆ ನಡೆಸುವಂತೆ ಪ್ರಾದೇಶಿಕ ಆಯುಕ್ತರಿಗೆ ಅಧಿಕೃತವಾಗಿ ಪತ್ರ ಬರೆದಿದ್ದಾರೆ. ಬುಧವಾರ ಬೆಳಗಾವಿ ಪಾಲಿಕೆಯ ಆಯುಕ್ತರ ಕಚೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿ, ಮಹಾನಗರ ಪಾಲಿಕೆ ಮೇಯರ್, ಉಪಮೇಯರ್ ಅವಧಿ ಮಾ.14ರಂದು ಕೊನೆಯಾಗಲಿದೆ. ಆದ್ದರಿಂದ ಮೇಯರ್ ಸ್ಥಾನಕ್ಕೆ ಸಾಮಾನ್ಯ ಮಹಿಳೆ, ಉಪಮೇಯರ್ ಸ್ಥಾನಕ್ಕೆ ಸಾಮಾನ್ಯ ಬಂದಿದೆ. ಮೇಯರ್, ಉಪಮೇಯರ್ ಚುನಾವಣೆಯಲ್ಲಿ 58 ಪಾಲಿಕೆ ಸದಸ್ಯರು ಹಾಗೂ 7 ಶಾಸಕ, ಸಚಿವ, ಸಂಸದರು ಮತದಾರರಿದ್ದಾರೆ ಎಂದರು. ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಪ್ರತಿ ಬಾರಿಯು ಮರಾಠ ಮೇಯರ್ ಹಾಗೂ ಉಪಮೇಯರ್ ಆಗುತ್ತಾರೆ. ಆದರೆ ಈ ಭಾರೀ ಕನ್ನಡಿಗರಿಗೆ ಮೇಯರ್ ಉಪಮೇಯರ್ ಮಾಡುವುದಕ್ಕೆ ಆಡಳಿತ ಪಕ್ಷ ಬಿಜೆಪಿ ಸಾಕಷ್ಟು ತಯಾರಿಗಳನ್ನು ಮಾಡಿಕೊಳ್ಳುತ್ತಿದೆ ಎನ್ನಲಾಗುತ್ತಿದೆ.

> **ಮಹಾನಗರ ಪಾಲಿಕೆಯ ಮೇಯರ್ ಗದ್ದುಗೆಗೆ ಕಸರತ್ತು**

ಅಂಗನವಾಡಿ ಮಕ್ಕಳಿಗೆ ಅವಧಿ ಮುಗಿದ ಸಿರಿಧಾನ್ಯ ಪೂರೈಕೆ

• **ಬೆಳಗಾವಿ:** ಬೆಳಗಾವಿ ಗ್ರಾಮೀಣ ಕ್ಷೇತ್ರದ ಮೂರು ಅಂಗನವಾಡಿ ಕೇಂದ್ರಗಳಿಗೆ ಕನ್ನಡ ಹೋರಾಟಗಾರ್ತಿ ಕಸ್ತೂರಿ ಭಾವಿ ಭೇಟಿ ನೀಡಿ ಪರಿಶೀಲನೆ ನಡೆಸಿರುವ ವೇಳೆ ಅವಧಿ ಮೀರಿದ ಪದಾರ್ಥಗಳ ವಿತರಣೆ ಮಾಡಿದ್ದು ಕಂಡು ಬಂದಿದೆ. ಈ ವೇಳೆ ತಾವೇ ವಿಡಿಯೋ ಮಾಡಿ ಸಾಮಾಜಿಕ ಜಾಲತಾಣಗಳಲ್ಲಿ ಕಸ್ತೂರಿ ಭಾವಿ ಪೋಸ್ಟ್ ಮಾಡಿದ್ದು, ವೈರಲ್ ಆಗುತ್ತಿರುವ ವಿಡಿಯೋದಲ್ಲಿ ಹುಳ ಬಿದ್ದ ರವಾ, ಅವಧಿ ಮುಗಿದ ಸಜ್ಜೆ ಲಡ್ಡು, ಸಾಂಬಾರ್ ಪುಡಿ ಕಾಣುತ್ತಿದೆ. ಈ ಕುರಿತು ಅಧಿಕಾರಿಗಳು, ಅಂಗನವಾಡಿ ಸಹಾಯಕಿಯರ ವಿರುದ್ಧ ಪೋಷಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಅಂಗನವಾಡಿ ಮಕ್ಕಳ ಆರೋಗ್ಯದ ಜೊತೆಗೆ ಮಹಿಳಾ ಮತ್ತು ಮಕ್ಕಳ ಇಲಾಖೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದು, ಮಕ್ಕಳಿಗೆ ಅವಧಿ ಮೀರಿದ ಸಿರಿಧಾನ್ಯ ಲಡ್ಡು ಪೂರೈಕೆ ಮಾಡಿದ್ದಾರೆ ಎಂದು ಗಂಭೀರವಾಗಿ ಆರೋಪಿಸಲಾಗಿದೆ. ಆರೋಪದ ಮೇರೆಗೆ ಅಂಗನವಾಡಿ ಮಕ್ಕಳಿಗೆ ಅವಧಿ ಮೀರಿದ ಸಿರಿಧಾನ್ಯ ಲಡ್ಡು ಪೂರೈಕೆ ಮಾಡುತ್ತಿರುವವರ ವಿರುದ್ಧ ಆರೋಗ್ಯ ಇಲಾಖೆಯು ಕ್ರಮ ಕೈಗೊಳ್ಳುವುದಾಗಿ ನೋಟೀಸ್ ನೀಡಿ ಕ್ರಮ ಕೈಗೊಳ್ಳುವುದಾಗಿ ಸೂಚನೆ ನೀಡಿದೆ.

ವಿದ್ಯಾ ಸಂಸ್ಥೆಗಳಲ್ಲಿ ದೇಶ ವಿರೋಧಿ ಚಟುವಟಿಕೆಗಳಿಗೆ ಆಕ್ರೋಶ

ಎಬಿವಿಪಿಯಿಂದ ಬೃಹತ್ ಪ್ರತಿಭಟನೆ

• **ಹುಬ್ಬಳ್ಳಿ:** ವಿದ್ಯಾ ಸಂಸ್ಥೆಗಳು ಜ್ಞಾನಾರ್ಜನೆಯ ಕೇಂದ್ರಗಳಾಗಬೇಕು. ಆದರೆ, ಇಂದು ಪ್ರತಿಷ್ಠಿತ ವಿದ್ಯಾ ಸಂಸ್ಥೆಗಳೇ ದೇಶ ವಿರೋಧಿ ಚಟುವಟಿಕೆಗಳ ತಾಣವಾಗಿ ನಿರ್ಮಾಣವಾಗುತ್ತಿರುವುದು ವಿಪರ್ಯಾಸ ಎಂದು ಎಬಿವಿಪಿಯ ಕೇಂದ್ರೀಯ ಕಾರ್ಯ ಸಮಿತಿ ಸದಸ್ಯ ಸಚಿನ್ ಕುಳಗೇರಿ ಹೇಳಿದರು.

ಅವರು ಬೆಂಗಳೂರಿನ ಅಜೀಮ್ ಪ್ರೇಮ್ ಜಿ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ದೇಶ ವಿರೋಧಿ ಚಟುವಟಿಕೆಗಳನ್ನು ಖಂಡಿಸಿ ಹುಬ್ಬಳ್ಳಿ ನಗರದ ಬಿವಿಬಿ ಕಾಲೇಜಿನ ಮುಂಭಾಗದಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದರು.

ಅಖಿಲ ಭಾರತೀಯ ವಿದ್ಯಾರ್ಥಿ ಸಂಘ (ಅಐಖಅ) ಎನ್ನುವ ವಿದ್ಯಾರ್ಥಿ ಸಂಘಟನೆ ಕಳೆದ ಅನೇಕ ವರ್ಷಗಳಿಂದ ದೇಶ ವಿರೋಧಿ ಚಟುವಟಿಕೆಗಳ ಮೂಲಕ ಯುವ ಸಮಾಜವನ್ನು ದೇಶದ ವಿರುದ್ಧ ಕಾರ್ಯ ನಿರ್ವಹಿಸುವಂತೆ ಮಾಡುತ್ತಿದೆ. ಈ ಸಂಘಟನೆಯ ಪ್ರಾಯೋಜಿತ ಸ್ಪಾರ್ಕ್ ಎನ್ನುವ ಸಂಸ್ಥೆಯ ಮೂಲಕ ಅಜೀಮ್ ಪ್ರೇಮ್ ಜಿ ವಿಶ್ವವಿದ್ಯಾಲಯದಲ್ಲಿ ದೇಶ ವಿರೋಧಿ ಚಿಂತನೆಗಳ ಕೂಟಗಳನ್ನು ನಡೆಸುತ್ತಾ ದೇಶದ ಗಡಿ ಕಾಯುವ ಸೈನಿಕರು ಅತ್ಯಾಚಾರಿಗಳು, ಹಿಂಸಾಚಾರಿಗಳು ಎನ್ನುವಂತೆ ಬಿಂಬಿಸುವ ಕಾರ್ಯಕ್ರಮಗಳು ಹಾಗೂ ಭಾರತದ ಮುಕುಟ ಕಾಶ್ಮೀರ ಭಾರತದ ಭಾಗವಲ್ಲ ಕಾಶ್ಮೀರವನ್ನು ಸ್ವತಂತ್ರಗೊಳಿಸಿ ಎನ್ನುವ ದೇಶ ವಿರೋಧಿ ಕಾರ್ಯಕ್ರಮಗಳ ಮೂಲಕ ಭಾರತದ ಸಮಗ್ರತೆಗೆ ಧಕ್ಕೆ ತರುವ ಕಾರ್ಯ ಮಾಡುತ್ತಿದೆ. ಇದನ್ನು ವಿರೋಧಿಸಿ ಬೆಂಗಳೂರಿನಲ್ಲಿ ಪ್ರತಿಭಟನೆ ಮಾಡಿದ್ದ ಎಬಿವಿಪಿ ಕಾರ್ಯಕರ್ತರ ಮೇಲೆ ಪ್ರಕರಣ ದಾಖಲು ಮಾಡಿರುವುದು ಸರಿಯಲ್ಲ ಎಂದರು.

ಎಬಿವಿಪಿಯ ರಾಜ್ಯ ಕಾರ್ಯದರ್ಶಿ ದರ್ಶನ್ ಹೆಗಡೆ ಮಾತನಾಡಿ, ಭಾರತ ದೇಶದಲ್ಲಿ ಇದ್ದು ಭಾರತ ದೇಶದ ವಿರೋಧಿ ಕೃತ್ಯಗಳನ್ನು ಮಾಡುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕಾದದ್ದು ಸರ್ಕಾರಗಳ ಕರ್ತವ್ಯ. ಆದರೆ, ಭಾರತ್ ಮಾತಾ ಕಿ ಜೈ ಘೋಷಣೆ ಹಾಕಿ ಪ್ರತಿಭಟಿಸುತ್ತಿದ್ದ ಕಾರ್ಯಕರ್ತರ ಬಂಧನ ಮಾಡುತ್ತಿರುವ ಸರ್ಕಾರ ಕ್ರಮ ಖಂಡನೀಯ. ಸರ್ಕಾರ ದೇಶದ್ರೋಹಿಗಳನ್ನು ಬಂಧಿಸಬೇಕೇ ಹೊರತು ಭಾರತ್ ಮಾತಾ ಕಿ ಜೈ ಘೋಷಣೆ ಕೂಗುವ ಕಾರ್ಯಕರ್ತರನ್ನಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಎಬಿವಿಪಿಯ ಜಿಲ್ಲಾ ಸಂಚಾಲಕರಾದ ಸಿದ್ದಾರ್ಥ್ ಕೋರೆ, ಅಥರ್ವ ಚೌಹಾನ್, ಲೋಕೇಶ ಚಿಗರೆ, ತಿಲಕ, ಶಿವಕುಮಾರ, ಪೃಥ್ವಿರಾಜ, ಚೈತ್ರ, ಮೇಘನಾ, ಶ್ರಾವಣಿ, ಅಜಯ, ಕರ್ಣ ಸೇರಿದಂತೆ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.



> ಗೃಹ ಸಚಿವ ಪರಮೇಶ್ವರ ಅವರ ಹೇಳಿಕೆ ದೇಶ ವಿರೋಧಿ ಶಕ್ತಿಗಳಿಗೆ ಮತ್ತಷ್ಟು ಶಕ್ತಿ ನೀಡುವಂತಿದೆ. ವಿಷಯ ಏನಾದರೂ ಇರಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ ಎನ್ನುವ ಹೇಳಿಕೆ ದೇಶದ್ರೋಹಿಗಳಿಗೆ ಕುಮ್ಮಕ್ಕು ನೀಡುವಂತಿದೆ.
> ■ **ಸಚಿನ ಕುಳಗೇರಿ**, ಕೇಂದ್ರೀಯ ಕಾರ್ಯ ಸಮಿತಿ ಸದಸ್ಯ, ಎಬಿವಿಪಿ

ಮಲೇಷ್ಯಾ ದೇಶದ 18 ನೋಟುಗಳು ಪತ್ತೆ



• **ಕಲಬುರಗಿ:** ಜಿಲ್ಲೆಯ ಚಿತ್ತಾಪುರ ಪಟ್ಟಣದ ನಾಗಾವಿ ಯಲ್ಲಮ್ಮ ದೇವಾಲಯದಲ್ಲಿ ಕಳೆದ ಎಂಟು ತಿಂಗಳಲ್ಲಿ ದೇವಸ್ಥಾನದ ಹುಂಡಿಯಲ್ಲಿ ಒಟ್ಟು ರೂ.14,73,160 ರೂ. ಹಣ ಸಂಗ್ರಹವಾಗಿದೆ.

ರಾಷ್ಟ್ರಕೂಟರ ಕುಲದೇವತೆಯಾಗಿ ಪ್ರಸಿದ್ಧಿ ಪಡೆದಿರುವ ಯಲ್ಲಮ್ಮ ದೇವಿಯ ದೇವಸ್ಥಾನದಲ್ಲಿ ದೇವಾಲಯದ ಆವರಣದಲ್ಲಿ ಸ್ವಯಂಸೇವಕರು ಹಾಗೂ ವಿವಿಧ ಇಲಾಖೆಗಳ ಸಿಬ್ಬಂದಿ ಸಮ್ಮುಖದಲ್ಲಿ ಹುಂಡಿ ಎಣಿಕೆ ಕಾರ್ಯ ನಡೆಯಿತು. ಈ ವೇಳೆ ನಗದು ರೂಪದಲ್ಲಿ ರೂ.14.73 ಲಕ್ಷ ಹಣ ಸಂಗ್ರಹವಾಗಿದೆ.

ಹುಂಡಿಯಲ್ಲಿ ಭಾರತೀಯ ನೋಟುಗಳ ಜೊತೆಗೆ ವಿದೇಶಿ ಕರೆನ್ಸಿಯೂ ಪತ್ತೆಯಾಗಿದ್ದು, ಮಲೇಷ್ಯಾ ದೇಶದ 18 ನೋಟುಗಳು ಮತ್ತು 2 ನಾಣ್ಯಗಳು ದೊರೆತಿವೆ ಎಂದು ದೇವಸ್ಥಾನ ಆಡಳಿತ ಮಂಡಳಿ ಅಧ್ಯಕ್ಷರು ಹಾಗೂ ತಹಶೀಲ್ದಾರ್ ನಾಗಯ್ಯ ಹಿರೇಮಠ ಮಾಹಿತಿ ನೀಡಿದ್ದಾರೆ.

ಭಕ್ತರ ನಿರಂತರ ಆಗಮನ ಮತ್ತು ದೇವಿಯ ಮೇಲಿನ ಅಪಾರ ಭಕ್ತಿಭಾವದಿಂದ ಈ ಪ್ರಮಾಣದ ಹಣ ಸಂಗ್ರಹವಾಗಿದೆ ಎಂದು ಆಡಳಿತ ಮಂಡಳಿ ತಿಳಿಸಿದೆ.

ಅಕ್ರಮ ಮರಳು ಸಾಗಾಟ : 2 ಟ್ರ್ಯಾಕ್ಟರ್ ವಶ

• **ಸಿರುಗುಪ್ಪ:** ನಗರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಅಕ್ರಮ ಮರಳು ಸಾಗಾಣಿಕೆ ಮಾಡುತ್ತಿರುವವರ ವಿರುದ್ಧ 2 ಪ್ರಕರಣಗಳನ್ನ ಪೊಲೀಸರು ಸೋಮವಾರ ದಾಖಲಿಸಿದ್ದು, ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿನ ತಾಯಮ್ಮ ದೇವಸ್ಥಾನದ ಹತ್ತಿರ ಕೆ.ಬೆಳಗಲ್ ಗ್ರಾಮದ ಹಗರಿ ನದಿಯಿಂದ ಸಿರುಗುಪ್ಪ ನಗರಕ್ಕೆ ಮರಳು ತುಂಬಿಕೊಂಡು ಬರುವ 2 ಟ್ರ್ಯಾಕ್ಟರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದರು.

ರಸ್ತೆ ಅಪಘಾತ: ಎರಡೇ ದಿನದಲ್ಲಿ ಏಳು ಜನರ ಸಾವು

• **ಬೆಳಗಾವಿ:** ರಸ್ತೆ ಅಪಘಾತದ ಬಗ್ಗೆ ಜಿಲ್ಲಾ ಪೊಲೀಸರು ಹಲವಾರು ಸುರಕ್ಷಣೆಗಳ ಬಗ್ಗೆ ಜಾಗೃತಿಗಳನ್ನು ಜನತೆಯಲ್ಲಿ ಮೂಡಿಸುವ ಕೆಲಸ ಮಾಡುತ್ತಿದ್ದಾರೆ. ಆದರೆ, ಜಿಲ್ಲೆಯಲ್ಲಿ ಅಪಘಾತಗಳು ನಿಲ್ಲುತ್ತಿಲ್ಲ. ಕೇವಲ ಎರಡೇ ದಿನದಲ್ಲಿ ಏಳು ಜನ ರಸ್ತೆ ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ಕೇವಲ ಎರಡು ದಿನಗಳ ರಸ್ತೆ ಅಪಘಾತದಲ್ಲಿ ಸುಮಾರು ಏಳು ಜನ ವಾಹನ ಸವಾರರು ತಮ್ಮ ಜೀವ ಕಳೆದುಕೊಂಡಿದ್ದಾರೆ. ರಾಮದುರ್ಗ ಕಡೆಯಿಂದ ತಿಮ್ಮಾಪೂರ ಕಡೆಗೆ ಬರುವ ವೇಳೆ ಕೋತಿ ಅಡ್ಡ ಬಂದಿರುವುದರಿಂದ ಬೈಕ್ ಅಪಘಾತ ಸಂಭವಿಸಿದ್ದು, ತಿಮ್ಮಾಪುರ ಗ್ರಾಮದ ಮರಿಯಪ್ಪ ಮಾದರ (48) ಮೃತಪಟ್ಟಿದ್ದಾರೆ. ಅದರಂತೆಯೇ ಕಟಕೋಳ-ಮನವಳ್ಳಿ ಬಳಿ ಬೈಕ್ ಹಾಗೂ ಟ್ರ್ಯಾಕ್ಟರ್ ನಡುವೆ ಸಂಭವಿಸಿದ್ದ ಭೀಕರ ರಸ್ತೆ ಅಪಘಾತದಲ್ಲಿ ಬೈಕ್ ಸವಾರ ಸವದತ್ತಿ ತಾಲೂಕಿನ ಇಂಚಲದ ಶಿವು ಜಕ್ಕಪ್ಪನ್ನವರ (22) ಮೃತಪಟ್ಟಿದ್ದಾನೆ.



ರಾಯಬಾಗ ರಸ್ತೆಯಲ್ಲಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಬನಹಟ್ಟಿ ಮೂಲದ ಆನಂದ ಪೂಜಾರಿ(23) ಮೃತಪಟ್ಟಿದ್ದಾರೆ. ನಿಪ್ಪಾಣಿ ತಾಲೂಕಿನ ಕಸನಾಳ- ಬೋರಗಾಂವ ರಸ್ತೆಯಲ್ಲಿ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಬಾಳಾಸೋ ಮುದಾಳೆ (30) ಮೃತಪಟ್ಟಿದ್ದಾನೆ. ಕಟಕೋಳ-ಯರಗಟ್ಟಿ ರಸ್ತೆಯಲ್ಲಿ ಕಾರು ಅಪಘಾತದಲ್ಲಿ ರಾಮದುರ್ಗ ಪಟ್ಟಣದ ನಿವಾಸಿ ವಿಶ್ವನಾಥ ರಾಮದುರ್ಗ (24) ಮೃತಪಟ್ಟಿದ್ದಾರೆ. ರಾಮನಗರ ಕಡೆಯಿಂದ ಜೋಯಿಡಾ ಕಡೆಗೆ ತೆರಳುವ ವೇಳೆ ಬೈಕ್ ಅಪಘಾತ ಸಂಭವಿಸಿದ್ದು, ಈ ಸಂದರ್ಭದಲ್ಲಿ ದಿಗಂಬರ ಗಾವರೆ (27)ಮೃತಪಟ್ಟಿದ್ದಾನೆ. ರಸ್ತೆ ಪಕ್ಕ ನಿಂತಿದ್ದ ಟ್ಯಾಂಕರ್‌ಗೆ ಬೈಕ್ ಡಿಕ್ಕಿಯಾಗಿ ಎಂ.ಕೆ.ಹುಬ್ಬಳ್ಳಿ ಮೂಲದ ಶಂಕರಪ್ಪ ಬಡಿಗೇರ ಮೃತಪಟ್ಟಿದ್ದಾರೆ.

ಸಂಪಾದಕೀಯ

ಭಯೋತ್ಪಾದನೆಗೆ 'ಪ್ರಹಾರ'

ಭಾರತವು ಕೆಲವು ದಶಕಗಳಿಂದ ಭಯೋತ್ಪಾದನೆಗೆ ತುತ್ತಾಗುತ್ತಲೇ ಬಂದಿದೆ. ಒಂದೆಡೆಯಿಂದ ನೆರೆ ರಾಷ್ಟ್ರಗಳು ಭಾರತದಲ್ಲಿ ಭಯೋತ್ಪಾದನೆಗೆ ಕುಮ್ಮಕ್ಕು ನೀಡುತ್ತಿದ್ದರೆ, ಇನ್ನೊಂದೆಡೆಯಿಂದ ದೇಶದಲ್ಲಿರುವ ಆಂತರಿಕ ದುಷ್ಟಶಕ್ತಿಗಳು ಕೂಡಾ ಭಯೋತ್ಪಾದನೆಯನ್ನು ಪ್ರಚೋದಿಸುತ್ತಿವೆ. ನಕ್ಸಲೀಯರ ಭಯೋತ್ಪಾದನೆಯನ್ನು ನಿಗ್ರಹಿಸುವಲ್ಲಿ ಸರಕಾರವು ಬಹಳಷ್ಟು ಸಫಲತೆ ಸಾಧಿಸಿದೆಯಾದರೂ, ಇಸ್ಲಾಮಿಕ್ ಭಯೋತ್ಪಾದನೆ ಇನ್ನೂ ವ್ರಣವಾಗಿ ಕಾಡುತ್ತಲೇ ಇದೆ. ಈಗಂತೂ ಭಯೋತ್ಪಾದಕರ ಕೈಗೆ ಆಧುನಿಕ ತಂತ್ರಜ್ಞಾನವೂ ಸಿಕ್ಕಿರುವುದರಿಂದ ಮತ್ತು ಭಯೋತ್ಪಾದನೆಯ ಆಯಾಮವೂ ವಿಸ್ತರಿಸಿರುವುದರಿಂದ ಅವರ ವಿರುದ್ಧ ಹೋರಾಡುವುದಕ್ಕೆ ಇನ್ನಷ್ಟು ಸುಸಜ್ಜಿತ ವ್ಯವಸ್ಥೆ ಹೊಂದುವುದು ಅಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಸರಕಾರವು ಭಯೋತ್ಪಾದನೆ ವಿರುದ್ಧ ಹೋರಾಡುವುದಕ್ಕೆ ನೂತನ ನೀತಿಯೊಂದನ್ನು ರೂಪಿಸಿರುವುದು ಸಕಾಲಿಕವಾಗಿದೆ. 'ಪ್ರಹಾರ್' ಹೆಸರಿನ ಈ ಭಯೋತ್ಪಾದನಾ ನಿಗ್ರಹ ನೀತಿಯು ಈ ಪಿಡುಗಿನ ವಿರುದ್ಧ ವಿವಿಧ ಆಯಾಮಗಳಲ್ಲಿ ಹೋರಾಡುವ ಮತ್ತು ಭಯೋತ್ಪಾದನೆಯನ್ನು ಸಂಪೂರ್ಣ ನಿಗ್ರಹಿಸುವ ಗುರಿ ಹೊಂದಿದೆ.



ಈವರೆಗೆ ಭಯೋತ್ಪಾದನೆ ವಿರುದ್ಧ ಭಾರತದ ಹೋರಾಟವು ಪ್ರತಿಕ್ರಿಯಾತ್ಮಕವಾಗಿದ್ದರೆ ಇನ್ನು ಮುಂದೆ ಭಯೋತ್ಪಾದನೆಯು ತಲೆ ಎತ್ತದಂತೆ ಮಾಡುವಂತಹ ಉಪಕ್ರಮಗಳನ್ನು ತೆಗೆದುಕೊಳ್ಳುವ ಕುರಿತಂತೆ ಕೂಡಾ ಆದ್ಯತೆ ವಹಿಸಿದೆ. ಭಾರತವನ್ನು ಕಾಡುತ್ತಿರುವ ಎಲ್ಲಾ ಬಗೆಯ ಭಯೋತ್ಪಾದನೆಗಳನ್ನು– ಗಡಿಯಾಚೆಗಿನ ಭಯೋತ್ಪಾದನೆ, ಡ್ರೋನ್ ಅತಿಕ್ರಮಣ, ಉಗ್ರವಾದಿ ಮನಸ್ಥಿತಿ, ಭಯೋತ್ಪಾದನೆಗೆ ಹಣಕಾಸು ನೆರವು, ವಿವಿಧ ಸ್ವರೂಪದಲ್ಲಿ (ರಾಸಾಯನಿಕ, ಜೈವಿಕ, ವಿಕಿರಣಕಾರಿ, ಪರಮಾಣು ಅಸ್ತ್ರ) ನಡೆಯಬಹುದಾದ ಭಯೋತ್ಪಾದನೆ– ಮುಂತಾದವನ್ನೆಲ್ಲ ನಿಗ್ರಹಿಸಲು ಸೂಕ್ತ ಕಾರ್ಯಸೂಚಿಯನ್ನು ಹೊಂದಿದೆ.

ಭಯೋತ್ಪಾದಕರನ್ನು ದಮನಿಸುವ ಜತೆಗೇ ಭಯೋತ್ಪಾದನೆಯ ಮೊಗ್ಗನ್ನೆ ಚಿವುಟಿ ಹಾಕುವುದಕ್ಕೂ ಹೊಸ ನೀತಿಯು ಆದ್ಯತೆ ನೀಡಿದೆ. ಜನರು ಭಯೋತ್ಪಾದನೆಯತ್ತ ಆಕರ್ಷಿತರಾಗದಂತೆ ತಡೆಯುವುದು, ಅವರಿಗೆ ಸೂಕ್ತ ಅರಿವು ಮೂಡಿಸುವುದು ಕೂಡಾ ಇದರಲ್ಲಿ ಸೇರಿದೆ. ಆಧುನಿಕ ತಂತ್ರಜ್ಞಾನದ ಮೂಲಕ ಭಯೋತ್ಪಾದಕರು ತಮ್ಮ ಜಾಲ ವಿಸ್ತರಿಸುತ್ತಿರುವ ಹಿನ್ನೆಲೆಯಲ್ಲಿ ಪ್ರಹಾರ್ ನೀತಿಯು ಅದನ್ನು ತಡೆಯಲು ತನ್ನ ಡಿಜಿಟಲ್ ಸಾಮರ್ಥ್ಯವನ್ನು ಬಳಸಿಕೊಳ್ಳಲು ಯೋಜಿಸಿದೆ. ಬಂಧಿತ ಭಯೋತ್ಪಾದಕರು ಕಾನೂನಿನ ಬಲೆಯಿಂದ ತಪ್ಪಿಸಿಕೊಳ್ಳದಂತೆ ಮಾಡಲು ಎಫ್‌ಐಆರ್ ಸಲ್ಲಿಸುವುದರಿಂದ ಹಿಡಿದು ಕೋರ್ಟಿನಲ್ಲಿ ವಿಚಾರಣೆ ನಡೆಯುವ ತನಕ ಪರಿಣತ ಕಾನೂನು ತಜ್ಞರನ್ನು ಬಳಸಿಕೊಳ್ಳಲೂ ಯೋಜಿಸಲಾಗಿದೆ. ಒಟ್ಟಿನಲ್ಲಿ ನೂತನ ನೀತಿಯು ಭಯೋತ್ಪಾದನೆಗೆ ಮಾರಕ 'ಪ್ರಹಾರ' ನೀಡುವುದೆಂದು ಆಶಿಸಲಾಗಿದೆ.

ಹೆದರಿಕೆಯಿಂದ ಜಗತ್ತು ಗೆಲ್ಲಲು ಸಾಧ್ಯವೇ ಇಲ್ಲ

ಗುರುತರ
• ಸೋಮಶೇಖರ ಸಿ.ಜಿ.
sompreethi@gmail.com



ಇತ್ತೀಚೆಗೆ ಇಡೀ ಜಗತ್ತೇ ಸಂಭ್ರಮಿಸಬಹುದಾದ ಅಥವಾ ಸಮಾಧಾನ ಮಾಡಿಕೊಳ್ಳಬಹುದಾದ ಘಟನೆಯೊಂದು ನಡೆಯಿತು. ಅದು ಬಲಿಷ್ಠ ಸಂವಿಧಾನ ಹೊಂದಿರುವ ಅಮೆರಿಕದ ಸುಪ್ರೀಂಕೋರ್ಟ್, ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತನಗೆ ಇಷ್ಟ ಬಂದಂತೆ ಜಗತ್ತಿನ ಬೇರೆ ಬೇರೆ ದೇಶಗಳ ಮೇಲೆ ವಿಧಿಸಿದ್ದ ಸುಂಕವನ್ನು ರದ್ದು ಮಾಡಿಬಿಟ್ಟಿತು. ಒಂದು ರೀತಿಯಲ್ಲಿ ಅಮೆರಿಕ ಸುಪ್ರೀಂಕೋರ್ಟ್‌ನ ಈ ತೀರ್ಪು ಟ್ರಂಪ್‌ಗೆ ತೀರಾ ಅವಮಾನಕರವಾದದ್ದು. ದುರಂತವೆಂದರೆ, ಈ ತೀರ್ಪಿನ ನಂತರದಲ್ಲಿ ಕಾಣಿಸಿದ ಟ್ರಂಪ್ ವರ್ತನೆ, ಮೊದಲನೆ ಮತ್ತು ಎರಡನೇ ಮಹಾಯುದ್ಧದಲ್ಲಿ ಕಾಣಿಸಿದ ಸರ್ವಾಧಿಕಾರಿಗಳ ಅಥವಾ ಭಾರತ ಈ ಹಿಂದೆ ನೋಡಿದ ಮೊಹಮ್ಮದ್ ಬಿನ್ ತುಘಲಕ್‌ರ ಆಡಳಿತಕ್ಕಿಂತ ಬೇರೆಯಾಗಿ ಏನೂ ಕಾಣಿಸಲಿಲ್ಲ.

ಸುಪ್ರೀಂಕೋರ್ಟ್ ತೀರ್ಪಿನ ಬಳಿಕ ಟ್ರಂಪ್ ಮತ್ತೆ ಜಗತ್ತಿನ ಬೇರೆ ಬೇರೆ ದೇಶಗಳ ಮೇಲೆ ಶೇ.10 ಸುಂಕ ಹಾಕಿದ್ದಲ್ಲದೇ, ಮಾರನೇ ದಿನ ಇದನ್ನು ಶೇ.5 ಏರಿಸಿ, ಇದನ್ನು ಶೇ.15ರಷ್ಟಕ್ಕೆ ಮಾಡಿದರು. ಅವರ ಈ ನಡೆ ಸುಪ್ರೀಂಕೋರ್ಟ್ ತನ್ನ ಅಹಂಗೆ ನೀಡಿದ ಎಲ್ಲ ಪೆಟ್ಟುಗಳನ್ನೂ ಸಾಬೀತು ಮಾಡುತ್ತಿತ್ತು. ಹಾಗೆಯೇ, ಮುಂದೆಯೂ ಮಾತನಾಡಿ ಒಂದು ವೇಳೆ ಸುಪ್ರೀಂ ತೀರ್ಪನ್ನು ತಮಗೆ ಬೇಕಾದಂತೆ ಅರ್ಥ ಮಾಡಿಕೊಂಡು ಆಟವಾಡಿದರೆ, ತಕ್ಕ ಪಾಠವನ್ನೇ ಕಲಿಸುವುದಾಗಿ ಘೋಷಿಸಿಬಿಟ್ಟರು.

ನೋಡಿ, ಅಮೆರಿಕದ ಇಂದಿನ ಜಿಯೋಪಾಲಿಟಿಕಲ್ ನಾಟಕದಲ್ಲಿ ಒಂದೇ ವ್ಯಕ್ತಿ ಅತಿಯಾಗಿ ಬಣ್ಣ ಹಚ್ಚಿಸಿಕೊಂಡಿದ್ದಾನೆ ಅಂತ ಅನ್ನಿಸದೇ ಇರದು. ತಾನು ಭಯಪಡಿಸಿಯೇ ಜಗತ್ತು ಗೆಲ್ಲಬಹುದು, ಮಣಿಸಬಹುದು, ಕಟ್ಟಿ ಹಾಕಬಹುದು ಎಂಬ ಭ್ರಮಾಲೋಕದಲ್ಲಿ ನಡೆದಾಡುತ್ತಿರುವ ಡೊನಾಲ್ಡ್ ಟ್ರಂಪ್. ಯುದ್ಧದ ಗುಂಡು ಹಾರಿಸದೇ, ಅಣುಬಾಂಬ್ ಬಿಚ್ಚದೇ, ಕೇವಲ ಸುಂಕದ ಬೆದರಿಕೆ, ಕಠಿಣ ಪೋಸ್ಟ್‌ಗಳು, ಮಾರುಕಟ್ಟೆಗಳಿಗೆ ಸಂದೇಶ ಬಿಟ್ಟರೆ ಸಾಕು ಇಡೀ ಲೋಕವೂ ನಡುಗಿ "ಹೌದು ಸಾರ್" ಎನ್ನುತ್ತದೆ ಎಂಬ ಮನೋಭಾವ ಹೊಂದಿದ್ದಾರೆ.

ಟ್ರಂಪ್ ರಾಜಕಾರಣದ ಗರ್ಭದಲ್ಲಿ 'ಭಯ' ಮಾತ್ರವಲ್ಲ, 'ಅಪಮಾನಗೊಂಡ ಅಮೆರಿಕ' ಎಂಬ ಮಿಥ್ಯಾ ಕಥೆಯೂ ಇದೆ. ಜಗತ್ತು ಹಲವು ದಶಕಗಳಿಂದ ಅಮೆರಿಕವನ್ನು 'ಕದ್ದಿದೆ, ದುರುಪಯೋಗ ಮಾಡಿಕೊಂಡಿದೆ, ಮೋಸ ಮಾಡಿದೆ, ಸಮತೋಲನ ಕಳೆದುಹೋಗಿದೆ' ಎಂದು ಜನತೆಗೆ ನಿರಂತರವಾಗಿ ಬೋಧಿಸುವ ಮೂಲಕ, ಅವರು ತಮ್ಮನ್ನು ಪ್ರತೀಕಾರದ ವೀರನಾಗಿ ಕಟ್ಟಿಕೊಂಡಿದ್ದಾರೆ. ಆ ಪ್ರತೀಕಾರಕ್ಕೆ ಆಯ್ಕೆಯಾದ ಮುಖ್ಯ ಆಯುಧವೇ 'ಟ್ಯಾರಿಫ್'. ಯಾವ ದೇಶ ತಮಗೆ ಇಷ್ಟವಾದಂತೆ ವರ್ತಿಸದಿದ್ದರೂ, ಒಪ್ಪಂದದಲ್ಲಿ ಕಿರುಕುಳ ನೀಡಿದರಂತೆ ಭಾಸವಾದರೂ, ರಾಜತಾಂತ್ರಿಕ ಮಾತುಕತೆಯ, ಜಾಗತಿಕ ಒಪ್ಪಂದಗಳ, ಬಹುಪಕ್ಷೀಯ ವೇದಿಕೆಗಳ ದೀರ್ಘ ಪಥವನ್ನು ತಿರಸ್ಕರಿಸಿ, 'ನಾಳೆಯಿಂದ ನಿಮ್ಮ ವಸ್ತುಗಳಿಗೆ ಶೇ.15 ಹೆಚ್ಚುವರಿ ಸುಂಕ' ಎಂಬ ಒಂದು ಸಾಲಿನ ಘೋಷಣೆಯಿಂದಲೇ ಕಾರ್ಯಭಾರ ಮುಗಿಸಲು ಅವರು ಇಷ್ಟಪಡುವರು. ಇದು ಅವರ ಕಣ್ಣಿನಲ್ಲಿ ಆಡಳಿತ, ಇತರರ ಕಣ್ಣಿನಲ್ಲಿ ಅಸ್ಥಿರತೆ.

ಸುಪ್ರೀಂ ತೀರ್ಪು, ಅಮೆರಿಕ ಸಂವಿಧಾನದ ಮೂಲ ತತ್ವವನ್ನೇ ನೆನಪಿಸಿತು ಅಂದರೆ ತಪ್ಪಾಗಲಾರದು. ತೆರಿಗೆ ವಿಧಿಸುವ, ಸುಂಕ ಹಾಕುವ ಮೂಲ ಅಧಿಕಾರ ಕಾಂಗ್ರೆಸ್‌ಗೇ, ಅಧ್ಯಕ್ಷನ ವೈಯಕ್ತಿಕ ಆಸೆ ಆಕ್ರೋಶಗಳಿಗೆ ಅಲ್ಲ. ಅಂತಹ ನಿರ್ಣಯ ಬಂದ ಕೂಡಲೇ, 'ಸರಿ, ನಾವೂ ಸಂಸತ್ತಿನ ಜೊತೆ ಮಾತಾಡಿ, ನಿಯಮಬದ್ಧ ಮಾರ್ಗ ಹುಡುಕೋಣ' ಎನ್ನುವ ಜನತಾಂತ್ರಿಕ ಮನಸ್ಸು ಟ್ರಂಪ್ ಒಳಗೆ ಬೆಳೆಯಬೇಕಿತ್ತು. ಬದಲಿಗೆ, 'ಗರಿಷ್ಠ ಶೇ.10 ಹಾಕಿದ್ದೇನೆ, ಈಗ ಅದನ್ನು ಶೇ.15 ಮಾಡ್ತೀನಿ, ತೀರ್ಪನ್ನು ನೆಪ ಮಾಡಿಕೊಂಡು ಯಾವುದೇ ದೇಶ ಆಟವಾಡಿದರೆ, ನಿಮಗೇ ಇನ್ನೂ ಅಧಿಕ ಹೊಡೆತ' ಎಂಬ ಧಾಟಿಯ ಎಚ್ಚರಿಕೆ ಸಂವಿಧಾನ ಮತ್ತು ನ್ಯಾಯಾಂಗಕ್ಕಿಂತ ಅವರ ಸ್ವಕೇಂದ್ರಿತ ಅಧಿಕಾರಾಭಿಲಾಷೆಯನ್ನು ತೋರ್ಪಡಿಸುತ್ತದೆ. ಇದು ತಮ್ಮ ಕಾಲದಲ್ಲಿ 'ನಾನು ಹೇಳಿದುದೇ ಧರ್ಮ, ನನ್ನ ನಿರ್ಧಾರವೇ ಶ್ರೇಷ್ಠ' ಎಂದುಕೊಂಡ ಮಹಮದ್ ಬಿನ್ ತುಘಲಕ್ ಮನೋಭಾವಕ್ಕೆ ಅಚ್ಚರಿಯ ಹೋಲಿಕೆ ತರುತ್ತದೆ.

ತುಘಲಕ್ ಕಾಲದ ವಿಚಿತ್ರ ನಿರ್ಧಾರಗಳು ದೆಹಲಿಯಿಂದ ದೌಲತಾಬಾದ್‌ಗೇ ರಾಜಧಾನಿ ಕನಸಿನಂತೆ ಕದಲಿಸುವ ಹಠ, ಕುಶಲ ಎಂದೇನು, ಜನಜೀವನವೇನು ಎಂಬುದನ್ನು ಲೆಕ್ಕಿಸದೇ 'ಇದೇನು ಬೃಹತ್ ತಂತ್ರಜ್ಞಾನ' ಎಂದು ತಾನೇ ಮೆಚ್ಚಿಕೊಂಡ ಔದಾರ್ಯ ಇತಿಹಾಸದ ಗರ್ಭಕ್ಕೆ ಸೇರಿವೆ. ಟ್ರಂಪ್ ಕಾಲದಲ್ಲಿ ರಾಜಧಾನಿಯನ್ನು ಭೌಗೋಳಿಕವಾಗಿ ಕಳೆಯುವ ಅಗತ್ಯವಿಲ್ಲ; ಇಲ್ಲಿ ಟ್ರುತ್‌ನ ಪೋಸ್ಟ್ ಒಂದೇ ಸಾಕು. ತುಘಲಕ್ ಚಿನ್ನ ಬೆಳ್ಳಿ ಬೆಲೆಯನ್ನು ಕಂಚಿನ ನಾಣ್ಯಕ್ಕೆ ಹೋಲಿಕೆ ತಂದಿದ್ದರೆ, ಟ್ರಂಪ್ ಡಾಲರ್ ಪ್ರಭಾವ, ವಿಶ್ವವ್ಯಾಪಾರ, ಸರಕು ಸರಪಳಿಗಳನ್ನು ಏಕ ಪೋಸ್ಟ್‌ನಲ್ಲೇ ತತ್ತರನಾಗುವಂತೆ ಮಾಡುತ್ತಾರೆ. ಇಬ್ಬರೂ ತಾವು ದೊಡ್ಡ ಶಕ್ತಿಶಾಲಿಗಳು ಎನ್ನುವ ಮೋಹದಲ್ಲಿ ಮುಳುಗಿ, ನೆಲದ ವಾಸ್ತವಿಕತೆಯನ್ನು, ಸಾಮಾನ್ಯ ಮನುಷ್ಯನ ಬದುಕನ್ನು ನಿರ್ಲಕ್ಷಿಸುವ ಒಂದು ಸಾಮ್ರಾಜ್ಯ ಮನೋಭಾವದ ಪ್ರತಿಫಲನವಾಗಿದೆ.

ಟ್ರಂಪ್ ನಿರ್ಧಾರದಲ್ಲಿ ಮಾರ್ಕೆಟ್‌ಗಳು ನಲುಗಿವೆ. 2018–20ರ ಮೊದಲ ಟ್ರಂಪ್ ಆಡಳಿತದಲ್ಲಿ ಟ್ಯಾರಿಫ್ ಯುದ್ಧಗಳ ಪರಿಣಾಮಗಳನ್ನು ಜಗತ್ತಿನ ಷೇರುಪೇಟೆಗಳು, ಅಂತಾರಾಷ್ಟ್ರೀಯ ಕಂಪನಿಗಳು ಚೆನ್ನಾಗಿ ಅನುಭವಿಸಿವೆ. ಆಗಿನ ಚೀನಾ–ಅಮೆರಿಕ ಜಗಳ, ಪೂರೈಕೆ ಸರಪಳಿಗೆ ಏಟು ನೀಡಿತ್ತು. ಆದರೆ, ಈಗ ಟ್ರಂಪ್ ಚೀನಾವೊಂದೇ ಅಲ್ಲ, ಜಗತ್ತಿನ ಯಾವುದೇ ದೇಶವನ್ನೂ ಬಿಡುತ್ತಿಲ್ಲ. ಸದ್ಯ ಅವರಿಗೆ ಮಿತ್ರರಿಗಿಂತ ಹೆಚ್ಚು ಶತ್ರುಗಳೇ ಆಗಿದ್ದಾರೆ. ಟ್ರಂಪ್ ನೀತಿಗಳಿಂದಾಗಿ ದೀರ್ಘಾವಧಿ ಯೋಜನೆಗಳೇ ಹಳ್ಳ ಹಿಡಿಯುತ್ತಿವೆ. ಯಾರೊಬ್ಬರೂ ಟ್ರಂಪ್ ನಂಬಿ ಹೊಸ ಯೋಜನೆಗಳತ್ತ ಕೈ ಹಾಕುತ್ತಲೇ ಇಲ್ಲ. ಏಕೆಂದರೆ, ಟ್ರಂಪ್ ಅವರ ಅಸ್ಥಿರ ನಿಲುವುಗಳು ತಮ್ಮ ಕಂಪನಿಗಳಿಗೆ ನಷ್ಟವುಂಟು ಮಾಡಿದರೆ ಕಷ್ಟ ಎಂಬುದೇ ಅವುಗಳ ನಿಲುವಾಗಿದೆ.

ಇಂತಹ ಸಂದರ್ಭದಲ್ಲಿ ಜಗ್ಲೋಬಲ್ ಸೌತ್ ದೇಶಗಳು, ವಿಶೇಷವಾಗಿ ಭಾರತದಂಥ ದೇಶದ ಪಾತ್ರ ಬಹುಮಟ್ಟಿಗೆ ಸಂಕೀರ್ಣ. ಒಂದು ಕಡೆ, ಟ್ರಂಪ್‌ಚೀನಾ ಯುದ್ಧದ ನಡುವೆ 'ಚೀನಾಕ್ಕೆ ಬದಲಿಗೆ ಭಾರತ' ಎಂಬ ಚರ್ಚೆಗಳು ತಲೆದೋರುತ್ತವೆ. ಜಾಗತಿಕ ಕಂಪನಿಗಳು ಪೂರೈಕೆ ಸರಪಳಿಯನ್ನು ವೈವಿಧ್ಯೀಕರಣ ಮಾಡಲು ಯತ್ನಿಸಿದಾಗ, ಭಾರತಕ್ಕೆ ಕೆಲ ಉದ್ಯೋಗ ಮತ್ತು ಹೂಡಿಕೆ ಬರಬಹುದು. ಸದ್ಯ ಆಗುತ್ತಿರುವುದು ಇದೇ ಆಗಿದ್ದು, ಭಾರತ ಅಮೆರಿಕದ ಜತೆ ಜತೆಗೆ 35ಕ್ಕೂ ಹೆಚ್ಚು ದೇಶಗಳ ನಡುವೆ ಎಫ್‌ಟಿಎ ಒಪ್ಪಂದಗಳನ್ನು ಮಾಡಿಕೊಳ್ಳುತ್ತಿದೆ.

ಇಂಥ ಹೊತ್ತಲ್ಲಿ ಜಗತ್ತು ಏನು ಮಾಡಬಹುದು ಎಂಬುದು ಇಂದಿಗೂ ಯಾರಿಗೂ ನಿಲುಕಿಲ್ಲ. ಈ ಹಿಂದೆ ಭಾರತದ ಭದ್ರತಾ ಸಲಹೆಗಾರ ಅಜಿತ್ ದೋವಲ್ ಅವರು ಹೇಳಿದಂತೆ ಟ್ರಂಪ್ ಅವರ ಅಧಿಕಾರಾವಧಿ ಮುಗಿಯುವವರೆಗೆ ತಾಳ್ಮೆಯಿಂದ ಹೆಜ್ಜೆ ಇಟ್ಟು ನಂತರದಲ್ಲಿ ಒಂದು ಗಟ್ಟಿಯಾದ ಬಾಂಧವ್ಯದತ್ತ ಹೋಗಬಹುದು. ಆದರೆ, ಆಗ ಅಮೆರಿಕದಲ್ಲಿ ಯಾರು ಅಧಿಕಾರಕ್ಕೇರುತ್ತಾರೆ ಎಂಬುದು ಮುಖ್ಯವಾಗುತ್ತದೆ. ಇನ್ನು ಅಮೆರಿಕವನ್ನೇ ಬದಿಗಿರಿಸಿ, ಡಾಲರ್‌ಗೆ ಈಗ ನೀಡಿರುವ ಅಂತಾರಾಷ್ಟ್ರೀಯ ವಹಿವಾಟು ಕರೆನ್ಸಿಯ ಸ್ಥಾನಮಾನವನ್ನು ನಿರಾಕರಿಸಿ, ಬೇರೆ ರೀತಿಯಲ್ಲಿ ಅಥವಾ ಬೇರೆ ಕರೆನ್ಸಿಯಲ್ಲಿ ವಹಿವಾಟು ನಡೆಸಿದರೆ, ಟ್ರಂಪ್ ಅವರ ಈ ನಡೆಗೆ ಪೆಟ್ಟು ನೀಡಬಹುದು.

ಇದನ್ನು ಮಾಡಬೇಕಾದರೆ, ಇಡೀ ಜಗತ್ತು ಒಂದಾಗಬೇಕು. ಆಗ ಅಮೆರಿಕದ ಮೇಲಿನ ಎಲ್ಲರ ನಿಲುವು ಒಂದೇ ಆಗಬೇಕಾಗುತ್ತದೆ. ಇದು ದೊಡ್ಡ ಸವಾಲು ಆಗಿದ್ದು, ಅಮೆರಿಕದ ಜಾಲದಲ್ಲಿ ಬೀಳಲು ಪಾಕಿಸ್ತಾನದಂಥ ದೇಶಗಳು ತುದಿಗಾಲಲ್ಲೇ ನಿಂತಿರುತ್ತವೆ. ಜತೆಗೆ ಈ ಹಿಂದೆ ಬ್ರಿಟಿಷರು ಒಡೆದು ಆಳುವ ರೀತಿಯಲ್ಲಿ ಅಮೆರಿಕವೂ ಈಗ ಜಗತ್ತಿನ ಬೇರೆ ಬೇರೆ ದೇಶಗಳ ಜತೆ ವರ್ತಿಸುತ್ತಿದೆ. ಇದನ್ನು ಯಶಸ್ವಿಯಾಗಿ ಸೋಲಿಸಿ ಮುಂದಕ್ಕೆ ನಡೆಯುವುದು ಸಾಧ್ಯವೇ ಎಂಬ ಪ್ರಶ್ನೆಯೂ ಏಳುತ್ತದೆ.

ಈ ದೊಡ್ಡ ಚಿತ್ರದಲ್ಲಿ, 'ಟ್ರಂಪ್ ಹಾದಿಯನ್ನು ಕಠಿಣ ಮಾಡುವವರು ಯಾರು?' ಎಂಬ ಪ್ರಶ್ನೆಗೆ ಒಂದೇ ಉತ್ತರ ಇರಲ್ಲ. ಮೊದಲ ಹಂತ ಅಮೆರಿಕ ಮತದಾರರು. ಅವರಿಗೇ ತಾನೇ ಅವರು ತಮ್ಮ ಭವಿಷ್ಯವನ್ನು ಯಾವ ನಾಯಕನ ಕೈಗೆ ಒಪ್ಪಿಸುತ್ತಿದ್ದಾರೆ ಎಂದು ಮರು ಚಿಂತಿಸಬೇಕಿದೆ. ಎರಡನೇ ಹಂತ ಜಗತ್ತಿನ ಇತರ ನಾಯಕರು, ಸರ್ಕಾರಗಳು. 'ಟ್ರಂಪ್ ಜೊತೆ ಸೌಹಾರ್ದ ಹಾದಿ' ಮತ್ತು 'ಟ್ರಂಪ್ ನೀತಿಯ ವಿರೋಧ' ಒಂದೇ ಅಲ್ಲ. ಕೆಲವು ವಿಷಯಗಳಲ್ಲಿ ಅಮೆರಿಕದ ಜೊತೆ ಒಪ್ಪಿಕೊಳ್ಳುತ್ತ, ಇನ್ನು ಕೆಲವು ವಿಷಯಗಳಲ್ಲಿ ಪ್ರಾಮಾಣಿಕವಾಗಿ ವಿರೋಧ ಪಟ್ಟ ಅಭಿಪ್ರಾಯವನ್ನು ಹೇಳುವ ಸಾಮರ್ಥ್ಯ ಹೊಂದಿರುವ ನಾಯಕರು, ಟ್ರಂಪ್ ಸರ್ವಾಧಿಕಾರಿ ಮನೋಭಾವಕ್ಕೆ ಮಿತಿಯನ್ನು ತೋರಿಸಬಹುದು. ಮೂರನೇ ಹಂತ ಜಗತ್ತಿನ ಬಹುಜನರು.

ಇಂದಿನ ಕಾಲದಲ್ಲಿ ಒಂದು ದೇಶದ ರಾಜಕಾರಣವು, ಮತ್ತೊಂದು ದೇಶದ ಸಾಮಾನ್ಯ ಮನುಷ್ಯನ ಬದುಕಿನ ಮೇಲೆ ನೇರ ಪರಿಣಾಮ ಬೀರುತ್ತಿದೆ. ಅಮೆರಿಕ ಸುಂಕ ಯುದ್ಧವು ಭಾರತದಲ್ಲಿ ಕಾರ್ಖಾನೆ ಮುಚ್ಚುವಂತೆ ಮಾಡಬಹುದು, ಚೀನಾದಲ್ಲಿ ಕಾರ್ಮಿಕರಿಗೆ ವೇತನ ಕಡಿತ ತರಬಹುದು, ಯುರೋಪಿನ ಗ್ರಾಮೀಣ ಪ್ರದೇಶದಲ್ಲಿ ರೈತರಿಗೆ ಉತ್ಪಾದನಾ ನಷ್ಟ ತರಬಹುದು. ಇಂಥ ಪರಸ್ಪರ ಅವಲಂಬಿತ ಯುಗದಲ್ಲಿ 'ಇದು ಅವರ ದೇಶದ ಒಳಗಿನ ರಾಜಕಾರಣ' ಎಂಬ ಭಾವನೆಯಲ್ಲಿ ಕುಳಿತಿರಲು ನಮಗೆ ಐಶ್ವರ್ಯವಿಲ್ಲ. ಜಾಗತಿಕ ಜನತಂತ್ರವು, ಜಾಗತಿಕ ಬಹುಜನದ ಒಂದೇ ಧ್ವನಿಯೇ ಆಗಿರಬೇಕಾಗಿದೆ. ಆಗ 'ನಾವು ಎಲ್ಲರೂ ಒಂದೇ ಸಂಕಷ್ಟದೊಳಗಿದ್ದೇವೆ, ಪರಿಹಾರದ ಹಾದಿ ನಮ್ಮ ವಿವೇಕದಲ್ಲಿದೆ' ಎಂಬ ಶಾಂತ ಧ್ವನಿ ಬೇಕಾಗಿದೆ.

ವೇಷವನ್ನು ನಂಬಬಾರದು

ವೇಷಂ ನ ವಿಶ್ವಸೇತ್ ಪ್ರಾಜ್ಞೋ ವೇಷೋ ದೋಷಾಯ ಜಾಯತೇ ।
ರಾವಣೋ ಭಿಕ್ಷುರೂಪೇಣ ಜಹಾರ ಜನಕಾತ್ಮಜಾಮ್ ॥

ಬುದ್ಧಿವಂತನು ವೇಷವನ್ನು ನಂಬಬಾರದು. ಏಕೆಂದರೆ ವೇಷವು ದೋಷಗಳಿಗೆ ಕಾರಣವಾಗುತ್ತದೆ. ಸನ್ಯಾಸಿ ವೇಷವನ್ನು ಧರಿಸಿದ ರಾವಣನು ಜಾನಕಿಯನ್ನು ಅಪಹರಿಸಿದ –ಎಂಬುದು ಶ್ಲೋಕಾರ್ಥ.

ಎಲ್ಲರನ್ನೂ ಕಾಡುವ ಸಾಮಾನ್ಯ ಪ್ರಶ್ನೆ ಯಾರನ್ನು ನಂಬಬೇಕು, ಯಾರನ್ನು ನಂಬಬಾರದು ಎಂಬುದಾಗಿ. ಆಮೇಲೆ ಎಷ್ಟು ನಂಬಬೇಕು, ಎಷ್ಟು ನಂಬಬಾರದು ಎಂಬುದಾಗಿ.

ಮೋಸಗೊಳಿಸುವವರು, ಬಣ್ಣದ ಮಾತನ್ನಾಡುವವರು, ವೇಷ ಮರೆತು ಮೋಸ ಗೊಳಿಸುವವರು ಹೆಚ್ಚಾದ ಕಾರಣ ಈ ಸಮಸ್ಯೆ ಉದ್ಭವಿಸಿದೆ. ನಾವಿರಿಸಿದ ವಿಶ್ವಾಸವೇ ಕೆಲವೊಮ್ಮೆ ನಮಗೆ ಮುಳು ವಾಗುತ್ತದೆ. ಆದ್ದರಿಂದಲೇ ಸೂಕ್ತಿಯೊಂದು 'ವಿಶ್ವಾಸೋ ನೈವ ಕರ್ತವ್ಯಃ'' ಎಂದಿದೆ. ನಮ್ಮ ಬುದ್ಧಿವಂತಿಕೆ, ಬಲ(ಪ್ರಯತ್ನ)ಗಳ ಮೇಲೆ ಮಾತ್ರ ವಿಶ್ವಾಸವಿರಿಸಬೇಕು. ಕೆಲವೊಮ್ಮೆ ಇದು ಕೈಕೊಡುತ್ತದೆ. ಹೀಗಿರುವಾಗ ಇತರರನ್ನು ಹೇಗೆ ನಂಬುವುದು? ಇಂದಿನ ಸ್ಥಿತಿ ಎಲ್ಲಿಗೆ ಬಂದಿದೆಯೆಂದರೆ, ಗಂಡ ಹೆಂಡತಿಯನ್ನು ನಂಬಲಾರ; ಹೆಂಡತಿ ಗಂಡನನ್ನು ನಂಬಲಾರಳು. ಇವರಿಬ್ಬರೂ ಮಕ್ಕಳನ್ನು ನಂಬುವಂತಿಲ್ಲ, ಮಕ್ಕಳು ಹೆತ್ತವರನ್ನೇ ನಂಬರು.



ನಮ್ಮವರನ್ನೇ ನಂಬಲಾರದ ಸ್ಥಿತಿಗೆ ಬಂದಾಗ ವೇಷ ತೊಟ್ಟು ಬಂದವರನೆಂತು ನಂಬುವುದು? ತುಂಬಾ ಆತ್ಮೀಯರಂತೆ ನಟಿಸಿ ವಂಚಿಸುವವರಿದ್ದಾರೆ. ಮನೆ ಬಾಗಿಲಿಗೆ ಬೇಡುವುದಕ್ಕೆ ಬಂದವರಿಗೆ ಕೊಡದೇ ಇರುವ ಸಂಸ್ಕೃತಿ ನಮ್ಮದಲ್ಲ. ಆದರೆ ಇಂದು ಬೇಡುವ ನೆಪದಲ್ಲಿ ವಂಚಿಸುವವರಿದ್ದಾರೆ.

ಬುದ್ಧಿವಂತನಾದವನು ಯೋಚಿಸಿ, ವಿಮರ್ಶಿಸಿ ನಿರ್ಣಯ ತೆಗೆದುಕೊಳ್ಳಬೇಕು. ವೇಷದವರನ್ನು ಯಾವಾಗಲೂ ಎಚ್ಚರದಿಂದಲೇ ಅವಲೋಕಿಸಬೇಕು. ವೇಷವೇ ಅನೇಕ ದೋಷಗಳನ್ನುಂಟು ಮಾಡುತ್ತದೆ. ವಂಚಿಸುವುದಕ್ಕೆ ಕೇವಲ ಬಾಹ್ಯ ವೇಷವೇ ಬೇಕಿಲ್ಲ, ಸಭ್ಯರಂತೆ ಮುಖವಾಡ ಧರಿಸಿ ವಂಚಿಸುವವರು ಹೆಚ್ಚಿದ್ದಾರೆ. ಸೇವೆ, ಆರೋಗ್ಯ, ಶಿಕ್ಷಣ, ಬಡತನ ನಿವಾರಣೆಯ ಮುಖವಾಡ ತೊಟ್ಟು ವಂಚಿಸಿ ಮೋಸ ಮಾಡುತ್ತಾರೆ.

ಪ್ರೀತಿ ಪ್ರೇಮದ ಹೆಸರಿನಲ್ಲಿ ವಂಚಿಸುವವರಿದ್ದಾರೆ. ಇಂದು ಈ ಸಮಸ್ಯೆ ಬೃಹತ್ ಆಗಿ ಬೆಳೆಯುತ್ತಿದೆ. ಇದರ ಮುಂದೆ ದ್ವೇಷ ಮರೆಸಿ ಮಾಡುವ ವಂಚನೆ ಅಷ್ಟು ದೊಡ್ಡದಲ್ಲ, ಆದರೂ ಅದು ಮೋಸದ ಪ್ರಧಾನ ಭಾಗವೇ ಆಗಿದೆ. ರಾವಣನು ತನ್ನನ್ನು ಮರೆಮಾಚಿ ಸನ್ಯಾಸಿ ವೇಷಧರಿಸಿ ಸೀತೆಯನ್ನು ಅಪಹರಿಸಿದ.

ಒಳ್ಳೆಯದನ್ನು ಮಾಡುವುದಕ್ಕೂ, ಆಗುವುದಕ್ಕೂ ವೇಷವನ್ನು ಧರಿಸುವುದಿದೆ. ಪರಶಿವನು ಕಿರಾತ ವೇಷ ಧರಿಸಿ ಅರ್ಜುನನಿಗೆ ಪಾಶುಪತಾಸ್ತ್ರಾದಿ ಆಯುಧಗಳನ್ನಿತ್ತು ಅನುಗ್ರಹಿಸಿದ. ಪಾಂಡವರು ವೇಷ ಮರೆಸಿ ಅಜ್ಞಾತ ವಾಸವನ್ನು ಸಾಂಗಗೊಳಿಸಿದರು. ಒಳ್ಳೆಯ ಕೆಲಸಕ್ಕಿಂತಲೂ ಕೆಟ್ಟ ಕೆಲಸಕ್ಕಾಗಿಯೇ ವೇಷಧರಿಸಿ ವ್ಯವಹರಿಸುವವರು ಹೆಚ್ಚಿರುವುದರಿಂದ ಎಚ್ಚರ ವಹಿಸಬೇಕಾದುದು ಎಲ್ಲರ ಕರ್ತವ್ಯ.

ಕುಂದನಲ್ಲದೆ ಲೇಸ ಕಾಣದವರು

ಪ್ರತಿಯೊಂದರಲ್ಲಿಯೂ ಕುಂದನ್ನೇ ಕಾಣುವ ಸ್ವಭಾವ ಅನೇಕರಲ್ಲಿರುತ್ತದೆ. ಆದರೆ ಕುಂದನ್ನೇ ಕಾಣುವವರಿಂದ ಸಮಾಜಕ್ಕೆ ಲೇಸು ಉಂಟಾಗಲಾರದು.

ಆ–ಲೋಚನ
• ರಾಧಾಕೃಷ್ಣ ಕಲ್ಚಾರ್
rkkalchar@gmail.com



ಕನ್ನಡದ ಕವಿ ರಾಘವಾಂಕನ 'ಹರಿಶ್ಚಂದ್ರ ಕಾವ್ಯ' (ಹರಿಶ್ಚಂದ್ರ ಚಾರಿತ್ರ) ದಲ್ಲಿ ಒಂದು ಸನ್ನಿವೇಶ ಇದೆ. ಅಮರಾವತಿಯಲ್ಲಿ ದೇವೇಂದ್ರನ ಸಭೆ. ಆ ಸಭೆಯಲ್ಲಿ ಘನತೆವೆತ್ತ ಸುರರು, ಋಷಿಗಳೇ ಮುಂತಾದ ಮಹನೀಯರು ಮಂಡಿಸಿದ್ದಾರೆ. ಆಗ ದೇವೇಂದ್ರನಲ್ಲಿ ಒಂದು ಜಿಜ್ಞಾಸೆ ಉಂಟಾಗುತ್ತದೆ. ಸೂರ್ಯವಂಶದ ಮಹಾರಾಜರಲ್ಲಿ ಅಪ್ರತಿಮ ಸತ್ಯವಾದಿ ಯಾರು? ಇದನ್ನು ತಿಳಿಯುವುದಕ್ಕಾಗಿ ವಸಿಷ್ಠನಲ್ಲಿ ಈ ಪ್ರಶ್ನೆಯನ್ನು ಮುಂದಿಡುತ್ತಾನೆ. "ಇಕ್ಷ್ವಾಕು ವಂಶೀಯರಲ್ಲಿ ಮನ ವಚನ ಕಾಯದೊಳಗೊಮ್ಮೆಯುಂ ಹುಸಿ ಹೊದ್ದದಂತೆ ನಡೆವ ಕಲಿಗಳಾರಯ್ಯ?" ಈ ಪ್ರಶ್ನೆಗೆ ವಸಿಷ್ಠ, ಅಂತಹ ಸತ್ಯವಾದಿ ವಸುಧಾಧಿಪತಿ ಹರಿಶ್ಚಂದ್ರ ಎಂದು ಉತ್ತರಿಸುತ್ತಾನೆ. ಅದಿಲ್ಲಿ ಪ್ರಧಾನವಲ್ಲ. ಆದರೆ ಆ ಸಭೆಯಲ್ಲಿ ವಸಿಷ್ಠನ ಸಾಲಿನಲ್ಲಿ ಕುಳಿತಿದ್ದ ವಿಶ್ವಾಮಿತ್ರನು ಇದರಿಂದ ಕೆರಳುತ್ತಾನೆ.

ಯಾಕೆ ಕೆರಳಿದ ಎಂಬುದಕ್ಕೆ ಕವಿಯು ಕಾರಣವನ್ನು ಮುಂದಿಡುತ್ತಾನೆ. ವಿಶ್ವಾಮಿತ್ರನ ಸ್ವಭಾವವೇನು ಎಂಬುದನ್ನು ವಿವರಿಸುತ್ತ, ಒಂದು ವಿಶಿಷ್ಟ ಗುಣವನ್ನು (ಅಥವಾ ದುರ್ಗುಣ ಅನ್ನಿ) ತಿಳಿಸುತ್ತಾನೆ.



'ಅಖಿಳ ಜೀವಾವಳಿಯಲಿ ಭಾವಿಪಡೆ ಕುಂದನಲ್ಲದೆ ಲೇಸ ಕಾಣದಿಹ ಭಾವ' ವಿಶ್ವಾಮಿತ್ರನದಾಗಿತ್ತು ಎನ್ನುತ್ತಾನೆ ರಾಘವಾಂಕ. ಹಾಗೆಂದರೇನು? ಸೃಷ್ಟಿಯಲ್ಲಿ ಅನೇಕ ಸಹಸ್ರ, ಲಕ್ಷ ಸಂಖ್ಯೆಯ ಜೀವ ರಾಶಿಗಳಿವೆ. ಅವುಗಳನ್ನು ಪರಿಶೀಲನೆ ಮಾಡುವ ಸಂದರ್ಭ ಬಂದರೆ ಈ ವಿಶ್ವಾಮಿತ್ರನ ಕಣ್ಣಿಗೆ ಲೋಪಗಳಲ್ಲದೆ ಒಳ್ಳೆಯದು ಯಾವುದೂ ಕಾಣಿಸದು ಎಂದು ಇದರ ಅರ್ಥ. ವಿಚಿತ್ರ ನೋಡಿ, ಅವನ ಹೆಸರು ವಿಶ್ವಾಮಿತ್ರ. ಆದರೆ ಮೈತ್ರೀಭಾವವು ಅವನಲ್ಲಿ ವಿಶಿಷ್ಟವಾಗಿ ಇರಬೇಕಿತ್ತು, ಆದರೆ ಇರಲಿಲ್ಲ. ಕುಂದನ್ನೇ ಕಾಣುವ ವಿಶ್ವಾಮಿತ್ರನ ಸ್ವಭಾವದಿಂದಾಗಿ ಹರಿಶ್ಚಂದ್ರನ ಜೀವನವು ಬಿರುಗಾಳಿಗೆ ಸಿಕ್ಕಿದ ಎಲೆಯಂತೆ ತತ್ತರಿಸಿಹೋಯಿತು. ಅವನು ತನ್ನ ಸತ್ಯವನ್ನು ಉಳಿಸಿಕೊಳ್ಳುವುದಕ್ಕಾಗಿ ನಾನಾ ಸಂಕಷ್ಟಗಳಿಗೆ ಈಡಾಗಬೇಕಾಯಿತು.

ಇರಲಿ, ಪ್ರತಿಯೊಂದರಲ್ಲಿಯೂ ಕುಂದನ್ನೇ ಕಾಣುವ ಇಂತಹ ಸ್ವಭಾವ ಅನೇಕರಲ್ಲಿರುತ್ತದೆ. ಅವರಿಗೆ ಛಿದ್ರಾನ್ವೇಷಿಗಳು ಅಂತ ಹೇಳುವ ಕ್ರಮವೂ ಉಂಟು. ಯಾವುದರಲ್ಲಾದರೂ, ಛಿದ್ರ ಅಂದರೆ ಒಡಕನ್ನು ಕಾಣುವುದು (ಅಥವಾ ಹುಡುಕುವುದು) ಅವರಿಗೆ ಅಂಟಿದ ಗುಣ. ಹಾಗಾಗಿ ನೀವು ಏನೇ ವಿಷಯವನ್ನು ಅವರಲ್ಲಿ ಪ್ರಸ್ತಾವಿಸಿ. ಆ ವಿಷಯದಲ್ಲಿ ಒಂದಲ್ಲ ಒಂದು ದೋಷ ಅವರಿಗೆ ಸಿಕ್ಕಿಯೇ ಸಿಗುತ್ತದೆ. ಉದಾಹರಣೆಗೆ ನೋಡಿ. ಒಬ್ಬರು ಗೃಹಸ್ಥರಿದ್ದಾರೆ. ಅವರ ಮನೆಯಾಕೆ ಹೇಗೇ ಅಡುಗೆ ಮಾಡಿ ಬಡಿಸಿದರೂ ಅದರಲ್ಲಿ ಕುಂದು ಹುಡುಕಿ ಹಿಡಿಯದೇ ಬಿಡಲಾರರು. ಊಟಕ್ಕೆ ಏನೋ ಒಂದು ವ್ಯಂಜನ ಮಾಡಿದ್ದಾರೆ ಎಂದು ಭಾವಿಸಿ. ಉದಾಹರಣೆಗೆ ಒಂದು ಪಾಯಸ ಮಾಡಿದರು ಎಂದಿಟ್ಟುಕೊಳ್ಳುವ. ಯಜಮಾನರು ಊಟದ ಎಲೆಯ ಎದುರು ಕುಳಿತ ಕೂಡಲೇ ದುಸುಮುಸು ಪ್ರಾರಂಭ. "ಈಗ ಯಾವ ಕರ್ಮಕ್ಕೆ ಪಾಯಸ? ಸುಮ್ಮನೆ ಒಂದು ಅನ್ನ ಸಾರು, ಪಲ್ಯ ಸಾಕಾಗುವುದಿಲ್ವ?'' ಎನ್ನುತ್ತಾರೆ. ಸರಿ, ಅವರು ಹೇಳಿದರಲ್ಲ ಅಂತ ಸರಳವಾದ ಅಡುಗೆ ಮಾಡಿದ ದಿನ, "ನಿತ್ಯವೂ ಇಷ್ಟೇ ತಿನ್ನಬೇಕೋ? ಅಪರೂಪಕ್ಕೆ ಒಂದು ದಿನವಾದರೂ ವಿಶೇಷ ಮಾಡಬಾರದೇ?'' ಎಂದು ಗೊಣಗುತ್ತಾರೆ. ಏನೋ ಆಕಸ್ಮಿಕವಾಗಿ ಅವರು ವಿಶೇಷ ಅಡುಗೆಯನ್ನು ಮಾಡಿದ ದಿನವೂ, ಇವರಿಗೆ ವಿಶೇಷವು ಬೇಕಾದ ದಿನವೂ ಒಂದೇ ಆಯಿತು ಅನ್ನಿ. ಆಗಲಾದರೂ ಸಮಾಧಾನವೆ ಅಂದರೆ, ಅದೇನೂ ಇಲ್ಲ. "ಹೇಗೂ ಮಾಡುವಾಗ ಸ್ವಲ್ಪ ಸಿಹಿಯಾಗಿ ಮಾಡುವುದಲ್ವ? ನನಗೇನು ಮಧುಮೇಹ ಬಂದಿದೆಯ?'' ಅಂದಾರು. ಸಿಹಿ ಹೆಚ್ಚು ಅನಿಸಿದರೆ, "ಇದೇನಿಷ್ಟು ಬೆಲ್ಲ ಸುರುವಿದ್ದಿ? ನಾನು ಸಿಹಿಮೂತ್ರ ಬಂದು ಸಾಯಬೇಕೇ?'' ಅನ್ನುತ್ತಾರೆ. ಹೋಗಲಿ, ಎಲ್ಲವೂ ಸರಿಯಾದ ಪ್ರಮಾಣದಲ್ಲಿ ಸೇರಿ, ರುಚಿಕಟ್ಟಾಗಿದೆ ಅಂದುಕೊಳ್ಳಿ. ಆಗಲೂ ಸಮಾಧಾನವಿಲ್ಲ.

"ಹೀಗೆ ದಿನಾ ರುಚಿಯಾಗಿ ಮಾಡಿ ಹಾಕಿದರೆ ತಿಂದೂ ತಿಂದೂ ನನ್ನ ತೂಕ ಒಂದು ತಿಂಗಳಲ್ಲೇ ಡಬಲ್ ಆದೀತು'' ಎಂದು ಗೊಣಗದೇ ಇರಲಾರರು. ಹೋಗಬೇಕಾಗಿರುವ ಬಸ್ಸು ತಡವಾದರೂ ಆಕ್ಷೇಪ, ಬೇಗ ಬಂದರೂ ಆಕ್ಷೇಪ, ಸಮಯಕ್ಕೆ ಸರಿಯಾಗಿ ಬಂದರೂ ದೋಷವೇ ಇವರಿಗೆ. ಹೆಚ್ಚು, ಕಡಿಮೆ, ಸರಿ ಹೀಗೆ ಯಾವುದಾದರೂ ಅದು ಒಪ್ಪಿಗೆಯಾಗುವುದಿಲ್ಲ. ಇದು ಒಂದು ಮನೋಧರ್ಮ. ಕವಿ ಕೆ.ಎಸ್. ನರಸಿಂಹ ಸ್ವಾಮಿ ಅವರು ಈ ಬಗೆಯ ಸ್ವಭಾವವುಳ್ಳವರನ್ನೇ

'ಚಳಿಗಾಲ ಬಂದಾಗ 'ಎಷ್ಟು ಚಳಿ?' ಎಂದರು
ಬಂತಲ್ಲ ಬೇಸಿಗೆ, 'ಕೆಟ್ಟ ಬಿಸಿಲೆಂದರು;
ಮಳೆ ಬಿತ್ತೊ, 'ಬಿಡದ ಶನಿ!' ಎಂಬ ಟೀಕೆ:
ಇವರು ಮೆಚ್ಚುವ ವಸ್ತು ಇಲ್ಲಿಲ್ಲ, ಜೋಕೆ!'

ಎಂದು ಹೇಳಿದ್ದು.

ಇತ್ತೀಚೆಗೆ ಪತ್ರಿಕೆಯೊಂದರಲ್ಲಿ ಯಕ್ಷಗಾನ ತಾಳಮದ್ದಲೆಯ ಕುರಿತು, ವಿಸ್ತೃತ ಲೇಖನವೊಂದು ಪ್ರಕಟವಾಯಿತು. ಈ ರಂಗಭೂಮಿಯ ಗುಣ ದೋಷಗಳ ವಿಮರ್ಶೆ ಅದು. ಒಟ್ಟಾಗಿ ಈ ರಂಗಭೂಮಿ ತನ್ನ ಮಟ್ಟವನ್ನು ಉಳಿಸಿಕೊಂಡಿಲ್ಲ ಎನ್ನುವುದು ಲೇಖನದ ಸಾರಾಂಶ. ಬರೆದವರ ಅಭಿಪ್ರಾಯ ಸರಿಯೋ ತಪ್ಪೋ ಎಂಬುದು ಸದ್ಯದ ವಿವಕ್ಷೆ ಅಲ್ಲ. ಈ ಲೇಖನ ಬಂದುದೇ ತಡ, ಇದು ಕೆಲವು ವಾಟ್ಸಪ್ ಬಳಗಗಳಲ್ಲಿಯೂ ಪ್ರತಿಫಲಿಸಿತು. ಹಲವರು ಇದನ್ನು ಹಂಚಿಕೊಂಡರು. ಅಲ್ಲಿಯೂ ಚರ್ಚೆಗಳಾದವು. ಬಳಗವೊಂದರಲ್ಲಿ, ಪತ್ರಿಕೆಯ ನಿರ್ದಿಷ್ಟ ಲೇಖನವನ್ನು ಬೆಂಬಲಿಸಿ, ಈಗಿನ ಕಾರ್ಯಕ್ರಮಗಳು ಕಳಪೆ, ಗುಣಮಟ್ಟ ಇಲ್ಲದವು ಎಂದು ಕೆಲವರು ಬರೆದರು. ಇದರಲ್ಲಿ ವಿಶೇಷವೇನಿಲ್ಲ. ಯಾವುದೇ ಕ್ಷೇತ್ರದಲ್ಲಿ ಇಂತಹ ಸಂವಾದಗಳು, ಚರ್ಚೆಗಳು ನಡೆಯುವುದು ಸಹಜ ಪ್ರಕ್ರಿಯೆ. ಇರಲಿ, ಮುಂದೇನಾಯಿತು ನೋಡಿ.

ಕೆಲವು ದಿನಗಳಲ್ಲಿ ಅದೇ ಪತ್ರಿಕೆಯಲ್ಲಿ, ತಾಳಮದ್ದಲೆಯ ಕೆಲವು ಉತ್ತಮ ಕಲಾವಿದರು ಹಾಗೂ ಗುಣಮಟ್ಟವುಳ್ಳ ಪ್ರದರ್ಶನಗಳ ಕುರಿತು ಇನ್ನೊಂದು ಲೇಖನ ಪ್ರಕಟವಾಯಿತು. ಈ ಕ್ಷೇತ್ರದ ಎಲ್ಲವೂ ಕೆಟ್ಟಿಲ್ಲ ಎನ್ನುವ, ಉತ್ತಮಿಕೆಯನ್ನು ಗುರುತಿಸುವ ಈ ಲೇಖನವನ್ನು ಅನೇಕರು ಗಮನಿಸದವರಂತೆ ಇದ್ದು ಬಿಟ್ಟರು. ಈ ಮೊದಲಿನ ಲೇಖನವನ್ನು ಬೆಂಬಲಿಸಿ, ಅದನ್ನು ಬಳಗಗಳಲ್ಲಿ ಪ್ರಸಾರ ಮಾಡಿದವರೆಲ್ಲ ಹೊಸ ಲೇಖನದ ಕುರಿತು ಮೌನವಾಗಿಬಿಟ್ಟರು. ಅದನ್ನು ಯಾವ ಬಳಗದಲ್ಲಿಯೂ ಪ್ರಸಾರ ಮಾಡುವವರಿಲ್ಲವಾಯಿತು. ಕುಂದನ್ನು ಆಡುವವರು ಲೇಸನ್ನು ಕಾಣಲೇ ಇಲ್ಲ. ಅಂದರೆ ಇದಕ್ಕೆ, 'ಕುಂದನಲ್ಲದೆ ಲೇಸ ಕಾಣದಿಹ ಗುಣ' ಕಾರಣ ಎನ್ನದೆ ಬೇರೇನು ಹೇಳೋಣ?

ಮಕ್ಕಳನ್ನು ಹೆತ್ತವರು ಅಥವಾ ಪೋಷಕರು ಈ ದಿಕ್ಕಿನಲ್ಲಿ ಚಿಂತಿಸಬೇಕಾದ ಸಂಗತಿಯೊಂದಿದೆ. ಮಕ್ಕಳಲ್ಲಿ ಕೆಟ್ಟ ಅಂದರೆ ಸಮಾಜಕ್ಕೆ ಒಪ್ಪಿತವಲ್ಲದ ವರ್ತನೆಯೂ ಇರುತ್ತದೆ. ಸಮಾಜಕ್ಕೆ ಒಪ್ಪಿಗೆಯಾಗುವ ಒಳ್ಳೆಯ ವರ್ತನೆಯೂ ಇರುತ್ತದೆ. ಕೆಟ್ಟ ವರ್ತನೆಗೆ ಶಿಕ್ಷೆ ಹಾಗೂ ಉತ್ತಮ ವರ್ತನೆಗೆ ಮೆಚ್ಚುಗೆ ಸಿಗುತ್ತದೆ. ಆದರೆ ಕೆಟ್ಟ ವರ್ತನೆಗೆ ಯಾವ ಪ್ರತಿಕ್ರಿಯೆಯನ್ನೂ ಕೊಡದೆ ಒಳ್ಳೆಯದಕ್ಕೆ ಮಾತ್ರ ಮೆಚ್ಚುಗೊಡಬೇಕು ಎನ್ನುತ್ತದೆ ಮನಃಶಾಸ್ತ್ರ.

ಯಾವುದಕ್ಕೆ ಪ್ರತಿಕ್ರಿಯೆ ಇಲ್ಲವೋ ಆ ವರ್ತನೆ ಬಿಟ್ಟುಹೋಗುತ್ತದೆ. ಮೆಚ್ಚುಗೆ ಸಿಕ್ಕಿದ್ದು ಬೆಳೆಯುತ್ತದೆ. ಮಕ್ಕಳ ವಿಷಯ ಮಾತ್ರವಲ್ಲ, ದೊಡ್ಡವರ ವಿಷಯವೂ ಅಷ್ಟೇ. ಕುಂದನ್ನೇ ಕಾಣುವವರಿಂದ ಸಮಾಜಕ್ಕೆ ಲೇಸು ಉಂಟಾಗಲಾರದು.

ಸಮುದಾಯದ ಆದರ್ಶ ವ್ಯಕ್ತಿಗಳು ಯಾರಾಗಬೇಕು?

• ಉದಯ್ ಮೆಹೂರ್‌ಕರ್

ದೇಶವೊಂದು ಶ್ರೇಷ್ಠವಾಗಿ ಬೆಳೆಯಬೇಕಾದರೆ ಸಮಾಜದ ಪ್ರತಿಯೊಂದು ವರ್ಗಕ್ಕೂ ಆದರ್ಶ ವ್ಯಕ್ತಿಗಳು (ರೋಲ್ ಮಾಡೆಲ್)ಇರಬೇಕು. ಭಾರತದಲ್ಲಿ ಪ್ರತಿಯೊಂದು ಸಮುದಾಯ ಕೂಡಾ ತನ್ನದೇ ಆದ ಆದರ್ಶ ವ್ಯಕ್ತಿಗಳನ್ನು ಹೊಂದಿದೆ. ಇಂತಹ ಆದರ್ಶ ವ್ಯಕ್ತಿಗಳನ್ನು ಆ ಸಮುದಾಯದವರಷ್ಟೇ ಅಲ್ಲದೇ ಎಲ್ಲಾ ಸಮುದಾಯದವರೂ ಗೌರವಿಸುತ್ತಾರೆ, ಆರಾಧಿಸುತ್ತಾರೆ. ಉದಾಹರಣೆಗೆ ಗುಜರಾತಿನ ಮೂವರು ದಲಿತ ಸಂತರನ್ನು ಮೇಲ್ವರ್ಗದ ಜನರು ಕೂಡಾ ಗೌರವಿಸುತ್ತಾರೆ. ದಾಸಿ ಜೀವನ್, ತ್ರಿಕಾಮ ಸಾಹೇಬ್ ಮತ್ತು ಭಾನು ಸಾಹೇಬ್ ಎಂಬ ಈ ಮೂವರು ಸಂತರು ರಚಿಸಿದ ಭಜನೆಗಳನ್ನು ಗುಜರಾತಿನ ಪುಷ್ಟಿಮಾರ್ಗಿ ವೈಷ್ಣವ ದೇವಾಲಯಗಳಲ್ಲೂ ಹಾಡಲಾಗುತ್ತದೆ. ಮಹಾರಾಷ್ಟ್ರದಲ್ಲಿ ಕೂಡಾ ಪ್ರತಿಯೊಂದು ಸಮುದಾಯದಲ್ಲೂ ಸಂತವರೇಣ್ಯರು ಹುಟ್ಟಿಬಂದಿದ್ದಾರೆ. ಮಹಾರ್ ಜನಾಂಗದ ಚೋಕಮೇಳ ಅವರ ಅಭಂಗಗಳನ್ನು ಈಗಲೂ ಮಹಾರಾಷ್ಟ್ರದಲ್ಲಿ ಭಕ್ತಿಭಾವದಿಂದ ಹಾಡಲಾಗುತ್ತದೆ.

ಮಹಾರಾಷ್ಟ್ರದ 12ನೇ ಶತಮಾನದ ಶ್ರೇಷ್ಠ ಸಂತ ಚಕ್ರಧರ ಸ್ವಾಮಿ ಅಸ್ಪೃಶ್ಯತೆ ಆಚರಿಸುವುದರ ವಿರುದ್ಧ ಜನರಿಗೆ ಬೋಧಿಸುತ್ತಿದ್ದರು. ಅವರು ತಮ್ಮ ಬೋಧನೆಗಳನ್ನು ಹೇಳುತ್ತಾ ಪೇಶಾವರ ತನಕ ಪಾದಯಾತ್ರೆ ನಡೆಸಿದ್ದರು. ಅವರು ಮಹಾರಾಷ್ಟ್ರೀಯರಿಗಷ್ಟೇ ಅಲ್ಲದೆ ಇನ್ನಿತರ ರಾಜ್ಯಗಳಲ್ಲೂ ಗೌರವಕ್ಕೆ ಅರ್ಹರಾಗಿದ್ದಾರೆ. ಗುಜರಾತಿನಲ್ಲಿ ಕ್ಷತ್ರಿಯ ವೀರ ಭಾತಿ ಮಹಾರಾಜ್ ಮುಸ್ಲಿಂ ಮತಾಂಧರು ಗೋಹತ್ಯೆ ನಡೆಸುವುದನ್ನು ತಡೆಯಲು ಹೋಗಿ ಜೀವ ತೆತ್ತಿದ್ದರು. ಅವರ ಹೆಸರನ್ನು ಈಗಲೂ ಗುಜರಾತ್ ಮತ್ತು ರಾಜಸ್ಥಾನದಲ್ಲಿ ಸ್ಮರಿಸಲಾಗುತ್ತದೆ.

ತೋಮರ್ ರಜಪೂತ ದೊರೆ ರಾಜ ರಾಮದೇವ್ ಕೂಡಾ ಸಾಮಾಜಿಕ ಅನಿಷ್ಟಗಳ ವಿರುದ್ಧ ಜನರಿಗೆ ಬೋಧಿಸುತ್ತಿದ್ದರು. ಅವರ ಜನ್ಮದಿನವನ್ನು ಹರ್ಯಾಣ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಗುಜರಾತ್‌ನಲ್ಲಿ ಆಚರಿಸಲಾಗುತ್ತದೆ.ಈ ರಾಜ್ಯಗಳಲ್ಲಿ ಅವರ ಕೆಲವು ದೇವಾಲಯಗಳನ್ನೂ ಕಾಣಬಹುದು. ಅವರ ಹಿಂಬಾಲಕರಲ್ಲಿ ಹೆಚ್ಚಿನವರು ದಲಿತರು. ಉತ್ತರ ಪ್ರದೇಶದಲ್ಲಿ 14ನೇ ಶತಮಾನದ ರಾಜ ತ್ರಿಲೋಕ್ ಚಂದಿ ಸ್ವತಂತ್ರ ಹಿಂದು ರಾಜ್ಯವನ್ನು ಕಟ್ಟಿದವನು. ಆತನನ್ನು ಪೂರ್ವ ಉತ್ತರ ಪ್ರದೇಶದಲ್ಲಿ ಈಗಲೂ ಸ್ಮರಿಸಲಾಗುತ್ತದೆ. ಒಡಿಸ್ಸಾದಲ್ಲಿ ಸೂರ್ಯವಂಶಂ ಸಾಮ್ರಾಜ್ಯ ಕಟ್ಟಿದ ರಾಜ ಕಪಿಲೇಂದ್ರ ಅಲ್ಲಿನ ಜನರಿಗೆ ಈಗಲೂ ಆರಾಧ್ಯ ಪುರುಷ.

ಇಂತಹ ನಿಜವಾದ ಹೀರೋಗಳು ಸಮಾಜದ ಉನ್ನತಿಗೆ ಕಾರಣರಾದರೆ, ನಕಲಿ ಹೀರೋಗಳು ಸಮಾಜವನ್ನು ಅವನತಿಗೆ ಕೊಂಡೊಯ್ಯಬಲ್ಲರು. ಉದಾಹರಣೆಗೆ ನಮ್ಮ ಬಾಲಿವುಡ್ ಹೀರೋಗಳು. ಭಾರತದ ಕೋಟ್ಯಂತರ ಯುವಕರು ಈ ಬಾಲಿವುಡ್ ಹೀರೋಗಳನ್ನೇ ತಮ್ಮ ರೋಲ್ ಮಾಡೆಲ್‌ಗಳೆಂದು ಆರಾಧಿಸುತ್ತಾರೆ. ಕೆಲವೊಮ್ಮೆ ಅವರನ್ನು ದೇವರಂತೆ ಕಾಣುವುದೂ ಇದೆ. ಆದರೆ ನಿಜ ಜೀವನದಲ್ಲಿ ಈ ಹೀರೋಗಳು ನಕಾರಾತ್ಮಕ ನಡೆ-ನುಡಿಗಳನ್ನು ಹೊಂದಿರುತ್ತಾರೆ. ತಾನು ಹಸುವಿನ ಮಾಂಸ ತಿನ್ನುವುದಾಗಿ ಬಹಿರಂಗವಾಗಿ ಘೋಷಿಸಿದ ಹಿಂದಿ ಚಿತ್ರನಟನೊಬ್ಬ ಈಗ ಶ್ರೀರಾಮಾಯಣ ಚಿತ್ರದಲ್ಲಿ ಶ್ರೀರಾಮನಪಾತ್ರ ವಹಿಸಲು ತಯಾರಾಗಿದ್ದಾನೆ. ಸಣ್ಣ ಮಕ್ಕಳು ಆತನನ್ನೇ ಶ್ರೀರಾಮನಂತೆ ಪರಿಗಣಿಸಲಾರಂಭಿಸಿದರೆ ಅದರ ಪರಿಣಾಮವು ಏನಾಗಬಹುದೆಂದು ಊಹಿಸಬಹುದು. ಅದು ನಮ್ಮ ಸಂಸ್ಕೃತಿಗೆ ಪ್ರತಿಕೂಲವಾಗಬಹುದು.

ಭಾರತದಲ್ಲಿ ಇದೀಗ 'ನಿಜವಾದ' ಆದರ್ಶ ವ್ಯಕ್ತಿಗಳು ಅತ್ಯಗತ್ಯವಾಗಿ ಬೇಕಾಗಿರುವ ಸಮುದಾಯವೆಂದರೆ ಮುಸ್ಲಿಂ ಸಮುದಾಯ. ಮುಸ್ಲಿಂ ಸಮುದಾಯದಲ್ಲಿ ನಿಜವಾದ ರೋಲ್ ಮಾಡೆಲ್‌ಗಳ ಕೊರತೆ ಇದೆ. ಉಗ್ರವಾದಿ ಮನಸ್ಥಿತಿಯವರನ್ನು, ಭಾರತದ ಮೇಲೆ ಆಕ್ರಮಣವೆಸಗಿದವರನ್ನು ಹೀರೋಗಳೆಂದು ಬಿಂಬಿಸಲಾಗುತ್ತಿದೆ. ಭಾರತದಲ್ಲಿ ವಹಾಬಿ ಆಂದೋಲನವು ಮಧ್ಯಯುಗದ ಉಗ್ರವಾದಿ ಮುಸ್ಲಿಂ ವ್ಯಕ್ತಿಗಳನ್ನೇ ತನ್ನ ಹೀರೋಗಳೆಂದು ಪ್ರತಿಬಿಂಬಿಸುತ್ತದೆ. (ಕಾಂಗ್ರೆಸ್ ಪಕ್ಷವು ಸ್ವಾತಂತ್ರ್ಯನಂತರ ತನ್ನದೇ ಸ್ವಾರ್ಥ ಸಾಧನೆಗಾಗಿ ಈ ವಹಾಬಿ ಆಂದೋಲನವನ್ನು ಬೆಂಬಲಿಸುತ್ತಾ ಬಂದಿದೆ.) ಮಧ್ಯಯುಗದ ಈ 'ವಿಭಜನಾವಾದಿ ಹೀರೋಗಳು' ಭಾರತೀಯ ಮುಸ್ಲಿಮರು ಹಿಂದುಗಳ ವಿರುದ್ಧ ಜಿಹಾದ್ ಸಾರುವಂತೆ ಬಹಿರಂಗವಾಗಿ ಕರೆ ನೀಡುತ್ತಾ ಬಂದವರು. ಇದಕ್ಕೊಂದು ಉದಾಹರಣೆ ಉಗ್ರವಾದಿ ಮುಸ್ಲಿಂ ಬೋಧಕ ಶಾ ವಲಿಲುಲ್ಲಾ. ಆತ 1766ರಲ್ಲಿ ಅಫಘಾನಿಸ್ಥಾನದ ಆಕ್ರಮಣಕಾರ ಅಹಮ್ಮದ್ ಷಾ ಅಬ್ದಾಲಿಗೆ ಪತ್ರ ಬರೆದು ಭಾರತದ ಮೇಲೆ ದಂಡೆತ್ತಿ ಬರುವಂತೆ ಕೋರಿದ್ದ. ಭಾರತದಲ್ಲಿನ ಮರಾಠರನ್ನು ಸೋಲಿಸಿ ಹಿಂದುಸ್ಥಾನದಲ್ಲಿ ಇಸ್ಲಾಮಿಕ್ ಸಾಮ್ರಾಜ್ಯ ಸ್ಥಾಪಿಸುವಂತೆ ಆತ ತನ್ನ ಪತ್ರದಲ್ಲಿ ಬರೆದಿದ್ದ.


ಶಾ ವಲಿಲುಲ್ಲಾ

ದೇವಬಂದ ಮೌಲ್ವಿಗಳು ಮತ್ತೊಬ್ಬ ವ್ಯಕ್ತಿಯನ್ನು ಹೀರೋನನ್ನಾಗಿಬಿಂಬಿಸಿದ್ದಿದ್ದೆಂದರೆ 1831ರ ಬಾಲಾಕೋಟ್ ಯುದ್ಧದಲ್ಲಿ ಸಿಕ್ಖರ ವಿರುದ್ಧ ಜಿಹಾದ್ ಸಾರಿ ಮೃತಪಟ್ಟ ಸೈಯದ್ ಅಹಮದಾಬಾದ್ ಬರೇಲ್ವಿಯನ್ನು. ಬರೇಲ್ವಿಯ ಸೈದ್ಧಾಂತಿಕ ಅನುಯಾಯಿಯಾದ ಷಾ ಇಸ್ಮಾಯಿಲ್ ದಹಾಲ್ವಿ ಎಂಬಾತ ಕೂಡಾ ತನ್ನ ಪುಸ್ತಕದಲ್ಲಿ ಸೂಫಿ ಪಂಥ ಮತ್ತು ಹಿಂದು ಧರ್ಮವನ್ನು ಕಟುವಾಗಿ ಟೀಕಿಸಿದ್ದಾನೆ. ಆತನನ್ನು ದೇವಬಂದಿಗಳು ಹೀರೋ ಎಂಬಂತೆ ಪರಿಗಣಿಸುತ್ತಾರೆ.ಆತ ಕೂಡಾ ಬಾಲಾಕೋಟ್ ಯುದ್ಧದಲ್ಲಿ ಸಾವಿಗೀಡಾಗಿದ್ದ. ದುರಂತವೆಂದರೆ ಭಾರತದ ಪ್ರಥಮ ಶಿಕ್ಷಣ ಮಂತ್ರಿ ಮೌಲಾನಾ ಅಬುಲ್ ಕಲಾಂ ಆಜಾದ್ ಕೂಡಾ ಈತನನ್ನು ಶ್ಲಾಘಿಸಿದ್ದರು. ವಿಪರ್ಯಾಸವೆಂದರೆ ಅವರು ಉದಾರ ವಾದಿಯಾದ ಅಕ್ಬರ್‌ನನ್ನು ಟೀಕಿಸಿದ್ದರು. ಅವರಷ್ಟೇ ಅಲ್ಲ, ದೇವಬಂದಿ-ವಹಾಬಿ ಮದ್ರಸಾಗಳಲ್ಲಿ ಕೂಡಾ ಅಕ್ಬರ್‌ನನ್ನು ದ್ವೇಷಿಸಲಾಗುತ್ತದೆ.

ಮತಾಂತರಗೊಂಡ ಮುಸ್ಲಿಮರನ್ನು ಆರ್ಯ ಸಮಾಜವು ಮರಳಿ ಮಾತೃಧರ್ಮಕ್ಕೆ ಕರೆ ತರುವ ಪ್ರಕ್ರಿಯೆಯಲ್ಲಿ ತೊಡಗಿದ್ದಾಗ ವಹಾಬಿ ಮೌಲ್ವಿಗಳು ಇದನ್ನು ತಡೆಯಲೆಂದು ಮಹಾತ್ಮಾಗಾಂಧಿ ಮತ್ತು ಕಾಂಗ್ರೆಸ್ ಜತೆ 20ರ ಶತಮಾನದ ಆರಂಭದಲ್ಲಿ ಕೈಜೋಡಿಸಿದ್ದರು. ಹಿಂದುಗಳನ್ನು ಮರಳಿ ಮಾತೃಧರ್ಮಕ್ಕೆ ಕರೆತರುವ ಕ್ರಮ ಜರುಗಿಸದಂತೆ ಕಾಂಗ್ರೆಸ್ ಮುಖಾಂತರವಾಗಿ ಆರ್ಯ ಸಮಾಜದ ಮೇಲೆ ಒತ್ತಡ ಹೇರಿದ್ದರು.

ದೇವಬಂದಿ ಮುಖಂಡರ ಒಂದು ಬಣವು ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸಿನೊಂದಿಗೆ ಕೈಜೋಡಿಸಿತ್ತು. ಅದಕ್ಕೆ ಕಾರಣ ಬ್ರಿಟಿಷರು ಮುಸ್ಲಿಮರಿಗೆ ಕೂಡಾ ಸಮಾನ ವೈರಿಯಾಗಿದ್ದುದು. ಇವರಲ್ಲಿ ಜೆಯುಎಚ್ ಸ್ಥಾಪಕ ಮೌಲಾನಾ ಹುಸೇನ್ ಅಹ್ಮದ್ ಮದನಿ ಕೂಡಾ ಸೇರಿದ್ದಾರೆ. ಈ ಮದನಿ ಔರಂಗಜೇಬನನ್ನು ಹೊಗಳಿದ್ದವರು ಹಾಗೂ ಔರಂಗಜೇಬನ ಉದಾರವಾದಿ ಸೋದರ ಧಾರ ಶುಕೋನನ್ನು ಟೀಕಿಸಿದ್ದವರು.

ಜಿನ್ನಾ ತಮ್ಮ ಇಸ್ಲಾಂ ವಿಸ್ತರಣೆಯ ಕಾರ್ಯವನ್ನು ಪಾಕಿಸ್ತಾನ ನಿರ್ಮಾಣಕ್ಕಷ್ಟೇ ಸೀಮಿತಗೊಳಿಸಿದ್ದಕ್ಕಾಗಿಯೂ ಮದನಿಯವರು ಜಿನ್ನಾರನ್ನು ಟೀಕಿಸಿದ್ದರು. ಇಡೀ ಭಾರತವನ್ನೆ ಇಸ್ಲಾಮ್‌ನ ಅಡಿ ತರಬೇಕೆಂದು ಅವರು ಬಯಸಿದ್ದರು. ಈ ರೀತಿ ಕಾಂಗ್ರೆಸ್‌ನೊಂದಿಗೆ ಸೇರಿದ್ದ ದೇವಬಂದಿ ಮುಖಂಡರು ಇಡೀ ಭಾರತವು ಇಸ್ಲಾಂ ಆಗಬೇಕೆಂದು ಬಯಸಿದ್ದರು ಹಾಗೂ ಜಿನ್ನಾನ ಪಾಕಿಸ್ತಾನ ಆಂದೋಲನವು ಈ ನಿಟ್ಟಿನಲ್ಲಿ ಒಂದು ಅಡ್ಡಿ ಎಂದು ಭಾವಿಸಿದ್ದರು.

ಸಮುದಾಯವೊಂದು ಗುಣಾತ್ಮಕ ವ್ಯಕ್ತಿಗಳನ್ನು ಆದರ್ಶ ವ್ಯಕ್ತಿಯನ್ನಾಗಿ ಸ್ವೀಕರಿಸಿದಾಗ ಅದು ರಾಷ್ಟ್ರದ ಉನ್ನತಿಗೂ ಸಹಕಾರಿಯಾಗುತ್ತದೆ.

ರಾಹುಲ್ ವಿರುದ್ಧ ಪಿಯೂಷ್ ಗೊಯಲ್ ಕಿಡಿ

ರಾಹುಲ್ ವಿದೇಶಿ ಶಕ್ತಿಗಳ ಕೈಗೊಂಬೆ



ಹೊಸದಿಲ್ಲಿ: ಪ್ರಧಾನಿ ಮೋದಿಯವರು ದೇಶಹಿತದ ವಿಷಯದಲ್ಲಿ ಎಂದೂ ರಾಜಿ ಮಾಡಿಕೊಳ್ಳುವ ಪ್ರಶ್ನೇ ಇಲ್ಲ. ಆದರೆ ರಾಹುಲ್ ಗಾಂಧಿ,ಅವರ ಗಾಂಧಿ ಕುಟುಂಬ ಮತ್ತು ಕಾಂಗ್ರೆಸ್ ವಿದೇಶಿ ಶಕ್ತಿಗಳ ಕೈಗೊಂಬೆಯಾಗಿ ಈಗ ದೇಶದಲ್ಲಿ ಕಾರ್ಯಾಚರಿಸುವ ಮೂಲಕ ದೇಶಹಿತದೊಂದಿಗೆ ರಾಜಿ ಮಾಡಿಕೊಳ್ಳುತ್ತಿರುವುದೇ ವಾಸ್ತವ ಸಂಗತಿ ಎಂದು ವಾಣಿಜ್ಯೋದ್ಯಮ ಸಚಿವ ಪಿಯೂಷ್ ಗೋಯಲ್ ತರಾಟೆಗೆತ್ತಿಕೊಂಡಿದ್ದಾರೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಪ್ರಧಾನಿ ನರೇಂದ್ರ ಮೋದಿಯವರನ್ನು 'ರಾಜಿಮಾಡಿಕೊಂಡ ಪ್ರಧಾನಿ'ಎಂದಿರುವುದಕ್ಕೆ ಆಕ್ಷೇಪಣೆ ವ್ಯಕ್ತಪಡಿಸಿದ್ದಾರೆ.

ಭಾರತ–ಅಮೆರಿಕ ನಡುವಿನ ವ್ಯಾಪಾರ ಒಪ್ಪಂದದ ಬಗ್ಗೆ ರಾಹುಲ್ ಗಾಂಧಿ ಒಟ್ಟಾರೆಯಾಗಿ ಟೀಕಿಸುತ್ತಿರುವುದಕ್ಕೆ ಪ್ರತಿಕ್ರಿಯಿಸಿದ ಗೊಯಲ್ ಅವರು, ರಾಹುಲ್ ಗಾಂಧಿ ಈ ರೀತಿಯಾಗಿ ದೇಶ ಮತ್ತು ವಿಶ್ವದ ಮುಂದೆ ನಿಯಂತ್ರಣವಿಲ್ಲದೆ ದಾರ್ಷ್ಟ್ಯದ ರಾಜಕೀಯ ನಡೆಸುತ್ತಿದ್ದಾರೆ. ಸಂಸತ್ತಿರಲಿ, ಹೊರಗಡೆ ಇರಲಿ ಅಥವಾ ಪತ್ರಿಕಾಗೋಷ್ಠಿಯೇ ಇರಲಿ ರಾಹುಲ್ ಗಾಂಧಿ ಮತ್ತು ಗಾಂಧಿ ಕುಟುಂಬ ಇಂದು ನಡೆದುಕೊಳ್ಳುತ್ತಿರುವ ರೀತಿ ಅವರು ಪೂರ್ಣವಾಗಿ ವಿದೇಶಿ ಶಕ್ತಿಗಳ, ರಾಷ್ಟ್ರ ಘಾತಕ ಶಕ್ತಿಗಳ ಮತ್ತು ಭಾರತ ವಿರೋಧಿ ಸಂಘಟನೆಗಳ ಕೈಗೊಂಬೆಯಾಗಿ ದೇಶಹಿತದೊಂದಿಗೆ ರಾಜಿ ಮಾಡಿಕೊಂಡಿದ್ದಾರೆ ಎಂಬುದನ್ನು ಎತ್ತಿತೋರಿಸುತ್ತಿದೆ.

ರಾಹುಲ್‌ಗಾಂಧಿ ರಾಷ್ಟ್ರಹಿತದ ವಿಷಯದಲ್ಲೂ ಚೆಲ್ಲಾಟ ಆಡುತ್ತಿದ್ದಾರೆ ಮತ್ತು ದೇಶದ ಜನತೆಯ ಹಿತಾಸಕ್ತಿಗಳನ್ನೇ ಅಪಾಯಕ್ಕೊಡ್ಡುತ್ತಿದ್ದಾರೆ ಎಂಬುದು ದುರಂತ. ಅವರಿಗೆ ಪ್ರಧಾನಿ ನರೇಂದ್ರ ಮೋದಿಯವರ ಜನಪ್ರಿಯತೆಯನ್ನು, ಹೊಸ ಆರ್ಥಿಕ ಪ್ರಗತಿಯನ್ನು ಮತ್ತು ಜಾಗತಿಕ ಶಕ್ತಿಯಾಗಿ ಭಾರತ ಮೂಡಿಬರುತ್ತಿರುವುದನ್ನು ಸಹಿಸಿಕೊಳ್ಳಲು ಅರಗಿಸಿಕೊಳ್ಳಲಾಗುತ್ತಿಲ್ಲ. ಆದ್ದರಿಂದಲೇ ಅವರು ಮತ್ತೆ ಮತ್ತೆ ದೇಶದ ಹಿತದೊಂದಿಗೆ ರಾಜಿ ಎಂದು ಮೋದಿಯವರ ವಿರುದ್ಧ ಪದೇಪದೆ ಸುಳ್ಳಿನ ಮೇಲೆ ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ.

ದೇಶವನ್ನು ದಶಕಗಳ ಕಾಲ ಆಳಿದ ಈ ಗಾಂಧಿ ಕುಟುಂಬ ದೇಶಹಿತದೊಂದಿಗೆ ರಾಜಿ ಮಾಡುತ್ತಲೇ ಬಂದಿದ್ದರಿಂದ ಭಾರತ ಇಂದು ಅನೇಕ ಸವಾಲುಗಳನ್ನು ಎದುರಿಸಬೇಕಾಗಿ ಬಂದಿದೆ. ಮನಮೋಹನ್ ಸಿಂಗ್ ಸರಕಾರವನ್ನೇ ಉದಾಹರಣೆಗೆ ತೆಗೆದುಕೊಂಡರೂ, ರಾಹುಲ್ ಗಾಂಧಿ ಮತ್ತು ಸೋನಿಯಾ ಗಾಂಧಿ ಅವರು ಪ್ರಧಾನಿ ಮನಮೋಹನ್ ಸಿಂಗ್ ಅವರನ್ನು ಮೀರಿ ಸಂವಿಧಾನೇತರ ಅಧಿಕಾರ ಕೇಂದ್ರಗಳಂತೆ ಕಾರ್ಯಾಚರಿಸಿದ್ದನ್ನು ಉಲ್ಲೇಖಿಸಿದರು. ಭಾರತ ಸರಕಾರದ ಸಂಪುಟ ಸಭೆಯ ನಿರ್ಧಾರಗಳನ್ನೂ ಅವರು ಬೀದಿಯಲ್ಲಿ ಹರಿದೆಸೆದರು. ಪ್ರಧಾನಿಯವರನ್ನು ಅಗೌರವದಿಂದ ಕಂಡರು. ರಾಷ್ಟ್ರೀಯ ಸಲಹಾ ಮಂಡಳಿ ಮೂಲಕ ಅವರು ಮನಮೋಹನ್ ಸಿಂಗ್ ಸರಕಾರದ ಮೇಲೆ ನಿಯಂತ್ರಣ ಸಾಧಿಸಿದರು. ದೇಶದ ಮೇಲೆ ಎಡಪಂಥೀಯ ಸಿದ್ಧಾಂತಗಳನ್ನು ಹೇರಿದರು.

ರಕ್ಷಣಾ ಹಗರಣಗಳಲ್ಲಿ ನೆಹರೂ -ಗಾಂಧಿ ಕುಟುಂಬದ ಪಾತ್ರ: ನೆಹರೂ -ಗಾಂಧಿ ಕುಟುಂಬ ರಕ್ಷಣಾ ಜೀಪು ಹಗರಣದಿಂದ ಹಿಡಿದು ಬೊಫೋರ್ಸ್ ಹಗರಣಗಳನ್ನು ಎಸಗಿದ್ದಲ್ಲದೆ, ರಾಹುಲ್‌ಗಾಂಧಿ ಪರವಾಗಿ ಅಂದಿನ ವಿದೇಶಾಂಗ ಸಚಿವರು ಬೊಫೋರ್ಸ್ ಹಗರಣದ ತನಿಖೆಯನ್ನೇ ನಿಲ್ಲಿಸುವಂತೆ ಸ್ವೀಡೀಷ್ ಸರಕಾರದ ಮೇಲೆ ಒತ್ತಡ ಹೇರಿದರು. ತಮ್ಮ ಕುಟುಂಬದ ಮಿತ್ರ ಒಟ್ಟಾವಿಯೋ ಖಿಟ್ರೋಚ್ಚಿಯನ್ನು ರಕ್ಷಿಸಲು ಈ ಹಗರಣದ ತನಿಖೆಯನ್ನು ನಿಲ್ಲಿಸುವಂತೆ ಮಾಡುವ ಮೂಲಕ ದೇಶದ ರಕ್ಷಣೆಯಂತಹ ವಿಷಯದಲ್ಲೇ ರಾಜಿ ಮಾಡಿಕೊಂಡಿದ್ದನ್ನು ಅವರು ನೆನಪಿಸಿದರು.




ದೇಶದಲ್ಲಿ ಮಹಿಳೆಯರಲ್ಲಿ ಕ್ಯಾನ್ಸರ್ ಸಂಬಂಧಿತ ಸಾವುಗಳಿಗೆ ಪ್ರಮುಖ ಕಾರಣಗಳಲ್ಲಿ ಗರ್ಭಕಂಠದ ಕ್ಯಾನ್ಸರ್ ಒಂದು. ಈ ಕಾಯಿಲೆ ಪ್ರಮಾಣವನ್ನು ಕಡಿಮೆ ಮಾಡುವ ಗುರಿ ಹೊಂದಿರುವ ಮಹತ್ವಾಕಾಂಕ್ಷೆಯ ರಾಷ್ಟ್ರವ್ಯಾಪಿ ಹ್ಯೂಮನ್ ಪ್ಯಾಪಿಲೋಮವೈರಸ್ (ಎಚ್‌ಪಿವಿ) ವ್ಯಾಕ್ಸಿನೇಷನ್ ಕಾರ್ಯಕ್ರಮವನ್ನು ಪ್ರಾರಂಭಿಸಲು ಭಾರತ ಸರ್ಕಾರ ಸಜ್ಜಾಗಿದೆ. ಈ ಯೋಜನೆ ವಿಶಾಲ ದೃಷ್ಟಿಕೋನವುಳ್ಳ ಸ್ವಸ್ಥ್ಯ ನಾರಿ ಸಶಕ್ತ್ ಪರಿವಾರ್ ಮಿಷನ್‌ನ ಭಾಗವಾಗಿದ್ದು, 14 ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಬಾಲಕಿಯರಿಗೆ ಎಚ್‌ಪಿವಿ ಲಸಿಕೆಯನ್ನು ಉಚಿತವಾಗಿ ನೀಡಲಾಗುವುದು.

ಸ್ವಸ್ಥ ನಾರಿ ಅಭಿಯಾನ

ಲಸಿಕೆ ವಿವರಗಳು

ಕಾರ್ಯಕ್ರಮದಡಿಯಲ್ಲಿ, ಅರ್ಹ ಬಾಲಕಿಯರು ಗಾರ್ಡಸಿಲ್ ಎಚ್‌ಪಿವಿ ಲಸಿಕೆ ಸ್ವೀಕರಿಸುತ್ತಾರೆ. ಇದು ನಾಲ್ಕು ಎಚ್‌ಪಿವಿ ವಿಧಗಳ ವಿರುದ್ಧ ರಕ್ಷಿಸುವ ಕ್ವಾಡ್ರಿವೆಲೆಂಟ್ ಚುಚ್ಚುಮದ್ದಾಗಿದ್ದು, ಇದು ಜನನಾಂಗದ ಭಾಗಕ್ಕೆ ಸಂಬಂಧಿಸಿದ 6 ಮತ್ತು 11 ನೇ ವಿಧಗಳು ಸೇರಿದಂತೆ, ಹೆಚ್ಚಿನ ಗರ್ಭಕಂಠದ ಕ್ಯಾನ್ಸರ್ ಪ್ರಕರಣಗಳಿಗೆ ಸಂಬಂಧಿಸಿದ ವಿಧ 16 ಮತ್ತು 18 ನ್ನು ತಡೆಯುತ್ತದೆ. ಸಾರ್ವಜನಿಕ ಆರೋಗ್ಯ ಅಧಿಕಾರಿಗಳ ಪ್ರಕಾರ, 14 ನೇ ವಯಸ್ಸಿನಲ್ಲಿ ಲಸಿಕೆಯನ್ನು ನೀಡುವುದು–ಎಚ್‌ಪಿವಿಯಿಂದ ಬಲವಾದ ರಕ್ಷಣೆ ನೀಡುತ್ತದೆ. ಇದು ಜಾಗತಿಕ ಶಿಫಾರಸು ಹೊಂದಿದೆ ಎಂಬುದು ಗಮನಾರ್ಹ.

ಗರ್ಭಕಂಠದ ಕ್ಯಾನ್ಸರ್ ವಿರುದ್ಧ ರಾಷ್ಟ್ರವ್ಯಾಪಿ ಎಚ್‌ಪಿವಿ ಲಸಿಕಾ ಅಭಿಯಾನ



ಸುದ್ದಿ ಸಮಗ್ರ

ರೋಗ ನಿರೋಧಕ ರಕ್ಷಣೆ

ಜಾಗತಿಕ ಮತ್ತು ಭಾರತೀಯ ಸಂಶೋಧನೆಯಿಂದ ವಿಕಸನಗೊಂಡಿರುವ ಒಂದೇ ಡೋಸ್ ವೇಳಾಪಟ್ಟಿಯ ಆಯ್ಕೆ ಹದಿಹರೆಯದವರಿಗೆ ರೋಗನಿರೋಧಕ ರಕ್ಷಣೆ ನೀಡುವ ಬಗ್ಗೆ ಬಲವಾದ ಪುರಾವೆಗಳಿವೆ. ಇದು ಸಾಮೂಹಿಕ ರೋಗನಿರೋಧಕ ವ್ಯವಸ್ಥೆಗಳಲ್ಲಿ ಜಾಗತಿಕ ಸಹಕಾರದ ಒಂದು ಭಾಗವೂ ಹೌದು.

ಆರೋಗ್ಯ ವ್ಯವಸ್ಥೆ ಬಲಕ್ಕೆ ಆದ್ಯತೆ

ಈ ಸಮಗ್ರ ಆರೋಗ್ಯ ಅಭಿಯಾನದಲ್ಲಿ ಎಚ್‌ಪಿವಿ ಲಸಿಕೆಯನ್ನು ಸೇರಿಸುವ ಮೂಲಕ, ಸಮುದಾಯ ಮಟ್ಟದ ಆರೋಗ್ಯ ವ್ಯವಸ್ಥೆಗಳನ್ನು ಬಲಪಡಿಸಲು ಮತ್ತು ಆರಂಭದಲ್ಲೇ ರೋಗವನ್ನು ತಡೆಗಟ್ಟುವ ಕ್ರಮಗಳನ್ನು ಉತ್ತೇಜಿಸಲು ಸರ್ಕಾರ ಉದ್ದೇಶಿಸಿದೆ. ಈ ಯೋಜನೆ, ಸಾಂಕ್ರಾಮಿಕವಲ್ಲದ ಕಾಯಿಲೆಗಳು ಮತ್ತು ಸಾಂಕ್ರಾಮಿಕ ರೋಗಗಳ ಬಗ್ಗೆ ಅರಿವು ಮೂಡಿಸುವುದು ಸೇರಿದಂತೆ, ಇತರ ಸಮಸ್ಯೆಗೂ ಸ್ಕ್ರೀನಿಂಗ್ ಮೊದಲಾದ ಪರಿಹಾರ ಕಲ್ಪಿಸುತ್ತಿದೆ.

ಲಸಿಕೆ ಎಲ್ಲಿ ದೊರೆಯುತ್ತದೆ?

ಲಸಿಕೆ ಸ್ವಯಂಪ್ರೇರಿತವಾಗಿರುತ್ತದೆ ಮತ್ತು ರಾಷ್ಟ್ರವ್ಯಾಪಿ ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳು ಸೇರಿದಂತೆ ಗೊತ್ತುಪಡಿಸಿದ ಸರ್ಕಾರಿ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ನೀಡಲಾಗುತ್ತದೆ. ಶಿಫಾರಸು ಮಾಡಿದ ವಯಸ್ಸಿನಲ್ಲಿ ನೀಡಿ ದಾಗ ಗರ್ಭಕಂಠದ ಕ್ಯಾನ್ಸರ್ ಅನ್ನು ತಡೆಗಟ್ಟುವಲ್ಲಿ ಅದರ ಪರಿಣಾಮ ಹೆಚ್ಚಿರುತ್ತದೆ ಎಂದು ವೈಜ್ಞಾನಿಕ ಪುರಾವೆಗಳು ತಿಳಿಸಿವೆ. ಈಗ ಏಕ–ಡೋಸ್ ವಿಧಾನ ಎಲ್ಲೆಡೆ ಪಾಲಿಸಲಾಗುತ್ತದೆ.


ಪ್ರಮುಖ ಆರೋಗ್ಯ ಯೋಜನೆ

ಎಚ್‌ಪಿವಿ ಲಸಿಕಾ ಅಭಿಯಾನ, ''ಸ್ವಸ್ಥ್ಯ ನಾರಿ ಸಶಕ್ತ್ ಪರಿವಾರ್ ಅಭಿಯಾನ'' ದ ಪ್ರಮುಖ ಅಂಶ. ಆರೋಗ್ಯ ಸಚಿವಾಲಯದ ಮೂಲಗಳು, ಭಾರತದಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲೆ ಕೇಂದ್ರೀಕರಿಸಿದ ಅತಿದೊಡ್ಡ ಆರೋಗ್ಯ ಯೋಜನೆ ಇದೆಂದು ಬಣ್ಣಿಸಿವೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯಗಳು ಜಂಟಿಯಾಗಿ ದೇಶಾದ್ಯಂತ ರೋಗ ತಡೆಗಟ್ಟುವ, ಪ್ರಚಾರ ಮಾಡುವ ಮತ್ತು ಗುಣಪಡಿಸುವ ಸೇವೆಗಳನ್ನು ನೀಡುವ ವ್ಯಾಪಕ ಆರೋಗ್ಯ ಶಿಬಿರಗಳನ್ನು ಈ ಹಿಂದೆಯೂ ಆಯೋಜಿಸಿವೆ.

ಸಾರ್ವಜನಿಕ ಆರೋಗ್ಯವೆಂಬ ಸವಾಲು

ಗರ್ಭಕಂಠದ ಕ್ಯಾನ್ಸರ್ ಭಾರತದಲ್ಲಿ ಪ್ರಮುಖ ಸಾರ್ವಜನಿಕ ಆರೋಗ್ಯ ಸವಾಲಾಗಿ ಉಳಿದಿದೆ. ಇದರಿಂದ ಮಹಿಳೆಯರಲ್ಲಿ ಕ್ಯಾನ್ಸರ್ ಪತ್ತೆ ಮಾತ್ರವಲ್ಲದೆ, ಮರಣದ ಪ್ರಮಾಣವೂ ಹೆಚ್ಚಲು ಕಾರಣವಾಗಿದೆ. ಹೆಚ್ಚಿನ ಅಪಾಯದ ಎಚ್‌ಪಿವಿ ವಿಧಗಳನ್ನು ಗಮನಿಸಿದಾಗ ನಿರಂತರವಾದ ಸೋಂಕು ಬಹುಪಾಲು ಗರ್ಭಕಂಠದ ಕ್ಯಾನ್ಸರ್‌ಗಳಿಗೆ ಕಾರಣವಾಗುತ್ತದೆ, ಎಂದು ತಿಳಿದುಬಂದಿದೆ. ಎಚ್‌ಪಿವಿ ಲಸಿಕೆ, ಸೋಂಕಿನ ಪ್ರಮಾಣ ಮತ್ತು ಭವಿಷ್ಯದಲ್ಲಿ ಕ್ಯಾನ್ಸರ್ ಪ್ರಕರಣಗಳನ್ನು ಗಣನೀಯವಾಗಿ ಕಡಿಮೆ ಮಾಡುತ್ತದೆ, ಎಂದು ನಿರೀಕ್ಷಿಸಲಾಗಿದೆ.

- ಎಚ್‌ಪಿವಿ ವ್ಯಾಕ್ಸಿನೇಷನ್ ಅಭಿಯಾನ– ಒಂದು ನೋಟದಲ್ಲಿ
- ಮಹಿಳೆಯರು ಮತ್ತು ಮಕ್ಕಳಿಗಾಗಿ 'ಸ್ವಸ್ಥ ನಾರಿ ಸಶಕ್ತ್ ಪರಿವಾರ' ಆರೋಗ್ಯ ಅಭಿಯಾನದ ಭಾಗ.
- ಯಾರು ಅರ್ಹರು– 14 ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಬಾಲಕಿಯರು
- ಲಸಿಕೆ ಯಾವುದು– ಗಾರ್ಡಸಿಲ್, ಪ್ರಮುಖ ಕ್ಯಾನ್ಸರ್–ಕಾರಕಗಳ ವಿರುದ್ಧ ರಕ್ಷಿಸುವ ಕ್ವಾಡ್ರಿವೆಲೆಂಟ್ ಎಚ್‌ಪಿವಿ ಲಸಿಕೆ.
- ವೆಚ್ಚ– ಎಲ್ಲಾ ಅರ್ಹರಿಗೂ ಚುಚ್ಚುಮದ್ದು ಉಚಿತ ಮತ್ತು ಸ್ವಯಂಪ್ರೇರಿತ.
- ಉದ್ದೇಶ– ಭವಿಷ್ಯದಲ್ಲಿ ಗರ್ಭಕಂಠದ ಕ್ಯಾನ್ಸರ್ ಸಂಭವಿಸುವಿಕೆಯನ್ನು ಕಡಿಮೆ ಮಾಡುವುದು



ಮುಂಬರುವ ವಾರಗಳಲ್ಲಿ ರಾಜ್ಯಾದ್ಯಂತ ಸರ್ಕಾರಿ ಆರೋಗ್ಯ ಸೌಲಭ್ಯಗಳ ಮೂಲಕ ಲಸಿಕೆ ಒದಗಿಸುವ ಮೂಲಕ ಈ ಅಭಿಯಾನವನ್ನು ರಾಷ್ಟ್ರವ್ಯಾಪಿ ಪ್ರಾರಂಭಿಸಲು ಅಧಿಕಾರಿಗಳು ಯೋಜಿಸಿದ್ದಾರೆ. ಕಾರ್ಯ ಕ್ರಮದ

ಅನುಷ್ಠಾನ ಹೇಗೆ?

ಸ್ವಯಂಪ್ರೇರಿತ ಸ್ವರೂಪ ಮತ್ತು ವೆಚ್ಚಕ್ಕೆ ಇರುವ ಅಡೆತಡೆಗಳನ್ನು ತೆಗೆದುಹಾಕುವ ಮೂಲಕ ಸಮಾಜದ ಎಲ್ಲರಿಗೂ ಯೋಜನೆ ತಲುಪುವುದನ್ನು ಖಚಿತಪಡಿಸಿಕೊಳ್ಳಲು ಇದನ್ನು ವಿನ್ಯಾಸಗೊಳಿಸಲಾಗಿದೆ. ಪೋಷಕ ಆರೈಕೆ ಒದಗಿಸಲು ಮತ್ತು ಪೋಷಕರ ವಿಶ್ವಾಸವನ್ನು ಹೆಚ್ಚಿಸಲು ಚುಚ್ಚುಮದ್ದು ಕೊಡುವ ಸ್ಥಳಗಳನ್ನು ಅಸ್ತಿತ್ವದಲ್ಲಿರುವ ಆರೋಗ್ಯ ಮೂಲಸೌಕರ್ಯಗಳೊಂದಿಗೆ ಸಂಪರ್ಕಿಸುವ ಪ್ರಯತ್ನ ನಡೆಯುತ್ತಿದೆ. ಆರೋಗ್ಯ ಅಧಿಕಾರಿಗಳು ಚುಚ್ಚುಮದ್ದು ತೆಗೆದುಕೊಳ್ಳುವವರ ಆರೈಕೆ ಮತ್ತು ಪರಿಣಾಮವನ್ನು ಮೇಲ್ವಿಚಾರಣೆ ಮಾಡುವ ಯೋಜನೆಯಿದೆ. ಭವಿಷ್ಯದಲ್ಲಿ ಸಾಮಾನ್ಯ ಸಾರ್ವಜನಿಕ ಆರೋಗ್ಯ ಕಾರ್ಯಕ್ರಮದಲ್ಲಿ ಎಚ್‌ಪಿವಿ ಲಸಿಕೆಯನ್ನು ಸಂಯೋಜಿಸುವ ಗುರಿಯನ್ನು ಸರ್ಕಾರ ಹೊಂದಿದೆ.

ತುರ್ತು ಪರಿಸ್ಥಿತಿಯಂತೆ ವಿಷಾದ ಖಂಡಿತ

ಹೊಸದಿಲ್ಲಿ: ಕಾಂಗ್ರೆಸ್ ತುರ್ತು ಪರಿಸ್ಥಿತಿ ಬಗ್ಗೆ ವಿಷಾದಿಸುವಂತೆಯೇ ಎಐ ಶೃಂಗಸಭೆಯಲ್ಲಿ ನಡೆಸಿದ ಪ್ರತಿಭಟನೆ ಬಗ್ಗೆಯೂ ವಿಷಾದಿಸುತಷ್ಟಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬುಧವಾರ ಪ್ರತಿಪಕ್ಷಗಳನ್ನು ತರಾಟೆಗೆ ತೆಗೆದುಕೊಂಡರು.ಈ ನಾಚಿಕೆಗೇಡಿನ ಅಭ್ಯಾಸದ ವಿಷಯವನ್ನು ದೇಶವು ಶಾಶ್ವತವಾಗಿ ನೆನಪಿಸುತ್ತದೆ ಎಂದು ಪ್ರತಿಪಾದಿಸಿದರು. ಭಾರತೀಯ ಯುವ ಕಾಂಗ್ರೆಸ್ ಸದಸ್ಯರು ರಾಷ್ಟ್ರ ರಾಜಧಾನಿಯಲ್ಲಿನ ಭಾರತ್ ಮಂಟಪದ ಆಲ್ ಇಂಪ್ಯಾಕ್ಟ್ ಇಂಡಿಯಾ ಶೃಂಗಸಭೆಯಲ್ಲಿ ಅರೆ ನಗ್ನ ಸ್ಥಿತಿಯಲ್ಲಿ, ರಾಜಿ ಮಾಡಿಕೊಂಡ ಪ್ರಧಾನಿ ಎಂಬ ಘೋಷಣೆಗಳನ್ನು ಬರೆದ ಘಟನೆಗೆ ಸಂಬಂಧಿಸಿದಂತೆ ಈ ಸಚಿವೆ ನಿರ್ಮಲಾ ಸೀತಾರಾಮನ್ ಈ ರೀತಿ ತರಾಟೆತ್ತಿಕೊಂಡಿದ್ದಾರೆ. ಬಿಸಿನೆಸ್ ಸ್ಟ್ಯಾಂಡರ್ಡ್ ಮಂಥನ್ ಕಾರ್ಯಕ್ರಮವನ್ನು ದ್ದೇಶಿ ಮಾತನಾಡಿದ ಅವರು, ಪ್ರಜಾಪ್ರಭುತ್ವದಲ್ಲಿ ಪ್ರತಿಭಟಿಸಲು ಇದು ಸರಿಯಾದ ನಡವಳಿಕೆಯೇ ಎಂದು ಪ್ರಶ್ನಿಸಿದ್ದಾರೆ. ಭಾರತೀಯರನ್ನು ಟೀಕಿಸುವ ಮತ್ತು ಎಐ ಶೃಂಗಸಭೆಯನ್ನು ಮೋಸ ಎಂದು ಕರೆಯುವ ಮೊದಲು, ನೀವು ಎಷ್ಟು ಮೋಸ ಮಾಡುತ್ತಿದ್ದೀರಿ ಎಂದು ಪ್ರಶ್ನಿಸಿಕೊಳ್ಳಿ, ಪ್ರಜಾಪ್ರಭುತ್ವದಲ್ಲಿ ಪ್ರತಿಭಟಿಸುವ ಮಾರ್ಗ ಇದುವೇ? ಕಾಂಗ್ರೆಸ್ ಪಕ್ಷವು ತುರ್ತು ಪರಿಸ್ಥಿತಿಯ ಬಗ್ಗೆ ವಿಷಾದಿಸುವ ರೀತಿಯಲ್ಲಿಯೇ ಇದಕ್ಕಾಗಿ ವಿಷಾದಿಸಬೇಕು ಎಂದರು.

ಕಿರುಸುದ್ದಿ

ದಿಲ್ಲಿ ಸ್ಫೋಟ: ಎನ್‌ಐಎ ವಶಕ್ಕೆ ಇಬ್ಬರು ಶಂಕಿತರು

ಹೊಸದಿಲ್ಲಿ: ಕೆಂಪು ಕೋಟೆ ಸಮೀಪ ನಡೆದಿದ್ದ ಆತ್ಮಾಹುತಿ ಕಾರು ಬಾಂಬ್ ಸ್ಫೋಟ ಪ್ರಕರಣದಲ್ಲಿ ಇನ್ನಿಬ್ಬರು ಶಂಕಿತ ಉಗ್ರರನ್ನು ಎನ್‌ಐಎ ಬಂಧಿಸಿದೆ. ಇದರಿಂದ ಪ್ರಕರಣದಲ್ಲಿ ಒಟ್ಟು ಬಂಧಿತರ ಸಂಖ್ಯೆ 11ಕ್ಕೇರಿದೆ. ಜಮ್ಮು ಕಾಶ್ಮೀರದ ಗಾಂದರ್‌ಬಾಲ್ ನಿವಾಸಿ ಜಮೀರ್ ಅಹ್ಮದ್ ಅಹಂಗಾರ್ ಮತ್ತು ಶ್ರೀನಗರ ನಿವಾಸಿ ತುಫೈಲ್ ಅಹ್ಮದ್ ಎಂಬ ಇಬ್ಬರು ಶಂಕಿತರನ್ನು ಎನ್‌ಐಎ ಬಂಧಿಸಿದೆ. ದಿಲ್ಲಿ ಸ್ಫೋಟದ ಷಡ್ಯಂತ್ರ ರಚಿಸಿದ ಮತ್ತು ಸಕ್ರಿಯವಾಗಿ ಒಳಗೊಂಡಿದ್ದಾರೆಂಬ ಶಂಕೆಯಿಂದ ಇವರಿಬ್ಬರನ್ನು ವಿಚಾರಿಸಲು ಕಸ್ಟಡಿಗೆ ತೆಗೆದುಕೊಂಡಿದೆ.

ಅನಿಲ್ ಅಂಬಾನಿ ಮನೆ ಜಪ್ತಿ

ಮುಂಬೈ: ಉದ್ಯಮಿ ಅನಿಲ್ ಅಂಬಾನಿ ಒಡೆತನದ ಅಬೋಡ್ ನಿವಾಸದ ಮೇಲೆಎ ಜಾರಿ ನಿರ್ದೇಶನಾಲಯ(ಇಡಿ) ತಾತ್ಕಾಲಿಕವಾಗಿ ಮುಟ್ಟುಗೋಲು ಕ್ರಮ ಕೈಗೊಂಡಿದೆ. ಈ ಕುರಿತು ಇಡಿ ಮಾಹಿತಿ ನೀಡಿದ್ದು, ಇದು 2002ರ ಪಿಎಂಎಲ್‌ಎ ಅನ್ವಯದಲ್ಲಿ 3,716.83 ಕೋಟಿ ರೂ. ಮೌಲ್ಯದ್ದಾಗಿದೆ. ಅನಿಲ್ ಅಂಬಾನಿ ಮತ್ತು ಅವರ ಗ್ರೂಪ್ ಕಂಪನಿಗಳ ವಿರುದ್ಧ ಇದುವರೆಗೆ 15,000 ಕೋಟಿ ರೂ. ಗಳಿಗಿಂತ ಹೆಚ್ಚು ಆಸ್ತಿ ಮುಟ್ಟುಗೋಲು ಹಾಕಲಾಗಿದೆ.

ಬನ್ಸಾಲ್‌ಗೆ ಕೇಂದ್ರದಿಂದ ಶೋಕಾಸ್ ನೋಟಿಸ್

ಹೊಸದಿಲ್ಲಿ: ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ಗೆ ಭೇಟಿ ನೀಡುವ ವೇಳೆ ಬಿಎಸ್‌ಎನ್‌ಎಲ್ ನಿರ್ದೇಶಕ ವಿವೇಕ್ ಬನ್ಸಾಲ್ ಅವರು ತಮ್ಮ ಅಧಿಕಾರಿಗೆ ನಿರ್ದೇಶಿಸಿದ್ದ ಶಿಷ್ಟಾಚಾರ ವ್ಯವಸ್ಥೆಗಳು ವಿವಾದಕ್ಕೀಡಾಗಿದೆ. ವಿವಾದದ ನಂತರ ಕೇಂದ್ರವು ಅವರ ವಿರುದ್ಧ ಶಿಷ್ಟಾಚಾರ ಕ್ರಮ ಜಾರಿ ಮಾಡಿದೆ.

ಪ್ರಯಾಗ್ ರಾಜ್ ಗೆ ಭೇಟಿ ನೀಡಲು ಮಾಡಿದ್ದ ವಿಐಪಿ ವ್ಯವಸ್ಥೆಯ ಬಗ್ಗೆ ಸಾರ್ವಜನಿಕ ಆಕ್ರೋಶ ವ್ಯಕ್ತವಾದ ಹಿನ್ನೆಲೆಯಲ್ಲಿ ಭಾರತ್ ಸಂಚಾರ್ ನಿಗಮ್ ಲಿಮಿಟೆಡ್ (ಬಿಎಸ್‌ಎನ್‌ಎಲ್) ನ ಹಿರಿಯ ಅಧಿಕಾರಿಯೊಬ್ಬರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹೇಳಿದ್ದಾರೆ. ಬಿಎಸ್‌ಎನ್‌ಎಲ್ ನಿರ್ದೇಶಕ ವಿವೇಕ್ ಬಂಝಲ್‌ಗೆ ಶೋಕಾಸ್ ನೋಟಿಸ್ ನೀಡಲಾಗಿದ್ದು, ಉತ್ತರಿಸಲು ಏಳು ದಿನಗಳ ಕಾಲಾವಕಾಶ ನೀಡಲಾಗಿದೆ. ವಿವರಣೆಯನ್ನು ಪರಿಶೀಲಿಸಿದ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಲಾಗಿದೆ. ಈ ವ್ಯವಸ್ಥೆಗಳು ಸ್ಥಾಪಿತ ನಿಯಮಗಳು ಮತ್ತು ಸಂಪ್ರದಾಯಗಳ ಉಲ್ಲಂಘನೆ ಎಂದು ಸಚಿವರು ಹೇಳಿದ್ದಾರೆ. ಭೇಟಿಯ ಭಾರೀ ಸಿದ್ಧತೆಗಳನ್ನು ವಿವರಿಸುವ ಆಂತರಿಕ ಆದೇಶ ಬಯಲಾದ ಬಳಿಕ ವಿವಾದ ಹುಟ್ಟಿಕೊಂಡಿತ್ತು. 50ಕ್ಕೂ ಹೆಚ್ಚು ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಆತಿಥ್ಯ, ಸಾರಿಗೆ, ಸ್ನಾನದ ವ್ಯವಸ್ಥೆ ಮತ್ತು ಛಾಯಾಗ್ರಹಣ ಸೇರಿದಂತೆ ಕರ್ತವ್ಯಗಳನ್ನು ನಿಯೋಜಿಸಲಾಗಿತ್ತು. ದೇವಾಲಯಗಳಿಗೆ ಭೇಟಿ ನೀಡಲು ಮತ್ತು ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡಲು ಸ್ನಾನದ ಕಿಟ್‌ಗಳು, ಉಪಾಹಾರ ಮತ್ತು ಬೆಂಗಾವಲು ಸೇವೆಗಳನ್ನೂ ಯೋಜಿಸಲಾಗಿತ್ತು. ವಿರೋಧ ಹೆಚ್ಚಾದ ಬಳಿಕ ಒಂದೇ ದಿನದಲ್ಲಿ ಭೇಟಿಯನ್ನು ರದ್ದುಗೊಳಿಸಲಾಗಿದೆ.

ಆರ್‌ಒಎನ್ 95 ಇ20 ಪೆಟ್ರೋಲ್ ಕಡ್ಡಾಯ

ಹೊಸದಿಲ್ಲಿ: ಭಾರತ ಸರ್ಕಾರ ಹೊಸ ಇಂಧನ ಮಾನದಂಡವನ್ನು ಕಡ್ಡಾಯಗೊಳಿಸಿದ್ದು, ಕನಿಷ್ಠ ಆರ್‌ಒಎನ್ 95 ನೊಂದಿಗೆ ಇ 20 ಪೆಟ್ರೋಲ್ ಅನ್ನು ಏಪ್ರಿಲ್ 1 ರಿಂದ ರಾಷ್ಟ್ರವ್ಯಾಪಿ ಮಾರಾಟ ಮಾಡಬೇಕಿದೆ. ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ಈ ನಿರ್ದೇಶನವನ್ನು ಹೊರಡಿಸಿದ್ದು, ಶೇ.20ರಷ್ಟು ಎಥನಾಲ್ ಬೆರೆಸಿದ ಪೆಟ್ರೋಲ್ ಅನ್ನು ಚಿಲ್ಲರೆ ಮಾರಾಟ ಮಳಿಗೆಗಳಿಗೆ ತಲುಪಿಸುವ ಮೊದಲು ಬ್ಯೂರೋ ಆಫ್ ಇಂಡಿಯನ್ ಸ್ಟ್ಯಾಂಡರ್ಡ್ಸ್ (ಬಿಐಎಸ್) ಗುಣಮಟ್ಟವನ್ನು ಪೂರೈಸಬೇಕು ಎಂದು ಸೂಚಿಸಲಾಗಿದೆ.

ಸೂಚನೆಯನ್ನು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಅನುಸರಿಸುವುದು ಕಡ್ಡಾಯ. ಅಧಿಸೂಚನೆಯ ಮೂಲಕ ತೈಲ ಸಂಸ್ಥೆಗಳಿಗೆ ಇದರ ಪಾಲನೆಯನ್ನು ಕಡ್ಡಾಯಗೊಳಿಸಲಾಗುತ್ತಿದೆ. ವಿಶೇಷ ಸಂದರ್ಭಗಳಲ್ಲಿ, ಕೇಂದ್ರ ಸರ್ಕಾರ ನಿರ್ದಿಷ್ಟ ಪ್ರದೇಶಗಳಿಗೆ ಅಥವಾ ಸೀಮಿತ ಅವಧಿಗೆ ವಿನಾಯಿತಿ ನೀಡಬಹುದು ಎಂದು ಷರತ್ತು ವಿಧಿಸಲಾಗಿದೆ. ಹೆಚ್ಚಿನ ಹೊಸ ವಾಹನಗಳು ಈ ಹೆಚ್ಚಿನ ಎಥೆನಾಲ್ ಮಿಶ್ರಿತ ಪೆಟ್ರೋಲ್‌ಗೆ ಹೊಂದಿಕೊಳ್ಳುವ ನಿರೀಕ್ಷೆಯಿದೆ. ಈ ನೀತಿ, ಕಚ್ಚಾತೈಲದ ಆಮದನ್ನು ಕಡಿತಗೊಳಿಸುವುದು, ವಾಹನಗಳ ಹೊಗೆಯ ಪ್ರಮಾಣವನ್ನು ಕಡಿಮೆ ಮಾಡುವುದು ಮತ್ತು ಕಬ್ಬು ಮೊದಲಾದ ಬೆಳೆಗಳಿಂದ ದೇಶೀಯವಾಗಿ ಉತ್ಪಾದಿಸುವ ಎಥೆನಾಲ್‌ಗೆ ಬೇಡಿಕೆ ಹೆಚ್ಚಿಸುವ ಗುರಿ ಹೊಂದಿದೆ. ಎಥೆನಾಲ್ ಒದಗಿಸುವ ಹೆಚ್ಚಿನ ಆಕ್ಟೇನ್ ರೇಟಿಂಗ್ ಎಂಜಿನ್‌ನ ಕಾರ್ಯಕ್ಷಮತೆ ಮತ್ತು ಇಂಧನ ಸ್ಥಿರತೆಯನ್ನು ಸುಧಾರಿಸುವ ನಿರೀಕ್ಷೆಯಿದೆ. ಹೊಸ ಹಣಕಾಸು ವರ್ಷದ ಆರಂಭದಲ್ಲಿ ದೇಶಾದ್ಯಂತ ಈ ಸೌಲಭ್ಯವನ್ನು ಜಾರಿಗೆ ತರಲು ನಿರ್ಧರಿಸಲಾಗಿದೆ

ಎನ್‌ಸಿಇಆರ್‌ಟಿ ವಿವಾದಿತ ಅಧ್ಯಾಯಕ್ಕೆ ಶೀಘ್ರ ಕತ್ತರಿ?

ಹೊಸದಿಲ್ಲಿ: ಎಂಟನೇ ತರಗತಿಯ ಪಠ್ಯ ಪುಸ್ತಕದಲ್ಲಿ ಮುದ್ರಿಸಲ್ಪಟ್ಟ ನ್ಯಾಯಾಂಗದಲ್ಲಿನ ಭ್ರಷ್ಟಾಚಾರ ಎಂಬ ವಿವಾದಿತ ಅಧ್ಯಾಯವನ್ನು ಎನ್‌ಸಿಇಆರ್‌ಟಿ ತೆಗೆದುಹಾಕುವ ಸಾಧ್ಯತೆಯಿದೆ ಎಂದು ಮೂಲಗಳು ಬುಧವಾರ ತಿಳಿಸಿವೆ. ತನ್ನ ವೆಬ್‌ಸೈಟ್‌ನಿಂದ ಪುಸ್ತಕವನ್ನು ಈಗಾಗಲೇ ತೆಗೆದುಹಾಕಿದೆ. ಪಠ್ಯ ಪುಸ್ತಕದಲ್ಲಿ ವಿವಾದಿತ ಅಧ್ಯಾಯವು ನ್ಯಾಯಾಂಗ ವ್ಯವಸ್ಥೆ ಬಗ್ಗೆ ಆಕ್ಷೇಪಾರ್ಹ ಹೇಳಿಕೆಗಳನ್ನು ಒಳಗೊಂಡಿದೆ ಎಂಬ ಕಾರಣ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿ ಜೊಯಿಮಲ್ಯ ಬಾಗ್ಚಿ ಮತ್ತು ನ್ಯಾಯಮೂರ್ತಿ ವಿಪುಲ್ ಎಂ ಪಾಂಚೋಲಿ ಅವರನ್ನು ಒಳಗೊಂಡ ಸುಪ್ರೀಂ ಕೋರ್ಟ್ ತ್ರಿ–ಸದಸ್ಯ ಪೀಠವು ಸ್ವಯಂಪ್ರೇರಿತ ವಿಚಾರಣೆ ನಡೆಸಲು ನಿರ್ಧರಿಸಿದೆ. ಹಿರಿಯ ವಕೀಲ ಕಪಿಲ್ ಸಿಬಲ್, ಅಭಿಷೇಕ್ ಸಿಂಘ್ವಿ ಸಹ ಆದಷ್ಟು ಬೇಗ ನ್ಯಾಯಪೀಠ ಪರಿಗಣಿಸಬೇಕು ಎಂದು ಮನವಿ ಮಾಡಿದ್ದರು. ಆದರೆ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಪ್ರತ್ಯೇಕವಾಗಿ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದರು. ಭೂಮಿಯಲ್ಲಿ ಯಾರೂ ನ್ಯಾಯಾಂಗ ವ್ಯವಸ್ಥೆಯ ಹೆಸರು ಕೆಡಿಸಲು ಮತ್ತು ಸಮಗ್ರತೆಗೆ ಧಕ್ಕೆ ತರಲು ಅನುಮತಿಸಲು ಸಾಧ್ಯವಿಲ್ಲ ಎಂದು ಸಿಜೆಐ ಆಕ್ಷೇಪ ವ್ಯಕ್ತಪಡಿಸಿದ್ದರು.

ವಿವಾದಿತ ಅಂಶ: ಸಮಾಜದಲ್ಲಿ ನ್ಯಾಯಾಂಗದ ಪಾತ್ರ ಎಂಬ ಅಧ್ಯಾಯ ವಿವಾದ ಸೃಷ್ಟಿಸಿದೆ. ನ್ಯಾಯದಾನದಲ್ಲಿನ ವಿಳಂಬ, ನ್ಯಾಯ ನಿರಾಕರಿಸಿದಂತೆ ಮತ್ತು ನ್ಯಾಯಾಂಗದಲ್ಲಿ ಭ್ರಷ್ಟಾಚಾರ ಎಂಬ ಭಾಗಗಳಲ್ಲಿ, ಭ್ರಷ್ಟಾಚಾರ ಮತ್ತು ಪ್ರಕರಣಗಳ ಬಾಕಿ ಸೇರಿದಂತೆ ನ್ಯಾಯಾಂಗ ಎದುರಿಸುವ ಸವಾಲುಗಳನ್ನು ಉಲ್ಲೇಖಿಸಲಾಗಿದೆ.

ಐಇಡಿ ದಾಳಿ ಸಂಚು ವಿಫಲ

ಶ್ರೀನಗರ: ಜಮ್ಮು ಕಾಶ್ಮೀರದಲ್ಲಿ ಉಗ್ರ ಅಡಗುದಾಣವನ್ನು ಧ್ವಂಸಗೊಳಿಸುವ ಮೂಲಕ ಭಯೋತ್ಪಾದಕ ದಾಳಿ ಸಂಚನ್ನು ಭಾರತೀಯ ಸೇನೆ ವಿಫಲಗೊಳಿಸಿದೆ. ಪೂಂಚ್ ಜಿಲ್ಲೆಯಲ್ಲಿ ಸ್ಫೋಟಕಗಳನ್ನು ಬಳಸಿಕೊಂಡು ದಾಳಿ ನಡೆಸಲು ಉಗ್ರರು ಸಂಚು ರೂಪಿಸಿದ್ದರು. ಎರಡು ಐಇಡಿ, ಒಂದು ಪಿಸ್ತೂಲ್ ವಶಪಡಿಸಿರುವುದಾಗಿ ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ. ಮೇಂಡರ್ ಪ್ರದೇಶದ ಸಲಾನಿ ಕಸ್‌ಬ್ಲಾರಿ ಗ್ರಾಮದಲ್ಲಿ ಸೇನೆ ನಡೆಸಿದ ಶೋಧ ಕಾರ್ಯಾಚರಣೆ ವೇಳೆ ಶಸ್ತ್ರಾಸ್ತ್ರಗಳನ್ನು ವಶಪಡಿಸಲಾಗಿದೆ. ಪಿಸ್ತೂಲಿನ 24 ಸುತ್ತು ಬುಲೆಟ್‌ಗಳು, ಸುಮಾರು 4.5 ಕೆ.ಜಿ ಭಾರದ ಎರಡು ಸುಧಾರಿತ ಸ್ಫೋಟಕ ಉಪಕರಣ(ಐಇಡಿ)ಗಳಿದ್ದವು, ಬಳಿಕ ನಿಯಂತ್ರಿತ ಸ್ಫೋಟದಿಂದ ಐಇಡಿಗಳನ್ನು ನಾಶಗೊಳಿಸಲಾಗಿದೆ. ಇದರಿಂದ ಯಾವುದೇ ರೀತಿಯ ಹಾನಿಯಾಗಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ.ಗಡಿ ಪ್ರದೇಶಗಳನ್ನೇ ಗುರಿಯಾಗಿಸಿ ದಾಳಿಗೆ ಉಗ್ರರು ಸಂಚು ರೂಪಿಸಿದ್ದರೂ ಸಕಾಲದಲ್ಲಿ ಉಗ್ರರ ಅಡಗುದಾಣವನ್ನು ಧ್ವಂಸ ಮಾಡಿದ್ದರಿಂದ ದಾಳಿ ಯತ್ನ ವಿಫಲವಾಗಿದೆ.

ಸೂಪರ್‌ಸಾನಿಕ್ ಬ್ರಹ್ಮೋಸ್ ಕ್ಷಿಪಣಿ ಸಾಗಿಸುವ ಸಾಮರ್ಥ್ಯದ ಸ್ಟೆಲ್ತ್ ಫ್ರಿಗೇಟ್

ಮಾ.14ರಂದು ನೌಕಾಪಡೆಗೆ ತಾರಾಗಿರಿ

ಹೊಸದಿಲ್ಲಿ: ಸೂಪರ್‌ಸಾನಿಕ್ ಬ್ರಹ್ಮೋಸ್ ಕ್ಷಿಪಣಿಯನ್ನು ಸಾಗಿಸುವ ಸಾಮರ್ಥ್ಯವಿರುವ ಸ್ಟೆಲ್ತ್ ಫ್ರಿಗೇಟ್ ತಾರಾಗಿರಿಯನ್ನು ಮಾ.14 ರಂದು ಭಾರತೀಯ ನೌಕಾಪಡೆಗೆ ನಿಯೋಜಿಸಲಾಗುತ್ತಿದೆ. ಇದು ದೇಶದ ಕಡಲ ದಾಳಿ ಸಾಮರ್ಥ್ಯ ಮತ್ತು ರಕ್ಷಣಾ ಸಾಮರ್ಥ್ಯಗಳನ್ನು ಬಲಪಡಿಸುವ ನಿರೀಕ್ಷೆಯಿದೆ.

ಪ್ರಾಜೆಕ್ಟ್ 17ಎ ಮೈಲಿಗಲ್ಲು: ಈ ಯುದ್ಧನೌಕೆ, ಪ್ರಾಜೆಕ್ಟ್ 17ಎಯಲ್ಲಿ ಅಭಿವೃದ್ಧಿಪಡಿಸಲಾದ ಆಧುನಿಕ ನೀಲಗಿರಿ ವರ್ಗದ ನಾಲ್ಕನೇ ನೌಕೆಯನ್ನು ಪ್ರತಿನಿಧಿಸಲಿದೆ. ಇದನ್ನು ಮುಂಬೈನ ಮಜಗಾಂವ್ ಡಾಕ್ ಶಿಪ್ ಬಿಲ್ಡರ್ಸ್ ಲಿಮಿಟೆಡ್ ನಿರ್ಮಿಸಿದ್ದು, ಕಳೆದ ನವೆಂಬರ್ 28 ರಂದು ನೌಕಾಪಡೆಗೆ ಹಸ್ತಾಂತರಿಸಲಾಗಿತ್ತು. ಈ ಯೋಜನೆಯನ್ನು ದೇಶೀಯ ಯುದ್ಧನೌಕೆ ವಿನ್ಯಾಸದಲ್ಲಿ ಒಂದು ಪ್ರಮುಖ ಹೆಜ್ಜೆ ಎನ್ನಲಾಗಿದ್ದು, ಇದು ರಕ್ಷಣಾ ಉತ್ಪಾದನೆಯಲ್ಲಿ ಸ್ವಾವಲಂಬನೆಗಾಗಿ ಮಾಡಿದ ಪ್ರಯತ್ನದ ಪ್ರತೀಕವೂ ಹೌದು.

ಸುಧಾರಿತ ಯುದ್ಧ ಕೌಶಲ್ಯ: ಹೊಸ ಕಡಲ



ಅಪಾಯಗಳನ್ನು ಎದುರಿಸಲು ತಾರಗಿರಿ ಯನ್ನು ಬಹು–ಮಿಷನ್ ವೇದಿಕೆಯಾಗಿ ವಿನ್ಯಾಸಗೊಳಿಸಲಾಗಿದೆ. ಇದು ಹಡಗಿನಿಂದ ಹಡಗಿಗೆ ಬ್ರಹ್ಮೋಸ್ ಕ್ಷಿಪಣಿ ವ್ಯವಸ್ಥೆಯನ್ನು ಸಾಗಿಸಲು ಸಜ್ಜಾಗಿದೆ. ಇದರ ಯುದ್ಧ ಸೂಟ್ ಎಂಎಫ್‌ಎಸ್ ಟಿಎಆರ್ ರಡಾರ್ ಎಂಆರ್‌ಎಸ್‌ಎಎಂ ವಾಯು ರಕ್ಷಣಾ ವ್ಯವಸ್ಥೆ, 76 ಎಂಎಂ ಸೂಪರ್ ರಾಪಿಡ್ ಗನ್ ಮೌಂಟ್ ಮತ್ತು 30 ಎಂಎಂ ಮತ್ತು 12.7 ಎಂಎಂ ಕ್ಲೋಸ್–ಇನ್ ಶಸ್ತ್ರಾಸ್ತ್ರ ವ್ಯವಸ್ಥೆಗಳನ್ನು ಒಳಗೊಂಡಿದೆ. ಜಲಾಂತರ್ಗಾಮಿ ವಿರೋಧಿ ಕಾರ್ಯಾಚರಣೆಗಳಿಗಾಗಿ, ವಿಶೇಷ ರಾಕೆಟ್‌ಗಳು ಮತ್ತು ಟಾರ್ಪಿಡೋಗಳನ್ನು ಜೋಡಿಸಲಾಗಿದೆ. ಈ ಹಡಗು ನಿಯಂತ್ರಿಸಬಹುದಾದ ಪಿಚ್ ಪ್ರೊಪೆಲ್ಲರ್‌ಗಳೊಂದಿಗೆ ಸಂಯೋಜಿತ ಡೀಸೆಲ್ ಅಥವಾ ಗ್ಯಾಸ್ (ಸಿಒಡಿಒಜಿ) ಪ್ರೊಪಲ್ಷನ್ ಸಿಸ್ಟಮ್, ಜತೆಗೆ ಕಾರ್ಯಾಚರಣೆಯನ್ನು ಸುಗಮಗೊಳಿಸಲು ಸಮಗ್ರ ಪ್ಲಾಟ್‌ಫಾರ್ಮ್ ನಿರ್ವಹಣಾ ವ್ಯವಸ್ಥೆಯನ್ನು ಹೊಂದಿದೆ. ಈ ವಿನ್ಯಾಸ ಜೀವ ರಕ್ಷಣೆಗೆ ಒತ್ತು ನೀಡುತ್ತದೆ.

ಸ್ಥಳೀಯ ಉತ್ಪಾದನೆಯ ಪರಂಪರೆ: ಸುಮಾರು ಶೇ.75 ದಷ್ಟು ದೇಶೀಕರಣವನ್ನು ಸಾಧಿಸಲಾಗಿದ್ದು, 200ಕ್ಕೂ ಹೆಚ್ಚು ಎಂಎಸ್‌ಎಂಇಗಳು ಇದರ ನಿರ್ಮಾಣಕ್ಕೆ ಕೊಡುಗೆ ನೀಡಿವೆ. 14,000ಕ್ಕೂ ಹೆಚ್ಚು ಜನರಿಗೆ ನೇರ ಮತ್ತು ಪರೋಕ್ಷ ಉದ್ಯೋಗ ದೊರೆತಿದೆ. ಈ ಹಡಗನ್ನು 2013ರಲ್ಲಿ ಸೇವೆಯಿಂದ ವಜಾಗೊಳಿಸುವ ಮೊದಲು 33 ವರ್ಷಗಳ ಕಾಲ ಸೇವೆ ಸಲ್ಲಿಸಿದ ಲಿಯಾಂಡರ್ ವರ್ಗದ ಯುದ್ಧನೌಕೆ ಹಿಂದಿನ ಐಎನ್‌ಎಸ್ ತಾರಾಗಿರಿಯ ಹೊಸ ರೂಪವೆಂದು ಪರಿಗಣಿಸಲಾಗಿದೆ.

ನೋಟಿಸ್ ಕಳಿಸಲು ಸಿದ್ಧತೆ | 1917ರಲ್ಲಿ ಸಾಲ ಕೊಟ್ಟಿದ್ದ ಭಾರತದ ಕುಟುಂಬ

ಯುದ್ಧಕ್ಕೆ ಕೊಟ್ಟ ಸಾಲ ವಾಪಸ್ ಕೊಡಿ!

ಭೋಪಾಲ್:: 'ಸೂರ್ಯ ಅಸ್ತಮಿಸದ ಸಾಮ್ರಾಜ್ಯ 'ವೆಂದು ಹೆಮ್ಮೆಪಟ್ಟುಕೊಂಡಿದ್ದ ಬ್ರಿಟಿಷ್ ಸಾಮ್ರಾಜ್ಯಕ್ಕೂ ಒಮ್ಮೆ ಸ್ಥಳೀಯ ವ್ಯಾಪಾರಿಯ ನೆರವು ಬೇಕಾಗಿತ್ತು ಎಂಬ ಕುತೂಹಲಕಾರಿ ಸಂಗತಿ ಮಧ್ಯಪ್ರದೇಶದ ಸಿಹೋರ್ ಪಟ್ಟಣದಲ್ಲಿ ಮತ್ತೆ ಬೆಳಕಿಗೆ ಬಂದಿದೆ. 1917ರಲ್ಲಿ ಬ್ರಿಟಿಷ್ ಸರ್ಕಾರವು ಸೇಠ್ ಜುಮ್ಮಾಲಾಲ್ ರುಥಿಯಾ ಅವರಿಂದ 35,000 ರೂ. ಸಾಲ ಪಡೆದಿದ್ದು, ಇಂದಿಗೂ ಅದನ್ನು ವಾಪಸು ನೀಡಿಲ್ಲ ಎಂದು ಅವರ ಕುಟುಂಬ ಆರೋಪಿಸಿದೆ.

ಶತಮಾನಕ್ಕೂ ಹೆಚ್ಚು ಕಾಲ ಮರೆಯಾಗಿದ್ದ ಈ ದಾಖಲೆಗಳು, ಕುಟುಂಬದ ಹಳೆಯ ದಾಖಲೆಪತ್ರಗಳು ಈಗ ಪತ್ತೆಯಾಗಿವೆ ಎಂದು ಸೇಠ್ ಜುಮ್ಮಾಲಾಲ್ ಅವರ ಮೊಮ್ಮಗ ವಿವೇಕ್ ರುಥಿಯಾ ತಿಳಿಸಿದ್ದಾರೆ. ಇದೀಗ ಅವರು ಬ್ರಿಟನ್ ಸರ್ಕಾರಕ್ಕೆ ಕಾನೂನು ನೋಟಿಸ್ ಕಳುಹಿಸಲು ಸಿದ್ಧತೆ ನಡೆಸಿದ್ದಾರೆ.

ಯುದ್ಧಕಾಲದ ಸಾಲ: 1917ರಲ್ಲಿ ವಿಶ್ವಯುದ್ಧದ ಹೊತ್ತಿನಲ್ಲಿ ಬ್ರಿಟಿಷ್ ಆಡಳಿತ ಯಂತ್ರ ಸಂಕಷ್ಟ



ಕ್ಕೆ ಸಿಲುಕಿದ್ದ ಸಂದರ್ಭದಲ್ಲೇ ಈ ಸಾಲವನ್ನು ಪಡೆದಿದ್ದರೆಂದು ದಾಖಲೆಗಳು ಸೂಚಿಸುತ್ತವೆ. ಭೋಪಾಲ್ ಸಂಸ್ಥಾನದ ಆಡಳಿತ ವ್ಯವಸ್ಥೆಯನ್ನು ಸುಗಮಗೊಳಿಸಲು ಈ ಮೊತ್ತವನ್ನು 'ಯುದ್ಧ ಸಾಲ'ವೆಂದು ದಾಖಲಿಸಲಾಗಿದೆ ಎನ್ನಲಾಗಿದೆ.

ಆ ಕಾಲದಲ್ಲಿ 35,000 ರೂ. ಅಪಾರ ಮೊತ್ತವಾಗಿತ್ತು. ಆ ಹಣದಿಂದ ದೊಡ್ಡ ಜಮೀನು ವ್ಯವಹಾರಗಳು ನಡೆಯಬಹುದಾಗಿತ್ತು, ಪ್ರಭಾವವನ್ನೂ ಸಾಧಿಸಬಹುದಾಗಿತ್ತು. ಆದರೆ ರುಥಿಯಾ ಕುಟುಂಬದ ಪ್ರಕಾರ, ಸಾಲ ನೀಡಿದ ನಂತರ ಅದರ ಮರುಪಾವತಿ ನಡೆದಿಲ್ಲ.

ಸೇಠ್ ಜುಮ್ಮಾಲಾಲ್ ರುಥಿಯಾ ಅವರು 1937ರಲ್ಲಿ ನಿಧನರಾದರು. ಸಾಲ ನೀಡಿದ ಎರಡು ದಶಕಗಳ ಬಳಿಕವೂ ಈ ವಿಚಾರ ಬಗೆಹರಿಯದೆ ಉಳಿದಿದ್ದು, ಕಾಲಕ್ರಮೇಣ ಮರೆಯಾಗಿತ್ತು ಎಂದು ಕುಟುಂಬದವರು ಹೇಳುತ್ತಾರೆ.

ಎಷ್ಟು ಸಿಗಬಹುದು?: ಇಂದಿನ ಮೌಲ್ಯದಲ್ಲಿ ಈ ಮೊತ್ತ ಎಷ್ಟು ಆಗಬಹುದು ಎಂಬ ಪ್ರಶ್ನೆಗೆ ಅವರು ನೀಡುವ ಉತ್ತರ ಗಮನಾರ್ಹವಾಗಿದೆ. '1917ರ ಚಿನ್ನದ ದರದ ಆಧಾರದ ಮೇಲೆ ಇಂದಿನ ದರದೊಂದಿಗೆ ಹೋಲಿಕೆ ಮಾಡಿದರೆ, ಈ ಮೊತ್ತ ಕೋಟಿ ರೂಪಾಯಿಗಳಿಗೆ ತಲುಪುತ್ತದೆ' ಎಂದು ಕುಟುಂಬಸ್ಥರು ಹೇಳುತ್ತಾರೆ.

ಪ್ರಭಾವಶಾಲಿ ಕುಟುಂಬದ ಹಿನ್ನೆಲೆ: ಸ್ವಾತಂತ್ರ್ಯಕ್ಕೂ ಮುನ್ನ ರುಥಿಯಾ ಕುಟುಂಬವು ಸಿಹೋರ್ ಮತ್ತು ಭೋಪಾಲ್ ಸಂಸ್ಥಾನಗಳಲ್ಲಿ ಅತ್ಯಂತ ಶ್ರೀಮಂತ ಮತ್ತು ಪ್ರಭಾವಶಾಲಿ ಕುಟುಂಬವಾಗಿತ್ತು. ಅಪಾರ ಜಮೀನು ಮತ್ತು ಆಸ್ತಿಗಳನ್ನು ಹೊಂದಿದ್ದ ಈ ಕುಟುಂಬದ ಪ್ರಭಾವ ರಾಜಕೀಯ ಮತ್ತು ಆಡಳಿತ ವಲಯಗಳಲ್ಲಿಯೂ ಕಂಡುಬರುತ್ತಿತ್ತು ಎನ್ನಲಾಗುತ್ತದೆ.

ಕಬ್ಬು ಪೂರೈಸಿದ ರೈತರಿಗೆ ಆರ್ಥಿಕ ನೆರವು: ಸಚಿವ

ಬೆಂಗಳೂರು: ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಪೂರೈಕೆ ಮಾಡಿದ ರಾಜ್ಯದ ರೈತರಿಗೆ ಪ್ರತಿ ಟನ್‌ಗೆ 50 ರೂ.ಗಳ ಆರ್ಥಿಕ ನೆರವಿನ ಮೊತ್ತವಾದ 300 ಕೋಟಿ ರೂ. ಬಿಡುಗಡೆ ಮಾಡಲಾಗಿದೆ ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.

ಕಳೆದ ವರ್ಷ ನ.8ರಂದು ಸಿಎಂ ಕರೆದಿದ್ದ ಸಕ್ಕರೆ ಕಾರ್ಖಾನೆಗಳ ಮಾಲೀಕರು ಹಾಗೂ ಕಬ್ಬು ಬೆಳೆಗಾರರ ಸಭೆಯಲ್ಲಿ ಪ್ರತಿ ಟನ್ ಕಬ್ಬಿಗೆ ಎಫ್‌ಆರ್‌ಪಿ ಮೇಲೆ 100 ರೂ. ಆರ್ಥಿಕ ನೆರವು ನೀಡುವ ನಿರ್ಧಾರ ಪ್ರಕಟಿಸಿದ್ದರು. 100 ರೂ. ಆರ್ಥಿಕ ನೆರವಿನಲ್ಲಿ ರಾಜ್ಯ ಸರ್ಕಾರ 50 ರೂ. ಹಾಗೂ ಸಕ್ಕರೆ ಕಾರ್ಖಾನೆಗಳು 50 ರೂ. ನೀಡಬೇಕು ಎಂಬ ತೀರ್ಮಾನವನ್ನು ಕೈಗೊಳ್ಳಲಾಗಿದ್ದು, ಈ ನಿರ್ಧಾರದಂತೆ ರಾಜ್ಯ ಸರ್ಕಾರ ತನ್ನ ಪಾಲಿನ ಆರ್ಥಿಕ ನೆರವಿನ ಹಣ 300 ಕೋಟಿ ರೂ. ಬಿಡುಗಡೆ ಮಾಡಿದೆ ಎಂದು ಪ್ರಕಟಿಸಿದ್ದಾರೆ.



ರಾಜ್ಯದ ಸಕ್ಕರೆ ಕಾರ್ಖಾನೆಗಳ ಪ್ರಸ್ತಾವನೆ ಆಧರಿಸಿ ಕಬ್ಬು ಅಭಿವೃದ್ಧಿ ಆಯುಕ್ತರು ಜಿಲ್ಲಾಧಿಕಾರಿಗಳಿಗೆ ಹಣ ಬಿಡುಗಡೆ ಮಾಡಲಿದ್ದಾರೆ. ರಾಜ್ಯದ ರೈತರು ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಪೂರೈಕೆ ಮಾಡಿದ ಕಬ್ಬಿನ ಪ್ರಮಾಣ ಆಧರಿಸಿ ಅವರ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಪ್ರತಿ ಟನ್‌ಗೆ 50 ರೂ.ಗಳಂತೆ ಜಮಾ ಮಾಡಲು ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಹೇಳಿದ್ದಾರೆ. 2025-26ನೇ ಸಾಲಿನ ಕಬ್ಬು ನುರಿಸುವ ಹಂಗಾಮಿನಲ್ಲಿ 81 ಸಕ್ಕರೆ ಕಾರ್ಖಾನೆ ಗಳು ಕಬ್ಬು ನುರಿಸಿದ್ದು, 29 ಕಾರ್ಖಾನೆಗಳಲ್ಲಿ ಕಬ್ಬು ನುರಿಸುವಿಕೆ ಮುಕ್ತಾಯವಾಗಿದೆ. ಇದುವರೆಗೆ 521 ಲಕ್ಷ ಮೆಟ್ರಿಕ್ ಕಬ್ಬು ನುರಿಸಲಾಗಿದ್ದು, ಈ ಹಂಗಾಮಿನಲ್ಲಿ ಸುಮಾರು 600 ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸುವ ನಿರೀಕ್ಷೆ ಇದೆ. ಮಾರ್ಚ್ ಮೊದಲ ವಾರದ ವೇಳೆಗೆ ಪ್ರಸಕ್ತ ಹಂಗಾಮಿನ ಕಬ್ಬು ನುರಿಸುವಿಕೆ ಅಂತ್ಯವಾಗಲಿದ್ದು, 600 ಲಕ್ಷ ಮೆಟ್ರಿಕ್ ಟನ್ ನುರಿಸುವ ಅಂದಾಜು ಆಧರಿಸಿ 300 ಕೋಟಿ ರೂ. ಆರ್ಥಿಕ ನೆರವು ಬಿಡುಗಡೆ ಮಾಡಲಾಗಿದೆ ಮಾಹಿತಿ ನೀಡಿದ್ದಾರೆ.



ಶಿರಸಿ ಶ್ರೀ ಮಾರಿಕಾಂಬಾ ದೇವಿಯ ಜಾತ್ರೆ ಅಂಗವಾಗಿ ಬುಧವಾರ ಲಕ್ಷಾಂತರ ಭಕ್ತರ ಹರ್ಷೋದ್ಗಾರ, ಜೈಕಾರದೊಂದಿಗೆ ಅತ್ಯಂತ ಸಡಗರ ಸಂಭ್ರಮದಿಂದ ರಥೋತ್ಸವ ನಡೆಯಿತು.

ಬ್ರಿಕ್ಸ್ ರಾಷ್ಟ್ರಗಳು ಸಹಕರಿಸಲಿ

ಬೆಂಗಳೂರು: ಜಾಗತಿಕ ಅಭಿವೃದ್ಧಿಯನ್ನು ಮುನ್ನಡೆಸುವ ಪ್ರಮುಖ ಒಕ್ಕೂಟವಾಗಿರುವ ಬ್ರಿಕ್ಸ್ ರಾಷ್ಟ್ರಗಳು ಕ್ವಾಂಟಮ್ ತಂತ್ರಜ್ಞಾನದ ಅಭಿವೃದ್ಧಿಗೆ ಪರಸ್ಪರ ಸಹಕಾರಕ್ಕೆ ಮುಂದಾಗಬೇಕು ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್.ಭೋಸರಾಜು ಕರೆ ನೀಡಿದರು.



ವಿಧಾನಸೌಧದಲ್ಲಿ ಬ್ರೆಜಿಲ್‌ನ ಸಾರ್ವಜನಿಕ ಸೇವೆಗಳ ನಿರ್ವಹಣೆ ಮತ್ತು ನಾವೀನ್ಯತೆ ಸಚಿವೆ ಎಸ್ತರ್ ಡ್ವೆಕ್ ಅವರ ನೇತೃತ್ವದ ಬ್ರೆಜಿಲ್ ದೇಶದ ಉನ್ನತ ಮಟ್ಟದ ನಿಯೋಗದೊಂದಿಗೆ ಸಭೆ ನಡೆಸಿ ಅವರು ಮಾತನಾಡಿದರು. ಆಸಿಯಾನ್ ನಂತಹ ಇತರ ಅಂತಾರಾಷ್ಟ್ರೀಯ ಒಕ್ಕೂಟಗಳು ಈಗಾಗಲೇ ಕ್ವಾಂಟಮ್ ಶೃಂಗಸಭೆಗಳನ್ನು ಆಯೋಜಿಸುತ್ತಿವೆ. ಬ್ರಿಕ್ಸ್ ಸದಸ್ಯರಾಗಿ ನಾವು ಕೃಷಿ, ಔಷಧ ಸಂಶೋಧನೆ ಜಲಸಂಪನ್ಮೂಲ ನಿರ್ವಹಣೆ, ಹವಾಮಾನ ಮುನ್ಸೂಚನೆ ಮತ್ತು ಪ್ರವಾಹ ನಿರ್ವಹಣೆಯನ್ನು ಸುಧಾರಿಸಲು ಕ್ವಾಂಟಮ್ ತಂತ್ರಜ್ಞಾನವನ್ನು ಬಳಸುವ ನಿಟ್ಟಿನಲ್ಲಿ ಒಟ್ಟಾಗಿ ಕೆಲಸ ಮಾಡಬೇಕು. ಆ ಮೂಲಕ ನಮ್ಮ ಸಮಸ್ಯೆಗಳನ್ನು ಜಂಟಿಯಾಗಿ ಬಗೆಹರಿಸಿಕೊಂಡು ದೇಶದ ಅಭಿವೃದ್ಧಿಗೆ ಮುಂದಾಗಬೇಕಾಗಿದೆ ಎಂದು ಸಚಿವರು ತಿಳಿಸಿದರು.

ರಾಜ್ಯದ ಪ್ರಮುಖ ಸಾಧನೆಗಳನ್ನು ವಿವರಿಸಿದ ಸಚಿವರು, ಕರ್ನಾಟಕ ರಾಜ್ಯ ಈಗಾಗಲೇ ದೇಶದ ಮೊಟ್ಟಮೊದಲ, ಸ್ಥಳೀಯವಾಗಿ ನಿರ್ಮಿಸಲಾದ ವಾಣಿಜ್ಯ ಕ್ವಾಂಟಮ್ ಕಂಪ್ಯೂಟರ್ ಹೊಂದಿದ್ದೇವೆ. ರಾಜ್ಯದ ಮಹತ್ವಾಕಾಂಕ್ಷೆಯ ಗುರಿಗಳನ್ನು ವಿವರಿಸಿದ ಅವರು, 100 ಮಿಲಿಯನ್ ಯುಎಸ್ ಡಾಲರ್ ಮೊತ್ತದ ಕ್ವಾಂಟಮ್ ಇನ್ನೋವೇಶನ್ ಫಂಡ್ ಘೋಷಣೆ ಮತ್ತು ಕ್ವಾಂಟಮ್ ಸಿಟಿ ಅಭಿವೃದ್ಧಿಯೊಂದಿಗೆ ಕರ್ನಾಟಕವು ದೇಶಕ್ಕೇ ಮಾದರಿಯಾಗಿದೆ ಎಂದರು. ಸೋಮವಾರವಷ್ಟೆ ಬೊಲಿವಿಯಾದ ವಿಜ್ಞಾನ ಮತ್ತು ತಂತ್ರಜ್ಞಾನ ಉಪಸಚಿವ ಒಮರ್ ಅಲ್ವೆಡ್ರೊ ಪೆನಲೋಜಾ ಎಸ್ಕಲೇರಾ ಅವರ ನೇತೃತ್ವದ ನಿಯೋಗವು, ಕಾರ್ಯತಂತ್ರದ ಸಹಕಾರವನ್ನು ವಿಸ್ತರಿಸುವ ನಿಟ್ಟಿನಲ್ಲಿ ಸಚಿವ ಎನ್.ಎಸ್.ಭೋಸರಾಜು ಅವರೊಂದಿಗೆ ದ್ವಿಪಕ್ಷೀಯ ಸಭೆ ನಡೆಸಿತು.

ಕಿರುಸುದ್ದಿ

ಸಂಕೇತ್ ಕುಟುಂಬಕ್ಕೆ ಒಂದು ಕೋಟಿ ಪರಿಹಾರ ನೀಡಿ

ಶಿವಮೊಗ್ಗ: ಊರಗಡೂರಿನಲ್ಲಿ ಹತ್ಯೆಯಾದ ಬಾಲಕ ಸಂಕೇತ್ ನಿವಾಸಕ್ಕೆ ಸಂಸದ ಬಿ.ವೈ. ರಾಘವೇಂದ್ರ ಬುಧವಾರ ಭೇಟಿ ನೀಡಿ ಸಾಂತ್ವನ ಹೇಳಿದರು. ಮೃತರ ಕುಟುಂಬಕ್ಕೆ 1 ಲಕ್ಷ ರೂ. ನಗದು ನೀಡಿದರು. ನಂತರ ಮಾಧ್ಯಮದವರ ಜೊತೆ ಮಾತನಾಡಿದ ಸಂಸದ ರಾಘವೇಂದ್ರ, ಮೃತ ಕುಟುಂಬಕ್ಕೆ ಶೀಘ್ರವಾಗಿ ಒಂದು ಕೋಟಿ ರೂ. ನೀಡಬೇಕು. ಕುಟುಂಬ ಮತ್ತು ಜೀವನ ನಿರ್ವಹಣೆಗೂ ಆಧಾರವಾಗಬೇಕು. ಮೃತ ಸಂಕೇತ್ ಅವರ ಏರಿಯಾದಲ್ಲಿ ಭಯದ ವಾತಾವರಣವಿದೆ. ಮನೆ ಮುಂದೆ ರಂಗೋಲಿ ಹಾಕಿ ಹಬ್ಬ ಆಚರಿಸುವ ಸಂದರ್ಭದಲ್ಲಿ ಸ್ಮಶಾನ ಮೌನವಾಗಿದೆ. ಎಲ್ಲೋ ಕುಳಿತುಕೊಂಡು ಸಾಂತ್ವನ ಹೇಳಿದರೆ ಸಾಲದು. ಸರ್ಕಾರ ಜವಾಬ್ದಾರಿತನ ಮೆರೆಯಬೇಕು. ಇಂತಹ ಘಟನೆಯನ್ನು ನಿರ್ಬಂಧಿಸಬೇಕು ಎಂದು ಒತ್ತಾಯಿಸಿದರು. ಮಕ್ಕಳ ನಡುವಿನ ಜಗಳ ಬಿಡಿಸಲು ಹೋದ ಬಾಲಕನ ಹತ್ಯೆಯಾಗಿದೆ. ಇನ್ನೂ ಎಷ್ಟು ಜನರ ಹಿಂದೂಗಳ ಹತ್ಯೆ ನಡೆಯಬೇಕು ಎಂದು ಪ್ರಶ್ನಿಸಿದರು. ಸಣ್ಣ ಹುಡುಗರನ್ನು ಮುಂದಿಟ್ಟುಕೊಂಡು ಹಿಂದು ಸಮಾಜದ ಮೇಲೆ ದಾಳಿ ನಡೆಯುತ್ತಿದೆಯಾ? ಎಂಬ ಅನುಮಾನ ಕಾಡುತ್ತಿದೆ. ಇತ್ತೀಚೆಗೆ ಸೂಳೆಬೈಲು-ಮತ್ತೂರು ರಸ್ತೆಯಲ್ಲಿ ಅಪ್ರಾಪ್ತ ಬಾಲಕರು ಬೈಕ್ ಚಲಾಯಿಸುವಾಗ ಕೋಲು ತೆಗೆದುಕೊಂಡು ಹೊಡೆದುಕೊಂಡು ಹೋಗಿದ್ದಾರೆ. ಈ ಪ್ರಕರಣ ಎಫ್‌ಐಆರ್ ದಾಖಲಾಗಿದೆ. ಶಿರಾಳಕೊಪ್ಪದಲ್ಲಿ ಹಿಂದೂ ಕಾರ್ಯಕರ್ತನ ಮೇಲೆ ಹಲ್ಲೆ ನಡೆದಿದೆ. ಹೀಗೆ ಅಪ್ರಾಪ್ತರನ್ನು ಮುಂದೆ ಇಟ್ಟುಕೊಂಡು ಹತ್ಯೆಗೆ ಧರ್ಮಾಂಧರು ಮುಂದಾಗಿರಬಹುದೇ ಎಂಬ ಅನುಮಾನ ಇದೆ ಎಂದರು.

ಇಂದು ಹಿಂದುಗಳಿಂದ ಪ್ರತಿಭಟನೆ



ಬಾಗಲಕೋಟೆ: ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ನಿಮಿತ್ತ ನಗರದ ಪಂಕಾ ಮಸೀದಿ ಬಳಿ ನಡೆದ ಕಲ್ಲು ತೂರಾಟ ಘಟನೆಯನ್ನು ಖಂಡಿಸಿ, ಘಟನೆ ನಡೆದ ಸಂದರ್ಭದಲ್ಲಿ ಮಸೀದಿಯಲ್ಲಿದ್ದವರ ಮೇಲೆ ಪ್ರಕರಣ ದಾಖಲಿಸಬೇಕು. ಮಸೀದಿಯ ಮುಖ್ಯಸ್ಥರ ಮೇಲೆ ಪ್ರಕರಣ ದಾಖಲಿಸಿ ಅವರನ್ನು ಬಂಧಿಸಬೇಕು ಎಂದು ಒತ್ತಾಯಿಸಿ ಹಮ್ಮಿಕೊಂಡಿರುವ ಹಿಂದುಗಳ ಹೋರಾಟವನ್ನು ಬಾಗಲಕೋಟೆಯ ಬದಲಾಗಿ ಫೆ.26ರಂದು ನವನಗರದ ಜಿಲ್ಲಾ ಆಡಳಿತ ಭವನದ ಎದುರಿಗೆ ಹಮ್ಮಿಕೊಳ್ಳಲಾಗಿದೆ. ಬಂದೋಬಸ್ತ್‌ಗಾಗಿ ಜಿಲ್ಲಾ ಪೊಲೀಸ್ ಇಲಾಖೆ ಎಲ್ಲ ಸಿದ್ಧತೆ ಮಾಡಿಕೊಂಡಿದೆ. ಎಸ್ಪಿ, ಹೆಚ್ಚುವರಿ ಎಸ್ಪಿ ಶ್ರೇಣಿಯ ಅಧಿಕಾರಿಗಳು, 12 ಡಿವೈಎಸ್‌ಪಿಗಳು, 32 ಸಿಪಿಐ, 75 ಪಿಎಸ್‌ಐ ಮತ್ತು 1500ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್ ತಿಳಿಸಿದ್ದಾರೆ.

ಹಳೆ ಬಾಗಲಕೋಟೆಯಲ್ಲಿ ಲಾಕ್‌ಡೌನ್ ವಾತಾವರಣ: ಹಿಂದು ಸಮಾಜದವರಿಂದ ಫೆ.26ರಂದು ನಗರದಲ್ಲಿ ಹೋರಾಟ ಹಮ್ಮಿಕೊಂಡಿದ್ದರ ಹಿನ್ನೆಲೆಯಲ್ಲಿ ಬಾಗಲಕೋಟೆಯಲ್ಲಿ ಮಕ್ಕಳನ್ನು ಶಾಲೆಗೆ ಕಳುಹಿಸಲು, ಕೆಲಸಕ್ಕೆ ವಾಹನಗಳನ್ನು ತೆಗೆದುಕೊಂಡು ಹೋಗುವವರಿಗೆ ಬ್ಯಾರಿಕೇಡ್ ರಸ್ತೆಯಲ್ಲಿ ಹಾಕಿ ಬಂದ್ ಮಾಡಿದ್ದರಿಂದ ತೊಂದರೆಯಾಗುತ್ತಿದ್ದಂತೆ ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಂತೆ ಒಂದೊಂದು ಬ್ಯಾರಿಕೇಡ್ ರಸ್ತೆಯ ಬಳಿ ಸರಿಸಿ ಜನರಿಗೆ ರಸ್ತೆ ಸಂಚಾರಕ್ಕೆ ಅನುಕೂಲ ಮಾಡಿಕೊಟ್ಟರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಭಯ
ಉದ್ಯೋಗ ಭರ್ತಿಗೆ ಕ್ರಮ

ಬೆಂಗಳೂರು: ನೇಮಕಾತಿಗೆ ಸಂಬಂಧಿಸಿದಂತೆ ಕೆಪಿಎಸ್‌ಸಿ ಸೇರಿದಂತೆ ಬೇರೆ ಸಂಸ್ಥೆಗಳಿಗೆ ಹುದ್ದೆ ಭರ್ತಿಗೆ ಜವಾಬ್ದಾರಿ ನೀಡಿದ್ದೇವೆ. ಶಿಕ್ಷಕರ ಹುದ್ದೆ, ಆರೋಗ್ಯ ಇಲಾಖೆಗಳಲ್ಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗುತ್ತಿದೆ. ಒಳಮೀಸಲಾತಿ ವಿಚಾರಕ್ಕೆ ಒಂದಷ್ಟು ಅಡಚಣೆಗಳು ಬರುತ್ತಿದೆ. ನಿರುದ್ಯೋಗಿ ಯುವಕರಿಗೆ ಶಕ್ತಿ ಬರಲಿ ಎಂದೇ ಯುವನಿಧಿ ಯೋಜನೆ ಜಾರಿಗೆ ತಂದಿದ್ದು, ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ, ಮಾಡುತ್ತೇವೆ, ಇದಕ್ಕೆ ಬದ್ಧವಾಗಿದ್ದೇವೆ ಎಂದು ಡಿಸಿಎಂ ಶಿವಕುಮಾರ್ ಅಭಯ ನೀಡಿದರು.



ಬುಧವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಆಗಲಿಲ್ಲ. ಅವರ ಸಮಯದಲ್ಲಿ ಬಹಳಷ್ಟು ಹಗರಣಗಳಾದವು. ನಮಗೆ ಯುವಕರ ನೋವು ಅರ್ಥವಾಗುತ್ತದೆ. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ನಮ್ಮ ಸರ್ಕಾರ ಕೆಲಸ ಮಾಡುತ್ತಿದೆ. ಇದು ನಮ್ಮ ಆದ್ಯತೆ ಎಂದು ಹೇಳಿದರು.

ಮೆಟ್ರೋ ವಿಸ್ತರಣೆ ಸರ್ಕಾರದ ಉದ್ದೇಶಗಳಲ್ಲಿ ಒಂದು

ಮೆಟ್ರೋ ಜಾಲವನ್ನು 2027ರ ಹೊತ್ತಿಗೆ 175 ಕಿಲೋ ಮೀಟರ್‌ಗೆ ವಿಸ್ತರಿಸಲು ಸರ್ವೇ ಮಾಡಿಸುತ್ತಿದ್ದೇವೆ. ಮೆಟ್ರೋ ವಿಚಾರವಾಗಿ ನೀಡಿದ ಭರವಸೆಗಳನ್ನು ಈಡೇರಿಸುತ್ತೇವೆ. ಡಬಲ್ ಡೆಕ್ಕರ್ ವಿಚಾರದಲ್ಲಿ ಸಣ್ಣ ಸ್ಪಷ್ಟನೆ ಕೇಳುತ್ತಿರುವ ಕಾರಣಕ್ಕೆ ಸಧ್ಯದಲ್ಲೇ ಕೇಂದ್ರ ಸಚಿವರನ್ನು ಭೇಟಿ ಮಾಡುತ್ತೇನೆ. ಮೆಟ್ರೋ ವಿಸ್ತರಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವುದಕ್ಕೆ ನಾವು ಬದ್ಧವಾಗಿದ್ದೇವೆ. ಇದು ನಮ್ಮ ಸರ್ಕಾರದ ಉದ್ದೇಶ ಎಂದು ಶಿವಕುಮಾರ್ ಹೇಳಿದರು.

ಗುತ್ತಿಗೆದಾರರ ಜತೆಗೆ ಮಾತುಕತೆ ಮಾಡುತ್ತೇನೆ

ಎಲ್ಲಾ ಇಲಾಖೆಗಳಲ್ಲಿ ಬಿಲ್ ಬಾಕಿ ಇರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, ಯಡಿಯೂರಪ್ಪ ಅವರು ಹಾಗೂ ಬೊಮ್ಮಾಯಿ ಅವರ ಸರ್ಕಾರದಲ್ಲಿ ಯಾವುದೇ ಆರ್ಥಿಕ ಸ್ಥಿತಿಗತಿಯನ್ನು ನೋಡದೆ ಹೆಚ್ಚಿನ ಕಾಮಗಾರಿಗಳಿಗೆ ಅನುಮತಿ ನೀಡಲಾಯಿತು. ಈ ಕಾರಣಕ್ಕೆ ಈಗ ಸಮಸ್ಯೆ ಉಂಟಾಗಿದೆ. ನಾವು ಅನೇಕ ಗುತ್ತಿಗೆದಾರರಿಗೆ ಹಣ ಲಭ್ಯತೆ ಇಲ್ಲದೇ ಇರುವ ಕಾರಣಕ್ಕೆ ಕಾಮಗಾರಿಗಳನ್ನು ತೆಗೆದುಕೊಳ್ಳಬೇಡಿ ಎಂದು ಸಲಹೆ ನೀಡಿದ್ದರೂ, ಒಂದಷ್ಟು ಜನ ಕಾಮಗಾರಿಗಳನ್ನು ತೆಗೆದುಕೊಂಡು ಸಂಕಷ್ಟ ಅನುಭವಿಸುತ್ತಿದ್ದಾರೆ ಎಂದರು. ಸರ್ಕಾರದ ವಿರುದ್ಧ ಗುತ್ತಿಗೆದಾರರ ಪ್ರತಿಭಟನೆ ಬಗ್ಗೆ ಅವರ ಜತೆಗೆ ಚರ್ಚೆ ಮಾಡುತ್ತೇನೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ನಟಿ ರನ್ಯಾ ರಾವ್ ವಿರುದ್ಧ ಆರೋಪ ಪಟ್ಟಿ ಸಲ್ಲಿಸಿದ ಇಡಿ

ಬೆಂಗಳೂರು: ಅಕ್ರಮ ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಬಂಧಿತರಾಗಿರುವ ನಟಿ ರನ್ಯಾ ರಾವ್ ಸೇರಿದಂತೆ ಮೂವರ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಆರೋಪಪಟ್ಟಿ ಸಲ್ಲಿಸಿದ್ದು, 2024ರ ಮಾರ್ಚ್‌ನಿಂದ 2025ರ ಮಾರ್ಚ್ ಅವಧಿಯಲ್ಲಿ ಸುಮಾರು 102.55 ಕೋಟಿ ರೂ. ಮೌಲ್ಯದ 127.28 ಕೆ.ಜಿ ಚಿನ್ನವನ್ನು ಅಕ್ರಮವಾಗಿ ಭಾರತಕ್ಕೆ ಸಾಗಿಸಲಾಗಿದೆ ಎನ್ನುವ ಅಂಶ ತನಿಖೆಯಿಂದ ಬಯಲಾಗಿದೆ.



ಹರ್ಷವರ್ಧಿನಿ ರನ್ಯಾ ಅಲಿಯಾಸ್ ರನ್ಯಾ ರಾವ್, ತರುಣ್ ಕೊಂಡೂರು ಮತ್ತು ಸಾಹಿಲ್ ಸಕರಿಯಾ ಜೈನ್ ವಿರುದ್ಧ ದೊಡ್ಡ ಪ್ರಮಾಣದ ಚಿನ್ನದ ಕಳ್ಳಸಾಗಣೆ ಮತ್ತು ಹಣ ಅಕ್ರಮ ವರ್ಗಾವಣೆ ಆರೋಪದಡಿ ಬೆಂಗಳೂರಿನ ಪಿಎಂಎಲ್‌ಎ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಿದ್ದು, ಅಕ್ರಮ ಚಿನ್ನವನ್ನು ದೇಶೀಯ ಮಾರುಕಟ್ಟೆಯಲ್ಲಿ ವ್ಯವಸ್ಥಿತ ಜಾಲದ ಮೂಲಕ ಮಾರಾಟ ಮಾಡಿ, ಇದರಿಂದ ಬಂದ ಹಣವನ್ನು ಹವಾಲಾ ಮಾರ್ಗಗಳ ಮೂಲಕ ವಿದೇಶಕ್ಕೆ ರವಾನಿಸಲಾಗಿದೆ ಎಂದು ಆರೋಪಪಟ್ಟಿಯಲ್ಲಿ ದಾಖಲಿಸಲಾಗಿದೆ.

ಅಲ್ಲದೇ, ಈ ವ್ಯವಹಾರವು ಅತ್ಯಂತ ಸಂಘಟಿತ ರೀತಿಯಲ್ಲಿ ನಡೆದಿದ್ದು, ಅಕ್ರಮ ಹಣವನ್ನು ಕಾನೂನುಬದ್ಧ ವ್ಯಾಪಾರದ ಹಣವೆಂದು ತೋರಿಸಲು ಹತ್ತಾರು ಬ್ಯಾಂಕ್ ಖಾತೆಗಳ ಮೂಲಕ ವರ್ಗಾವಣೆ ಮಾಡಲಾಗಿತ್ತು ಎಂದು ಇ.ಡಿ. ಚಾರ್ಜ್‌ಶೀಟ್‌ನಲ್ಲಿ ಆರೋಪಿಸಿದೆ. ತನಿಖೆಯ ಭಾಗವಾಗಿ ಈಗಾಗಲೇ ರನ್ಯಾ ರಾವ್ ಅವರಿಗೆ ಸೇರಿದ 34 ಕೋಟಿ ರೂ. ಮೌಲ್ಯದ ಆಸ್ತಿಯನ್ನು ಜಪ್ತಿ ಮಾಡಲಾಗಿದೆ. ದೇಶದ ಹಣಕಾಸು ವ್ಯವಸ್ಥೆಗೆ ಧಕ್ಕೆ ತರುವ ಇಂತಹ ಕೃತ್ಯಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಇ.ಡಿ. ಹೇಳಿದೆ.

2025ರ ಮಾರ್ಚ್ 3 ರಂದು ದುಬೈನಿಂದ ಬೆಂಗಳೂರಿನ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ್ದ ಹರ್ಷವರ್ಧಿನಿ ರನ್ಯಾ (ರನ್ಯಾ ರಾವ್) ಅವರನ್ನು ಕಂದಾಯ ಗುಪ್ತಚರ ನಿರ್ದೇಶನಾಲಯ (ಡಿಆರ್‌ಐ) ಅಧಿಕಾರಿಗಳು ಬಂಧಿಸಿದ್ದರು. ಈ ವೇಳೆ ಅವರ ಬಳಿಯಿದ್ದ ಸುಮಾರು 12.56 ಕೋಟಿ ರೂ. ಮೌಲ್ಯದ 14.2 ಕೆಜಿ ಚಿನ್ನದ ಬಿಸ್ಕೆಟ್‌ಗಳನ್ನು ವಶಪಡಿಸಿಕೊಳ್ಳಲಾಗಿತ್ತು.

ಜೆಡಿಎಸ್ ವಿಪ್ ಉಲ್ಲಂಘನೆ: ನಗರಸಭೆ ಏಳು ಸದಸ್ಯರು ಅನರ್ಹ

ನೆಲಮಂಗಲ: ನಗರಸಭೆ ಅಧ್ಯಕ್ಷರು, ಉಪಾಧ್ಯಕ್ಷರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಮತ ಚಲಾಯಿಸಿದ್ದ ಜೆಡಿಎಸ್‌ನ ಏಳು ಸದಸ್ಯರನ್ನು ವಿಪ್ ಉಲ್ಲಂಘನೆ ದೂರಿನ ಅನ್ವಯ ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಬಸವರಾಜು ಅವರು ಸದಸ್ಯಸ್ಥಾನದಿಂದ ಅನರ್ಹಗೊಳಿಸಿ ಆದೇಶ ಮಾಡಿದ್ದಾರೆ.

ಆನಂದ್.ಜಿ, ಶಾರದಉಮೇಶ್, ದಾಕ್ಷಾಯಣಿ ರವಿಕುಮಾರ್, ಬಿ.ಪದ್ಮನಾಭ, ಭಾರತಿಬಾಯಿ, ನರಸಿಂಹಮೂರ್ತಿ, ಲತಾಹೇಮಂತ್‌ಕುಮಾರ್ ಅನರ್ಹಗೊಂಡ ನಗರಸಭೆ ಸದಸ್ಯರು. ಇವರು ಜೆಡಿಎಸ್ ಬಿ.ಫಾರಂ ಪಡೆದು ಚುನಾವಣೆ ಗೆದಿದ್ದರು. ಅನಂತರ ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದರು. 2025 ಫೆ.13ರಂದು ನಡೆದ ನೆಲಮಂಗಲ ನಗರಸಭೆ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಲ್ಲಿ ವಿಪ್ ಜಾರಿಯಾಗಿತ್ತು. ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಪರ 18 ಮತಗಳು ಚಲಾವಣೆಯಾಗಿ ಗೆಲುವು ಪಡೆದರೆ ಜೆಡಿಎಸ್ ಅಭ್ಯರ್ಥಿ ಹತ್ತು ಮತ ಪಡೆದು ಪರಾಭವಗೊಂಡಿದ್ದರು.

ಕಾಂಗ್ರೆಸ್ ಅಭ್ಯರ್ಥಿಗೆ ಜೆಡಿಎಸ್‌ನಿಂದ ಗೆದ್ದ 7 ಸದಸ್ಯರು ಮತ ಚಲಾವಣೆ ಮಾಡಿದ ಹಿನ್ನೆಲೆಯಲ್ಲಿ ವಿಪ್ ಉಲ್ಲಂಘನೆಯಾಗಿ ಚುನಾವಣಾ ಅಕ್ರಮ ಮಾಡಿದ್ದಾರೆಂದು ಡಿಸಿಗೆ ಜೆಡಿಎಸ್ ಜಿಲ್ಲಾಧ್ಯಕ್ಷ ಮುನೇಗೌಡ ದೂರು ಸಲ್ಲಿಸಿದ್ದರು. ಈ ಪ್ರಕರಣವನ್ನು ದಾಖಲಿಸಿಕೊಂಡಿದ್ದ ಜಿಲ್ಲಾಧಿಕಾರಿಗಳು ಅರ್ಜಿದಾರರು ಹಾಗೂ ಎದುರುದಾರರನ್ನು ವಿಚಾರಣೆ ಮಾಡಿದ ಬಳಿಕ 7 ಸದಸ್ಯರನ್ನು ಅನರ್ಹಗೊಳಿಸುವ ಮೂಲಕ ಅಂತಿಮ ಆದೇಶ ನೀಡಿದ್ದಾರೆ.

> ಉಪಾಧ್ಯಕ್ಷನಾಗಲು ಕಾಂಗ್ರೆಸ್ ನನಗೆ ಅವಕಾಶ ಮಾಡಿಕೊಟ್ಟಿತ್ತು, ಈಗ ಜಿಲ್ಲಾಧಿಕಾರಿಗಳು ನಮ್ಮ ಏಳು ಸದಸ್ಯರನ್ನು ಅನರ್ಹಗೊಳಿಸಿದ್ದಾರೆ, ಕಾನೂನಿಗೆ ತಲೆಬಾಗುತ್ತೇವೆ. ಮುಂದಿನ ಕಾನೂನು ಹೋರಾಟ ಮಾಡುತ್ತೇವೆ.
>
> ■ ಆನಂದ್, ಅನರ್ಹಗೊಂಡ ನಗರಸಭೆ ಉಪಾಧ್ಯಕ್ಷ

ಸಮಬಲ: ನಗರಸಭೆಯ 7 ಸದಸ್ಯರು ಅನರ್ಹವಾದ ಹಿನ್ನಲೆ ಕಾಂಗ್ರೆಸ್ ಹಾಗೂ ಮೈತ್ರಿ ಪಕ್ಷಗಳ ಸದಸ್ಯ ಬಲ ಸಮಬಲವಾಗಿದೆ. ಮುಂದಿನ ರಾಜಕೀಯ ಲೆಕ್ಕಾಚಾರ ಬೂದಿ ಮುಚ್ಚಿದ ಕೆಂಡದಂತಾಗಿದೆ.

ಗ್ರಾಮಗಳಲ್ಲಿ ಕಾಡಾನೆ ಪ್ರತ್ಯಕ್ಷ: ಆತಂಕ

ಚಿಕ್ಕಮಗಳೂರು: ನಗರ ಸಮೀಪದ ಮೂಗ್ತಿಹಳ್ಳಿ ಮತ್ತು ಶಿರಗುಂದ ಗ್ರಾಮಗಳಲ್ಲಿ ಎರಡು ಆನೆಗಳು ಕಾಣಿಸಿಕೊಂಡು ಭೀತಿ ಮೂಡಿಸಿವೆ. ಅರಣ್ಯ ಇಲಾಖೆಯು ಅವುಗಳನ್ನು ಹಿಮ್ಮೆಟ್ಟಿಸುವ ಕಾರ್ಯಾಚರಣೆ ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ ತಾಲ್ಲೂಕು ದಂಡಾಧಿಕಾರಿಗಳು ತಾಲೂಕಿನ 12 ಗ್ರಾಮಗಳಲ್ಲಿ ಮುಂಜಾಗ್ರತೆಯಾಗಿ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ.

ತಾಲೂಕಿನ ಹುಣಿಸೇಹಳ್ಳಿ ಗ್ರಾಮದಲ್ಲಿ ಒಂದೇ ವಾರದ ಅಂತರದಲ್ಲಿ ಇಬ್ಬರನ್ನು ಕಾಡಾನೆ ಬಲಿ ಪಡೆದಿರುವ ಬೆನ್ನಲ್ಲೇ ನಗರ ಸಮೀಪದ ಗ್ರಾಮಗಳಲ್ಲಿ ಆನೆಗಳು ಕಾಣಿಸಿಕೊಂಡಿರುವುದು ಆತಂಕಕ್ಕೆ ಕಾರಣವಾಗಿದೆ. ಆನೆಗಳ ಹಾವಳಿಯಿಂದ ಸರಣಿ ಸಾವು-ನೋವು ಉಂಟಾಗುತ್ತಿರುವ ಹಿನ್ನೆಲೆಯಲ್ಲಿ ಎಚ್ಚೆತ್ತುಕೊಂಡಿರುವ ಅರಣ್ಯ ಇಲಾಖೆ ಅನಾಹುತ ಸಂಭವಿಸುವಮುನ್ನವೇ ಅವುಗಳನ್ನು ಹಿಮ್ಮೆಟ್ಟಿಸುವ ಕಾರ್ಯಾಚರಣೆ ಹಮ್ಮಿಕೊಳ್ಳುತ್ತಿದೆ.

ರೋಸಿ-ಸಿಂಧು ಶ್ವಾನ ಜೋಡಿ ನೆರವು: ಕಾಫಿನಾಡಿನಲ್ಲಿ ಜೀವಭಯ ಮೂಡಿಸಿರುವ ಕಾಡಾನೆಗಳ ಜಾಡು ಪತ್ತೆ ಹಚ್ಚಿ ಅರಣ್ಯ ಇಲಾಖೆಗೆ ನೆರವಾಗಲು ರೋಸಿ ಮತ್ತು ಸಿಂಧು ಹೆಸರಿನ ಶ್ವಾನಗಳು ಸಜ್ಜಾಗಿವೆ.

ವಾರ್ಷಿಕ ಗೌರವ ಪ್ರಶಸ್ತಿ ಪ್ರಕಟ

ಬೆಂಗಳೂರು: ಕರ್ನಾಟಕ ಜಾನಪದ ಅಕಾಡೆಮಿಯ ವತಿಯಿಂದ 2025ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿ, ತಜ್ಞ ಪ್ರಶಸ್ತಿ ಹಾಗೂ 2024ನೇ ಸಾಲಿನ ಪುಸ್ತಕ ಬಹುಮಾನ ಪಟ್ಟಿ ಪ್ರಕಟಿಸಲಾಗಿದೆ.

ಕರ್ನಾಟಕ ಜಾನಪದ ಅಕಾಡೆಮಿಯ ವತಿಯಿಂದ 30 ಜನ ಕಲಾವಿದರಿಗೆ 2025ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿಯನ್ನು ಮತ್ತು ಇಬ್ಬರು ವಿದ್ವಾಂಸರಿಗೆ ತಜ್ಞ ಪ್ರಶಸ್ತಿಯನ್ನು ಹಾಗೂ ಇಬ್ಬರು ಜಾನಪದ ಲೇಖಕರಿಗೆ 2024ನೇ ಸಾಲಿನ ಪುಸ್ತಕ ಬಹುಮಾನವನ್ನು ಪ್ರದಾನ ಮಾಡಲಾಗುತ್ತಿದೆ. ಚಿಕ್ಕಮಗಳೂರು ರವಿ ಎಚ್.ಎಂ., ಚಾಮರಾಜನಗರದ ಬಸವರಾಜು, ದಕ್ಷಿಣ ಕನ್ನಡ ಜಿಲ್ಲೆ ಸುಮತಿ ಕೊರಗ, ಉಡುಪಿಯ ಗುಲಾಬಿ ಗೌಡ್ತಿ, ಕೊಡಗು ಜಿಲ್ಲೆಯ ಅಮ್ಮಣಿ, ಬೆಳಗಾವಿಯ ಭೀಮಪ್ಪ ಸಿದ್ದಪ್ಪ ಮುತ್ನಾಳ್, ಧಾರವಾಡದ ಪ್ರಕಾಶ ಮಲ್ಲಿಗವಾಡ, ವಿಜಯಪುರದ ಜ್ಯೋತಿರ್ಲಿಂಗ ಹೊನಕಟ್ಟಿ, ಬಾಗಲಕೋಟೆಯ ಚಂದ್ರಲಿಂಗಪ್ಪ ನಿಂಗಪ್ಪ ಬಸರಕೋಡ, ಉತ್ತರ ಕನ್ನಡ ಜಿಲ್ಲೆಯ ಗೌರಿ ನಾಗಪ್ಪ ನಾಯ್ಕ, ಹಾವೇರಿಯ ಭಿಕ್ಷಾಪತಿ ಸುಂಕಪ್ಪ ಮೋತಿ, ಗದಗದ ಕಾಶೀಮಸಾಬ ಹುಸೇನಸಾಬ ಮುಚಾವರ ಅವರಿಗೆ 2025ನೇ ಸಾಲಿನ ವಾರ್ಷಿಕ ಗೌರವ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ. ಕಲಬುರ್ಗಿಯ ಭಾಗಪ್ಪ, ಬೀದರದ ಇಂದ್ರಮ್ಮ, ರಾಯಚೂರಿನ ಯಂಕನಗೌಡ, ಕೊಪ್ಪಳದ ರಾಮಣ್ಣ, ವಿಜಯನಗರದ ಕಿಂಡ್ರಿ ಲಕ್ಷ್ಮೀಪತಿ ಹಾಗೂ ಯಾದಗಿರಿಯ ಹಣಮಂತ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ತಜ್ಞ ಪ್ರಶಸ್ತಿ: ತುಮಕೂರು ಜಿಲ್ಲೆ ಡಾ. ಚಿಕ್ಕಣ್ಣ ಯಣ್ಣೆಕಟ್ಟೆ ಅವರಿಗೆ ಡಾ.ಜೀ.ಶಂ.ಪ ತಜ್ಞ ಪ್ರಶಸ್ತಿ ಕಲಬುರ್ಗಿ ಜಿಲ್ಲೆಯ ಡಾ. ಎಚ್. ಟಿ. ಪೋತೆ ಅವರಿಗೆ ಡಾ.ಬಿ.ಎಸ್.ಗದ್ದಗೀಮಠ ತಜ್ಞ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ.

ಫೆ.27ರಂದು ಪ್ರಶಸ್ತಿ ಪ್ರದಾನ ಪ್ರಶಸ್ತಿ ಪ್ರದಾನ ಕಾರ್ಯಕ್ರಮವನ್ನು ಫೆ.27 ರಂದು ಬೆಳಿಗ್ಗೆ 11.00 ಗಂಟೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದೆ. ಸಚಿವ ಶಿವರಾಜ ಎಸ್. ತಂಗಡಗಿ ಕಾರ್ಯಕ್ರಮದ ಉದ್ಘಾಟಿಸಿ, ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಶಾಸಕ ಉದಯ್ ಬಿ.ಗರುಡಾಚಾರ್, ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಡಾ. ಗೊಲ್ಲಹಳ್ಳಿ ಶಿವಪ್ರಸಾದ್, ಡಾ.ಆರ್. ಸುನಂದಮ್ಮ ಭಾಗವಹಿಸಲಿದ್ದಾರೆ.

ಗಡಿನಾಡು ಕನ್ನಡಿಗರ ಸಮಸ್ಯೆಗೆ ಪರಿಹಾರ ನೀಡಿ

ಬೆಂಗಳೂರು/ಜತ್ತ: ಮಹಾರಾಷ್ಟ್ರದ ಗಡಿಭಾಗದಲ್ಲಿರುವ ಕನ್ನಡಿಗರ ದಶಕಗಳ ಸಮಸ್ಯೆಗಳನ್ನು ಬಗೆಹರಿಸುವಂತೆ ಆಗ್ರಹಿಸಿ ಜತ್ ತಾಲೂಕಿನ ಮಾಜಿ ಶಾಸಕ ವಿಕ್ರಮಸಿಂಹ ಸಾವಂತ್ ಅವರು ರಾಜ್ಯ ಸರ್ಕಾರದ ಕಾನೂನು ಮತ್ತು ಗಡಿ ಉಸ್ತುವಾರಿ ಸಚಿವ ಎಚ್.ಕೆ. ಪಾಟೀಲ್ ಅವರಿಗೆ ಮನವಿ ಸಲ್ಲಿಸಿದರು.

ನಗರದಲ್ಲಿ ಸಚಿವರನ್ನು ಭೇಟಿ ಮಾಡಿದ ವಿಕ್ರಮಸಿಂಹ ಸಾವಂತ್ ಅವರು, ಮಹಾರಾಷ್ಟ್ರದ ಜತ್, ಅಕ್ಕಲಕೋಟೆ, ದಕ್ಷಿಣ ಸೊಲ್ಲಾಪುರ, ಮಂಗಳವೇಢಾ, ಕೊಲ್ಹಾಪುರ ಮತ್ತು ಉಮರ್ಗಾ ಭಾಗದ ಕನ್ನಡಿಗರು ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳ ಕುರಿತು ಸುದೀರ್ಘ ಚರ್ಚೆ ನಡೆಸಿದರು. ಗಡಿಭಾಗದ ಕನ್ನಡಿಗರು ಶಿಕ್ಷಣ, ಕುಡಿಯುವ ನೀರು, ನೀರಾವರಿ, ಆರೋಗ್ಯ, ಉದ್ಯೋಗದಂತಹ ಮೂಲಭೂತ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಇವರಿಗೆ ಸರ್ಕಾರಿ ಯೋಜನೆಗಳು ಸರಿಯಾಗಿ ತಲುಪುತ್ತಿಲ್ಲ. ಹೀಗಾಗಿ ಗಡಿನಾಡು-ಹೊರನಾಡು ಕನ್ನಡಿಗರಿಗೆ ಸಮಾನ ಸ್ಥಾನಮಾನ ನೀಡಬೇಕು ಎಂದು ಸಾವಂತ್ ಒತ್ತಾಯಿಸಿದರು.

ಪ್ರಮುಖ ಬೇಡಿಕೆ

- ಗಡಿಭಾಗದ ವಿದ್ಯಾರ್ಥಿಗಳಿಗೆ ಮಾತೃಭಾಷೆಯಲ್ಲೇ ಶಿಕ್ಷಣ ನೀಡಲು ಕ್ರಮ ವಹಿಸುವುದು.
- ಗಡಿ ಪ್ರದೇಶಗಳ ಸಮಗ್ರ ಅಭಿವೃದ್ಧಿಗಾಗಿ ವಿಶೇಷ ಜಂಟಿ ಕ್ರಿಯಾ ಯೋಜನೆ ರೂಪಿಸುವುದು.

ಪ್ರತ್ಯೇಕ ಪ್ರಕರಣ: ತಹಶೀಲ್ದಾರ್ ರೂಪಗೆ ದಂಡ

ಬೆಂಗಳೂರು: ಸಾರ್ವಜನಿಕರು ಮಾಹಿತಿ ಕೋರಿ ಸಲ್ಲಿಸಿದ ಅರ್ಜಿಗಳಿಗೆ ಸಕಾಲದಲ್ಲಿ ಮಾಹಿತಿ ನೀಡದ ಮಾಲೂರು ತಾಲೂಕು ತಹಶೀಲ್ದಾರ್ ರೂಪಾ ಅವರಿಗೆ ಕರ್ನಾಟಕ ಮಾಹಿತಿ ಆಯೋಗದ ಪೀಠ ಸಂಖ್ಯೆ-5ರಲ್ಲಿ ಪ್ರತ್ಯೇಕ ಮೂರು ಪ್ರಕರಣಗಳಿಂದ ಒಟ್ಟು 60 ಸಾವಿರ ರೂ. ದಂಡ ವಿಧಿಸಲಾಗಿದೆ.

ಎರಡು ಪ್ರಕರಣಗಳಲ್ಲಿ ತಲಾ 25 ಸಾವಿರ ರೂ. ಹಾಗೂ ಒಂದು ಪ್ರಕರಣದಲ್ಲಿ 10 ಸಾವಿರ ರೂ.ಗಳ ದಂಡ ವಿಧಿಸಿ ಕರ್ನಾಟಕ ಮಾಹಿತಿ ಆಯೋಗದ ಪೀಠ-5 ರ ರಾಜ್ಯ ಮಾಹಿತಿ ಆಯುಕ್ತರಾದ ರಾಜಶೇಖರ ಎಸ್. ಅವರು ಆದೇಶ ಮಾಡಿದ್ದಾರೆ.

ಮಾಹಿತಿ ಆಯೋಗದ ಆದೇಶ ಇದ್ದರೂ ಸಹ ಮಾಹಿತಿ ನೀಡದೇ ನಿರ್ಲಕ್ಷ್ಯ ತೋರಿಸಿರುವುದು ಹಾಗೂ ವಿಚಾರಣೆಗೆ ಗೈರು ಹಾಜರಾಗಿದ್ದರಿಂದ ದಂಡ ವಿಧಿಸಿದ್ದು, ವೇತನದಲ್ಲಿ ಒಂದೇ ಬಾರಿಗೆ ಕಟಾವು ಮಾಡಿ ಆಯೋಗದ ಖಾತೆಗೆ ತುಂಬುವಂತೆ ಕೋಲಾರ ಸಹಾಯಕ ಆಯುಕ್ತರು ಹಾಗೂ ಕೋಲಾರ ಜಿಲ್ಲಾಧಿಕಾರಿ ಅವರಿಗೆ ನಿರ್ದೇಶನ ನೀಡಿದ್ದಾರೆ.

ರೈಲು ಪ್ರಯಾಣದಲ್ಲಿ ಕಳೆದುಹೋದ ಬ್ಯಾಗ್, ಬೆಲೆಬಾಳುವ ವಸ್ತು ಪತ್ತೆಹಚ್ಚಿ, ಸೂಕ್ತ ಪರಿಶೀಲನೆ ಮಾಡುವ ಕಾಯಕ
ಆರ್‌ಪಿಎಫ್ ಸಿಬ್ಬಂದಿಯಿಂದ ಆಪರೇಷನ್ ಅಮಾನತ್

ಅನುಪಾ ಕೆ.

ಬೆಂಗಳೂರು: ರೈಲ್ವೆ ನಿಲ್ದಾಣದ ಪ್ಲಾಟ್‌ಫಾರ್ಮ್, ವಿಶ್ರಾಂತಿ ಕೊಠಡಿ, ರೈಲಿನಲ್ಲಿ ಮುಂತಾದ ಕಡೆಗಳಲ್ಲಿ ಕೆಲ ಪ್ರಯಾಣಿಕರು ತಮ್ಮ ಲಗೇಜು, ಮೊಬೈಲ್, ಪರ್ಸ್ ಸೇರಿದಂತೆ ಹಲವು ಬೆಲೆಬಾಳುವ ವಸ್ತುಗಳನ್ನು ಮರೆತು ಹೋಗುತ್ತಾರೆ. ಅಂತಹ ಲಗೇಜು, ವಸ್ತುಗಳನ್ನು ಹುಡುಕಿ, ಅದನ್ನು ಜೋಪಾನವಾಗಿ ಇಟ್ಟುಕೊಂಡು ಪ್ರಯಾಣಿಕರಿಗೆ ಮರಳಿ ನೀಡುವ ಕಾರ್ಯವನ್ನು ನೈರುತ್ಯ ರೈಲ್ವೆ ಇಲಾಖೆ ಮಾಡುತ್ತಿದೆ.

ಪ್ರಯಾಣಿಕರ ಲಗೇಜುಗಳನ್ನು ಸುರಕ್ಷಿತವಾಗಿ ಮರಳಿ ನೀಡಬೇಕೆನ್ನುವ ನಿಟ್ಟಿನಲ್ಲಿ ನೈರುತ್ಯ ರೈಲ್ವೆ ವತಿಯಿಂದ ಆರ್‌ಪಿಎಫ್ ಸಿಬ್ಬಂದಿಗಳು ಆಪರೇಷನ್ ಅಮಾನತ್ ಎನ್ನುವ ವಿಶೇಷ ಕಾರ್ಯಾಚರಣೆ ನಡೆಸುತ್ತಾರೆ. ಇದರಿಂದ ಪ್ರಯಾಣಿಕರು ರೈಲು ಪ್ರಯಾಣದ ಸಂದರ್ಭದಲ್ಲಿ ಪ್ರಯಾಣಿಕರು ಮರೆತು ಹೋದ ಅಥವಾ ಕಳೆದುಹೋದ ಬ್ಯಾಗ್, ಬೆಲೆಬಾಳುವ ವಸ್ತು ಮತ್ತು ಲಗೇಜ್‌ಗಳನ್ನು ಪತ್ತೆಹಚ್ಚಿ, ಸೂಕ್ತ ಪರಿಶೀಲನೆಯ ನಂತರ ಮರಳಿ ಮಾಲೀಕರಿಗೆ ತಲುಪಿಸುವ ಕಾರ್ಯ ಮಾಡುತ್ತಿದ್ದಾರೆ.

ಅದರಲ್ಲೂ 2023 ರಿಂದ 2026 ಫೆ.22 ರವರೆಗೆ 2,239 ಪ್ರಯಾಣಿಕರು ರೈಲು ಹಾಗೂ ರೈಲ್ವೆ ನಿಲ್ದಾಣದಲ್ಲಿ ಸುಮಾರು 68,588,794 ಮೌಲ್ಯದ ಸಾಮಗ್ರಿಗಳನ್ನು ಮರೆತು ಹೋಗಿದ್ದರು. ಅವುಗಳನ್ನು ಪ್ರಯಾಣಿಕರಿಗೆ ಹಿಂತಿರುಗಿಸುವಲ್ಲಿ ಆರ್‌ಪಿಎಫ್ ಸಿಬ್ಬಂದಿ ಯಶಸ್ವಿಯಾಗಿದ್ದಾರೆ.



ಪ್ರಯಾಣಿಕರೊಬ್ಬರು ರೈಲಿನಲ್ಲಿನ ಕಳೆದುಕೊಂಡಿದ್ದ 80,000 ರೂ.ಮೌಲ್ಯದ ಚಿನ್ನದ ಉಂಗುರ ಹಾಗೂ ಪ್ರಯಾಣಿಕರೊಬ್ಬರು ಇತ್ತೀಚೆಗೆ ಯಲಹಂಕ ರೈಲ್ವೆ ನಿಲ್ದಾಣದಲ್ಲಿ ಪ್ರಯಾಕರೊಬ್ಬರು ಕಳೆದುಕೊಂಡಿದ್ದ 17 ಲಕ್ಷ ರೂ. ಮೌಲ್ಯದ 100 ಗ್ರಾಂ ಚಿನ್ನಾಭರಣ ಮತ್ತು 2 ಲಕ್ಷ ರೂ.ನಗದು, ಹೀಗೆ ಹಲವು ಪ್ರಯಾಣಿಕರ ಬೆಲೆ ಬಾಳುವ ಸಾಮಾಗ್ರಿಗಳನ್ನು ಆರ್‌ಪಿಎಫ್ ಸಿಬ್ಬಂದಿ ಮರಳಿಸಿದ್ದಾರೆ.

ಹಿಂತಿರುಗಿಸಲಾದ ಲಗೇಜು, ಮೌಲ್ಯದ(ರೂ.ಗಳಲ್ಲಿ) ವಿವರ

	2023		2024		2025		2026 ಫೆ.22 ರವರೆಗೆ	
ವಿಭಾಗ	ಲಗೇಜ್	ಮೌಲ್ಯ	ಲಗೇಜ್	ಮೌಲ್ಯ	ಲಗೇಜ್	ಮೌಲ್ಯ	ಲಗೇಜ್	ಮೌಲ್ಯ
ಮೈಸೂರು	219	56,26,728	194	50,36,716	266	89,93,732	35	10,62,479
ಬೆಂಗಳೂರು	228	77,42,549	239	84,29,324	256	88,29,605	32	40,32,448
ಹುಬ್ಬಳ್ಳಿ	259	56,39,502	233	61,90,518	233	59,29,594	45	10,75,599
ಒಟ್ಟು ಪ್ರಕರಣ/ಮೊತ್ತ	706	1,90,08,779	666	1,96,56,558	755	2,37,52,931	112	61,70,526

ಕಳೆದುಹೋದ ಲಗೇಜುಗಳನ್ನು ಹೇಗೆ ಪಡೆಯಬಹುದು?

ಪ್ರಯಾಣಿಕರು ರೈಲು ಅಥವಾ ರೈಲ್ವೆ ನಿಲ್ದಾಣದಲ್ಲಿ ಮರೆತು ಹೋದ ತಮ್ಮ ಲಗೇಜುಗಳನ್ನು ಮರಳಿ ಪಡೆಯಲು ಎರಡು ವಿಧಾನವನ್ನು ಹೊಂದಿದೆ. ಅದರಲ್ಲಿ ಮೊದಲನೇಯದಾಗಿ ಪ್ರಯಾಣಿಕರು ಯಾವ ಬೋಗಿಯ ಯಾವ ಬರ್ತ್‌ನಲ್ಲಿ ಲಗೇಜ್ ಬಿಡಲಾಗಿದೆ ಎನ್ನುವ ವಿಚಾರವನ್ನು ರೈಲ್ವೆ ಮದದ್ ದೂರವಾಣಿ ಸಂಖ್ಯೆ 139 ಅಥವಾ ailmadad.indianrailways.gov.in ವೆಬ್‌ಸೈಟ್‌ನಲ್ಲಿ ಮಾಹಿತಿ ನೀಡಬೇಕು. ಆಗ ಆರ್‌ಪಿಎಫ್ ಸೆಕ್ಯೂರಿಟಿ ಕಂಟ್ರೋಲ್ ರೂಮ್‌ಗೆ ಬರುವ ಮಾಹಿತಿ ಆಧರಿಸಿ ರೈಲಿನ ಮುಂದಿನ ನಿಲ್ದಾಣ ಅಥವಾ ಸನಿಹದ ನಿಲ್ದಾಣಕ್ಕೆ ರವಾನೆ ಆಗುತ್ತದೆ. ತಕ್ಷಣ ಸಿಬ್ಬಂದಿ ಅಲ್ಲಿಗೆ ತೆರಳಿ ಪ್ರಯಾಣಿಕರನ್ನು ಸಂಪರ್ಕಿಸಿ, ವಸ್ತುವಿನ (ಬಣ್ಣ, ವಸ್ತು) ಮಾಹಿತಿ ಪಡೆದು ಸಂಗ್ರಹಿಸುತ್ತಾರೆ. ಠಾಣೆಗೆ ತಂದು ಪ್ರಯಾಣಿಕರನ್ನು ಕರೆಸಿ ಅವರಿಂದ ಸೂಕ್ತ ದಾಖಲೆ ಪಡೆದು ವಸ್ತು ಹಿಂದಿರುಗಿಸುತ್ತಾರೆ.

ಎಚ್‌ಡಿಕೆ ವಿರುದ್ಧ ಭೂ ಒತ್ತುವರಿ ಆರೋಪ

ಕಲಬುರಗಿ: ಕೇತನಗಾನಹಳ್ಳಿ ಗ್ರಾಮದ ಸರ್ಕಾರಿ ಭೂಮಿ ಒತ್ತುವರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ವಿರುದ್ಧ ಭೂ ಒತ್ತುವರಿ ಆರೋಪ ಕೇಳಿಬಂದಿದೆ. ಪ್ರಕರಣದ ತನಿಖೆಗೆ ರಾಜ್ಯ ಸರ್ಕಾರ ವಿಶೇಷ ತನಿಖಾ ದಳ (ಎಸ್‌ಐಟಿ) ರಚನೆ ಮಾಡಿದ್ದು, ತಹಶೀಲ್ದಾರ್ ಮೂಲಕ ನೋಟಿಸ್ ಜಾರಿಗೊಳಿಸಲಾಗಿದೆ. ತಹಶೀಲ್ದಾರರು ನೀಡಿದ ನೋಟಿಸ್‌ನ್ನು ಪ್ರಶ್ನಿಸಿ ಹಾಗೂ ಅದಕ್ಕೆ ತಡೆ ಕೋರಿ ಕುಮಾರಸ್ವಾಮಿ ನ್ಯಾಯಾಲಯದ ಮೊರೆ ಹೋಗಿದ್ದಾರೆ. ಈ ಹಿನ್ನೆಲೆ ಪ್ರಕರಣದ ವಿಚಾರಣೆ ಕಲಬುರಗಿ ವಿಭಾಗೀಯ ಹೈಕೋರ್ಟ್ ಪೀಠದಲ್ಲಿ ನಡೆಯಿತು. ಕಲಬುರಗಿ ವಿಭಾಗೀಯ ಹೈಕೋರ್ಟ್ ಹಾಲ್ ನಂಬರ್ 04ರಲ್ಲಿ ನ್ಯಾಯಮೂರ್ತಿ ಇಂದಿರೇಶ್ ಅವರ ಎದುರು ವಿಚಾರಣೆ ನಡೆದಿದ್ದು, ಪ್ರಕರಣದ ಕುರಿತು ಮುಂದಿನ ವಿಚಾರಣೆ ಮಾರ್ಚ್ 10ಕ್ಕೆ ಮುಂದೂಡಲಾಗಿದೆ.



CHANGE OF NAME

I, **BHUYAR POOJA MURAGEPPA (Old Name)** R/o #59, 1st Cross, Kuvempu Road, Near Anandapura Circle, T.c. Palya Main Road, Bangaluru have changed my name to **POOJA KIRAN LONI (New Name)** Vide Affidavit Sworn Before Notary M.M. Hiremath on 25-02-2026

CHANGE OF NAME

I, **MOHAMMADGOUSE MOHAMMADIQBAL ATTAR** (old name) Resident of H No: 171/C, Sector No 34, Near LIC Office, Navanagar, Bagalkot - 587103, Karnataka, India, have changed my name as **MOHAMMAD GOUSE MOHAMMAD IQBAL ATTAR** (new name) henceforth I will be called and recognized by new name for all future purposes, dated: 25/02/2026.

CHANGE OF NAME

I, **MRUTHYUNJAYA NAGAPPA KONDIKOPPA** (old name) Resident of 118, 1st Floor, H No: 1 Old Badami Nagar, Keshwapur, Hubballi Pin - 580023 (address) have changed my name as **MRUTHYUNJAYA KONDIKOPPA** (new name) henceforth I will be called and recognized by new name for all future purposes, dated: 25/02/2026.

CHANGE OF NAME

I, **AKSHATA JATTI HARIKANTRA** (old name) Resident of House No: 83, Kimani, Paduvani, Uttar Kannada - 581333 have changed my name as **AKSHATA HARIKANTRA** (new name) henceforth I will be called and recognized by new name for all future purposes, dated: 25/02/2026.

CHANGE OF NAME

I, **MALLINATH YARANDOLI** (old name) Resident of CTS No: 3311/2, 4th Cross, Bhagyanagar, Belagavi - 590006 have changed my name as **MALLINATH MAHAVEER YARANDOLI** (new name) henceforth I will be called and recognized by new name for all future purposes, dated: 25/02/2026.

CHANGE OF NAME

I, **POOJA GOGI** (old name) Resident of Plot No: 04, Main 1st Cross, Sector No: 55, Navanagar, Bagalkot - 587103 have changed my name as **POOJA SHANKARLING GOGI** (new name) henceforth I will be called and recognized by new name for all future purposes, dated: 25/02/2026.

CHANGE OF NAME

I, **ABDULREHAMAN DAVALSAB BUDIHAL** (Old Name) R/o: Bilagi, Tq: Bilagi Dist: Bagalakot, Karnataka State. I have changed my name as **ABDULREHAMAN BUDIHAL** (New Name) Vide affidavit Dated: 20-02-2026 sworn before Notary **B B Budihal** at Bilagi.

CHANGE OF NAME

I, **JAYASHREE KARIBASAPPA DEVANGAVI** (old name) Resident of #55 Revenue Colony Vijayanagar, Hubli, Dharwad, Karnataka 580032 have changed my name as **JAYASHREE DEVANGAVI** (new name) henceforth I will be called and recognized by new name for all future purposes, dated: 24/02/2026.

ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ

ಅಗ್ರಹಾರ ಟ್ಯಾಂಕ್ ಬಂಡ ರಸ್ತೆ, ಬಿನ್ನಿಪೇಟೆ, ಬೆಂಗಳೂರು-560023
ಜಿಲ್ಲೆ : ಬೆಂಗಳೂರು, ರಾಜ್ಯ : ಕರ್ನಾಟಕ

ಕ್ರ.ಸಂ: ಹಹೂಮತ(ವಿ)ಕೃಉಮಾಸ(ಬೆಂ)3396/2025-26 ದಿನಾಂಕ: 24.02.2026

ಟೆಂಡರ್-ಕಂ-ಹರಾಜು ಪ್ರಕಟಣೆ

ಸಮಿತಿಯ ಸಿಂಗೇನ ಅಗ್ರಹಾರ ಉಪಮಾರುಕಟ್ಟೆ ಪ್ರಾಂಗಣದಲ್ಲಿ ಆರ್.ಐ.ಡಿ.ಎಫ್-28 ಯೋಜನೆಯಡಿ ಹೊಸದಾಗಿ ನಿರ್ಮಿಸಿರುವ ಶೌಚಾಲಯವನ್ನು ಲೀವ್-ಆಂಡ್-ಲೈಸೆನ್ಸ್ ಆಧಾರದ ಮೇಲೆ ಗರಿಷ್ಠ 55 ತಿಂಗಳ ಅವಧಿಗೆ ನಿರ್ವಹಣೆ ಮಾಡಲು ಟೆಂಡರ್-ಕಂ-ಬಹಿರಂಗ ಹರಾಜು ಮೂಲಕ ಹಂಚಿಕೆ ಮಾಡಲು ಉದ್ದೇಶಿಸಿದ್ದು, ಅನುಭವ ಹೊಂದಿರುವ ನೊಂದಾಯಿತ ಸಾರ್ವಜನಿಕ ಸಂಸ್ಥೆಗಳಿಂದ/ ಅರ್ಹ ವ್ಯಕ್ತಿಗಳಿಂದ/ ಗುತ್ತಿಗೆದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಶೌಚಾಲಯದ ವಿವರ: ಆರ್.ಐ.ಡಿ.ಎಫ್-28 ಯೋಜನೆಯಡಿ ಹೊಸದಾಗಿ ನಿರ್ಮಿಸಿರುವ ಶೌಚಾಲಯ, ನಿಗಧಿಪಡಿಸಿರುವ ಲೀವ್-ಅಂಡ್-ಲೈಸೆನ್ಸ್ ಶುಲ್ಕ ರೂ.ಗಳಲ್ಲಿ: **ರೂ.31,313/-**, ಇ.ಎಂ.ಡಿ ಮೊತ್ತ (ರೂ.ಗಳಲ್ಲಿ): **ರೂ. 62,626/-**, ಅರ್ಜಿ ಶುಲ್ಕ ಜಿ.ಎಸ್.ಟಿ. ಒಳಗೊಂಡಂತೆ (ರೂ.ಗಳಲ್ಲಿ): **ರೂ.1,180/-**

ಸೂಚನೆಗಳು: (1) ಖಾಲಿ ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸುವ ಕೊನೆಯ **ದಿನಾಂಕ 10.03.2026 ಸಂಜೆ 4.00 ಗಂಟೆಯುವರೆಗೆ.** (2) ಖಾಲಿ ಟೆಂಡರ್ ಫಾರಂನ್ನು **ರೂ. 1,180-00** ಗಳನ್ನು ಡಿ.ಡಿ.ಮೂಲಕ ಪಾವತಿಸಿ **ದಿನಾಂಕ: 16.03.2026 ರ ಸಂಜೆ 4.00 ಗಂಟೆಯೊಳಗೆ** ಪಡೆಯತಕ್ಕದ್ದು. (3) ಭರ್ತಿ ಮಾಡಿದ ಟೆಂಡರ್ ಫಾರಂ ಅನ್ನು ಇ.ಎಂ.ಡಿ. ಮೊತ್ತದ ಡಿ.ಡಿ.ಯೊಂದಿಗೆ ಸಲ್ಲಿಸಲು ಕೊನೆಯ **ದಿನಾಂಕ 23.03.2026 ಮಧ್ಯಾಹ್ನ 12.00 ಗಂಟೆಯುವರೆಗೆ,** ಸಾಧ್ಯವಾದಲ್ಲಿ ಅದೇ ದಿನ **ಮಧ್ಯಾಹ್ನ 12.30 ಗಂಟೆಗೆ ಬಿನ್ನಿಪೇಟೆ ಆಡಳಿತ ಕಛೇರಿಯಲ್ಲಿ** ಬಹಿರಂಗ ಹರಾಜು ನಡೆಸಲಾಗುವುದು, ನಂತರ ಹಾಜರಿದ್ದ ಗುತ್ತಿಗೆದಾರರ ಸಮಕ್ಷಮದಲ್ಲಿ ಟೆಂಡರನ್ನು ತೆರೆಯಲಾಗುವುದು. ಅರ್ಜಿ ಸಲ್ಲಿಸಿರುವವರೇ ಹರಾಜಿನಲ್ಲಿ ಭಾಗವಹಿಸುವುದು. (4) ಅರ್ಜಿ ಶುಲ್ಕ ಹಾಗೂ ಇ.ಎಂ.ಡಿ.ಯನ್ನು ಡಿ.ಡಿ.ಮೂಲಕ ಕಾರ್ಯದರ್ಶಿ, ಹಣ್ಣು, ಹೂವು ಮತ್ತು ತರಕಾರಿಗಳ (ವಿಶೇಷ) ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಿನ್ನಿಪೇಟೆ, ಬೆಂಗಳೂರು ಇವರ ಹೆಸರಿನಲ್ಲಿ ಪಡೆಯತಕ್ಕದ್ದು. (5) ಯಾವುದೇ ಕಾರಣ ನೀಡದೇ ಟೆಂಡರ್‌ನ್ನು ಪರಿಗಣಿಸುವ/ರದ್ದುಗೊಳಿಸುವ/ ಅಥವಾ ತಿರಸ್ಕರಿಸುವ ಮತ್ತು ಟೆಂಡರ್ ದಿನಾಂಕವನ್ನು ಬದಲಾಯಿಸುವ ಹಕ್ಕನ್ನು ಈ ಸಮಿತಿ ಕಾಯ್ದಿರಿಸಿಕೊಂಡಿದೆ. (6) ಹೆಚ್ಚಿನ ವಿವರಗಳನ್ನು ಕಛೇರಿ ವೇಳೆಯಲ್ಲಿ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯದರ್ಶಿ
ಸಹಿ/- ಆಡಳಿತಾಧಿಕಾರಿಗಳು

ವಾಪಾಸಂಇ/ವಾ.ಪ್ರ/ಎಎಎ/5875/2025-26

ಕರ್ನಾಟಕ ಸರಕಾರ (ಲೋಕೋಪಯೋಗಿ ಇಲಾಖೆ) ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.-4/ಟೆಂಡರ/2025-26/7622 ದಿನಾಂಕ:24/02/2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025-26 ನೇ ಸಾಲಿನ ಲೆಕ್ಕ ಶೀರ್ಷಿಕೆ 3054-ರಾಜ್ಯ ಹೆದ್ದಾರಿ ನಿರ್ವಹಣೆ ಅಡಿ 2 ಕಾಮಗಾರಿಗಳು, 3054-ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆ ಅಡಿ 4 ಕಾಮಗಾರಿಗಳು ಹಾಗೂ 3054-ರಾಜ್ಯ ಹೆದ್ದಾರಿ ಸೇತುವೆ ನಿರ್ವಹಣೆ ಅಡಿ 1 ಕಾಮಗಾರಿ, ಹೀಗೆ ಒಟ್ಟು 7 ಕಾಮಗಾರಿಗಳು ಇದ್ದು, ಗುತ್ತಿಗೆಗೆ ಇಟ್ಟ ಕನಿಷ್ಠ ಮೊತ್ತ ರೂ. 6.40 ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. 48.00 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಆಕ್ಷೇಪಣೆ-ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:03-03-2026 (ಸಾಯಂಕಾಲ 5.30 ಗಂಟೆಯವರೆಗೆ), 2)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:05-03-2026 (ಸಾಯಂಕಾಲ 5.00 ಗಂಟೆಯವರೆಗೆ), 3)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System): 07-03-2026 (ಸಾಯಂಕಾಲ 4.30 ಗಂಟೆಗೆ), 4)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 5)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-1940/KSMCA/2025-26

ಕರ್ನಾಟಕ ಸರಕಾರ (ಲೋಕೋಪಯೋಗಿ ಇಲಾಖೆ) ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ

ನಂ.ಲೋ.ಇ./ಚಿ.ವಿ./ಸ.ಇಂ.-3/ಟೆಂಡರ/2025-26/7606 ದಿನಾಂಕ: 24/02/2026

ಇ-ಟೆಂಡರ್ ಹಾಗೂ ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2025-26 ನೇ ಸಾಲಿನ ಲೆಕ್ಕ ಶೀರ್ಷಿಕೆ 5054-ಜಿಲ್ಲಾ ಮುಖ್ಯ ರಸ್ತೆ ಸುಧಾರಣೆ ಅಡಿ 1 ಕಾಮಗಾರಿ ಮತ್ತು 4059-ಮಾನ್ಯ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ (CMIDP) ಅಡಿ 1 ಕಾಮಗಾರಿ, ಹೀಗೆ ಒಟ್ಟು 2 ಕಾಮಗಾರಿಗಳು ಇದ್ದು, ಗುತ್ತಿಗೆಗೆ ಇಟ್ಟ ಮೊತ್ತ ಕ್ರಮವಾಗಿ ರೂ. 394.33 ಲಕ್ಷ ಹಾಗೂ ಮೊತ್ತ ರೂ. 150.29 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ.

ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು

1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:09-03-2026 ರಂದು (11.00 ಗಂಟೆಗೆ), 2)ಆಕ್ಷೇಪಣೆ -ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:11-03-2026 (ಸಾಯಂಕಾಲ 5.30 ಗಂಟೆಯವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ : 13-03-2026 (ಸಾಯಂಕಾಲ 5.00 ಗಂಟೆಯವರೆಗೆ), 4)ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ (Two Cover System):16-03-2026 (ಸಾಯಂಕಾಲ 4.30 ಗಂಟೆಗೆ), 5)ಹಣಕಾಸು ಬಿಡ್‌ನ್ನು ತೆರೆಯುವ ದಿನಾಂಕ (Two Cover System):"ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 6)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ-ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 4 ದಿನ ವಿಸ್ತರಣೆಯಾಗುವುದು.

ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ kppp.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.

DIPR/BGM/RO-NO-1943/KSMCA/2025-26

CHANGE OF NAME

I, **HASHIM MOHAMMED RAZVI** (old name) Resident of Near Gramapanchayat Tadas 581212 (address) have changed my name as **HASHIM RAZAVI** (new name) henceforth I will be called and recognized by new name for all future purposes, dated: 25/02/2026.

CHANGE OF NAME

I, **Smt Mrinalini Ambaprasad Mallya** (old Name), Resident Address - Flat no 103, HIG - 15, Akshay Park, Gokul Road, Huballi - 580030, Dist - Dharwad, Karnataka, have Changed my name as **Smt. Mrinalini Mallya** (New Name) Henceforth, I will be called and recognised by my New Name for all future correspondence, Reference and Purposes. Affidavit Dtd- 25/02/2026 Sworn before Notary **Mr T G BALANNAVAR.**

ಕರ್ನಾಟಕ ಸರ್ಕಾರ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ, ಉತ್ತರ ಕನ್ನಡ

ದೂರವಾಣಿ: 08382-220556 ಇ-ಮೇಲ್: predkarwar@gmail.com

ಕ್ರ.ಸಂ:ಪಂರಾ.ಇಂ/ಕಾ/ಪಿಬಿ-1/2025-26/52 ದಿ: 24.02.2026

ಟೆಂಡರ್ ಪ್ರಕಟಣೆ-52/2025-26 (ಕೆ.ಪಿ.ಪಿ.ಪಿ ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ ಕಾರವಾರ ಇವರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಿದ ಅರ್ಹ ಹಾಗೂ ಕೆ.ಪಿ.ಪಿ.ಪಿ. ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ 2025-26 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಗಳ ಮೂಲಸೌಕರ್ಯ ಅನುದಾನದ ಲೆಕ್ಕಶೀರ್ಷಿಕೆಯಡಿಯ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಖರೀದಿ ಪಾರದರ್ಶಕತೆ ಕಾನೂನು ಹಾಗೂ ನಿಯಮಾವಳಿ 2000 ಹಾಗೂ Standard Tender Document ನ K.W-1, 2 ರ ತತ್ಸಂಬಂಧ ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿ ಆದೇಶಗಳನ್ವಯ ನಿಬಂಧನೆಗೆ ಒಳಪಟ್ಟು ಈ ಕೆಳಗಿನಂತೆ ಐಟಂವಾರು ಟೆಂಡರ ಕರೆಯಲಾಗಿದೆ. ಅರ್ಹ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು ಟೆಂಡರ್ ವಿವರಗಳು ಈ ಕೆಳಗಿನಂತಿವೆ.

ಕಾಮಗಾರಿಯ ಹೆಸರು: (ಮೀಸಲಾತಿ: ಸಾಮಾನ್ಯ) (1) 1. ಉತ್ತರಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಅಳಕೋಡ ಪಂಚಾಯತ ಶಿರಗುಂಜಿ ಗೌಡರಕೇರಿ ರಸ್ತೆ ನಿರ್ಮಾಣ 2. ಉತ್ತರಕನ್ನಡ ಜಿಲ್ಲೆಯ ಕುಮಟಾ ಅಳಕೋಡ ಪಂಚಾಯತ್ ಯಾಣ ಮುಖ್ಯ ರಸ್ತೆಯಿಂದ ಗಜಾನನ ಶಾಸ್ತ್ರೀ ಮನೆಯುವರೆಗೆ ರಸ್ತೆ ನಿರ್ಮಾಣ 3.ಕುಮಟಾ ತಾಲೂಕಿನ ಅಳಕೋಡ ಪಂ ಸಾಂತೂರು ರಸ್ತೆ ನಿರ್ಮಾಣ. ಅಂದಾಜು ಮೊತ್ತ: ರೂ. 40.00 ಲಕ್ಷ, ಮುಂಗಡ ಠೇವಣಿ: ರೂ. 80,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(ಮೀಸಲಾತಿ: ಪ್ರವರ್ಗ 2ಎ) (2) 1. ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಅಳಕೋಡ ಪಂಚಾಯತ ಹೆಬ್ಬಾರಮನೆಯಲ್ಲಿ ಯಾಣ ಕೂಡುವ ರಸ್ತೆ ನಿರ್ಮಾಣ 2. ಉತ್ತರ ಕನ್ನಡ ಜಿಲ್ಲೆಯ ಕುಮಟಾ ತಾಲೂಕಿನ ಅಳಕೋಡ ಪಂಚಾಯತ ಮಳವಳ್ಳಿ ಗೌಡರಕೇರಿ ರಸ್ತೆ ನಿರ್ಮಾಣ. ಅಂದಾಜು ಮೊತ್ತ: ರೂ. 20.00 ಲಕ್ಷ, ಮುಂಗಡ ಠೇವಣಿ: ರೂ. 25,000.00, ಕಾಲಮಿತಿ (ಮಳೆಗಾಲ ಸಹಿತ): 02 ತಿಂಗಳು

(1) ಕಾಮಗಾರಿಯ ಟೆಂಡರ್ ಶೆಡ್ಯೂಲ್-ಬಿಗಳನ್ನು ಮತ್ತು Technical Bid ನ್ನು ವೆಬ್ ಸೈಟ್‌ನಲ್ಲಿ ತುಂಬಿ ಮರಳಿ ಸಲ್ಲಿಸುವ ಕೊನೆಯ ದಿನಾಂಕ: 16.03.2026 ರ ಮದ್ಯಾಹ್ನ 16.30 ಘಂಟೆವರೆಗೆ. (2) ಕಾಮಗಾರಿಯ Technical Bid ನ್ನು ತೆರೆಯುವ ದಿನಾಂಕ: 17.03.2026 ಮದ್ಯಾಹ್ನ 16.31 ಘಂಟೆಗೆ. (3) ಆರ್ಥಿಕ ಬಿಡ್ ತೆರೆಯುವ ದಿನಾಂಕವನ್ನು ತಾಂತ್ರೀಕ ಬಿಡ್‌ನಲ್ಲಿ ಯಶಸ್ವಿಯಾದ ಅರ್ಹ ಗುತ್ತಿಗೆದಾರರಿಗೆ ನಂತರದಲ್ಲಿ ತಿಳಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರು,
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಕಾರವಾರ

DIPR/KWR/KSMCA/1151/25-26 dt. 25.02.2026

ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ, ರಾಯಚೂರು

ಸಂಖ್ಯೆ:ನಪ್ರಾರಾ/ತಾಂತ್ರಿಕ/ಭೂ.ಬ/2025-26/ ದಿನಾಂಕ: -02-2026.

ಸಾರ್ವಜನಿಕ ಪ್ರಕಟಣೆ

ಸಮಸ್ತ ನಾಗರೀಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ರಾಯಚೂರುಜಿಲ್ಲೆ, ರಾಯಚೂರು ತಾಲ್ಲೂಕಿನ ಯಕ್ಲಾಸ್‌ಪೂರ ಗ್ರಾಮದ ಸರ್ವೆ ನಂ: 99/*/6 (00ಎ-07ಗು), 99/*/8 (00ಎ-07ಗು), 99/*/9 (00ಎ-14ಗು), 99/*/12 (00ಎ-14ಗು), 99/*/13 (00ಎ-14ಗು), 99/*/14 (00ಎ-14ಗು), ಮತ್ತು 99/*/15 (00ಎ-16ಗು) ಹೀಗೆ ಒಟ್ಟು ವಿಸ್ತೀರ್ಣ 02ಎಕರೆ-06 ಗುಂಟೆ, ಜಮೀನನ್ನು ಮಾಸ್ಟರ್ ಪ್ಲಾನ್‌ನಲ್ಲಿನ ಸಾರ್ವಜನಿಕ ಅರೆ ಸಾರ್ವಜನಿಕ ವಲಯದಿಂದ ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ನಿಗದಿಪಡಿಸುವಂತೆ ಕೋರಿ 1)ಶ್ರೀ ಚನ್ನಕೇಶವರೆಡ್ಡಿ ತಂದೆ ದಿ॥ ಬೆಲಂ ಚಂದ್ರಪ್ಪ 2)ಶ್ರೀ ಬಿ. ಮೋಹನರೆಡ್ಡಿ ತಂದೆ ದಿ॥ಬಿ, ಬೆಲಂ ಚಂದ್ರಪ್ಪ, 3)ಶ್ರೀಮತಿ ಬಿ.ಸಿದ್ದಮ್ಮ ಕೋಂ ದಿ॥ ತಿಮ್ಮಾರೆಡ್ಡಿ, 4) ಬೆಲ್ಲಂ ಜಯಪಾಲರೆಡ್ಡಿ, ಬೆಲ್ಲಂ ಕಿರಣಕುಮಾರ, ಬೆಲ್ಲಂ ಶ್ರೀಧರ ಇವರೆಲ್ಲರ ತಂದೆ ಬೆಲ್ಲಂ ತಿಮ್ಮಾರೆಡ್ಡ, 5) ಬೆಲ್ಲಂ ಸತ್ಯರೆಡ್ಡಿ ಬಿನ್ ಬೆಲ್ಲಂತಿಮ್ಮಯ್ಯ, 6) ಬೆಲ್ಲಂ ಮಲ್ಲಿಕಾರ್ಜುನ ರೆಡ್ಡಿ ಬಿನ್ ಬೆಲ್ಲಂ ತಿಮ್ಮಯ್ಯ ಸಾ॥ ರಾಯಚೂರುರವರು ಅರ್ಜಿ ಸಲ್ಲಿಸಿರುತ್ತಾರೆ.

ಸದರಿ ಜಮೀನಿಗೆ ದಕ್ಷಿಣ ದಿಕ್ಕಿನಿಂದ ಸರ್ವೆ ನಂ.90/1ರ ಅನುಮೋದಿತ ವಿನ್ಯಾಸದ ಹಾಲಿ 09.00ಮೀ .ಅಗಲದ ರಸ್ತೆಗೆ ಸಂಪರ್ಕವಿದ್ದು, ಹಾಲಿ ವಸತಿ ಅಭಿವೃದ್ಧಿಗೆ ಹೊಂದಿಕೊಂಡಿರುತ್ತದೆ. ಸ್ವಂತ ನಿವೇಶನಕ್ಕಾಗಿ ಭೂ-ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಮುಚ್ಚಳಿಕೆ ಪತ್ರವನ್ನು ಪ್ರಾಧಿಕಾರಕ್ಕೆ ಬರೆದುಕೊಟ್ಟಿರುತ್ತಾರೆ.

ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69 (2) ರ ಪ್ರಕಾರ ಸಾರ್ವಜನಿಕ ಅರೆ ಸಾರ್ವಜನಿಕ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧವಾಗಿ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ಆಯುಕ್ತರು, ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರ ರಾಯಚೂರು ಇವರಿಗೆ ಲಿಖಿತವಾಗಿ ಖುದ್ದಾಗಿಯಾಗಲೀ ಅಥವಾ ನೊಂದಾಯಿತ ಅಂಚೆ ಮೂಲಕ ಸಲ್ಲಿಸಲು ತಿಳಿಸಲಾಗಿದೆ. ಅವಧಿ ಮೀರಿ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/- ಆಯುಕ್ತರು,
ನಗರಾಭಿವೃದ್ಧಿ ಪ್ರಾಧಿಕಾರ, ರಾಯಚೂರು.

DIP/RCR/726/KSMCA/729/2025-26

ಪುರಸಭೆ ಯೋಜನಾ ಪ್ರಾಧಿಕಾರ ಮುದ್ದೇಬಿಹಾಳ

ತಾ//ಮುದ್ದೇಬಿಹಾಳ ಜಿ//ವಿಜಯಪುರ

ಸಂಖ್ಯೆ: ಪುಯೋನಾಮು/ಪತ್ರಿಕಾ ಪ್ರಕಟಣೆ/2025-26/ ದಿನಾಂಕ: 22/01/2026

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(ಬಿ) ರ ಪ್ರಕಾರ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(ಬಿ) ರ ಅನ್ವಯ ಭೂ-ಉಪಯೋಗ ಬದಲಾವಣೆ ಕೋರಿ ಅರ್ಜಿದಾರರು ಮನವಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ಭೂ-ಉಪಯೋಗ ಬದಲಾವಣೆಯ ಬಗ್ಗೆ, ಸಾರ್ವಜನಿಕ ಸಲಹೆ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ - ಸದಸ್ಯ, ಕಾರ್ಯದರ್ಶಿ ಪುರಸಭೆ ಯೋಜನಾ ಪ್ರಾಧಿಕಾರ ಮುದ್ದೇಬಿಹಾಳ" ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸುವ ಸಲಹೆ/ಸೂಚನೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ ಸ	ಗ್ರಾಮದ ಹೆಸರು	ರಿ.ಸ ನಂ	ವಿಸ್ತೀರ್ಣ	ಭೂಮಾಲಿಕರ ಹೆಸರು	ಅನುಮೋದಿತ ಮಹಾಯೋಜನೆಯಲ್ಲಿ ಕಾಯ್ದಿರಿಸಿದ ಭೂ-ಉಪಯೋಗ	ಅರ್ಜಿದಾರರು ಬದಲಾವಣೆ ಕೋರಿರುವ ಭೂ-ಉಪಯೋಗ
01	ಮುದ್ದೇಬಿಹಾಳ	69/1	2 ಎಕರೆ, 06 ಗುಂಟೆ -00 ಆಣೆ	ಶ್ರೀ ಮಹಾಂತಗೌಡ ಸಿದ್ದನಗೌಡ ಬಿರಾದಾರ	ಸಾರ್ವಜನಿಕ ಉಪಯೋಗ (Public Utility)	ವಾಣಿಜ್ಯ (Commercial)

ಷರಾ: ಪ್ರಶ್ನಿತ ಜಮೀನಿನ ಸುತ್ತಮುತ್ತಲಿನ ಪರಿಸರದಲ್ಲಿ ವಾಣಿಜ್ಯ (Commercial) ಬೆಳವಣಿಗೆಗಳು ಕಂಡುಬಂದಿರುತ್ತದೆ. ಸದರಿ ಜಮೀನನ್ನು ಎಲ್ಲಾ ಮೂಲಭೂತ ಸೌಕರ್ಯಗಳನ್ನು, ಒಳಗೋಂಡ ಯೋಜನಾ ಬದ್ಧವಾದ ವಾಣೀಜ (Commercial) ಉದ್ದೇಶಕ್ಕೆ, ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವುದರಿಂದ ಸಾರ್ವಜನಿಕರಿಗೆ ಉದ್ಯೋಗಾವಕಾಶಗಳು ದೊರಕಿ ಆರ್ಥಿಕ ಚಟುವಟಿಕೆಗಳಿಗೆ ಉತ್ತೇಜನ ನೀಡಿದಂತಾಗುವುದರ ಜೊತೆಗೆ ನಗರದ ಯೋಜನಾ ಬದ್ಧವಾದ ಬೆಳವಣಿಗೆಗೆ ಸಹಾಯಕಾರಿಯಾಗುವುದು ಎಂಬ ಸಾರ್ವಜನಿಕ ಹಿತಾಸಕ್ತಿಯನ್ನು ಒಳಗೊಂಡಿರುತ್ತದೆ. ಎಂದು ಅರ್ಜಿದಾದರರು ನಿರ್ಮಾಣ2.0 ತಂತ್ರಾಂಶದಲ್ಲಿ, ಅರ್ಜಿ ಸಂಖ್ಯೆ, MDBH-LBPAS-**0003O/CLU** ರ ಮುಖಾಂತರ ತಿಳಿಸಿರುತ್ತಾರೆ.

ಸಹಿ/
ಮುಖ್ಯಾಧಿಕಾರಿ
ಪುರಸಭೆ ಯೋಜನಾ ಪ್ರಾಧಿಕಾರ
ಮುದ್ದೇಬಿಹಾಳ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ
ಪಂಚಾಯತರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ

ಸಂಖ್ಯೆ: ಕಾನಿಅ/ಪಂರಾಇಂ/ವಿಕ/ಶಾಶಾ-5/ಟೆಂಡರ/2025-26/6335 ದಿನಾಂಕ: 24/02/2026

:: ಇ-ಪ್ರೊಕ್ಯೂರಮೆಂಟ್ ಅಲ್ಪಾವಧಿ ಟೆಂಡರ ಪ್ರಕಟಣೆ ದ್ವಿ-ಲಕೋಟೆ ಪದ್ಧತಿಯಲ್ಲಿ ::

1) ಕಾಮಗಾರಿಗಳ ಇಂಡೆಂಟ್ ಸಂಖ್ಯೆ: ಚಿತ್ತಾಪೂರ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ 2025-26 & 2026-27ನೇ ಸಾಲಿನಲ್ಲಿ ಮಂಜೂರಾದ 13 ವಿವಿಧ ಗ್ರಾಮಗಳಲ್ಲಿ ಅಕ್ಷರ ಅವಿಷ್ಕಾರ ಮೈಕ್ರೋ ಯೋಜನೆಯಡಿಯಲ್ಲಿ ಮಂಜೂರಾದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಶಾಲಾ ಕೋಣೆ ಕಟ್ಟಡ ನಿರ್ಮಾಣ ಕಾಮಗಾರಿಗಳ ಇಂಡೆಂಟ್ ಸಂಖ್ಯೆ ಈ ಕೆಳಗಿನಂತೆ ಇರುತ್ತದೆ: (1) 24830 (2) 24736 (3) 24832 (4) 24746 (5) 24748 (6) 24710 (7) 24709 (8) 24747 **ಒಟ್ಟು 08 ಕಾಮಗಾರಿಗಳು,** 2) ಲೆಕ್ಕ ಶೀರ್ಷಿಕೆ: **2025-26 & 2026-27ನೇ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮೈಕ್ರೋ ಯೋಜನೆ,** 3) ಟೆಂಡರಗಿಟ್ಟ ಅಂದಾಜು ಮೊತ್ತ: **ಕನಿಷ್ಠ ರೂ. 1,10,04,512.31, ಗರಿಷ್ಠ ರೂ. 1,38,41,360.10**, 4) ಗುತ್ತಿಗೆದಾರರ ಅರ್ಹತೆ: 3ನೇ ದರ್ಜೆ ಮತ್ತು ಮೇಲ್ಪಟ್ಟು, 5) ಟೆಂಡರ ಫಾರಂ ಪಡೆಯುವ ದಿನಾಂಕ: **25.02.2026 ರಿಂದ 16.03.2026 ಸಾಯಂಕಾಲ 4:00 ಗಂಟೆವರೆಗೆ,** 6) ಟೆಂಡರ ಅರ್ಜಿ ಬೆಲೆ ಇ-ಪ್ರೊಕ್ಯೂರಮೆಂಟ್ ನಿಯಮಾನುಸಾರ, 7) ಇ.ಎಂ.ಡಿ.: ಕನಿಷ್ಠ ರೂ. 2,00,000.00, ಗರಿಷ್ಠ ರೂ. 2,08,000.00 8) ಟೆಂಡರ ಸಲ್ಲಿಸುವ ದಿನಾಂಕ: **25.02.2026 ರಿಂದ 16.03.2026 ಸಾಯಂಕಾಲ 4:00 ಗಂಟೆವರೆಗೆ,** 9) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **17.03.2026 ಸಾಯಂಕಾಲ 4:00 ಗಂಟೆ ನಂತರ,** 10) ಆರ್ಥಿಕ ಬಿಡ್ ತೆರೆಯುವ ದಿನಾಂಕ: **20.03.2026 ಬೆಳಿಗ್ಗೆ 11:00 ಗಂಟೆ ನಂತರ,** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ ಕರ್ನಾಟಕ ಗ್ರಾಮೀಣ ಬ್ಯಾಂಕ ಎದುರಿಗೆ ಕುಸನೂರ ರಸ್ತೆ ರಾಜಾಪೂರ ಕಲಬುರಗಿ, 12) ಅಂತರಜಾಲ ತಾಣದ ವಿಳಾಸ: www.kppp.karnataka.gov.in

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಪಂಚಾಯತರಾಜ್ ಇಂಜಿನೀಯರಿಂಗ್ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/1118/ಕೆ.ಎಸ್.ಎಂ.ಸಿ.&ಎ/2025-26

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮಿತ್ವದಲ್ಲಿ)

ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಕೃಭಾಜನಿನಿ, ನಾಬದಂ, ಕಾಲುವೆ ವಿಭಾಗ-4, ಚಿಕ್ಕಹೊನ್ನಕುಣಿ, ತಾ: ದೇವದುರ್ಗ

ಸಂಖ್ಯೆ:ಕೃಭಾಜನಿನಿ/ನಾಬದಂಕಾ/ವಿ-4/ತಾಶಾ/Maintenance/2025-26/844 ದಿನಾಂಕ:23.02.2026

ಅಲ್ಪಾವಧಿ ಶೇಕಡಾವಾರು ಟೆಂಡರ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ನಾಬದಂ ಕಾಲುವೆ ವಿಭಾಗ ಸಂ.-4, ಚಿಕ್ಕಹೊನ್ನಕುಣಿ, ತಾ: ದೇವದುರ್ಗ, ಜಿಲ್ಲೆ: ರಾಯಚೂರು ಇವರು ಈ ಕೆಳಗಿನ ಕಾಮಗಾರಿಯ ನೋಂದಾಯಿತ ಕೆ.ಪಿ.ಡಬ್ಲ್ಯೂ.ಡಿ. 1ನೇ ದರ್ಜೆ ಗುತ್ತಿಗೆದಾರರಿಂದ ಟೆಂಡರನ್ನು ಅಹ್ವಾನಿಸಲಾಗಿರುತ್ತದೆ. ಕೆ ಟಿ ಟಿ ಪಿ ನಿಯಮರನ್ವಯ ಗುತ್ತಿಗೆದಾರರು ಅಗತ್ಯ ಇ.ಎಂ.ಡಿ ಠೇವಣಿ ಮೊತ್ತವನ್ನು ಇ-ಕ್ಯಾಷ್‌ನಲ್ಲಿ ಪಡೆದು ದ್ವಿ ಲಕೋಟೆಯಲ್ಲಿ ಟೆಂಡರನ್ನು ಸಲ್ಲಿಸುವುದು. ಇ.ಎಂ.ಡಿ ಠೇವಣಿ ಮತ್ತು ಇತರೆ ಅವಶ್ಯಕ ಬಿಡ್ ದಾಖಲೆಗಳನ್ನೊಳಗೊಂಡಿರುವ ಬಿಡ್‌ದಾರರ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು.

ಕಾಮಗಾರಿಯ ಹೆಸರು: Maintenance work. ಒಟ್ಟು ಕಾಮಗಾರಿಗಳ ಸಂಖ್ಯೆ: 1. "ಇಎಂಡಿ ಮೊತ್ತ (ಪ್ರತಿ ಕಾಮಗಾರಿಗೆ)": As mentioned in e-portal. ಟೆಂಡರ್ ಪ್ರೋಸೆಸಿಂಗ್ ಶುಲ್ಕ: As mentioned in e-portal. ಕೆಲಸ ಮುಗಿಸಲು ಕಾಲಮಿತಿ :9 months including monsoon.

1) ಗುತ್ತಿಗೆದಾರರು ಇ-ಟೆಂಡರ್ ಪುಸ್ತಕಕ್ಕಾಗಿ ದಿನಾಂಕ: 24.02.2026 ರಿಂದ 04.03.2026 ರವರೆಗೆ ಕೆ.ಬಿ.ಜೆ.ಎನ್.ಎಲ್. ವೆಬ್ ಸೈಟ್ http://kppp.karnataka.gov.in ಕ್ಲಿಕ್ ಮಾಡಿ ಇ-ಪೋರ್ಟಲ್ ನಲ್ಲಿ ಇರುವಂತೆ ಟೆಂಡರ್ ಶುಲ್ಕ (ಮರಳಿಸಲಾಗದ)/ಇ.ಎಂ.ಡಿ. ಮೊತ್ತವನ್ನು ಭರಿಸಿ ಇ-ಟೆಂಡರ್ ಪುಸ್ತಕವನ್ನು ಕೋರಿಕೊಳ್ಳುವುದು. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ಈ ಕೆಳಗಿನ ಪೇಮೆಂಟ ಮೋಡ್‌ಗಳನ್ನು ಬಳಸಿಕೊಂಡು ದಿನಾಂಕ:04.03.2026 ರ ಸಾಯಂಕಾಲ 5.00 ಘಂಟೆಯೊಳಗಾಗಿ ಭರಿಸುವದು. Credit card / Direct debit / National electronic fund transfer (NEFT) / over the counter (OTC) 2) ಗುತ್ತಿಗೆದಾರರು ದಿನಾಂಕ: 24.02.2026 ರಿಂದ 04.03.2026 ರ ಸಾಯಂಕಾಲ 5.00 ಘಂಟೆಯವರೆಗೆ ಇ-ಟೆಂಡರ ಪುಸ್ತಕವನ್ನು Access ಮಾಡಬಹುದು. 3) ಭರ್ತಿಗೊಳಿಸಿದ ಇ-ಟೆಂಡರ ಪುಸ್ತಕವನ್ನು ದಿನಾಂಕ: 24.02.2026 ರಿಂದ 04.03.2026 ರ ಸಾಯಂಕಾಲ 5.00 ಘಂಟೆಯವರೆಗೆ ಸಲ್ಲಿಸುವದು. 4) ಟೆಂಡರ್‌ಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳು/ಸಂದೇಹಗಳಿಗಾಗಿ Pre-Bid meeting ಅನ್ನು 27.02.2026 ರಂದು ಬೆಳಿಗ್ಗೆ 11.00 AM ಕ್ಕೆ ಸಹಿ ಮಾಡುವವರ ಕಚೇರಿಯಲ್ಲಿ ನಡೆಸಲಾಗುವುದು. Cover-I (Technical Bid) ಮತ್ತು Cover-II (Financial Bid)ಗಳನ್ನು Executive Engineer, KBJNL, NRBC, Division No.4, Chikkahonnakuni ಅವರ ಕಚೇರಿಯಲ್ಲಿ ವಿದ್ಯುನ್ಮಾನವಾಗಿ ಕ್ರಮವಾಗಿ 06.03.2026 ರಂದು ಬೆಳಿಗ್ಗೆ 11.00 AMಕ್ಕೆ ಮತ್ತು 07.03.2026 ರಂದು ಸಂಜೆ 05.00 PMಕ್ಕೆ ತೆರೆಯಲಾಗುವುದು. 5) ಟೆಂಡರಿಗೆ ಸಂಬಂಧಪಟ್ಟಂತೆ ಉಳಿದ ಯಾವುದೇ ವಿವರಗಳನ್ನು ಈ ಕೆಳಗೆ ಸಹಿ ಮಾಡಿರುವ ಕಾರ್ಯಪಾಲಕ ಅಭಿಯಂತರವರ ಕಛೇರಿಯಿಂದ (ಕಛೇರಿಯ ವೇಳೆಯಲ್ಲಿ) ಇ-ಪೋರ್ಟಲ್ ಮುಖಾಂತರ ಪಡೆದುಕೊಳ್ಳಲು ಸೂಚನೆ ನೀಡಲಾಗಿದೆ ಮತ್ತು ಟೆಂಡರ್‌ನಲ್ಲಿ ಯಾವುದಾದರೂ ತಿದ್ದುಪಡಿಗಳಿದ್ದಲ್ಲಿ ಅದನ್ನು ಇ-ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಕೃಭಾಜನಿನಿ, ನಾಬದಂ, ಕಾಲುವೆ ವಿಭಾಗ-4,
ಚಿಕ್ಕಹೊನ್ನಕುಣಿ, ತಾ:ದೇವದುರ್ಗ.

DIP/RCR/720/KSMC&A/723/2025-26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್-6/ಕೆಕೆಆರ್‌ಡಿಬಿ/2025-26/6137 ದಿನಾಂಕ:21.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ದ್ವಿ/ಏಕ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ **https:kppp.karnataka.gov.in**ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ
1)	PWD/2025-26/RD/WORK_INDENT33414	130.00
2)	PWD/2025-26/RD/WORK_INDENT33859	63.00
3)	PWD/2025-26/RD/WORK_INDENT33861 (Reserved CAT-2A Category)	15.00
4)	PWD/2025-26/BR/WORK_INDENT33809	30.00
5)	PWD/2025-26/RD/WORK_INDENT33854	63.00
6)	PWD/2025-26/RD/WORK_INDENT33857	63.00
7)	PWD/2025-26/RD/WORK_INDENT33855 (Reserved CAT-2A Category)	65.00
8)	PWD/2025-26/RD/WORK_INDENT33856 (Reserved CAT-2A Category)	72.65
9)	PWD/2025-26/BR/WORK_INDENT33868 (Reserved SC Category)	25.00
10)	PWD/2025-26/BR/WORK_INDENT33869 (Reserved ST Category)	90.00
11)	PWD/2025-26/RD/WORK_INDENT33852	50.00
12)	PWD/2025-26/BR/WORK_INDENT33860	35.00
13)	PWD/2025-26/RD/WORK_INDENT33469	70.00
14)	PWD/2025-26/RD/WORK_INDENT33652 (Reserved SC Category)	100.00
15)	PWD/2025-26/RD/WORK_INDENT33632	100.00
16)	PWD/2025-26/RD/WORK_INDENT33634	66.99
17)	PWD/2025-26/RD/WORK_INDENT33473	80.00
18)	PWD/2025-26/IND0223	49.20

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ, ಮರು ಟೆಂಡರ್ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.

ಅ)ಕಾಮಗಾರಿಗಳಿಗೆ ನಿಗದಿಪಡಿಸಿದ ಪ್ರಿ-ಬಿಡ್ ಸಭೆ ದಿನಾಂಕ ಮತ್ತು ಸಮಯ : **27.02.2026 ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೊಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ.** ಆ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ: **02.03.2026 ರಂದು 12.00 ಗಂಟೆಯ ವರೆಗೆ.** ಇ)ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **04.03.2026 ರಂದು 16.00 ಗಂಟೆಯ ವರೆಗೆ.** ಈ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **05.03.2026 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ಡಿಐಪಿಆರ್/ಬಳ್ಳಾರಿ/1047/ಕೆಎಸ್‌ಎಂಸಿಎ/2025-26

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಗುರುವಾರ, 26 ಫೆಬ್ರವರಿ 2026
ಹುಬ್ಬಳ್ಳಿ

ವಿಂಡೀಸ್ VS ಆಫ್ರಿಕಾ | ಎರಡನೇ ಪಂದ್ಯದಲ್ಲಿ ಭಾರತ–ಜಿಂಬಾಬ್ವೆ ಪಂದ್ಯಾಟ

ಭಾರತ ಸೆಮಿ ನಿರ್ಧಾರ ಇಂದು

ಚೆನ್ನೈ: ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರತ ಸೆಮಿಫೈನಲ್‌ಗೇರುವುದನ್ನು ನಿರ್ಧರಿಸುವ ಎರಡು ಪ್ರಮುಖ ವಿಂಡೀಸ್–ದ.ಆಫ್ರಿಕಾ, ಭಾರತ–ಜಿಂಬಾಬ್ವೆ ಪಂದ್ಯಗಳು ಗುರುವಾರದಂದು ನಡೆಯಲಿವೆ.

ಸೂಪರ್–8ರ ಪಂದ್ಯಗಳು ಭಾರೀ ಸಂಚಲನ ಮೂಡಿಸುತ್ತಿವೆ. ಎರಡನೇ ಗುಂಪಿನಲ್ಲಿ ಇಂಗ್ಲೆಂಡ್ ಈಗಾಗಲೇ ಸೆಮಿಗೇರಿದೆ. ಇನ್ನು ಮೊದಲನೇ ಗುಂಪಿನಲ್ಲಿ ದ.ಆಫ್ರಿಕಾ ಮತ್ತು ವಿಂಡೀಸ್ ತಂಡಗಳು ತಲಾ ಒಂದು ಗೆಲುವಿನೊಂದಿಗೆ ಉತ್ತಮ ರನ್‌ರೇಟ್ ಕೂಡ ಹೊಂದಿದ್ದು ಮೊದಲೆರಡು ಸ್ಥಾನಗಳಲ್ಲಿ ಕಾಣಿಸಿಕೊಂಡಿವೆ. ಹೀಗಾಗಿ ಭಾರತಕ್ಕೆ ತನ್ನ ಪಂದ್ಯಕ್ಕಿಂತ ದ.ಆಫ್ರಿಕಾ–ವಿಂಡೀಸ್ ಪಂದ್ಯವೇ ಪ್ರಮುಖ. ಅಷ್ಟಾಗ್ಯೂ ಯಾವುದೋ ಒಂದು ಗೆಲುವು ಸೆಮಿ ಹಾದಿ ತೋರಿಸುವುದಿಲ್ಲ, ಭಾರತಕ್ಕೆ ಲಕ್ ಜತೆಗೆ ಪರಿಶ್ರಮದ ಅಗತ್ಯವಿದೆ.

ಭಾರತಕ್ಕಿದು ಕೊನೆಯ ಅವಕಾಶ: ಲೀಗ್ ಹಂತದ ಪಂದ್ಯಗಳಲ್ಲಿ ಅಜೇಯ ಓಟ ಮುಂದುವರಿಸಿದ್ದ ಭಾರತ ಟಾಪ್ ತಂಡವಾಗಿ ಬಂದಿತ್ತು. ನಾಲ್ಕು ಗೆಲುವುಗಳನ್ನು ಜೇಬಿನಲ್ಲಿಟ್ಟುಕೊಂಡು ಬಂದಿದ್ದ ಭಾರತಕ್ಕೆ ದ.ಆಫ್ರಿಕಾ ಹೀನಾಯವಾಗಿ ಸೋಲಿಸಿದೆ. ಪರಿಣಾಮ ಭಾರತಕ್ಕೆ ಇದು ಕೊನೆಯ ಅವಕಾಶವಾಗಿದೆ. ಸೂಪರ್–8ರ ಮೊದಲೆರಡು ತಂಡಗಳು ಮಾತ್ರ ಮುನ್ನಡೆ ಸಾಧಿಸುತ್ತವೆ. ಪರಿಣಾಮ ಭಾರತ ಒಂದು ವೇಳೆ ಈ ಪಂದ್ಯದಲ್ಲಿ ಸೋತರೆ ಹೊರಬೀಳಲಿದೆ. ಗೆದ್ದರೂ ಅದು ಸಾಕಾಗೊಲ್ಲ.

ಲೆಕ್ಕಾಚಾರ ಹೇಗಿದೆ?: ವಿಂಡೀಸ್ ಹಾಗೂ ದ.ಆಫ್ರಿಕಾ ಪಂದ್ಯದಲ್ಲಿ ವಿಜೇತರು ಭಾರತದ ಸೆಮಿ ಹಾದಿಯನ್ನು ನಿರ್ಧರಿಸಲಿದ್ದಾರೆ. ವಿಂಡೀಸ್ ಗೆಲುವು ಸಾಧಿಸಿದರೆ, ಭಾರತದ ಅವಕಾಶ ತೀರಾ ಕುಗ್ಗಲಿದೆ. ದ.ಆಫ್ರಿಕಾ ಗೆದ್ದರೆ ಭಾರತದ ಹಾದಿ ಸರಳಗೊಳ್ಳಲಿದೆ. ಎರಡನೇ ಪಂದ್ಯದಲ್ಲಿ ಭಾರತಕ್ಕೆ ಸಾಮಾನ್ಯ ಗೆಲುವು ದಕ್ಕಿದರೆ ಅದು ಸಾಕಾಗುವುದಿಲ್ಲ. ರನ್‌ರೇಟ್ ಹೆಚ್ಚಿಸಿಕೊಳ್ಳಬೇಕಾದ ಅನಿವಾರ್ಯತೆ ಭಾರತಕ್ಕಿದೆ.



ಬ್ಯಾಟರ್ಸ್ ಲಯದ ಚಿಂತೆ

ಒತ್ತಡದ ಮಧ್ಯೆ ಭಾರತದ ಬ್ಯಾಟಿಗರು ಲಯದ ಚಿಂತೆಯಲ್ಲಿದ್ದಾರೆ. ಆರಂಭಿಕ ಆಟಗಾರ ಅಭಿಷೇಕ್ ಶರ್ಮಾ ಅವರ ಲಯ ದೊಡ್ಡ ಹಿನ್ನಡೆ ತಂದಿದೆ. ಮೂರನೇ ಕ್ರಮಾಂಕದಲ್ಲಿ ತಿಲಕ್ ವರ್ಮಾ ಹಲವು ಪಂದ್ಯಗಳಿಂದ ಹಿನ್ನಡೆ ಅನುಭವಿಸಿದ್ದಾರೆ. ಸೂರ್ಯ ಕೂಡ ಹೇಳಿಕೊಳ್ಳುವ ಬ್ಯಾಟಿಂಗ್ ಮಾಡಿಲ್ಲ. ಶಿವಂ ದುಬೆ ಅವರ ಲಯ ಭಾರತಕ್ಕೆ ಶಕ್ತಿಯಾಗಿದೆ. ಪಾಂಡ್ಯ ಕೂಡ ನಿರೀಕ್ಷಿತ ಫಲಿತಾಂಶ ನೀಡಲಿಲ್ಲ. ಇನ್ನು ಬೌಲಿಂಗ್‌ನಲ್ಲಿ ಬೂಮ್ರಾ ಮತ್ತು ವರುಣ್ ಚಕ್ರವರ್ತಿ ಹೊರತುಪಡಿಸಿ ಇನ್ನುಳಿದ ಆಟಗಾರರು ಹಿನ್ನಡೆ ಅನುಭವಿಸಿದ್ದಾರೆ.

(ಭಾರತ ತಂಡದ ಲೆಕ್ಕಾಚಾರ)

ಜಿಂಬಾಬ್ವೆ ವಿರುದ್ಧ	ವಿಂಡೀಸ್ ವಿರುದ್ಧ	ಅಂತಿಮ ರನ್‌ರೇಟ್
75 ರನ್‌ಗಳಿಂದ	75 ರನ್‌ಗಳಿಂದ	+1.23
120 ರನ್‌ಗಳಿಂದ	120 ರನ್‌ಗಳಿಂದ	+2.73
ಚೇಸಿಂಗ್ 15 ಓವರ್‌ಗಳಲ್ಲಿ 175	ಚೇಸಿಂಗ್ 15 ಓವರ್‌ಗಳಲ್ಲಿ 175	+0.31
ಚೇಸಿಂಗ್ 10 ಓವರ್‌ಗಳಲ್ಲಿ 175	ಚೇಸಿಂಗ್ 10 ಓವರ್‌ಗಳಲ್ಲಿ 175	+2.63
75 ರನ್‌ಗಳ ಗೆಲುವು	ಚೇಸಿಂಗ್ 12 ಓವರ್‌ಗಳಲ್ಲಿ 175	1.33

ರನ್‌ರೇಟ್ ಲೆಕ್ಕಾಚಾರ

ಭಾರತದ ರನ್‌ರೇಟ್ ತೀರಾ ಕಮ್ಮಿಯಾಗಿದೆ, –3.8. ಹೀಗಿದ್ದಾಗ ತನಗಿಂತ ಮೇಲಿರುವ ತಂಡವನ್ನು ದಾಟಬೇಕಾದರೆ, ಭಾರತ ದೊಡ್ಡ ಗೆಲುವುಗಳನ್ನು ಸಾಧಿಸಬೇಕು. ಎರಡೂ ಪಂದ್ಯದ ಗೆಲುವುಗಳೂ ಅಷ್ಟೇ ಮುಖ್ಯವಾಗುತ್ತದೆ. ಹಾಗಿದ್ದರೆ ರನ್‌ರೇಟ್ ಭಾರತದ ರನ್‌ರೇಟ್ ಏರುವುದು ಹೇಗೆ? ಯಾವ ಪಂದ್ಯವನ್ನು ಎಷ್ಟು ರನ್‌ಗಳಿಂದ ಗೆಲ್ಲಬೇಕು? ಗೆದ್ದರೆ ಅಂತಿಮದಲ್ಲಿರುವ ರನ್‌ರೇಟ್ ಏನಾಗಿರುತ್ತದೆ?

ಏನಾದರೆ ಏನಾಗುತ್ತೆ?

ಮಧ್ಯಾಹ್ನ ನಡೆಯಲಿರುವ ದ.ಆಫ್ರಿಕಾ–ವಿಂಡೀಸ್ ಪಂದ್ಯದಲ್ಲಿ ದ.ಆಫ್ರಿಕಾ ಗೆದ್ದುಬಿಟ್ಟರೆ ಭಾರತಕ್ಕೆ ಅದೇ ದೊಡ್ಡ ಗೆಲುವು. ಏಕೆಂದರೆ ಇಲ್ಲಿ ಸೋತ ವಿಂಡೀಸ್, ಮುಂದೆ ಭಾರತ ವಿರುದ್ಧವೂ ಸೋತರೆ ಸೆಮಿಗೇರುವ ಅವಕಾಶ ಕೈಚೆಲ್ಲಲಿದೆ. ಆಂದರೆ, ಸೆಮಿಗೇರುವುದಕ್ಕೆ ಬೇಕಾದ 2 ಗೆಲುವುಗಳಿಲ್ಲದೆ ಹೊರಬೀಳುತ್ತೆ. ಹಾಗಾಗಬೇಕಾದರೂ ಭಾರತ ಜಿಂಬಾಬ್ವೆ ವಿರುದ್ಧ ಗೆಲ್ಲಲೇಬೇಕು. ಆಗ ಜಿಂಬಾಬ್ವೆ ಕೂಡ ಎರಡು ಸೋಲುಗಳೊಂದಿಗೆ ಹೊರನಡೆಯುತ್ತದೆ.

ವಿಂಡೀಸ್ ಗೆದ್ದರೆ?

ಒಂದು ವೇಳೆ ದ.ಆಫ್ರಿಕಾ ಸೋತುಬಿಟ್ಟರೆ, ಭಾರತ ಬಹುತೇಕ ಹೊರಬೀಳಲಿದೆ. ಏಕೆಂದರೆ ಮೊದಲೆರಡು ಸ್ಥಾನದಲ್ಲಿರುವ ತಂಡಗಳು ಭಾರೀ ರನ್‌ರೇಟ್‌ಗಳನ್ನು ಹೊಂದಿವೆ. ವಿಂಡೀಸ್ ಗೆಲುವು ಸಾಧಿಸಿದರೆ, 5ಕ್ಕಿರುವ ರನ್‌ರೇಟ್ ಹೆಚ್ಚಾಗುತ್ತದೆ. ದ.ಆಫ್ರಿಕಾ ರನ್‌ರೇಟ್ ಕಮ್ಮಿಯಾಗುತ್ತದೆ. ಹೀಗಾದರೆ ಭಾರತ ದ.ಆಫ್ರಿಕಾ ತಂಡವನ್ನು ರನ್‌ರೇಟ್‌ನಲ್ಲಿ ಸೋಲಿಸುವುದಕ್ಕೆ ದೊಡ್ಡ ಗೆಲುವುಗಳನ್ನು ದಾಖಲಿಸಬೇಕಾಗುತ್ತದೆ.

ಪಿಚ್

ಚೆನ್ನೈನ ಚಿದಂಬರಂ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಬೌಲರ್‌ಗಳು ದೊಡ್ಡ ಪಾತ್ರ ವಹಿಸಲಿದ್ದಾರೆ. ಸಾಮಾನ್ಯವಾಗಿ ಸ್ಪಿನ್ನರ್‌ಗಳು ಉತ್ತಮವಾಗಿ ಕಾಣಿಸಿಕೊಳ್ಳುತ್ತಾರೆ. ಬ್ಯಾಟಿಂಗ್ ವಿಚಾರಕ್ಕೆ ಬಂದರೆ ಇಬ್ಬನಿ ದೊಡ್ಡ ಪಾತ್ರ ವಹಿಸಲಿದೆ.

ಸೂಪರ್–8 ಅಂಕಪಟ್ಟಿ

ಗುಂಪು 1

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ವಿಂಡೀಸ್	1	1	0	0	2	+5.350
ದ.ಆಫ್ರಿಕಾ	1	1	0	0	2	+3.80
ಭಾರತ	1	0	1	0	0	-3.80
ಜಿಂಬಾಬ್ವೆ	1	0	1	0	0	-5.350

ಗುಂಪು 2

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಇಂಗ್ಲೆಂಡ್ (Q)	2	2	0	0	4	+1.491
ಕಿವೀಸ್	2	1	0	1	3	+3.050
ಪಾಕಿಸ್ತಾನ	2	0	1	1	1	-0.461
ಶ್ರೀಲಂಕಾ	2	0	2	0	0	-2.800

ಇಂದಿನ ಪಂದ್ಯಗಳು

ವಿಂಡೀಸ್ VS ಆಫ್ರಿಕಾ
ಮಧ್ಯಾಹ್ನ 3 (ಅಹಮದಾಬಾದ್)

ಭಾರತ VS ಜಿಂಬಾಬ್ವೆ
ಸಂಜೆ 7 (ಚೆನ್ನೈ)

ರಣಜಿ ಫೈನಲ್ | ಬೃಹತ್ ಮೊತ್ತದತ್ತ ಜಮ್ಮು–ಕಾಶ್ಮೀರ

ಕರ್ನಾಟಕ ಬೌಲರ್ಸ್ ಪರದಾಟ

ಚಿತ್ರ : ಮಂಜುನಾಥ ಜರತಾರಘರ



ಸಂಕ್ಷಿಪ್ತ ಸ್ಕೋರ್

ಜಮ್ಮು–ಕಾಶ್ಮೀರ : 527/6 (156)
ಶುಭಂ ಸಿಂಗ್ ಪುಂಡಿರ 121 (247ಎ, 12 ಬೌ, 2 ಸಿಕ್ಸ್) ಅಬ್ದುಲ್ ಸಮದ್ಧ 61(104 ಎ, 6 ಬೌ 1 ಸಿ), ಕನ್ಹಯ್ಯ ವಾಧ್ವಾನ್ 70(109 ಎ, 9 ಬೌ), ಪಾರಾಸ್ ಡೋಗ್ರಾ 70(166 ಎ, 8 ಬೌ), ಸಾಹಿಲ್ ಲೋತ್ರಾ 57(93 ಎ, 7 ಬೌ), ಅಬಿದ್ ಮುಷ್ತಾಕ್ 20(31 ಎ, 2 ಬೌ)
ಕರ್ನಾಟಕ ಬೌಲಿಂಗ್:
ಪ್ರಸಿದ್ಧ ಕೃಷ್ಣ; 3 ವಿಕೆಟ್, 29 ಓ, 90 ರನ್)
ವಿದ್ಯಾಧರ ಪಾಟೀಲ ; 1ವಿ, 29 ಓ, 104 ರನ್) ಶ್ರೇಯಸ್ ಗೋಪಾಲ; 1 ವಿ, 30 ಓ, 130 ರನ್) ಶಿಖರ ಶೆಟ್ಟಿ ; 1 ವಿ, 32 ಓ, 112 ರನ್).

ವಿಜಯಕುಮಾರ ಬೆಳ್ಳೇರಿಮಠ

ಹುಬ್ಬಳ್ಳಿ: 9ನೇ ಬಾರಿಗೆ ಪ್ರಶಸ್ತಿಯ ಮೇಲೆ ಕಣ್ಣಿಟ್ಟಿರುವ ಕರ್ನಾಟಕ ತಂಡಕ್ಕೆ ಇದೇ ಮೊದಲ ಬಾರಿಗೆ ರಣಜಿ ಫೈನಲ್ ಪ್ರವೇಶಿಸಿರುವ ಜಮ್ಮು ಮತ್ತು ಕಾಶ್ಮೀರ ತಂಡ ಕಬ್ಬಿಣದ ಕಡಲೆಯಾಗಿ ಪರಿಣಮಿಸಿದೆ.

ಎರಡನೇ ದಿನವೂ ಬ್ಯಾಟರ್ ಸ್ನೇಹಿಯಾಗಿದ್ದ ಪಿಚ್‌ನಲ್ಲಿ ಕಾಶ್ಮೀರದ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಕರ್ನಾಟಕದ ಕರಾರುವಾಕ್ ಬೌಲಿಂಗ್ ದಾಳಿಯನ್ನು ಲೀಲಾಜಾಲವಾಗಿ ಎದುರಿಸಿ ಬೃಹತ್ ಮೊತ್ತ ಪೇರಿಸಿದ್ದು, ಆತ್ಮವಿಶ್ವಾಸದ ಅಲೆಯಲ್ಲಿ ತೇಲುತ್ತಿದ್ದಾರೆ.

ಪಂದ್ಯದ ಎರಡನೇ ದಿನವೂ ಎದುರಾಳಿ ತಂಡದ ವಿಕೆಟ್ ಪಡೆಯಲು ಪರದಾಡಿದರು. ಆರು ವಿಕೆಟ್ ಪತನಗೊಂಡಿದ್ದರೂ ಕಾಶ್ಮೀರದ ಬಾಲಂಗೋಚಿಗಳು ಪಾರಮ್ಯ ಮೆರೆದರು.

ಮೊದಲ ದಿನದಾಟದ ಅಂತ್ಯಕ್ಕೆ 87 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 284 ರನ್ ಗಳಿಸಿದ್ದ ಅತಿಥಿ ಪಡೆ, ಎರಡನೇ ದಿನ ಇನ್ನೂ 23 ಓವರ್ ಬಾಕಿ ಇದ್ದಾಗ ಮಂದ ಬೆಳಕಿನಿಂದಾಗಿ ಆಟ ಸ್ಥಗಿತಗೊಂಡಾಗ 156 ಓವರ್‌ಗಳಲ್ಲಿ 6 ವಿಕೆಟ್ ಕಳೆದುಕೊಂಡು 527 ರನ್ ಕಲೆ ಹಾಕಿದೆ. ಸಾಹಿಲ್ ಲೋತ್ರಾ 93 ಎಸೆತಗಳಲ್ಲಿ 57, ಅಬಿದ್ ಮುಷ್ತಾಕ್ 31 ಎಸೆತಗಳಲ್ಲಿ 20 ರನ್ ಗಳಿಸಿ ಕ್ರೀಸ್ ಕಾಯ್ದುಕೊಂಡಿದ್ದಾರೆ.

ಎರಡನೇ ದಿನದಾಟ: ಶುಭಂ ಸಿಂಗ್ ಪುಂಡಿರ 247 ಎಸೆತಗಳಲ್ಲಿ 121ರನ್ ಗಳಿಸಿ ಔಟಾದರು. ಅವರೊಂದಿಗೆ ಕ್ರೀಸ್ ಅಜೇಯವಾಗಿ ಉಳಿದಿದ್ದ ಅಬ್ದುಲ್ ಸಮದ್ ಹಾಗೂ ಶುಭಂ ಸಿಂಗ್ ನಡುವಿನ 124 ರನ್‌ಗಳ ಜೊತೆಯಾಟ ಈ ಮೂಲಕ ಮುರಿದು ಬಿತ್ತು.

ಪ್ರಸಿದ್ಧ ಕೃಷ್ಣ ಎಸೆತದಲ್ಲಿ ಅಬ್ದುಲ್ ಸಮದ್ (61 ರನ್, 104 ಎಸೆತ) ಅವರು ವಿಕೆಟ್ ಕೀಪರ್ ಕೃತಿಕ್ ಕೃಷ್ಣ ಅವರಿಗೆ ಕ್ಯಾಚ್ ನೀಡಿ ಪೆವಿಲಿಯನ್‌ನತ್ತ ಹೆಜ್ಜೆ ಹಾಕಿದಾಗ ಕರ್ನಾಟಕ ಎದುರಾಳಿಗಳ ಮೊತ್ತ ಉಬ್ಬದಂತೆ ತಡೆಯಬಹುದು ಎಂಬ ಆಶಾಭಾವ ವ್ಯಕ್ತವಾಗಿತ್ತಾದರೂ, ಮೊದಲ ದಿನ ಗಾಯಗೊಂಡು ನಿವೃತ್ತರಾಗಿದ್ದ ನಾಯಕ ಪಾರಸ್ ಡೋಗ್ರಾ (70 ರನ್ 166 ಎಸೆತ, 8 ಬೌಂಡರಿ) ಇನ್ನಿಂಗ್ಸ್ ಕಟ್ಟಿದರು. ಟೂರ್ನಿಯುದ್ದಕ್ಕೂ ಉತ್ತಮ ಪ್ರದರ್ಶನ ನೀಡಿರುವ ವಿಕೆಟ್ ಕೀಪರ್ ಕನ್ಹಯ್ಯ ವಾಧ್ವಾನ್ (70 ರನ್, 109 ಎಸೆತ, 9 ಬೌಂಡರಿ) ನಾಯಕನಿಗೆ ಸಾಥ್ ನೀಡುವ ಮೂಲಕ ಅರ್ಧ ಶತಕ ಪೂರೈಸಿದರು. ನಂತರ ಬಂದ ಸಾಹಿಲ್ ಲೋತ್ರಾ ಅರ್ಧ ಶತಕ ಗಳಿಸಿ ಕ್ರೀಸ್ ಉಳಿಸಿಕೊಂಡಿದ್ದಾರೆ. ಕರ್ನಾಟಕದ ಬೌಲರ್‌ಗಳು ಎರಡನೇ ದಿನ 4 ವಿಕೆಟ್ ಪಡೆದರಾದರೂ, ರನ್ ಗಳಿಕೆಯ ಅವಕಾಶವನ್ನು ನಿರಾಕರಿಸುವಲ್ಲಿ ವಿಫಲರಾದರು. ವಿಕೆಟ್ ಬೇಟೆಯಲ್ಲಿದ್ದ ನಾಯಕ ದೇವದತ್ತ ಪಡಿಕಲ್ ಪ್ರಮುಖ ಬ್ಯಾಟರ್ ಕರುಣ್ ನಾಯರ್ ಅವರಿಗೂ ಬೌಲಿಂಗ್ ಅವಕಾಶ ನೀಡಿದರಾದರೂ ಬಾಲಂಗೋಚಿಗಳನ್ನು ನಿಯಂತ್ರಿಸಲು ಆಗಲಿಲ್ಲ.

ಆಟಗಾರರ ನಡುವೆ ವಾಗ್ವಾದ

ಪಂದ್ಯದ ವೇಳೆ ಉಭಯ ತಂಡದ ಆಟಗಾರರ ನಡುವೆ ವಾಗ್ವಾದ ನಡೆದ ಪ್ರಸಂಗವೂ ಜರುಗಿದೆ. ಪ್ರಸಿದ್ಧ ಕೃಷ್ಣ ಮಾಡಿದ 101ನೇ ಓವರನಲ್ಲಿ ಜಮ್ಮು ಕಾಶ್ಮೀರ ನಾಯಕ ಡೋಗ್ರಾ ಅವರು ಬ್ಯಾಟ್‌ಗೆ ಬಾಲ್ ಎಡ್ಜ್ ಆಗಿ ಬೌಂಡರಿ ಗೆರೆ ದಾಟುತ್ತದೆ. ಚೆಂಡು ಬೌಂಡರಿಗೆ ತಲುಪುತ್ತಿದ್ದಂತೆ, ಡೋಗ್ರಾ ಮತ್ತು ಫಾರ್ವಡ್ ಶಾರ್ಟ್ ಲೆಗ್‌ನಲ್ಲಿ ಕ್ಷೇತ್ರರಕ್ಷಣೆ ಮಾಡುತ್ತಿದ್ದ ಬದಲಿ ಆಟಗಾರ ಅನೀಶ್ ನಡುವೆ ಮಾತಿನ ಚಕಮಕಿ ನಡೆಯುತ್ತದೆ. ಆಗ ಅನೀಶ್ ಮೇಲೆ ಡೋಗ್ರಾ ಕೋಪಗೊಂಡು ತಲೆಗೆ ಪಂಚ್ ಮಾಡಿದರು. ಆಗ ಹಿರಿಯ ಆಟಗಾರ ಮಯಂಕ್ ಅಗರವಾಲ್ ಮಧ್ಯಪ್ರವೇಶಿಸಿ ಡೋಗ್ರಾ ಮೇಲೆ ಏರಿ ಹೋಗುತ್ತಾರೆ. ತಕ್ಷಣ ಅಂಪೈರ್‌ಗಳು ಮಧ್ಯ ಪ್ರವೇಶಿಸಿ ನಿಯಂತ್ರಿಸುತ್ತಾರೆ.



ಕಿರುಸುದ್ದಿ

ಜರ್ಮನ್ ಓಪನ್: ಆಕರ್ಷಿ ಮುಖ್ಯ ಡ್ರಾಗೆ

ಹೊಸದಿಲ್ಲಿ: ಜರ್ಮನ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಭಾರತದ ಶಟ್ಲರ್ ಆಕರ್ಷಿ ಕಶ್ಯಪ್ ಅವರು ಚೈನೀಸ್ ತೈಪೆಯ ಲೀ ಯು ಅವರನ್ನು ಸೋಲಿಸಿ ಮಹಿಳಾ ಸಿಂಗಲ್ಸ್ ಮುಖ್ಯ ಡ್ರಾಕ್ಕೆ ಪ್ರವೇಶಿಸಿದ್ದಾರೆ. ಮಂಗಳವಾರ ನಡೆದ ಅರ್ಹತಾ ಸುತ್ತಿನ ಪಂದ್ಯದಲ್ಲಿ ವಿಶ್ವ ರ್‍ಯಾಂಕಿಂಗ್‌ನಲ್ಲಿ 62ನೇ ಸ್ಥಾನದಲ್ಲಿರುವ ಆಕರ್ಷಿ, ಲೀ ವಿರುದ್ಧ 21–10, 21–15 ಅಂತರದಿಂದ ಸುಲಭ ಜಯ ಸಾಧಿಸಿದರು.



ಈಗ ಅವರು ಮುಖ್ಯ ಡ್ರಾದ ಮೊದಲ ಸುತ್ತಿನಲ್ಲಿ ಮತ್ತೊಬ್ಬ ಚೈನೀಸ್ ತೈಪೆ ಆಟಗಾರ್ತಿ ಹುವಾಮಗ್ ಯು ಅವರನ್ನು ಎದುರಿಸಲಿದ್ದಾರೆ. ಮಂಗಳವಾರದ ಪಂದ್ಯದಲ್ಲಿ ಪಂದ್ಯದ ಮೊದಲ ಗೇಮ್‌ನಲ್ಲಿ ಲೀ ಉತ್ತಮ ಆರಂಭ ಮಾಡಿದರೂ 4–4 ಸಮಬಲದ ಬಳಿಕ ಆಕರ್ಷಿ ವೇಗ ಹೆಚ್ಚಿಸಿದರು. 9–4 ಹಾಗೂ 16–8ಕ್ಕೆ ಮುನ್ನಡೆ ಸಾಧಿಸಿದ ಅವರು ಮೊದಲ ಗೇಮ್ ಅನ್ನು ಸುಲಭವಾಗಿ ತಮ್ಮದಾಗಿಸಿಕೊಂಡರು. ಎರಡನೇ ಗೇಮ್‌ನಲ್ಲಿ ಲೀ 8–14 ಹಿನ್ನಡೆಯಿಂದ 12–14ಕ್ಕೆ ಹಿಂತಿರುಗಿ ಸ್ವಲ್ಪ ಪ್ರತಿರೋಧ ತೋರಿದರೂ, ಆಕರ್ಷಿ ಅವರಿಗೆ ಅವಕಾಶ ನೀಡದೇ ಪಂದ್ಯವನ್ನು ಸಮರ್ಥವಾಗಿ ಮುಕ್ತಾಯಗೊಳಿಸಿದರು. 250,000 ಅಮೆರಿಕನ್ ಡಾಲರ್ ಬಹುಮಾನ ಮೊತ್ತದ ಈ ಟೂರ್ನಿಯಲ್ಲಿ ಅನುಭವಿ ಶಟ್ಲರ್ ಕಿಡಂಬಿ ಶ್ರೀಕಾಂತ್ ಹಾಗೂ ವಿಶ್ವ ಜೂನಿಯರ್ ಚಾಂಪಿಯನ್‌ಶಿಪ್ ಬೆಳ್ಳಿ ಪದಕ ವಿಜೇತೆ ತನ್ವಿ ಶರ್ಮಾ ಕೂಡ ಭಾರತದ ಪರ ಸ್ಪರ್ಧಿಸುತ್ತಿದ್ದಾರೆ.

ಜಿಂಬಾಬ್ವೆ ಪಂದ್ಯಕ್ಕೆ ತಂಡದಲ್ಲಿ ಬದಲಾವಣೆ?

ಚೆನ್ನೈ: ಗೆಲ್ಲಲೇಬೇಕಾಗಿರುವ ಪಂದ್ಯದಲ್ಲಿ ಭಾರತ ತಂಡದಲ್ಲಿ ಬದಲಾವಣೆಗಳಾಗಬಹುದು ಎಂದು ಭಾರತ ತಂಡದ ಬ್ಯಾಟಿಂಗ್ ಕೋಚ್ ಸಿತಾಂಶು ಕೋಟಕ್ ಸುಳಿವು ನೀಡಿದ್ದಾರೆ. ದ.ಆಫ್ರಿಕಾ ವಿರುದ್ಧ ಭಾರೀ ಸೋಲು ಕಂಡಿರುವ ಭಾರತ ವಿಶ್ವಕಪ್‌ನಿಂದಲೇ ಹೊರಬೀಳುವ ಆತಂಕದಲ್ಲಿದೆ. ಹೀಗಿರುವಾಗ ಜಿಂಬಾಬ್ವೆ ತಂಡವನ್ನು ಎದುರಿಸಲಿದೆ. ಇದಕ್ಕೂ ಮುನ್ನ ನಡೆದ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿರುವ ಅವರು, ತಂಡದ 3 ಆರಂಭಿಕರು ಎಡಗೈ ಆಟಗಾರರೇ ಆಗಿರುವುದು ದೊಡ್ಡ ವಿಷಯವೇನಲ್ಲ, ಆದಾಗ್ಯೂ ಮುಂದಿನ ಪಂದ್ಯದಲ್ಲಿ ಬದಲಾವಣೆಗಳಾಗಬಹುದು ಎಂದಿದ್ದಾರೆ. ಎಲ್ಲಾ ಪಂದ್ಯಗಳನ್ನು ನಾವು ಗೆಲ್ಲಲೇಬೇಕಾದ ಸ್ಥಿತಿಯಲ್ಲಿದ್ದೇವೆ. ಹೀಗಿರುವಾಗ ಎಲ್ಲ ವಿಭಾಗಗಳಲ್ಲೂ ನಾವು ಉತ್ತಮ ಪ್ರದರ್ಶನ ನೀಡಬೇಕು. ಟಿ20 ಕ್ರಿಕೆಟ್ ಅಂದರೆ ಹಾಗೆ, ನಾವು ಇಲ್ಲಿ ಎಲ್ಲ ಓವರ್‌ಗಳಲ್ಲೂ ಸ್ಫೋಟಕ ಬ್ಯಾಟಿಂಗ್ ಮಾಡುವ ಆಯ್ಕೆ ಮಾಡಲಾಗದು. ವಿಕೆಟ್ ಬಿದ್ದ ತಕ್ಷಣ ನಾವು ನಿಯಂತ್ರಿಸಲು ರನ್ ವೇಗ ಕುಗ್ಗಿಸಬೇಕಾಗುತ್ತದೆ ಎಂದರು.

ಕಿವೀಸ್‌ಗೆ ಗೆಲುವು, ಲಂಕಾ ಹೊರಕ್ಕೆ

ಕೊಲಂಬೋ: ಸ್ಯಾಂಟ್ನರ್ ಅವರ ಸೋಲರಾದ ಮನಸ್ಥಿತಿ ಮತ್ತು ರಚಿನ್ ರವೀಂದ್ರ ಅವರ ಕರಾರುವಾಕ್ ಬೌಲಿಂಗ್ ದಾಳಿಗೆ ತತ್ತರಿಸಿದ ಶ್ರೀಲಂಕಾ ತಂಡವು ವಿಶ್ವಕಪ್ ಪಂದ್ಯಾವಳಿಯ ಸೂಪರ್–8ರ ಪಂದ್ಯದಲ್ಲಿ ಸತತ ಎರಡನೇ ಸೋಲನುಭವಿಸಿ ಪಂದ್ಯಾವಳಿಯಿಂದ ಹೊರನಡೆಯಿತು.

ಮೊದಲ ಪಂದ್ಯ ರದ್ದಾದ ನಂತರ ಎರಡನೇ ಪಂದ್ಯದಲ್ಲಿ ಲಂಕಾ ತಂಡವನ್ನು ಎದುರಿಸಿದ್ದ ಕಿವೀಸ್ ಬ್ಯಾಟಿಂಗ್‌ಗಿಳಿದು ಆಘಾತ ಎದುರಿಸಿತು. ಆದಾಗ್ಯೂ ಸ್ಯಾಂಟ್ನರ್ ಸೇರಿದಂತೆ ಮಧ್ಯಮ ಕ್ರಮಾಂಕಿತ ಬ್ಯಾಟರ್‌ಗಳು ಉತ್ತಮ ಪ್ರದರ್ಶನ ನೀಡಿದ ನಂತರ ನ್ಯೂಜಿಲೆಂಡ್ 20 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 168 ರನ್ ಗಳಿಸಿತು. ಗುರಿ ಬೆನ್ನತ್ತಿದ ಶ್ರೀಲಂಕಾ 8 ವಿಕೆಟ್ ಕಳೆದುಕೊಂಡು 107 ರನ್ ಗಳಿಸಿತು. ಸ್ಯಾಂಟ್ನರ್ ಗೆಲುವಿನ ರೂವಾರಿ ಎನಿಸಿಕೊಂಡರು. ರಚಿನ್ ರವೀಂದ್ರ ಪಂದ್ಯದ ಹೀರೋ ಎನಿಸಿದ್ದಲ್ಲದೆ ಪಂದ್ಯಶ್ರೇಷ್ಠ ಪ್ರಶಸ್ತಿ ಗೆದ್ದುಕೊಂಡರು. ಈ ಗೆಲುವಿನೊಂದಿಗೆ 3 ಅಂಕ ಗಳಿಸಿರುವ ಕಿವೀಸ್ ಸೆಮಿಗೆ ಬಹುತೇಕ ತಲುಪಿದಂತಿದೆ. ಶ್ರೀಲಂಕಾ ಹೊರಬಿದ್ದಿದೆ. ಪಾಕ್‌ಗೆ ಸೆಮಿ ಅವಕಾಶ ಪಡೆಯಲು ಶ್ರೀಲಂಕಾದೊಂದಿಗೆ ಅಸಾಮಾನ್ಯ ಗೆಲುವು ಸಾಧಿಸಬೇಕಿದೆ.

ರಚಿನ್ ದಾಳಿಗೆ ತತ್ತರಿಸಿದ ಲಂಕಾ: ಗುರಿ ಬೆನ್ನತ್ತುವಾಗ ಕರಾರುವಾಕ್ ಬೌಲಿಂಗ್ ದಾಳಿ ಸಂಘಟಿಸಿದ ರಚಿನ್ ರವೀಂದ್ರ ಮಾರಕ ಬೌಲಿಂಗ್ ದಾಳಿಯೊಂದಿಗೆ ಲಂಕಾ ಪಡೆಯ ಹೆಡೆಮುರಿ ಕಟ್ಟಿದರು. ಕಮಿಂದು ಮೆಂಡೀಸ್, ದುನಿತ್ ಬಿಟ್ಟರೆ ಬೇರ್‍ಯಾವ ಆಟಗಾರರೂ 10ರ ಗಡಿ ದಾಟಲಾಗಲಿಲ್ಲ. ರವೀಂದ್ರ 4 ಓವರ್‌ಗಳಲ್ಲಿ 27 ರನ್ ನೀಡಿ 4 ವಿಕೆಟ್ ಕಿತ್ತರು.

ಸ್ಯಾಂಟ್ನರ್ ಆಸರೆ: ಫಿನ್ ಆಲೆನ್ ಆಟದೊಂದಿಗೆ ಸ್ಫೋಟಕ ಆರಂಭ ಪಡೆದರೂ ನ್ಯೂಜಿಲೆಂಡ್ ಆರಂಭಿಕ ಸೀಫರ್ಟ್ ವಿಕೆಟ್ ಕಳೆದುಕೊಂಡು ಹಿನ್ನಡೆ ಅನುಭವಿಸಿತ್ತು. ಮೂರನೇ ಕ್ರಮಾಂಕದಲ್ಲಿ ರಚಿನ್ ಕೊಂಚ ಹೊತ್ತು ಆಸರೆಯಾದರು.

ಆಲೆನ್ 23 ರನ್‌ಗೆ ವಿಕೆಟ್ ಒಪ್ಪಿಸಿದರು. ಫಿಲಿಪ್ಸ್ ಹೆಚ್ಚಿನ ಕೊಡುಗೆ ನೀಡಲಿಲ್ಲ. ಮಿಚೆಲ್ ಮತ್ತು ಚಾಂಪಮನ್ ಜವಾಬ್ದಾರಿ ಮರೆತರು. ಇಷ್ಟೊಂದು ಆಘಾತ ಎದುರಿಸಿ ಹಿನ್ನಡೆ ಅನುಭವಿಸಿದ್ದ ನ್ಯೂಜಿಲೆಂಡ್‌ಗೆ ನಾಯಕ ಸ್ಯಾಂಟ್ನರ್ ಆಸರೆಯಾದರು. ಕೋಲ್ ಅವರೊಂದಿಗೆ ಜೊತೆಗೂಡಿ ಉತ್ತಮ ಬ್ಯಾಟಿಂಗ್ ಮಾಡಿದ ಅವರು, 26 ಬಾಲ್‌ಗಳಲ್ಲಿ 4 ಸಿಕ್ಸರ್ ಹಾಗೂ 2 ಬೌಂಡರಿಗಳೊಂದಿಗೆ 47 ರನ್ ಚಚ್ಚಿದರು. ಅವರಿಗೆ ಸಾಥ್ ನೀಡಿದ ಕೋಲ್ 23 ಬಾಲ್‌ಗಳಲ್ಲಿ ಔಟಾಗದೆ 31 ರನ್‌ಗಳಿಸಿದರು. ಶ್ರೀಲಂಕಾ ಪರ ತೀಕ್ಷಣ ಮತ್ತು ಚಮೀರಾ ತಲಾ 3 ವಿಕೆಟ್ ಪಡೆದರು.

ಎಫ್‌ಐಎಚ್ ಹಾಕಿ: ಕೊನೆಗೂ ಗೆದ್ದ ಭಾರತ

ಹೊಸದಿಲ್ಲಿ: ಎಫ್‌ಐಎಚ್ ಪ್ರೋ ಲೀಗ್ ಹಾಕಿ ಪಂದ್ಯಾವಳಿಯಲ್ಲಿ ಭಾರತ ಕೊನೆಗೂ ಗೆಲುವು ಸಾಧಿಸಿದೆ. ಸತತ ಆರು ಸೋಲುಗಳ ನಂತರ ಭಾರೀ ಹಿನ್ನಡೆ ಅನುಭವಿಸಿರುವ ಭಾರತ ಆಸ್ಟ್ರೇಲಿಯಾ ತಂಡದೊಂದಿಗಿನ ಪಂದ್ಯದಲ್ಲಿ ಗೆಲುವು ಸಾಧಿಸಿದೆ. ವರ್ಷದ ಮೊದಲನೇ ಸುತ್ತಿನಲ್ಲಿ ತೀರಾ ಹಿನ್ನಡೆ ಅನುಭವಿಸಿದ್ದ ಭಾರತ ಮೊದಲಿನಿಂದಲೂ ಸೋಲುತ್ತಲೇ ಬಂದಿತ್ತು. ಇದೀಗ ಮೊದಲ ಬಾರಿಗೆ ಗೆದ್ದಿದೆ. ಬುಧವಾರ ನಡೆದ ರೋಚಕ ಪಂದ್ಯದಲ್ಲಿ ಮೊದಲಿಗೆ ಟೈ ಮಾಡಿಕೊಂಡ ಭಾರತ ಶೂಟೌಟ್‌ನಲ್ಲಿ ಗೆಲುವು ಸಾಧಿಸಿತು. ಪ್ರತಿ ಪಂದ್ಯಗಳಿಗಿಂತಲೂ ಭಾರತ ಈ ಪಂದ್ಯದಲ್ಲು ಉತ್ತಮ ಪೈಪೋಟಿ ನೀಡಿತು. ರಕ್ಷಣಾ ವಿಭಾಗ ಉತ್ತಮ ಪ್ರದರ್ಶನ ನೀಡಿದ ಬೆನ್ನಲ್ಲೇ ಮೊದಲ ಮೂರು ಕ್ವಾರ್ಟರ್‌ಗಳಲ್ಲಿ ಗೋಲೇ ದಾಖಲಾಗಲಿಲ್ಲ, ಆಸ್ಟ್ರೇಲಿಯಾದವರೆ 49ನೇ ನಿಮಿಷದಲ್ಲಿ ಗೋಲು ಗಳಿಸಿ ಮುನ್ನಡೆ ಸಾಧಿಸಿದರು. 49ನೇ ನಿಮಿಷದಲ್ಲಿ ಹೇವರ್ಡ್ ಗೋಲು ತಂದುಕೊಟ್ಟರು. ಎರಡು ನಿಮಿಷದ ನಂತರವೇ ಭಾರತದ ಶಿಲಾನಂದ ಲಕ್ರಾ ಗೋಲು ಗಳಿಸಿ ಸಮಬಲ ಸಾಧಿಸಿದರು. ಮುಂದಿನ ಪಂದ್ಯದಲ್ಲಿ ಯಾವುದೇ ಗೋಲು ದಾಖಲಾಗಲಿಲ್ಲ, ಶೂಟೌಟ್‌ನಲ್ಲಿ ಭಾರತ 3–1ರಿಂದ ಗೆಲುವು ಸಾಧಿಸಿತು.

ಕಬಡ್ಡಿ: ಆಂಧ್ರ ಪ್ರದೇಶ ಸೇರಿ ವಿವಿಧ ತಂಡಗಳಿಗೆ ಗೆಲುವು

ವಡೋದರ: 72ನೇ ಸೀನಿಯರ್ ರಾಷ್ಟ್ರೀಯ ಪುರುಷರ ಕಬಡ್ಡಿ ಚಾಂಪಿಯನ್‌ಶಿಪ್‌ನ ಮೊದಲನೇ ಪೂಲ್ ಪಂದ್ಯವು ದಿನದ ಅತ್ಯಂತ ರೋಚಕ ಪಂದ್ಯ ಕಂಡಿತು.

ಆಂಧ್ರಪ್ರದೇಶವು ತೆಲಂಗಾಣವನ್ನು 47–45 ಅಂತರದಲ್ಲಿ ಸೋಲಿಸಿತು. ಪೋಟ್ಲಾ ಗೋಪಿಚಂದ್ 17 ಪಾಯಿಂಟ್‌ಗಳನ್ನು ಗಳಿಸಿದರು, ಗಾಳಿ ಲಕ್ಷ್ಮ ರೆಡ್ಡಿ 10 ಪಾಯಿಂಟ್‌ಗಳನ್ನು ಸೇರಿಸಿದರು. ತೆಲಂಗಾಣದ ಜಿ.ರಾಜು 20 ಪಾಯಿಂಟ್‌ಗಳನ್ನು ಗಳಿಸಿದರೂ ತಂಡಕ್ಕೆ ಜಯ ತಂದುಕೊಡಲು ಸಾಧ್ಯವಾಗಲಿಲ್ಲ.

ಅದೇ ಪೂಲ್‌ನ ಮತ್ತೊಂದು ಪಂದ್ಯದಲ್ಲಿ ಹರಿಯಾಣವು ತೆಲಂಗಾಣವನ್ನು 49–18 ಅಂತರದಲ್ಲಿ ಮಣಿಸಿತು. ನೀರಜ್ ನಾರ್ವಾಲ್ 11 ಪಾಯಿಂಟ್‌ಗಳೊಂದಿಗೆ ಮುನ್ನಡೆಸಿದರು.

ಪೂಲ್ ಬಿನಲ್ಲಿ ಮಧ್ಯಪ್ರದೇಶವು ಗೋವಾವನ್ನು 35–34 ಅಂತರದಲ್ಲಿ ಸೋಲಿಸಿ ಜಯ ಸಾಧಿಸಿತು. ಭವಾನಿ ರಾಜಪುತ್ 14 ಪಾಯಿಂಟ್‌ಗಳನ್ನು ಗಳಿಸಿದರು. ಪೂಲ್ ಸಿದಲ್ಲಿ ತಮಿಳುನಾಡು ತನ್ನ ಪ್ರಭಾವಿ ಅಭಿಯಾನವನ್ನು ಮುಂದುವರಿಸಿ ವಿದರ್ಭವನ್ನು 40–21 ಅಂತರದಲ್ಲಿ ಸೋಲಿಸಿತು. ಸತೀಶ್ ಕನ್ನನ್ 8 ಪಾಯಿಂಟ್‌ಗಳನ್ನು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಹಿಮಾಚಲ ಪ್ರದೇಶವು ಗುಜರಾತ್‌ನ್ನು 51–34 ಅಂತರದಲ್ಲಿ ಮಣಿಸಿತು. ಯು ಮುಂಬಾದ ಅನಿಲ್ 14 ಪಾಯಿಂಟ್‌ಗಳನ್ನು ಗಳಿಸಿದರು. ಪಪ್ಪು ಕಮಲ್ ಕುಮಾರ್ ಮತ್ತು ಮಯಂಕ್ ಸೈನಿ ಸಹಕಾರ ನೀಡಿದರು. ಗುಜರಾತ್‌ನ ಮಿತೇಶ್ ಪ್ರಜಾಪತಿ 13 ಪಾಯಿಂಟ್‌ಗಳನ್ನು ಗಳಿಸಿದರೂ ಹಿಮಾಚಲದ ನಾಲ್ಕು ಆಲ್–ಔಟ್‌ಗಳು ಹಾಗೂ ಬಲಿಷ್ಠ ಟ್ಯಾಕಲ್‌ಗಳು ಗೆಲುವಿಗೆ ಕಾರಣವಾದವು.



ಪೂಲ್ ಡಿನಲ್ಲಿ ಉತ್ತರ ಪ್ರದೇಶವು ಮಣಿಪುರವನ್ನು 70–33 ಅಂತರದಲ್ಲಿ ಮಣಿಸಿ ಟೂರ್ನಿಯ ಅತ್ಯಂತ ದೊಡ್ಡ ಗೆಲುವುಗಳಲ್ಲಿ ಒಂದನ್ನು ದಾಖಲಿಸಿತು. ಉದಯ್ ದಾಬಾಸ್ ಭರ್ಜರಿ 25 ಪಾಯಿಂಟ್‌ಗಳನ್ನು ಗಳಿಸಿದರು. ಸೌರಭ್ 12 ಪಾಯಿಂಟ್‌ಗಳನ್ನು ಸೇರಿಸಿದರು. ಉತ್ತರ ಪ್ರದೇಶವು 53 ರೇಡ್ ಪಾಯಿಂಟ್‌ಗಳನ್ನು ಗಳಿಸಿ 8 ಆಲ್–ಔಟ್‌ಗಳನ್ನು ಸಾಧಿಸಿತು. ಮಣಿಪುರದ ಮುಯೆಂಗ್‌ಬಂ ಮೆನ್ಸನ್ 18 ಪಾಯಿಂಟ್‌ಗಳನ್ನು ಗಳಿಸಿದರೂ ತಂಡವು ಯುಪಿ ದಾಳಿಯನ್ನು ತಡೆಯಲು ವಿಫಲವಾಯಿತು.

ಕೇರಳವು ಛತ್ತೀಸ್‌ಗಢವನ್ನು 45–30 ಅಂತರದಲ್ಲಿ ಸೋಲಿಸಿತು. ನಂದು ಟಿ 11 ಪಾಯಿಂಟ್‌ಗಳನ್ನು, ಆದಿತ್ಯನ್ 10 ಪಾಯಿಂಟ್‌ಗಳನ್ನು ಸೇರಿಸಿದರು. ದಿಲ್ಲಿ ತ್ರಿಪುರವನ್ನು 64–42 ಅಂತರದಲ್ಲಿ ಮಣಿಸಿತು. ಆಶಿಷ್ 18 ಪಾಯಿಂಟ್‌ಗಳನ್ನು ಗಳಿಸಿದರು. ಹಿಮಾಂಶು ಸಿಂಗ್ 14 ಪಾಯಿಂಟ್‌ಗಳನ್ನು ಸೇರಿಸಿದರು.

ಮಾ.1ರಿಂದ ಐಟಿಎಫ್ ಟೆನಿಸ್

ಬೆಂಗಳೂರು: ಮಹಿಳಾ ಟೆನಿಸ್‌ನ ಅತಿ ದೊಡ್ಡ ಟೆನಿಸ್ ಪಂದ್ಯಾವಳಿ ಎನಿಸುವ ಐಟಿಎಫ್–35 ಕೂಟವು ಕಲಬುರ್ಗಿಯಲ್ಲಿ ನಡೆಯಲಿದೆ ಎಂದು ಆಯೋಜಕರು ದೃಢಪಡಿಸಿದ್ದಾರೆ. ಅಲ್ಲಿನ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣವು ಯುಎಸ್‌ಡಿ 30 ಸಾವಿರ ಡಾಲರ್ ಮೊತ್ತದ ಪಂದ್ಯಾವಳಿ ಮಾರ್ಚ್ 1–8ರವರೆಗೆ ನಡೆಯಲಿದೆ.

ಪಂದ್ಯಾವಳಿಯು ಐಟಿಎಫ್ ಆಶ್ರಯದ ಅಂತಾರಾಷ್ಟ್ರೀಯ ಟೆನಿಸ್ ಸಂಸ್ಥೆಯು ಐಟಿಎಫ್ ಡಬ್ಲ್ಯು35 ಪಂದ್ಯಾವಳಿಯನ್ನು ನಡೆಸುವುದಕ್ಕೆ ಸಿದ್ಧವಾಗಿದೆ. ಕೂಟವು 32 ಸಿಂಗಲ್ ಆಟಗಾರರನ್ನು ಒಳಗೊಳ್ಳಲಿದೆ. ಮುಖ್ಯ ಡ್ರಾ ಕೇವಲ ನಾಕೌಟ್ ಮಾದರಿಯಾಗಿರುತ್ತದೆ. ಮಾರ್ಚ್ 1ಕ್ಕೆ ಅರ್ಹತಾ ಸುತ್ತಿನ ಪಂದ್ಯಗಳು ನಡೆಯುತ್ತವೆ. 3ರಿಂದ ಮುಖ್ಯ ಡ್ರಾ ಪಂದ್ಯಗಳು ನಡೆಯಲಿವೆ. 16 ಜೋಡಿಗಳು ಡಬಲ್ ಪಂದ್ಯಗಳಲ್ಲಿ ಮಿಂಚಲಿದ್ದಾರೆ. 11 ದೇಶಗಳಿಂದ ಪ್ರಮುಖ ಆಟಗಾರರು ಕಣಕ್ಕಿಳಿಯುತ್ತಿರುವುದು ಇನ್ನೊಂದು ವಿಶೇಷ. ಮುಖ್ಯವಾಗಿ ಥೈಲ್ಯಾಂಡ್‌ನ ಅಚಿಲಿಸಾ ಚಾಂತಾ, ಜಾಸ್ಮಿನ್ ಗಿಂಬ್ರೆರೆ ಅವರು ಭಾಗವಹಿಸುತ್ತಿರುವುದು ಕುತೂಹಲ ಮೂಡಿಸಿದೆ.



ಭಾರತದಿಂದ ಉದಯೋನ್ಮುಖ ಆಟಗಾರ್ತಿ ವೈಷ್ಣವಿ ಅಡ್ಕರ್ ಶ್ರೀವಲ್ಲಿ ರಶ್ಮಿಕಾ, ಅಂಕಿತಾ ರೈನಾ, ಝೀಲ್ ದೇಸಾಯಿ, ಆಕಾಂಶಾ, ಶ್ರುತಿ ಮತ್ತು ಸೋನಲ್ ಪಾಟೀಲ್ ಭಾಗವಹಿಸಲಿದ್ದಾರೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5907

ಎಡದಿಂದ ಬಲಕ್ಕೆ
1.ಪರ್ವತವನ್ನು ಹೊತ್ತು ನಿಂತವನು (4)
3.ಜ್ಞಾನ–ವಸ್ತು–ಆಲೋಚನೆ ಹಂಚುವವನು (4)
5.ಸಂಗೀತಕ್ಕೆ ತಕ್ಕಂತೆ ದೇಹ ಚಲಿಸುವ ಕ್ರಿಯೆ (3)
6.ಬೇರೆಯ, ದೀರ್ಘವಾದ ಕಾಲ (4)
8.ಇದು ಸೂರ್ಯನ ದಿನ (4)
10.ಅನುಮಾನದಿಂದ ಜನರೆಡೆಗೆ ಬಂದ ತಮ್ಮ (3)
11. ಗೌರವ ಸೂಚಿಸುವ ಕ್ರಿಯೆ (3)
13. ದೇವತೆ–ಸೃಷ್ಟಿಯ ಇತಿಹಾಸವಿದು (3)
15.ಉತ್ಸವದ ಒಂಬತ್ತು ಇರುಳು (4)
16. ಗಲ್ಲಿಯಲ್ಲಿ ದಿಕ್ಕು ತೋಚದಂತಾಗು (4)

ಮೇಲಿನಿಂದ ಕೆಳಕ್ಕೆ
1.ತೆಂಗಿನ ಕಾಯಿ ಒಣಗಿ ಒಣಕೊಬ್ಬರಿಯಾಗು (5)
2.ಮಣಿ–ಅಮೂಲ್ಯ ರತ್ನವಿದು (3)
3.ಸಾಮಾನ್ಯಕ್ಕಿಂತ ಉನ್ನತವಾದ ಅರಿವು (3)
4.ಇದು ಮೋಸದಿಂದ ಕೂಡಿದ ವ್ಯವಹಾರ (5)
7.ಮಗನನ್ನು ಹೀಗೂ ಕರೆಯುತ್ತೇವೆ (3)
9.ಆಕಾಶದಲ್ಲಿ ಚಲಿಸುವ ವಾಹನ (3)
10.ಕೃಷ್ಣನಿಂದ ಗೀತೋಪದೇಶ ಪಡೆದವನು (3)
12.ನಿಜವಲ್ಲದ, ಕೃತಕ ವಸ್ತು (3)
13.ಹೆಣ್ಣು ಮಗಳು (2)
14.ಗುಂಪು ಇಲ್ಲಿ ತಲೆಕೆಳಗಾಗಿದೆ (2)

5906 ಉತ್ತರ

ಎಡದಿಂದ ಬಲಕ್ಕೆ:
2.ವಿರಹ 5.ಸುಭಾಷಿತ
6.ವಿಕರಾಳ 7.ಕರುಣೆ
8.ಗಡಿಗೆ 10.ಕಪ್ತಾನ
12.ಅಪಾಯ 15.ವನವಾಸ
16.ರಾಮಾಯಣ
17.ಧಡೂತಿ

ಮೇಲಿನಿಂದ ಕೆಳಕ್ಕೆ :
1.ಮುಸುಕು 2.ವಿತರಣೆ
3.ಹವಿರ್ಭಾಗ 4.ಪಾಳಕ
7.ಕಲಂಕ 9.ಗೆಳೆಯ
11.ನವಸತಿ 12.ಅಪರಾಧ
13.ಕವಲು 14.ಅಣತಿ

ಕ್ರಿ. ಮಿ. ನಂ. 255/2025

ಮಾನ್ಯ 1 ನೇ ಅಧಿಕ ದಿವಾಣಿ ನ್ಯಾಯಾಧಿಶರ ನ್ಯಾಯಾಲಯ ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ ಹುಬ್ಬಳ್ಳಿ

ಅರ್ಜಿದಾರ : ಶ್ರೀ ವಿಜಯಕುಮಾರ ತಂದೆ ಲಕ್ಷ್ಮಣ ಬಡಿಗೇರ, ವಯಾ: 36 ವರ್ಷ, ಉದ್ಯೋಗ: ಖಾಸಗಿ ಕೆಲಸ, ಸಾ॥ 107, ಮಾರುತಿನಗರ, ಇಂಡಸ್ಟ್ರೀಯಲ್ ಎಸ್ಟೇಟ್, ಗೋಕುಲ ರಸ್ತೆ, ಹುಬ್ಬಳ್ಳಿ, ಜಿ ಧಾರವಾಡ,

ವಿರುದ್ಧ

ಎದುರುಗಾರರು : ಮಾನ್ಯ ವಲಯ ಅಧಿಕಾರಿಗಳು, ವಲಯ ಕಚೇರಿ ನಂ. 05, ಹು.ಧಾ.ಮ.ಪಾಲಿಕೆ ಜನನ ಮರಣ ಅಧಿಕಾರಿಗಳು, ಹುಬ್ಬಳ್ಳಿ, ತಾ: ಹುಬ್ಬಳ್ಳಿ ಜಿ: ಧಾರವಾಡ.

ನೋಟಿಸ

ಮೇಲ್ಕಂಡ ಪ್ರಕರಣವನ್ನು ಅರ್ಜಿದಾರನು ತನ್ನ ತಂದೆಯಾದ **ಶ್ರೀ ಲಕ್ಷ್ಮಣ ಮಾನಪ್ಪ ಬಡಿಗೇರ ಇವರು ದಿ: 03-05-1989 ರಂದು ಧಾರವಾಡ ಜಿಲ್ಲೆಯ ಹುಬ್ಬಳ್ಳಿ ಶಹರ ಮನೆ ನಂ. 107, ಮಾರುತಿನಗರ, ಇಂಡಸ್ಟ್ರೀಯಲ್ ಎಸ್ಟೇಟ್, ಗೋಕುಲ ರೋಡ, ಹುಬ್ಬಳ್ಳಿಯ ಮನೆಯಲ್ಲಿ ಮರಣ ಹೊಂದಿದ್ದು ಇರುತ್ತದೆ** ಅಂತಾ ಮರಣ ಪ್ರಮಾಣ ಪತ್ರವನ್ನು ಪಡೆಯಲು ಈ ಅರ್ಜಿಯನ್ನು ದಾಖಲಿಸಿರುತ್ತಾರೆ.

ಈ ಕುರಿತು ಸಾರ್ವಜನಿಕರದು ಯಾರದಾದರೂ ಯಾವುದೇ ರೀತಿಯ ತಂಟೆ ತಕರಾರು ವಗೈರೆ ಇದ್ದಲ್ಲಿ ದಿ: 16-04-2026 ರಂದು ಬೆಳಗಿನ 10-30 ಗಂಟೆಗೆ ಮುದ್ದತ್ತು ಈ ನ್ಯಾಯಾಲಯದಲ್ಲಿ ನೇಮಿಸಿದ್ದು ಆ ದಿವಸ ತಾವಾಗಲಿ ಅಥವಾ ತಮ್ಮ ವಕೀಲರ ಮುಖಾಂತರ ತಕರಾರು ಸಲ್ಲಿಸಬೇಕು ತಪ್ಪಿದಲ್ಲಿ ಪ್ರಕರಣವನ್ನು ನಿರ್ಣಯಿಸಲಾಗುವದು.

ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ: 25-02-2026 ರಂದು ಕೊಡಲ್ಪಟ್ಟಿತು.

ಹುಬ್ಬಳ್ಳಿ (ಕೋರ್ಟ ಮೊಹರು)
ದಿ: 25-02-2026
ಹೇಮಂತ ಸಿ. ತಲ್ವಾರ
ಅರ್ಜಿದಾರರ ಪರ ವಕೀಲರು, ಹುಬ್ಬಳ್ಳಿ

ಕೋರ್ಟಿನ ಅಜ್ಞೆಯ ಮೇರೆಗೆ
ಸಹಿ/-ಶಿರಸ್ತೇದಾರರು
ಮಾನ್ಯ 1ನೇ ಅಧಿಕ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಹುಬ್ಬಳ್ಳಿ

CHANGE OF NAME

I, **AYESHA NADAF** (old name) Resident of H No: 21 Ambika Nagar Opp Urdu Primary School: Taj Nagar Unkal Hubballi 580031, Karnataka have changed my name as **AYESHA SHAHAJAN NADAF** (new name) henceforth I will be called and recognized by new name for all future purposes, dated: 25/02/2026.

CHANGE OF NAME

I, **PRAVEEN SHETTY** (old name) Resident of House No 61 Ambika Nagar, Keshwapur Hubballi 580023, Karnataka have changed my name as **PRAVEEN CHANDRASHEKAR SHETTY** (new name) henceforth I will be called and recognized by new name for all future purposes, dated: 25/02/2026.

CHANGE OF NAME

I, **SHIVANAND HULLI** (old name) Resident of Hosura Galli, Haliyal, Uttara Kannada Karnataka - 581328 have changed my name as **SHIVANAND BASAVARAJ HULLI** (new name) henceforth I will be called and recognized by new name for all future purposes, dated: 24/02/2026.

CHANGE OF NAME

I, **DASAR SUJATA** (Old Name) Resident of Vidya Nagar West, 2nd Cross, Haveri - 581110, Karnataka, have changed my name as **SUJATA MALLESHAPPA HOSAMANI** (New Name) Vide affidavit Dated: 25-02-2026 sworn before Notary **C. N Wodeyar.**

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ ವಿಭಾಗ ಗದಗ
Phone No: 08372-238782 Fax No. 08372-237268
E.Mail : eepwdgad@gmail.com

ನಂ:ಕಾನಿಇಂಗಃಲೋಇ:ಪಿಬಿ-1.3:ವಿವಿಧ:2025-26/5352
ದಿನಾಂಕ : 25-02-2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ವಿವಿಧ ಲೆಕ್ಕ ಶೀರ್ಷಿಕೆ ಅನುದಾನದ ಅಡಿಯಲ್ಲಿಯ ಒಟ್ಟು **135.25** ಲಕ್ಷ ಮೊತ್ತದಲ್ಲಿ ಒಟ್ಟು **09** ಕಾಮಗಾರಿಗೆ (ಕನಿಷ್ಠ ಮೊತ್ತ ರೂ: **1.15** ಲಕ್ಷ ಹಾಗೂ ಗರಿಷ್ಠ ಮೊತ್ತ ರೂ: **64.10** ಲಕ್ಷ) ಕೆಪಿಪಿಪಿ (kppp) ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ (kppp) ಸ್ಟ್ಯಾಂಡರ್ಡ್ ಬಿಡ್ ಡಾಕುಮೆಂಟ್ ಕೆಡಬ್ಲ್ಯೂ-1 ಹಾಗೂ 3, ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www.kppp.Karnataka.gov.in/ ದಲ್ಲಿ ನೋಡಿಕೊಳ್ಳಬಹುದು.

Work Indent No: Part-1 - 33839

ಮೇಲಿನ ಕಾಮಗಾರಿಯ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **05-03-2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **06-03-2026** ಮಧ್ಯಾಹ್ನ 4.00 ಘಂಟೆಯ ವರೆಗೆ, ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ : **07-03-2026**

Work Indent No: Part-2 - 33406, 29553/Call-2

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **03-03-2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **04-03-2026** ಮಧ್ಯಾಹ್ನ 4.00 ಘಂಟೆಯ ವರೆಗೆ, ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ : **05-03-2026.**

Work Indent No: Part-3 - 32865, 22570

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **12-03-2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **13-03-2026** ಮಧ್ಯಾಹ್ನ 4.00 ಘಂಟೆಯ ವರೆಗೆ, ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ : **16-03-2026.**

Work Indent No: Part-4 - 33905, 33411-ST, 32888, 31331

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪ್ರಶ್ನೋತ್ತರ ದಿನಾಂಕ : **16-03-2026** ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **17-03-2026** ಮಧ್ಯಾಹ್ನ 4.00 ಘಂಟೆಯ ವರೆಗೆ, ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ : **18-03-2026** ಆರ್ಥಿಕ ಬಿಡ್ ತೆರೆಯುವ ದಿನಾಂಕ : **19-03-2026**

ಪರಿಶಿಷ್ಟ ಜಾತಿ ಮತ್ತು ಪಂಗಡ, ಕೆಟಗರಿ-1 ಹಾಗೂ ಕೆಟಗರಿ-2ಎ ಕ್ಕೆ ಮೀಸಲಿರಿಸಿದ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸುವ ಗುತ್ತಿಗೆದಾರರು ಕಡ್ಡಾಯವಾಗಿ ಸಕ್ಷಮ ಪ್ರಾಧಿಕಾರದಿಂದ ಪಡೆದ ಪೂರಕ ದಾಖಲೆಗಳಾದ ಜಾತಿ ಪ್ರಮಾಣ ಪತ್ರ, 10 ವರ್ಷದ ರಹವಾಸಿ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

GST shall be paid separately as per prevailing Government Order. The increase in GST shall not be paid in the extended period of contract for which the contractor alone is responsible for delay as determined by the authority while granting the extension of time.

ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ,
ವಾಸಾಸಂಇ/ಗದಗ/ಕೆಎಸ್‌ಎಂಸಿಎ/680/2025-26 ಗದಗ

ಅಸಲ ದಾವಾ ನಂ: 19/2026

ಮಾನ್ಯ ದಿವಾಣಿ ನ್ಯಾಯಾಧೀಶರು, ನರಗುಂದ, ಇವರ ನ್ಯಾಯಾಲಯದಲ್ಲಿ

ವಾದಿಯರು :1) ಶ್ರೀಮತಿ ಈರವ್ವ ಕೋಂ. ನಾಗಯ್ಯ ಮಠದ 2) ಶಂಕ್ರಯ್ಯ ತಂ. ನಾಗಯ್ಯ ಮಠದ 3) ವೀರಯ್ಯ ತಂ. ನಾಗಯ್ಯ ಮಠದ 4) ಬಸಯ್ಯ ತಂ. ನಾಗಯ್ಯ ಮಠದ 5) ಕಲ್ಲಯ್ಯ ತಂ. ನಾಗಯ್ಯ ಮಠದ 6) ಶ್ರೀಮತಿ ಜಯಶ್ರೀ ಕೋಂ. ಮಹಾಂತಯ್ಯ ಹಳ್ಳಿಕೇರಿಮಠ 7) ಶ್ರೀಮತಿ ಶಿದ್ಲಿಂಗಮ್ಮ ಕೋಂ. ಮಲ್ಲಯ್ಯ ಮಠದ 8) ಮಹಾಲಕ್ಷ್ಮೀ ಕೋಂ. ಸಿದ್ದವೀರಸ್ವಾಮಿ ಹಿರೇಮಠ 9) ಅಪ್ಪಯ್ಯ ತಂ. ಮಲ್ಲಯ್ಯ ಮಠದ

ವಿರುದ್ಧ

ಪ್ರತಿವಾದಿಯರು:1) ಕರ್ನಾಟಕ ಸರಕಾರ, ಇದರ ಪರವಾಗಿ ಗದಗ ಜಿಲ್ಲಾಧಿಕಾರಿಗಳು, ಗದಗ. 2) ತಹಶೀಲ್ದಾರ, ನರಗುಂದ.

ಸಾರ್ವಜನಿಕ ತಿಳುವಳಿಕೆಯ ನೋಟೀಸ್

ಈ ಮೂಲಕ ಕೊಡುವ ಸಾರ್ವಜನಿಕ ನೋಟೀಸ್ ಏನೆಂದರೆ: ಮೇಲ್ಕಾಣಿಸಿದ ದಾವೆಯಲ್ಲಿಯ 2 ರಿಂದ 6ನೇ ವಾದಿಯರ ಅಜ್ಜಿಯಾದ ಶ್ರೀಮತಿ ಅಡಿವೆಮ್ಮ @ ಅಡವೆವ್ವ ಕೋಂ. ಶಂಕ್ರಯ್ಯ ಹಿರೇಮಠ @ ಮಠದ ಇವಳು ದಿ: 30-07-2003 ರಂದು ತೀರಿಕೊಂಡಿರುತ್ತಾಳೆ ಹಾಗೂ ಈ ಮೇಲ್ಕಾಣಿಸಿದ ದಾವೆಯಲ್ಲಿಯ 1 ನೇ ವಾದಿಗೆ ಮಗನಾದ, 7ನೇ ವಾದಿಗೆ ಗಂಡನಾದ ಮತ್ತು 8 ಹಾಗೂ 9ನೇ ವಾದಿಯರಿಗೆ ತಂದೆಯಾದ ಮಲ್ಲಯ್ಯ ತಂ. ನಾಗಯ್ಯ ಮಠದ ಇವನು ದಿ: 21-10-1995 ರಂದು ತೀರಿಕೊಂಡಿದ್ದು, ಸದರ ಇಬ್ಬರು ಮೃತರಿಗೆ ಈ ಪ್ರಕಾರ ಈ ದಾವೆಯಲ್ಲಿಯ ವಾದಿಯರು ಮಾತ್ರ ವಾರಸುದಾರರು ಇರುತ್ತಾರೆಂದು ಘೋಷಣೆಯ ಡಿಕ್ರೀ ಮಾಡಬೇಕೆಂದು ವಿನಂತಿಸಿ ಈ ಮೇಲ್ಕಾಣಿಸಿದ ದಾವೆಯನ್ನು ಮಾಡಲಾಗಿದೆ.

ಕಾರಣ ಈ ನೋಟೀಸಿನ ಮೂಲಕ ತಿಳಿಸುವು ದೇನೆಂದರೆ, ಈ ದಾವೆಯಲ್ಲಿಯ ವಾದಿಯರನ್ನು ಹೊರತುಪಡಿಸಿ ಮತ್ತೆ ಯಾರಾದರೂ ಸದರ ಮೃತರಿಗೆ ವಾರಸುದಾರರು ಇದ್ದರೆ, ಸ್ವತ: ನೀವಾಗಲಿ ಅಥವಾ ನಿಮ್ಮ ವಕೀಲರ ಮುಖಾಂತರವಾಗಲಿ, ನ್ಯಾಯಾಲಯವು ನಿಗದಿ ಪಡಿಸಿದ ಮುದ್ದತ್ ದಿನದಂದು ಅಂದರೆ ದಿ: 08/04/2026ರಂದು ಬೆಳಿಗ್ಗೆ 11-00 ಘಂಟೆಗೆ ಹಾಜರಾಗಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸಬೇಕು. ಇಲ್ಲದಿದ್ದಲ್ಲಿ ಮಾನ್ಯ ನ್ಯಾಯಾಲಯವು ಕಾನೂನಿನ ಪ್ರಕಾರ ಮುಂದಿನ ಆದೇಶವನ್ನು ಮಾಡುತ್ತದೆ ಅಂತಾ ಕೊಟ್ಟ ನೋಟೀಸ್.

ನರಗುಂದ
ದಿ:18-02-2026

ನ್ಯಾಯಾಲಯದ ಆದೇಶದ ಮೇರೆಗೆ
ಆಡಳಿತ ಶಿರಸ್ತೇದಾರರು
ಮಾನ್ಯ ದಿವಾಣಿ ನ್ಯಾಯಾಲಯ, ನರಗುಂದ.
(ವ್ಹಿ.ಎ.ಮೂಲಿಮನಿ)
ವಾದಿಯರ ಪರ ವಕೀಲರು

ಇಂದಿನ ಉತ್ಪನ್ನವಾರು ದರ — ಹುಬ್ಬಳ್ಳಿ

ಉತ್ಪನ್ನಗಳು	₹ಕನಿಷ್ಠ(ಕ್ವಿಂ)	₹ಗರಿಷ್ಠ (ಕ್ವಿಂ)
ಕಡಲೆಕಾಳು	2510	5710
ಉದ್ದಿನಬೇಳೆ	11840	11840
ಉದ್ದಿನಕಾಳು	6189	6189
ತೆಂಗಿನಕಾಯಿ	16000	18000
ಧನಿಯಾ	10610	10610
ಒಣ ಮೆಣಸಿನಕಾಯಿ	1009	70000
ಬಟಾಣಿ	5900	5900
ಹೆಸರುಕಾಳು	1310	6410
ನೆಲಗಡಲೆ (ಶೇಂಗಾ)	5639	6019
ಬೆಲ್ಲ	4100	5333
ಜೋಳ	1875	4345
ಮೆಕ್ಕೆಜೋಳ	1436	1795
ಮಡಿಕೆ (ಮಟಕಿ)	3001	13211
ಸಾಸುವೆ	5352	5352
ಈರುಳ್ಳಿ	600	2200
ಭತ್ತ	2400	2400
ಆಲೂಗಡ್ಡೆ	1100	1800
ಸೋಯಾಬಿನ್	3029	5205
ತೊಗರಿ	1510	5410
ಗೋಧಿ	2410	2716

CHANGE OF NAME

I, **PRAVEEN SUTHAR** (old name) Resident of H No: 74, Suthar Mansion, Madhura Chetana Colony, Keshwapur, Hubballi - Dharwad City - 580023, Karnataka, India, have changed my name as **PRAVEEN MOHANLAL SUTHAR** (new name) henceforth I will be called and recognized by new name for all future purposes, dated: 25/02/2026.

CHANGE OF NAME

I, **VISHAL MALIPATIL** (old name) Resident of H No 2/195, 2nd Ward, At Post: Kawaloor, Tq And Dist: Koppal - 583226, Karnataka, India, have changed my name as **VISHAL PRADEEP MALIPATIL** (new name) henceforth I will be called and recognized by new name for all future purposes, dated: 25/02/2026.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಸಂಖ್ಯೆ : 132/2026

ಅರ್ಜಿದಾರರು: ಶ್ರೀ ಲಂಬಾಣಿ ತುಳುಚ್ಯಾನಾಯ್ಕ್

ವಿರುದ್ಧ

ಎದುರುದಾರರು:-ಮಾನ್ಯ ತಹಶೀಲ್ದಾರರು ಹೂವಿನಹಡಗಲಿ ಮತ್ತು ಇನ್ನೊಬ್ಬರು

ಸಾರ್ವಜನಿಕ ನೋಟಿಸು

ಸದರಿ ಈ ಮೇಲ್ಕಾಣಿಸಿದ ಅರ್ಜಿದಾರರ ತಾಯಿ ಮೃತರಾದ ಕಾರಣ ಸದರಿ ಅರ್ಜಿದಾರರ ತಾಯಿಯ ಮರಣ ಪ್ರಮಾಣಪತ್ರವನ್ನು ಪಡೆಯಲು ಮಾನ್ಯ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿದ್ದು ಇರುತ್ತದೆ. ಅರ್ಜಿದಾರರ ತಾಯಿಯಾದ ಮೃತ ಶ್ರೀಮತಿ ಹೀರಿಬಾಯಿ ಗಂಡ ಯಂಕಾನಾಯ್ಕ ಇವರು ದಿನಾಂಕ: 01.01.1985 ರಂದು ಗೊರವನಗುಡ್ಡ ತಾಂಡ ಗ್ರಾಮದ ಅರ್ಜಿದಾರರ ಮನೆಯಲ್ಲಿ ಮೃತರಾಗಿದ್ದು ಇರುತ್ತದೆ. ಸದರಿಯವರ ಮರಣದ ಬಗ್ಗೆ ಎದುರುದಾರರ ಕಚೇರಿಯಲ್ಲಿ ನೋಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 08/04/2026 ರಂದು ಸಮಯ ಬೆಳಿಗ್ಗೆ 11.00 ಗಂಟೆಗೆ ಹೂವಿನಹಡಗಲಿ ಸಿವಿಲ್ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ (ಏಕಪಕ್ಷೀಯ) ಆದೇಶ ಮಾಡಲಾಗುವುದೆಂದು ತಿಳಿಯತಕ್ಕದ್ದು.

ದಿನಾಂಕ: 21/02/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/-ಶಿರಸ್ತೆದಾರರು,
ಸಿ.ಜೆ. & ಜೆ.,ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ.
ಸಹಿ/-ಶ್ರೀ ಎಂ.ಬಿ.ಕೋರಿ
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಸಂಖ್ಯೆ : 144/2026

ಅರ್ಜಿದಾರರು: ಶ್ರೀ ಲಿಂಗಪ್ಪ ಮುದಿಗೇರಿ ತಂದೆ ಲೇಟ್ ಹೇಮಪ್ಪ, ವಯಸ್ಸು 63 ವರ್ಷ, ಸಾ॥ ಹೊಳಲು ಗ್ರಾಮ, ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ.

ವಿರುದ್ಧ

ಎದುರುದಾರರು:ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ.

ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ಅಜ್ಜನ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ. ಅರ್ಜಿದಾರರ ನನ್ನ ಅಜ್ಜನಾದ ಮುದಿಗೇರಿ ಸಂಗನಬಸಪ್ಪ ತಂದೆ ಸಣ್ಣಲಕ್ಕಪ್ಪ ಇವರು ದಿನಾಂಕ:04.06.1958 ರಂದು ಹೊಳಲು ಗ್ರಾಮದ ತಮ್ಮ ಮನೆಯಲ್ಲಿ ಮರಣಹೊಂದಿರುತ್ತಾರೆ. ಸದರಿಯವರ ಮರಣದ ಬಗ್ಗೆ ಎದುರುದಾರರ ಕಚೇರಿಯಲ್ಲಿ ನೋಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 08/04/2026 ರಂದು ಸಮಯ ಬೆಳಿಗ್ಗೆ 11.00 ಗಂಟೆಗೆ ಹೂವಿನಹಡಗಲಿ ಸಿವಿಲ್ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ (ಏಕಪಕ್ಷೀಯ) ಆದೇಶ ಮಾಡಲಾಗುವುದೆಂದು ತಿಳಿಯತಕ್ಕದ್ದು.

ದಿನಾಂಕ: 24/02/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/-ಶಿರಸ್ತೆದಾರರು,
ಸಿ.ಜೆ. & ಜೆ.,ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ.
ಸಹಿ/-ಶ್ರೀ ಸುಭಾಷ್ ಗೌಡ.
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಸಂಖ್ಯೆ : 190/2026

ಅರ್ಜಿದಾರರು: ಶ್ರೀ ಕಂದಗಲ್ಲ ಸೋಮಪ್ಪ ತಂದೆ ಮಹಾದೇವಪ್ಪ ವಯಸ್ಸು 51 ವರ್ಷ, ಸಾ॥ ಕತ್ತೆಬೆನ್ನೂರು ಗ್ರಾಮ ಹೂವಿನಹಡಗಲಿ ತಾಲೂಕು, ವಿಜಯನಗರ ಜಿಲ್ಲೆ,

ವಿರುದ್ಧ

ಎದುರುದಾರರು:ಮಾನ್ಯ ತಹಶೀಲ್ದಾರರು ತಾಲೂಕು ಕಾರ್ಯಾಲಯ & ಇನ್ನೊಬ್ಬರು, ಹೂವಿನಹಡಗಲಿ.

ಸಾರ್ವಜನಿಕ ನೋಟಿಸು

ಈ ಪ್ರಕರಣದಲ್ಲಿ ಅರ್ಜಿದಾರರು ಸಾರ್ವಜನಿಕರ ಗಮನಕ್ಕೆ ಪ್ರಕಟಿಸಿದ ಈ ನೋಟೀಸು ಏನೆಂದರೆ, ಅರ್ಜಿದಾರನು ಮಾನ್ಯ ಹೂವಿನಹಡಗಲಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ತಂದೆಯ ಮರಣ ಪ್ರಮಾಣಪತ್ರ ಪಡೆಯಲು ಅರ್ಜಿ ಹಾಕಿರುತ್ತಾರೆ. ಅರ್ಜಿದಾರರ ನನ್ನ ತಂದೆಯಾದ ಮಾಳಗಿಮನಿ ಮಹಾದೇವಪ್ಪ ತಂದೆ ಪಕ್ಕೀರಪ್ಪ ಇವರು ದಿನಾಂಕ: 04.09.1985 ರಂದು ಕತ್ತೆಬೆನ್ನೂರು ಗ್ರಾಮದ ತಮ್ಮ ಮನೆಯಲ್ಲಿ ಮರಣಹೊಂದಿರುತ್ತಾರೆ. ಸದರಿಯವರ ಮರಣದ ಬಗ್ಗೆ ಎದುರುದಾರರ ಕಚೇರಿಯಲ್ಲಿ ನೋಂದಣಿಯಾಗದ ಕಾರಣ ಅರ್ಜಿದಾರರು ಘನ ನ್ಯಾಯಾಲಯದಲ್ಲಿ ಜನನ ಮತ್ತು ಮರಣ ನೊಂದಣಿ ಕಾಯ್ದೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ವಿಚಾರವಾಗಿ ಯಾರಾದರೂ ಈ ಬಗ್ಗೆ ತಕರಾರು ಸಲ್ಲಿಸುವವರಿದ್ದರೆ ತಾವಾಗಲೀ ಅಥವಾ ತಮ್ಮ ಪರವಾಗಿ ವಕೀಲರ ಮೂಲಕವಾಗಲೀ ದಿನಾಂಕ: 22/04/2026 ರಂದು ಸಮಯ ಬೆಳಿಗ್ಗೆ 11.00 ಗಂಟೆಗೆ ಹೂವಿನಹಡಗಲಿ ಸಿವಿಲ್ ನ್ಯಾಯಾಲಯದಲ್ಲಿ ತಕರಾರು ಸಲ್ಲಿಸತಕ್ಕದ್ದು, ಇಲ್ಲವಾದಲ್ಲಿ ಮಾನ್ಯ ಘನ ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ (ಏಕಪಕ್ಷೀಯ) ಆದೇಶ ಮಾಡಲಾಗುವುದೆಂದು ತಿಳಿಯತಕ್ಕದ್ದು.

ದಿನಾಂಕ: 24/02/2026 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/-ಶಿರಸ್ತೆದಾರರು,
ಸಿ.ಜೆ. & ಜೆ.,ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ.
ಸಹಿ/-ಶ್ರೀ ಎಸ್. ಸುಭಾಷ್ ಗೌಡ.
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

ಕ್ರಿಮಿನಲ್ ಮಿಸ್ ನಂ: 03/2026

ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಶಿಗ್ಗಾಂವ ಇವರ ನ್ಯಾಯಾಲಯಕ್ಕೆ

ಅರ್ಜಿದಾರರು: ಶ್ರೀ ಮದಾರಸಾ ತಂದೆ ಖಾದರಗೌಸ ಗುಜ್ಜರ

ವಿರುದ್ಧ

ಎದುರುಗಾರ : ಮಾನ್ಯ ಮುಖ್ಯಾಧಿಕಾರಿಗಳು ಪುರಸಭೆ ಕಾರ್ಯಾಲಯ ಶಿಗ್ಗಾಂವ, ಜನನ ವ ಮರಣ ನೋಂದಣಿ ಅಧಿಕಾರಿಗಳು ತಾ॥ ಶಿಗ್ಗಾಂವ, ಜಿ॥ ಹಾವೇರಿ

ಪತ್ರಿಕಾ ಪ್ರಕಟಣೆ

ಇದರಲ್ಲಿ ಅರ್ಜಿದಾರನ ತಂದೆಯಾದ "ಖಾದರ ಗೌಸ ತಂದೆ ಮದಾರಸಾಬ ಗುಜ್ಜರ" ಇವರು ದಿನಾಂಕ:15-05-1994 ರಂದು ಶಿಗ್ಗಾಂವ ತಾಲೂಕ ಶಿಗ್ಗಾಂವ ಪಟ್ಟಣದಲ್ಲಿ ಮೋತಿ ಆಗಿರುತ್ತಾರೆ. ಸದರಿ ಮೋತಿಗೆ ನಾವು ವಾರಸುದಾರರು ಇದ್ದು, ಅವರ ವಾರಸಾ ಪಡೆಯಲು ಮೋತಿಯವರ ಮರಣ ಪ್ರಮಾಣ ಪತ್ರವನ್ನು ಪಡೆಯುವ ಸಲುವಾಗಿ ಮೆ॥ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು ಇದ್ದು, ಅದು ದಿನಾಂಕ: 26-03-2026 ರಂದು ಮುದ್ದತ್ತು ನೇಮಿಸಿದ್ದು ಇದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾರಾದರೂ ಆಸಕ್ತಿಯುಳ್ಳವರು ಮೇಲಿನ ದಿನಾಂಕದಂದು ಮೆ॥ ನ್ಯಾಯಾಲಯಕ್ಕೆ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಕರಾರು ವಗೈರೆ ಇದ್ದರೆ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಏಕತರ್ಫಿಯಾಗಿ ಮುಂದಿನ ಆದೇಶ ಮಾಡಲಾಗುವುದು ಅಂತಾ ಕೊಟ್ಟ ಪತ್ರಿಕಾ ಪ್ರಕಟಣೆ. ನ್ಯಾಯಾಲಯದ ಆದೇಶ ಹಾಗೂ ಮೊಹರನೊಂದಿಗೆ ಹೊರಡಿಸಲಾಗಿತು.

ಶಿಗ್ಗಾಂವ
ದಿನಾಂಕ: 24-02-2026

ಶಿರಸ್ತೇದಾರ
ಮಾನ್ಯ ಕಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಸವಣೂರ
ಅರ್ಜಿದಾರರ ಪರ ವಕೀಲರು
ಶ್ರೀ ಬಿ.ಎಸ್.ಚೆಕ್ಕಿನಕಟ್ಟಿ ವಕೀಲರು, ಶಿಗ್ಗಾಂವ

ಕರ್ನಾಟಕ ಸರ್ಕಾರ

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ತಾಂತ್ರಿಕ ಸಹಾಯಕರು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ದಾವಣಗೆರೆ ಪ್ರಾದೇಶಿಕ ವಿಭಾಗ, ದಾವಣಗೆರೆ -577 005.

ದೂರವಾಣಿ ಸಂಖ್ಯೆ: 08192-262527 ಇ-ಮೇಲ್:-dcfdvg@gmail.com

ಸಂಖ್ಯೆ: ಸಅಸಂ/ದಾವಿ/ಟೆಂಡರ್/ವಿವ/2025-26 ದಿನಾಂಕ: 23-02-2026

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

2026-27ನೇ ಸಾಲಿನಲ್ಲಿ ವಿವಿಧ ಯೋಜನೆಗಳಡಿ ಮುಂದುವರೆದ ಕಾಮಗಾರಿಗಳಾದ ನೆಡುತೋಪು ನಿರ್ಮಾಣ, ನೆಡುತೋಪು ನಿರ್ವಹಣೆ, ಸಸಿಗಳನ್ನು ಬೆಳೆಸುವುದು ಹಾಗೂ ಸಸಿಗಳ ನಿರ್ವಹಣೆ ಕಾಮಗಾರಿಗಳನ್ನು ನಿರ್ವಹಿಸಲು ಮುಂಗಡವಾಗಿ 2025-26ನೇ ಸಾಲಿನಲ್ಲಿ ದಿ:23-02-2026 ರಂದು ಪ್ರಕಟಣೆ ಹೊರಡಿಸಿ, ದಿನಾಂಕ: 03-03-2026ರಂದು ಮಧ್ಯಾಹ್ನ 01:00 ಗಂಟೆಯವರೆಗೆ ನಿಗಧಿಪಡಿಸಲಾಗಿರುತ್ತದೆ. ದಿನಾಂಕ 05-03-2026ರ ಟೆಂಡರ್‌ನಲ್ಲಿ ಯಾರೂ ಭಾಗವಹಿಸದ ಸಂದರ್ಭದಲ್ಲಿ ಮರು ಟೆಂಡರನ್ನು, ದಿನಾಂಕ 13-03-2026ರಂದು ಮಧ್ಯಾಹ್ನ 01:00 ಗಂಟೆಯವರೆಗೆ ನಿಗಧಿಪಡಿಸಿ ಅಲ್ಪಾವಧಿ ಇ-ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನಿಬಂಧನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ.

ವಾಸಾಇ/ದಾವಣಗೆರೆ/777/ ಕೆಎಸ್‌ಎಂಸಿಎ/2025-26

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ತಾಂತ್ರಿಕ ಸಹಾಯಕರು, ದಾವಣಗೆರೆ

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 150/2026
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 166/2026

ಅರ್ಜಿದಾರರು: ಶ್ರೀ ಶಂಕರ ತಂದೆ ವಿಭೂತಿ ಶಿವಾನಂದಪ್ಪ, ವಯಸ್ಸು 36 ವರ್ಷ, ಸಾ॥ ಹೊಳಲು ಗ್ರಾಮ ಹೂವಿನಹಡಗಲಿ ತಾಲೂಕು, ವಿಜಯನಗರ [illegible]

[illegible]

ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ (ಏಕಪಕ್ಷೀಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.

ದಿನಾಂಕ: 24/02/26 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ

ಸಹಿ/-ಶಿರಸ್ತೆದಾರರು
ಸಿ.ಜೆ.& ಜೆ.ಎಂ.ಎಫ್.ಸಿ.ನ್ಯಾಯಾಲಯ.
ಸಹಿ/- ಶ್ರೀ ಬಿ.ಸುಭಾಷ್ ಗೌಡ
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.ಪ್

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಹೂವಿನಹಡಗಲಿ.
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 52/2026
ಕ್ರಿಮಿನಲ್ ಮಿಸ್ಲೇನಿಯಸ್ ಸಂಖ್ಯೆ: 53/2026

ಅರ್ಜಿದಾರರು: ಶ್ರೀಮತಿ ತಿರುಕವ್ವ ಗಂಡ ಲೇಟ್ ದ್ಯಾಮಪ್ಪ, ವಯಸ್ಸು 71 ವರ್ಷ, ಸಾ॥ ಬೂದನೂರು ಗ್ರಾಮ ಹೂವಿನಹಡಗಲಿ ತಾಲೂಕು, ವಿಜಯನಗರ [illegible]

[illegible]

ನ್ಯಾಯಾಲಯವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಇರುವುದಿಲ್ಲವೆಂದು ಏಕತರ್ಫಿ (ಏಕಪಕ್ಷೀಯ) ಆದೇಶ ಮಾಡಲಾಗುವುದು ಎಂದು ತಿಳಿಯತಕ್ಕದ್ದು.

ದಿನಾಂಕ: 25/02/26 ರಂದು ನ್ಯಾಯಾಲಯದ ಆದೇಶ ಹಾಗೂ ಮೊಹರಿನೊಂದಿಗೆ ನೀಡಲಾಗಿದೆ

ಸಹಿ/-ಶಿರಸ್ತೆದಾರರು
ಸಿ.ಜೆ.& ಜೆ.ಎಂ.ಎಫ್.ಸಿ.ನ್ಯಾಯಾಲಯ,
ಸಹಿ/- ಶ್ರೀ ಬಿ.ವೀರನಗೌಡ
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.ಪ್

IN THE COURT OF THE HON'BLE III ADDL. CIVIL JUDGE & J.M.F.C. AT BALLARI.

Crl. M.C. No. 525/2025

Between:-K Manoj Kumar and others ....Petitioners

And

The Tahasildar cum Register of Births and Deaths, Taluk Office, Ballari ...Respondent

NOTICE

TO WHOM SO EVER IT MAY CONCERNED

To

Respondent: The Tahasildar cum Register of Births and Deaths, Taluk Office, Ballari

WHEREAS, the above named petitioner has filed the above petition against you under section 13 (2) of Births and Deaths Act. 1969, for seeking the death certificate of petitioners No 1 & 3's father and Petitioner No 2's husband certificate by name KOLAGAL MALLIKARJUNA S/o Late. K SIVABASAPPA, who died 15-09-2011 at above stated address at #02, Mallreddy Gadde House, Yettinabudihal Village, Ballari Taluk and District.

You are hereby directed to appear in this court in person or by a pleader duly instructed on 28/03/2026 at about 11.00 a.m. in the before this court to show cause against the above petition, failing which the petition will be heard and determined ex-parte.

Given under my hand and seal of the court on this 25th day of Feb-2026

By Order of the Court,
Chief Ministerial Officer,
III Addl Civil Judge & JMFC at Ballari

S.V.ARASURU
Advocate for the petitioners

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಸಂಖ್ಯೆ : 189/2026

ಅರ್ಜಿದಾರರು: ರೇವಣಸಿದ್ದಪ್ಪ ಮುಂಡರಗಿ ತಂದೆ ಯಲ್ಲಪ್ಪ ಮುಂಡರಗಿ ವಯಸ್ಸು 30 ವರ್ಷ, ಸಾ॥ [illegible]

[illegible]

ಸಿ.ಜೆ. & ಜೆ.,ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ.
ಸಹಿ/-ಶ್ರೀ ಎಸ್. ಸುಭಾಷ್ ಗೌಡ.
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ
ಕ್ರಿಮಿನಲ್ ಸಂಖ್ಯೆ : 188/2026

ಅರ್ಜಿದಾರರು: ಜ್ಯೋತಿ ಮಂಜುನಾಥ ತಂದೆ ಕೋಟ್ರಪ್ಪ ವಯಸ್ಸು 26 ವರ್ಷ, ಸಾ॥ ಬ್ಯಾಲಹುಣಿಸಿ [illegible]

[illegible]

ಸಿ.ಜೆ. & ಜೆ.,ಎಂ.ಎಫ್.ಸಿ.ನ್ಯಾಯಾಲಯ ಹೂವಿನಹಡಗಲಿ.
ಸಹಿ/-ಶ್ರೀ ಎಸ್. ಸುಭಾಷ್ ಗೌಡ.
ಅರ್ಜಿದಾರರ ಪರ ವಕೀಲರು, ಹೂವಿನಹಡಗಲಿ.

IN THE COURT OF THE 3rd ADDITIONAL CIVIL JUDGE & JMFC AT BALLARI

Crl. M.C. No. 52/2026

Between:-1)SHIVAKUMAR S/O LATE.VENKATESH, aged about 20 years,
2)ANANTHAMMA W/O KOLLAYYA, D/O YERRIBASAPPA, aged about 62 years,
3)H.SHAKUNTHALA W/O K.BASANNA D/O YERRIBASAPPA, aged about 59 years,
4) VENKATALAKSHMI W/O JAMBANNA D/O YERRIBASAPPA, aged about 55 years,
5)K.SUNTIHA W/O VENKATESH, D/O YERRIBASAPPA, aged about 41 years, all are residing at Kappagal village, Ballari taluk and Disrict now presently residing at House No.139, ward No.31, Rajeshwari Nagar, Fire station backside, Ballari ...Petitioners

And

The register of Birth & Death's Register, Thasildhar, Taluk office, Ballari ...Respondent

NOTICE

WHEREAS, the above named petitioner has filed the above petition under section 13(2) of Birth and Deaths Act, 1969 against the respondent for the purpose of seeking date of death of Petitioner's No.1 grandfather by name YERRIBASAPPA S/O SANNA LINGAMMA was died on 17-11-2003 at Kappagallu village, Ballari taluk and District in the above mentioned address.

Therefore, If any persons are interested you are hereby directed to appear in this court in person or by a pleader duly instructed on 28-03-2026 at about 11.00 a.m to show cause against the above suit, failing which the suit will be heard and determined ex-parte against you.

Given under my hand and seal of the court on this 25th day Feb- 2026.

By Order of the court.
Shirestedar,
3rd Addl Civil Judge and JMFC Ballari.

A.K.Prakash
Advocate for the petitioner

ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು
ಜೆ.ಎಲ್.ಬಿ ರಸ್ತೆ, ಮೈಸೂರು- 570005,
ದೂರವಾಣಿ/ಫ್ಯಾಕ್ಸ್: 0821-2420624

ಸಂಖ್ಯೆ: ಮೈಅಪ್ರಾ/ಅಸ/ಸಾ.ಟೆಂ.ಪ್ರ. 01/2025-26 **ದಿನಾಂಕ: 24.02.2026**

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಮೈಸೂರು ಅಭಿವೃದ್ಧಿ ಪ್ರಾಧಿಕಾರದಿಂದ ವಿವಿಧ ಅನುದಾನದಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ ಸಂ.	ಟೆಂಡರ್ ಪ್ರಕಟಣೆ ಸಂಖ್ಯೆ	ಒಟ್ಟು ಕಾಮಗಾರಿಗಳು	ಒಟ್ಟು ಮೊತ್ತ (ರೂ. ಲಕ್ಷಗಳಲ್ಲಿ)	ಇ-ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಟೆಂಡರ್ ತೆರೆಯುವ ದಿನಾಂಕ
	ಸಿವಿಲ್ ಕಾಮಗಾರಿಗಳು					
1.	ಮೈಅಪ್ರಾ/ಅಅ/ಪಿಬಿ/ಟಿಎನ್/20/2025 -26 ದಿನಾಂಕ: 24.02.2026	04	79.50	26.02.2026 ಬೆಳಿಗ್ಗೆ 11ರ ನಂತರ	04.03.2026 ಸಂಜೆ 5.30ರವರೆಗೆ	06.03.2026 ಬೆಳಿಗ್ಗೆ 11.00ಕ್ಕೆ
2	ಮೈಅಪ್ರಾ/ಅಅ/ಪಿಬಿ/ಟಿಎನ್/18/2025 -26 ದಿನಾಂಕ: 20.02.2026	02	906.50	10.02.2026 ಬೆಳಿಗ್ಗೆ 11ರ ನಂತರ	02.03.2026 ಸಂಜೆ 5.30ರವರೆಗೆ	04.03.2026 ಬೆಳಿಗ್ಗೆ 11.00ಕ್ಕೆ
3	ಮೈಅಪ್ರಾ/ಅಅ/ಪಿಬಿ/ಟಿಎನ್/19/2025 -26 ದಿನಾಂಕ: 17.02.2026	06	179.48	19.02.2026 ಬೆಳಿಗ್ಗೆ 11ರ ನಂತರ	06.03.2026 ಸಂಜೆ 5.30ರವರೆಗೆ	07.03.2026 ಸಂಜೆ 5.30ವರೆಗೆ
4	ಮೈಅಪ್ರಾ/ಅಅ/ಪಿಬಿ/ಟಿಎನ್/19/2025 -26 ದಿನಾಂಕ: 17.02.2026	01	645.00	26.02.2026 ಬೆಳಿಗ್ಗೆ 11ರ ನಂತರ	16.03.2026 ಸಂಜೆ 5.29ರವರೆಗೆ	17.03.2026 ಸಂಜೆ 5.30ಕ್ಕೆ
5	ಮೈನಪ್ರಾ/ಲೆಶಾ/ನಗದು/ನಿಶ್ಚಿತ ಠೇವಣಿ/17/ 2025-26 ದಿನಾಂಕ: 16.02.2025	01	117.00 ಕೋಟಿ	26.02.2026 ಬೆಳಿಗ್ಗೆ 11ರ ನಂತರ	16.03.2026 ಸಂಜೆ 5.29ರವರೆಗೆ	17.03.2026 ಸಂಜೆ 5.30ವರೆಗೆ

ಅರ್ಹ ನೋಂದಾಯಿತ ಗುತ್ತಿಗೆದಾರರು (http://KPPP.karnataka.gov.in) ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರವನ್ನು ಕಛೇರಿ ಸಮಯದಲ್ಲಿ ಮೈಸೂರು ಅಭಿವೃದ್ಧಿ ಪ್ರಾಧಿಕಾರದ ಸಿವಿಲ್ ಅಧೀಕ್ಷಕ ಅಭಿಯಂತರರ ಕಛೇರಿಯನ್ನು ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು. **ವಿಶೇಷ ಸೂಚನೆ:** ಮುಂದೆ ಯಾವುದೇ ಸೂಚನೆ/ಬದಲಾವಣೆ/ ತಿದ್ದುಪಡಿಗಳಿದ್ದಲ್ಲಿ (http://KPPP.karnataka.gov.in) ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/- ಅಧೀಕ್ಷಕ ಅಭಿಯಂತರರು, ಮೈಸೂರು ಅಭಿವೃದ್ಧಿ ಪ್ರಾಧಿಕಾರ, ಮೈಸೂರು.

DIPR/DDMYS/1749/KSMCA/978/2025-26

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ, ಕೃಭಾಜನಿನಿ, ನಾಬದಂಕಾ, ವಿಭಾಗ ನಂ-05 ರೋಡಲಬಂಡಾ-584127 ತಾ: ಲಿಂಗಸುಗೂರು ಜಿ: ರಾಯಚೂರು

ಸಂ.ಕೃಭಾಜನಿನಿ/ನಾಬದಂಕಾ/ವಿ-5/ಯೋಶಾ /2025-26/828 ದಿನಾಂಕ:23.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ (ನಿಯಮಿತ), ಬೆಂಗಳೂರು ಇವರ ಪರವಾಗಿ ಈ ಕೆಳಸಹಿದಾರ ರಿಂದ ಎಕ-ಲಕೋಟೆ ಪದ್ದತಿಯಲ್ಲಿ ಶೇಕಡವಾರು ಟೆಂಡರ್‌ಗಳನ್ನು ಈ ಕೆಳಗೆ ತಿಳಿಸಿರುವಂತೆ 2025-26ನೇ Suppyof Furniture For NRBC Division New office building (Indent No: KBJNL/2025-26/BD/WORK_INDENT2714) ಕಾಮಗಾರಿಗೆ ಅರ್ಹ ಗುತ್ತಿಗೆದಾರ ರಿಂದ ಇ-ಪ್ರೋಕ್ಯೂರ್ಮೆಂಟ್ ಮೂಲಕ ಆಹ್ವಾನಿಸಲಾಗಿದೆ.

1) ಎಕ-ಲಕೋಟೆ ಪದ್ದತಿ: ಎಕ-ಲಕೋಟೆ ಪದ್ದತಿ 2) ಕಾಮಗಾರಿಗಳ ಸಂಖ್ಯೆ: 1(KBJNL/2025-26/BD/WORK_INDENT2714) 3) ಟೆಂಡರ್ ಅರ್ಜಿ ಪ್ರಾರಂಭವಾಗುವ ದಿನಾಂಕ: 23.02.2026 3) ಟೆಂಡರ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: 05.03.2026 till 5.00PM 4) ಬಿಡ್‌ತರೆಯುವ ದಿನಾಂಕ: 06.03.2026 at 5.15PM

ಎಲ್ಲಾ ಬಿಡ್‌ಗಳ ಟೆಂಡರ್‌ಗಳನ್ನು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ತೆರೆಯಲಾಗುವುದು.ಹೆಚ್ಚಿನ ಮಾಹಿತಿಗಳನ್ನು ಅಂತರ್ಜಾಲ ವಿಳಾಸ https://kppp.karnataka.gov.inದಲ್ಲಿ ಅಥವಾ ಈ ಕೆಳಗೆ ಸಹಿದಾರರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರು,
DIP/RCR/721/KSMC&A/724/2025-26ಕೃಭಾಜನಿನಿ, ನಾಬದಂಕಾ ವಿಭಾಗ,-05 ರೋಡಲಬಂಡಾ.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ
ಉಗ್ರಾಣ ಮತ್ತು ಖರೀದಿ ಇಲಾಖೆ, ಕೇಂದ್ರ ಕಛೇರಿ, ಗೋಕುಲ ರಸ್ತೆ, ಹುಬ್ಬಳ್ಳಿ - 580 030.

ಟೆಂಡರ್ ಪ್ರಕಟಣೆ ಸಂಖ್ಯೆ : 13/2025-26 ದಿನಾಂಕ : 25-02-2026

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ವೇದಿಕೆ (ಕೆ.ಪಿ.ಪಿ.ಪಿ.) ಯ ಮೂಲಕ

ಆಸಕ್ತ ಬಿಡ್‌ದಾರರಿಂದ ಈ ಕೆಳಗೆ ತೋರಿಸಿದಂತೆ ಸಾಮಗ್ರಿಗಳ ಸರಬರಾಜಿಗಾಗಿ ಅಥವಾ ಸೇವೆಗಳನ್ನು ಒದಗಿಸಲು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರಸಂ.	ಟೆಂಡರ್ ಸಂಖ್ಯೆ	ಟೆಂಡರ್ ವಿವರಣೆ	ಅಂದಾಜು ಮೌಲ್ಯ
01	NWKRTC/2025-26/IND0179	ವಾಹನಗಳಿಗಾಗಿ ಸ್ಪ್ರಿಂಗ್ ಪಟ್ಟಿಗಳು.	ರೂ. 655.00 ಲಕ್ಷ
02	NWKRTC/2025-26/IND0185	ಅಟೋಮೊಟಿವ್ ಲ್ಯೂಬ್ರಿಕಂಟ್ಸ್, ಗ್ರೀಸ್ & ಕೂಲಂಟ್.	ರೂ. 525.00 ಲಕ್ಷ
03	NWKRTC/2025-26/SE2641	ಹೊರಗುತ್ತಿಗೆ ಆಧಾರದ ಮೇಲೆ 250 ತಾಂತ್ರಿಕ ಸಿಬ್ಬಂದಿಗಳನ್ನು ಒದಗಿಸುವುದು.	ರೂ. 427.00 ಲಕ್ಷ
04	NWKRTC/2025-26/IND0176	ಬಾಲ್ ಮತ್ತು ರೋಲರ್ ಬೇರಿಂಗ್ಸ್‌ಗಳು.	ರೂ. 398.00 ಲಕ್ಷ
05	NWKRTC/2025-26/IND0183	ಏರ್ ಕಾಂಪ್ರೆಸರ್‌ಗಳು.	ರೂ. 215.00 ಲಕ್ಷ
06	NWKRTC/2025-26/IND0178	ವಾಟರ್ ಪಂಪ್ ಮತ್ತು ಬಿಡಿ ಭಾಗಗಳು.	ರೂ. 164.00 ಲಕ್ಷ
07	NWKRTC/2025-26/IND0188	235/75ಆರ್, 17.5" ರೇಡಿಯಲ್ ಟ್ಯೂಬ್‌ಲೆಸ್ ಟೈರ್‌ಗಳು.	ರೂ. 107.00 ಲಕ್ಷ
08	NWKRTC/2025-26/IND0177	ಫ್ಯಾನ್ ಬೆಲ್ಟ್‌ಗಳು.	ರೂ. 100.00 ಲಕ್ಷ
09	NWKRTC/2025-26/IND0182	ಸೆಲ್ಫ್ ಅಢೇಸಿವ್ ಪ್ಲಾಸ್ಟಿಕ್ ಫೆಲ್ಟ್.	ರೂ. 59.42 ಲಕ್ಷ
10	NWKRTC/2025-26/IND0173/Call-2	ಬಸ್ ಪಾಸ್‌ಗಳ ಮುದ್ರಣ ಮತ್ತು ಸರಬರಾಜು.	ರೂ. 44.00 ಲಕ್ಷ
11	NWKRTC/2025-26/IND0181	ಅಲ್ಯೂಮಿನಿಯಂ ಪಾಪ್ ರಿವಿಟ್‌ಗಳು.	ರೂ. 43.33 ಲಕ್ಷ
12	NWKRTC/2025-26/IND0136/Call-2	ಇಂಜಿನ್ ರೀಕಂಡಿಷನ್‌ಗಾಗಿ ಬೇಕಾಗುವ ಯಂತ್ರಗಳು.	ರೂ. 40.00 ಲಕ್ಷ
13	NWKRTC/2025-26/IND0189	ಸ್ಮಾರ್ಟ್ ಕಾರ್ಡ್‌ಗಳು.	ರೂ. 27.50 ಲಕ್ಷ
14	NWKRTC/2025-26/IND0184	ಇಂಡಸ್ಟ್ರೀಯಲ್ ಗ್ಯಾಸ್‌ಗಳು.	ರೂ. 13.96 ಲಕ್ಷ
15	NWKRTC/2025-26/SE2605	ಕಂದಾಯ & ಭೂ ಸಮೀಕ್ಷೆ ವಿಷಯಗಳಲ್ಲಿ ತಜ್ಞರ ಸೇವೆ.	ರೂ. 10.00 ಲಕ್ಷ

ಬಿಡ್ ಸಲ್ಲಿಕೆಯ ಕೊನೆಯ ದಿನಾಂಕ ಮತ್ತು ಸಮಯ : ಟೆಂಡರ್ ಕ್ರ. ಸಂ. 1 ರಿಂದ 5 ರಲ್ಲಿನ ಟೆಂಡರ್‌ಗಳಿಗೆ 30-03-2026. ಕ್ರ. ಸಂ. 6 ರಿಂದ 15 ರಲ್ಲಿರುವ ಟೆಂಡರ್‌ಗಳಿಗೆ ದಿನಾಂಕ : 14-03-2026 ರ ಸಂಜೆ 5.30 ಗಂಟೆವರೆಗೆ. ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್ : http://kppp.karnataka.gov.in ಅಥವಾ ಮೊಬೈಲ್ ಫೋನ್ ಸಂಖ್ಯೆ : 70220 09113 ಗೆ ಸಂಪರ್ಕಿಸಬಹುದಾಗಿದೆ.

ಸಹಿ/- ಉಗ್ರಾಣ ಮತ್ತು ಖರೀದಿ ನಿಯಂತ್ರಕರು,
(ಟೆಂಡರ್ ಕರೆಯುವ ಪ್ರಾಧಿಕಾರ).

ಡಿಐಪಿಆರ್/ಧಾರವಾಡ/1279/ಮಣಿಪಾಲ್/2025-26

ಸ್ವಾವಲಂಬಿ ಬದುಕು ಕಟ್ಟಿಕೊಡುವ ವಿನೂತನ ಪ್ರಯತ್ನ

ಜೈಲು ಬಂಧಿಗಳಿಗೆ ವಿಶೇಷ ತರಬೇತಿ

▸ ಕಿರಣ ಮಾಸಣಗಿ



ಹಾವೇರಿ: ಆಕಸ್ಮಿಕ ಘಟನೆ, ಯಾವುದೋ ಒತ್ತಡದಿಂದ ಆರೋಪಿತರಾಗಿ ಜೈಲು ಸೇರಿದವರಿಗೆ ಹೊರ ಪ್ರಪಂಚದ ಬದುಕು ದುರ್ಭರ ಎನಿಸುತ್ತದೆ. ಜೈಲಿನಿಂದ ಹೊರ ಬಂದ ಮೇಲೆ ಜನಸಾಮಾನ್ಯರೊಟ್ಟಿಗೆ ಬದುಕು ಹೇಗೆಂಬ ಗೊಂದಲ ಸಹಜ. ಈ ಗೊಂದಲ ನಿವಾರಣೆಗಾಗಿ ಹಾವೇರಿ ಜಿಲ್ಲಾ ಕಾರಾಗೃಹ ಹತ್ತು ಹಲವು ವಿಭಿನ್ನ ಹೊಸತುಗಳಿಗೆ ನಾಂದಿ ಹಾಡಿದೆ.

ಅದರ ಭಾಗವಾಗಿ ಜೈಲು ಬಂಧಿಗಳಿಗೆ ವಿವಿಧ ತರಬೇತಿ ನೀಡುವ ಮೂಲಕ ಅವರು ಸಮಾಜದಲ್ಲಿ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ದೃಢವಾದ ಹೆಜ್ಜೆ ಇಟ್ಟಿದೆ.

ಜೈಲುಗಳಲ್ಲಿ ಎರಡು ಬಗೆ, ಶಿಕ್ಷೆ ಪ್ರಕಟವಾದಲ್ಲಿ ಅವರನ್ನು ಇಡುವ ಶಾಶ್ವತ ಸಜಾ ಬಂಧಿಖಾನೆ ಮತ್ತು ನ್ಯಾಯಾಲಯಗಳಲ್ಲಿ ವಿಚಾರಣೆ ನಡೆದಾಗ ಆರೋಪಿತರನ್ನು ಪರಿವೀಕ್ಷಣೆಗೆಂದು ಇಡುವ ಬಂಧಿಖಾನೆ.

ಹಾವೇರಿ ಜಿಲ್ಲಾ ಕಾರಾಗೃಹ ಇದರಲ್ಲಿ ಎರಡನೇಯದ್ದು. ಇಲ್ಲಿಗೆ ಬರುವವರು ಕೆಲ ದಿನ ಇಲ್ಲವೇ ತಿಂಗಳ ಕಾಲ ಇದ್ದು ನಂತರ ಹೊರ ಹೋಗುತ್ತಾರೆ. ಹೀಗೆ ಬಂದವರಲ್ಲಿ ತಪ್ಪಿನ ಅರಿವು ಮೂಡಿಸಿ, ಬದಲಾವಣೆಯ ಹೊಸತನ್ನು ಮೂಡಿಸುವಲ್ಲಿ ಹಾವೇರಿ ಜಿಲ್ಲಾ ಕಾರಾಗೃಹ ಯಶಸ್ವಿಯಾಗಿದೆ. ಇದಕ್ಕೆ ನಗರದ ಇಡಾರಿ ಸಂಸ್ಥೆ ಸಾಥ್ ನೀಡುವ ಮೂಲಕ ಜೈಲು ಬಂಧಿಗಳಿಗೆ ಮನಃ ಪರಿವರ್ತನೆ, ಸ್ವಾವಲಂಬನೆ ಜತೆಗೆ ಹಲವು ತರಬೇತಿ ನೀಡಿ ಜೈಲು ಬಂಧಿಗಳ ಭವಿಷ್ಯತ್ತನ್ನು ಕಟ್ಟಲು ಟೊಂಕಕಟ್ಟಿ ನಿಂತಿವೆ.

187 ಜೈಲು ಬಂಧಿಗಳು: ಪ್ರಸ್ತುತ ಜಿಲ್ಲಾ ಕಾರಾಗೃಹದಲ್ಲಿ ಒಟ್ಟು 200+ ಜನರನ್ನು ಪರಿವೀಕ್ಷಣೆಗೆ ಇಡಬಹುದಾದ ಸೌಲಭ್ಯ ಇದ್ದು ಪ್ರಸ್ತುತ 187 ಜೈಲು ಬಂಧಿಗಳಿದ್ದು ಇದು ದಿನಪ್ರತಿ ಏರಿಳಿತ ಆಗುತ್ತಿರುತ್ತದೆ. ಈ 187 ಜೈಲು ಬಂಧಿಗಳಲ್ಲಿ ಸುಮಾರು 18 ಜನರು ಮಹಿಳೆಯರು.

ಇವರಿಗೆ ಎಲ್ಲವೂ ಪ್ರತ್ಯೇಕ ವ್ಯವಸ್ಥೆ ಇದ್ದು, ಈ ಮಹಿಳೆಯರಿಗೆ ಮೊದಲ ಆದ್ಯತೆಯಲ್ಲಿ ಇಡಾರಿ ಸಂಸ್ಥೆ ಮನಃಪರಿವರ್ತನೆ ಮತ್ತು ಬದಲಾವಣೆಗೆ ಮುನ್ನುಡಿ ಬರೆದಿದೆ. ಇವರಿಗೆ ಯೋಗ ತರಬೇತಿ ನೀಡಿ, ನಂತರದಲ್ಲಿ ಮಹಿಳಾ ಬಂಧಿಗಳಿಗೆ ಸ್ವಾವಲಂಬನೆಯ ತರಬೇತಿಗೆ ಮುಂದಾಗಿದೆ.

ಈ ಮೂಲಕ ಸೀರೆ ಮೇಲೆ ಕರ್ನಾಟಕ ಕಸೂತಿ, ಕೈ ಕಸೂತಿ, ಸೆಣಬಿನಿಂದ ಮತ್ತು ನಾರಿನಿಂದ ಮ್ಯಾಟ್, ಮನೆಯ ದೈನಂದಿನ ಬಳಕೆಯ ಸಾಮಗ್ರಿಗಳು, ಗೋಡೆ ಮತ್ತು ಅಲಂಕಾರಿಕ ಸಾಮಗ್ರಿಗಳು, ಸ್ಪಾಂಜ್‌ನಿಂದ ಅಲಂಕಾರಿಕ ಹೂ, ಎಕ್ಸ್‌ರೇ ಶೀಟ್‌ನಿಂದ ಹೂಕುಂಡ ಹೀಗೆ ದಿನಬಳಕೆ ಸಾಮಗ್ರಿಗಳ ವೇಸ್ಟ್‌ಗಳನ್ನು ಬಳಸಿ ಅಲಂಕಾರಿಕ ಸಾಮಗ್ರಿ ಮಾಡುವ ತರಬೇತಿ ನೀಡಲಾಗಿದೆ. ಜತೆಗೆ ಈಗ ಟೇಲರಿಂಗ್ ತರಬೇತಿ ನಡೆಯುತ್ತಿದೆ.

ಇಲ್ಲಿನ 18 ಮಹಿಳಾ ಬಂಧಿಗಳಿಗೆ ಉಡುಪುಗಳನ್ನು ಸಿದ್ಧಪಡಿಸುವ ತರಬೇತಿ ಯಶಸ್ವಿಗೊಂಡ ಬೆನ್ನಲ್ಲೆ, ಇತರೆ ಹ್ಯಾಂಡ್ ಕ್ರಾಫ್ಟ್ ತರಬೇತಿಗೆ ಚಿಂತನೆ ನಡೆದಿದೆ. ನಿಮ್ಹಾನ್ಸ್‌ನ ಮಾನಸಿಕ ಆರೋಗ್ಯ ತಜ್ಞ ಡಾ.ಶಿವಾನಂದ ಯರೇಶಿಮಿ ಪ್ರತಿ ಶುಕ್ರವಾರ, ಶನಿವಾರ ತಲಾ 60 ಜೈಲು ಬಂಧಿಗಳಿಗೆ ಶಾಂತ ಸ್ವಭಾವ ರೂಢಿಸಿಕೊಳ್ಳುವುದು ಮತ್ತು ಒತ್ತಡ ನಿರ್ವಹಣೆ, ಮಾನಸಿಕ ಆರೋಗ್ಯ ಸುಧಾರಣೆ ಹೇಗೆಂಬ ಕುರಿತು ಅರಿವು ಮೂಡಿಸುತ್ತಿದ್ದಾರೆ.

> ಮಹಿಳಾ ಬಂಧಿಗಳ ಸೃಜನಶೀಲತೆ ಉತ್ತೇಜಿಸುವ ಜೊತೆಗೆ, ಆತ್ಮವಿಶ್ವಾಸ ಮತ್ತು ಸ್ವಾವಲಂಬನೆಯ ಬೆಳೆಸಲು ಈ ತರಬೇತಿ ಸಹಕಾರಿಯಾಗಿವೆ. ಇದರಿಂದ ಭವಿಷ್ಯದಲ್ಲಿ ಸ್ವಉದ್ಯೋಗ ಕೈಗೊಂಡು ಆದಾಯ ಉತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಅವಕಾಶ ಕಲ್ಪಿಸುತ್ತದೆ. ಅವರ ಪುನರ್ವಸತಿ ಹಾಗೂ ಸಮಾಜಮುಖಿ ಜೀವನಕ್ಕೆ ನೆರವಾಗುವ ಮಹತ್ವದ ಹೆಜ್ಜೆ.
>
> ■ ನಾಗರತ್ನಮ್ಮ, ಜೈಲ್ ಸೂಪರಿಟೆಂಡೆಂಟ್, ಜಿಲ್ಲಾ ಕಾರಾಗೃಹ, ಹಾವೇರಿ

> ಪ್ರಸ್ತುತ ಹಾವೇರಿ ಜಿಲ್ಲಾ ಕಾರಾಗೃಹಕ್ಕೆ ಜೈಲು ಬಂಧಿಗಳ ಆರೋಗ್ಯ ನಿರ್ವಹಣೆ ನಿಟ್ಟಿನಲ್ಲಿ ಖಾಯಂ ಮನೋವೈದ್ಯರನ್ನು ನೇಮಕ ಮಾಡಲಿ. ಇಲ್ಲಿ ಇರುವವರು ಸಜಾ ಬಂಧಿಗಳಲ್ಲ, ಪರಿವೀಕ್ಷಣಾ ಬಂಧಿಗಳಾಗಿದ್ದಾರೆ. ಅವರ ಸ್ವಾವಲಂಬನೆ ಬದುಕಿಗೆ ಸಂಸ್ಥೆ ಕೆಲಸ ಮಾಡುತ್ತಿದೆ.
>
> ■ ಪರಿಮಳಾ ಜೈನ್, ಅಧ್ಯಕ್ಷರು ಇಡಾರಿ ಸಂಸ್ಥೆ

ರಾಜ್ಯ ಸರ್ಕಾರ ಪತನ ಗ್ಯಾರಂಟಿ: ಕಡಾಡಿ



ಮೂಡಲಗಿ: ರಾಜ್ಯ ಸರ್ಕಾರದಿಂದ ಯಾವುದೇ ಹೊಸ ನೇಮಕಾತಿ ನಡೆಯದ ಕಾರಣ ಯುವಜನತೆಯ ವಯೋಮಿತಿ ಮೀರುತ್ತಿರುವ ಹಿನ್ನೆಲೆಯಲ್ಲಿ ದಂಗೆ ಎದ್ದಿದ್ದಾರೆ. ರಾಜ್ಯದಲ್ಲಿ ಸುಮಾರು 2.85 ಲಕ್ಷ ಸರ್ಕಾರಿ ಹುದ್ದೆಗಳು ಖಾಲಿ ಇದ್ದರೂ ಕೂಡ ಸರ್ಕಾರ ನೇಮಕಾತಿ ಮಾಡುವಲ್ಲಿ ನಿರಾಸಕ್ತಿ ವಹಿಸಿದೆ. ಕೇವಲ ಮುಖ್ಯಮಂತ್ರಿ ಕುರ್ಚಿ ಕಾಳಗ ನಡೆದಿದೆ ಹೊರತು ಬೇರೆ ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಳ್ಳುತ್ತಿಲ್ಲ, ಹೀಗಾಗಿ ರಾಜ್ಯದ ಯುವಜನತೆ ಆಕ್ರೋಶಗೊಂಡಿದ್ದಾರೆ ಎಂದು ರಾಜ್ಯಸಭಾ ಸಂಸದ ಈರಣ್ಣ ಕಡಾಡಿ ಕಿಡಿಕಾರಿದರು.

ಬುಧವಾರ ಪತ್ರಿಕಾ ಹೇಳಿಕೆ ನೀಡಿದ ಅವರು, ಸರ್ಕಾರ ಕಳೆದ ಮೂರು ವರ್ಷಗಳಲ್ಲಿ ಒಂದೂ ನೇಮಕಾತಿ ಆರಂಭಿಸದೆ ಉದ್ಯೋಗಾಕಾಂಕ್ಷಿಗಳಿಗೆ ದ್ರೋಹ ಬಗೆದಿದ್ದಾರೆ. ಈಗಾಗಲೇ ಸರ್ಕಾರದ ವಿವಿಧ ಪ್ರಮುಖ ಇಲಾಖೆಗಳಾದ ಶಿಕ್ಷಣ ಇಲಾಖೆ 79694, ಆರೋಗ್ಯ, ವೈದ್ಯಕೀಯ ಶಿಕ್ಷಣ 37572, ಒಳಾಡಳಿತ ಇಲಾಖೆ 28188, ಉನ್ನತ ಶಿಕ್ಷಣ ಇಲಾಖೆ 13599, ಪಶುಸಂಗೋಪನಾ ಇಲಾಖೆ 11020, ಕಂದಾಯ ಇಲಾಖೆ 10867, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ 10504, ಪರಿಶಿಷ್ಟ ಜಾತಿಗಳ ಕಲ್ಯಾಣ 9646, ಹಿಂದುಳಿದ ವರ್ಗಗಳ ಕಲ್ಯಾಣ 8525, ಆರ್ಥಿಕ ಇಲಾಖೆ 7668, ಕೃಷಿ ಇಲಾಖೆ 6876, ಅರಣ್ಯ ಇಲಾಖೆ 6478, ಸಿಬ್ಬಂದಿ, ಆಡಳಿತ ಸುಧಾರಣೆ 6190, ಸಹಕಾರ ಇಲಾಖೆ 4726, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ 4972, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ 3391 ಹೀಗೆ ಲಕ್ಷಾಂತರ ಹುದ್ದೆಗಳು ಖಾಲಿ ಇವೆ. ಇದು ಸರ್ಕಾರದ ಆಡಳಿತಾತ್ಮಕ ವೈಫಲ್ಯವಲ್ಲವೇ? ಎಂದು ಟೀಕಿಸಿದರು. ಮುಖ್ಯಮಂತ್ರಿಗಳೇ, 1000 ದಿನಗಳ ಸಂಭ್ರಮ ನಿಮಗಿರಲಿ, ಆದರೆ ಕೆಲಸವಿಲ್ಲದೆ ಕಂಗೆಟ್ಟಿರುವ ಯುವಕರಿಗೆ ಏನು ಉತ್ತರ ನೀಡುತ್ತೀರಿ? 40,000 ನೇಮಕಾತಿಯ ಸುಳ್ಳು ಲೆಕ್ಕ ಬಿಡಿ, ಎಷ್ಟು ಜನರಿಗೆ ನೇಮಕಾತಿ ಪತ್ರ ಸಿಕ್ಕಿದೆ ಎಂಬ ಶ್ವೇತಪತ್ರ ಹೊರಡಿಸಿ. ಹಕ್ಕು ಕೇಳಿದವರ ಮೇಲೆ ಲಾಠಿ ಬೀಸುವುದು ನಿಮ್ಮ ಸರ್ವಾಧಿಕಾರಿ ಧೋರಣೆಯಲ್ಲವೇ? ಎಂದು ಆಕ್ರೋಶ ವ್ಯಕ್ತಪಡಿಸಿದರು.

ಯುವಜನರು ತಾಳ್ಮೆ ಮೀರಿ ದಂಗೆ ಏಳುವ ಮುನ್ನ ನೇಮಕಾತಿ ಅಧಿಸೂಚನೆ ಹೊರಡಿಸದಿದ್ದರೆ ರಾಜ್ಯಾದ್ಯಂತ ಯುವಜನತೆಯ ಆಕ್ರೋಶಕ್ಕೆ ಸರ್ಕಾರ ಬೆಲೆ ತೆರಬೇಕಾಗುತ್ತದೆ ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಮಂತ್ರಿ ಸ್ಥಾನ ಕೊಟ್ಟರೆ ನಿಭಾಯಿಸುವೆ: ಶಾಸಕ ರಾಜು ಕಾಗೆ



ಕಾಗವಾಡ: ನಾನು ಕಾಗವಾಡ ಮತಕ್ಷೇತ್ರದಿಂದ ಐದು ಬಾರಿ ಶಾಸಕನಾಗಿದ್ದೇನೆ. ಹಿರಿಯ ಮತ್ತು ಅಪಾರ ಅನುಭವ ಹೊಂದಿದ ನನಗೆ ಮಂತ್ರಿ ಸ್ಥಾನ ಕೊಟ್ಟರೆ ಅದನ್ನು ಸಮರ್ಥವಾಗಿ ನಿಭಾಯಿಸುತ್ತೇನೆ ಎಂದು ಕಾಗವಾಡ ಶಾಸಕ ರಾಜು ಕಾಗೆ ಹೇಳಿದರು.

ಅವರು ಮಂಗಸೂಳಿ-ಫರೀದಖಾನವಾಡಿ ರಸ್ತೆ ಕಾಮಗಾರಿ ಹಾಗೂ ಶೇಡಬಾಳ ಪಟ್ಟಣದಲ್ಲಿ ಮುಖ್ಯಮಂತ್ರಿ ಅಮೃತ್ ಯೋಜನೆ ಅಡಿಯಲ್ಲಿ ನಾಲ್ಕು ರಸ್ತೆಯ ಕಾಮಗಾರಿ ಭೂಮಿಪೂಜೆ ಸಲ್ಲಿಸಿ ಮಾತನಾಡಿದ ಅವರು, ಮಂತ್ರಿಗಿರಿಗಾಗಿ ಸಹಿ ಸಂಗ್ರಹದ ಕುರಿತು ಪತ್ರಕರ್ತರ ಪ್ರಶ್ನೆಗೆ ಉತ್ತರಿಸುತ್ತಾ, ಯಾರು ಬೇಕಾದರೂ ಮಂತ್ರಿ ಪಟ್ಟಕ್ಕಾಗಿ ಬೇಡಿಕೆ ಇಡಬಹುದು ಮೊದಲನೇ ಸಲ ಆಯ್ಕೆಯಾದವರು. ಅವರಲ್ಲಿ ನಿಭಾಯಿಸುವ ಶಕ್ತಿ ಇದ್ದರೆ ಅವರಿಗೂ ಮಂತ್ರಿಸ್ಥಾನ ಕೊಡಬಹುದು ಅದರಲ್ಲಿ ತಪ್ಪೇನಿದೆ? ನೀವು ಕೂಡ ಸಚಿವ ಸ್ಥಾನಕ್ಕೆ ಆಕಾಂಕ್ಷೆ ಇದೆಯಾ ಎಂದಾಗ, ನಾನು ರಾಜ್ಯದಲ್ಲಿ ಅತ್ಯಂತ ಹಿರಿಯ ಶಾಸಕರಲ್ಲಿ ನಾನು ಕೂಡ ಒಬ್ಬನಾಗಿದ್ದೇನೆ ಸಾಕಷ್ಟು ಅನುಭವ ಹೊಂದಿದ್ದೇನೆ. ನನಗೂ ಮಂತ್ರಿ ಸ್ಥಾನ ನೀಡಿದರೆ ಅತ್ಯಂತ ಸಮರ್ಥವಾಗಿ ನಿಭಾಯಿಸುತ್ತೇನೆ ಎಂದರು.

ಕಾಗವಾಡ ಕ್ಷೇತ್ರದ ಮೂಲಭೂತ ಸಮಸ್ಯೆಯಾದ ಬಸವೇಶ್ವರ ಏತ ನೀರಾವರಿ ಯೋಜನೆ ಮುಗಿಯುವ ಹಂತದಲ್ಲಿದೆ. ಅದಕ್ಕೆ ಹೆಚ್ಚಿನ ದುಡ್ಡನ್ನು ತಂದು ಬರುವ ದಿನಗಳಲ್ಲಿ ಪೂರ್ಣಗೊಳಿಸುತ್ತೇನೆ. ನನ್ನ ಕ್ಷೇತ್ರದಲ್ಲಿ ಶಿಕ್ಷಣ, ಆರೋಗ್ಯ, ರಸ್ತೆಗಳಿಗೆ ಹೆಚ್ಚಿನ ಆದ್ಯತೆ ಕೊಡುತ್ತೇನೆ ಎಂದರು. ಈ ವೇಳೆ ಅಭಿಯಂತರರು ಮಲ್ಲಿಕಾರ್ಜುನ ಮಗದುಮ್, ಪಟ್ಟಣ ಪಂಚಾಯತ, ಮುಖ್ಯಾಧಿಕಾರಿ ಕೆ.ಕೆ.ಗಾವಡೆ, ಗ್ರಾಪಂ ಅಧ್ಯಕ್ಷ ಬಾಳು ಭಜಂತ್ರಿ, ಶೇಡಬಾಳ ಪಪಂ ಅಧ್ಯಕ್ಷ ಉತ್ಕರ್ಷ ಪಾಟೀಲ್, ಮಾಜಿ ಜಿಲ್ಲಾ ಪಂಚಾಯತ ಸದಸ್ಯ ರವಿ ಪೂಜಾರಿ ದಸಂಸ ಜಿಲ್ಲಾ ಸಂಚಾಲಕ ಸಂಜಯ ತಳವಲ್ಕರ್, ಪ್ರಕಾಶ ಪಾಟೀಲ್, ವಿನೋದ ಬರಗಾಲೆ, ಶೀತಲ್ ಯರ್ಲೆಕರ, ಅನಿಲ ಅರವಾಡಿ, ರಮೇಶ ಬಾಡ್ಕರ, ರವಿ ನಾಂದ್ರೆ, ಕುಮಾರ ಪಾಟೀಲ, ಸಂಜು ಪಾಟೀಲ, ಫಾರುಖ್ ಅಲಾಸ್ಕರ್, ಮಲ್ಲಿಕಾರ್ಜುನ ಇಸರಗೊಂಡ, ಗುತ್ತಿಗೆದಾರರಾದ ಬಸವ ಪ್ರಸಾದ ಪಾಟೀಲ, ಬಸವರಾಜ ಮಗದುಮ್ಮ, ಮಲ್ಲಿಕಾರ್ಜುನ ಬಡಕಂಬಿ, ಸೇರಿದಂತೆ ಇತರರು ಇದ್ದರು.

ಕಿರುಸುದ್ದಿ

ಏಳು ಆರೋಪಿಗಳ ಬಂಧನ





ಸಂಕೇಶ್ವರ: ಸೋಮವಾರ ರಾತ್ರಿ ನಡೆದಿದ್ದ ಆರ್‌ಎಸ್‌ಎಸ್ ಕಾರ್ಯಕರ್ತ ದತ್ತಾತ್ರೇಯ ಘೋರಾವತ್ ಮೇಲಿನ ಮಾರಣಾಂತಿಕ ಹಲ್ಲೆ ಪ್ರಕರಣ ನಡೆದು 24 ಗಂಟೆಗಳಲ್ಲಿ ಏಳು ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡ ಪೊಲೀಸರು ತಕ್ಷಣವೇ ವಿಶೇಷ ತಂಡ ರಚಿಸಿ ಸಂಕೇಶ್ವರದ ಶ್ಯಾಮರಾವ ಯಾದವ (35) ಮಹಾರಾಷ್ಟ್ರ ಹಾಥಕಣಗಲಾದ ಸುನೀಲ ಪಾಂಡವ (27) ಮಹಾರಾಷ್ಟ್ರದ ರತ್ನದೀಪ ಮಾಹತ ಗಂಗಾ ನಗರದ ಸೂರಜ್ ವೈದ್ಯ (31) ಸಂಕೇಶ್ವರ ಸಮೀಪ ಪಾಟೀಲ (45) ಮಹಾರಾಷ್ಟ್ರದ ಬೋಣೆ ಮಾಳ ಇಂಚಲಕರಂಜಿ ಸಂಕೇತ ಮೇತ್ರಿ (27) ಹರಗಾಪೂರಗಡದ ಅಶೋಕ ಪಾಟೀಲ (45) ಹಾಗೂ ಸಂತೋಷ ಶೇಲಾರ (30) ಬಂಧಿತ ಆರೋಪಿಗಳು. ಹಲ್ಲೆಗೊಳಗಾದ ದತ್ತಾ ಘೋರಾವತ್ ಹಾಗೂ ಆರೋಪಿ ಸಮೀರ್ ಪಾಟೀಲ್ ನಡುವೆ ಮೊದಲಿನಿಂದಲೂ ಸಂಘಟನೆಯ ನೇತೃತ್ವಕ್ಕಾಗಿ ಪೈಪೋಟಿ ಇತ್ತು ಎನ್ನಲಾಗಿದೆ. ಶ್ಯಾಮರಾವ ಯಾದವನ ವೈರಿಯಾದ ರಾಕೇಶ ಕಾಮಕರ ಎಂಬುವನಿಗೆ ದತ್ತಾತ್ರೇಯ ಕುಮ್ಮಕ್ಕು ನೀಡುತ್ತಿದ್ದಾನೆ ಎಂದು ತಿಳಿದು, ಶ್ಯಾಮರಾವ ಯಾದವ ಹಾಗೂ ಸಮೀರ್ ಪಾಟೀಲ ಪ್ಲಾನ್ ಮಾಡಿ ದತ್ತಾತ್ರೇಯನ ಹತ್ಯೆಗೆ ಯತ್ನಿಸಿರುತ್ತಾರೆ ಎಂದು ಪೊಲೀಸರ ತನಿಖೆಯಲ್ಲಿ ತಿಳಿದು ಬಂದಿದೆ. ಬೆಳಗಾವಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ಹಾಗೂ ಗೋಕಾಕ ಡಿಎಸ್‌ಪಿ ಅವರ ಮಾರ್ಗದರ್ಶನದಲ್ಲಿ ಸಂಕೇಶ್ವರ ಸಿಪಿಐ ಎಸ್.ಎಂ ಅವಜಿ ಹಾಗೂ ಯಮಕನಮರಡಿಯ ಸಿಪಿಐ ಜಾವಿದ್ ಮುಶಾಪುರಿ ಹುಕ್ಕೇರಿಯ ಸಿಪಿಐ ಮಹಾಂತೇಶ್ ಬಸಾಪುರಿ ಘಟಪ್ರಭಾದ ಎಚ್.ಡಿ.ಮುಲ್ಲಾ, ಮೂಡಲಗಿಯ ಶ್ರೀಶೈಲ ಬ್ಯಾಕೋಡ ಸಂಕೇಶ್ವರ ಠಾಣೆಯ ಪಿಎಸ್‌ಐ ವಿಠ್ಠಲ್ ನಾಯ್ಕ್ ಹಾಗೂ ಪಿಎಸ್‌ಐ ಯು.ಎಸ್ ಶೆಟ್ಟೆನ್ನವರ್, ಎಎಸ್‌ಐ ಎಲ್.ಎಸ್. ಕೋತ, ಸಿಬ್ಬಂದಿಗಳಾದ ಬಿ.ಕೆ.ನಾಗನೂರಿ, ವಿ.ಬಿ.ಮುರ್ಕಿಭಾವಿ, ಎಸ್.ಎಲ್.ಗಳತಗಿ, ಕೆ.ಡಿ.ಹಿರೇಮಠ, ಶ್ರೀಧರ್ ಯಕ್ಸಂಬಿ, ಉದಯ ಪೂಜಾರಿ, ಮುಸಾ ಅತ್ತಾರ, ಬಿ.ಟಿ.ಪಾಟೀಲ್ ಅವರು ಆರೋಪಿಗಳನ್ನು ಪತ್ತೆ ಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ.

ಆರ್‌ಎಸ್‌ಎಸ್ ಕಾರ್ಯಕರ್ತನ ಮೇಲೆ ಹಲ್ಲೆ

ಎಎಸ್‌ಐ ಇಂಗಳಹಳ್ಳಿ ಲೋಕಾ ಬಲೆಗೆ



ಗದಗ: ಪೊಲೀಸ್ ಠಾಣೆಯಲ್ಲೇ 10 ಸಾವಿರ ರೂ.ಲಂಚ ಪಡೆಯುತ್ತಿದ್ದ ವೇಳೆ ಶಹರ ಪೊಲೀಸ್ ಠಾಣೆಯ ಎಎಸ್‌ಐ ಸಿ.ವಿ.ಇಂಗಳಹಳ್ಳಿ ಅವರನ್ನು ಲೋಕಾಯುಕ್ತ ಅಧಿಕಾರಿಗಳು ಬುಧವಾರ ಬಂಧಿಸಿದ್ದಾರೆ. ಅರ್ಜಿಯೊಂದನ್ನು ವಜಾ ಮಾಡಲು 13 ಸಾವಿರ ರೂ.ಗೆ ಬೇಡಿಕೆ ಇಟ್ಟಿದ್ದರು ಎನ್ನಲಾಗಿದೆ. ದೂರುದಾರರ ದೂರು ಆಧರಿಸಿ ಬುಧವಾರ ಲಂಚ ಪಡೆಯುತ್ತಿದ್ದ ವೇಳೆ ದಾಳಿ ನಡೆಸಿದ ಲೋಕಾ ಅಧಿಕಾರಿಗಳು ಇಂಗಳಹಳ್ಳಿ ಅವರನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದ್ದಾರೆ.

ದೂರಿನಲ್ಲಿ ಏನಿದೆ?: ನಗರದ ಹುಡ್ಕೋ ಕಾಲೋನಿಯ ನಿವಾಸಿ ವೀರೇಶ ಪೂಜಾರ ಬುಧವಾರ ದೂರು ಸಲ್ಲಿಸಿದ್ದರು. ವೀರೇಶ ಅವರ ತಾಯಿಯ ಹೆಸರಿನಲ್ಲಿ ಅರ್ಜಿಯೊಂದು ಪೊಲೀಸ್ ಠಾಣೆಗೆ ಸಲ್ಲಿಸಲಾಗಿತ್ತು. ಈ ಅರ್ಜಿಯನ್ನು ವಜಾ ಮಾಡಬೇಕು ಎಂದು ವೀರೇಶ ಮನವಿ ಮಾಡಿದ್ದರು. ವಜಾ ಮಾಡಲು ಎಎಸ್‌ಐ ಇಂಗಳಹಳ್ಳಿ ಅವರು 13 ಸಾವಿರ ರೂ. ಬೇಡಿಕೆ ಇಟ್ಟಿದ್ದರು. ಕೊನೆಗೆ 10 ಸಾವಿರ ರೂ. ಲಂಚದ ವ್ಯವಹಾರ ಕುದರಿತ್ತು ಎಂದು ತಿಳಿದು ಬಂದಿದೆ. ಈ ಬಗ್ಗೆ ವೀರೇಶ ಗದಗ ಲೋಕಾಯುಕ್ತ ಕಚೇರಿಗೆ ದೂರು ಸಲ್ಲಿಸಿದ್ದರು. 10 ಸಾವಿರ ರೂ. ಲಂಚ ನೀಡುವ ವೇಳೆ ಎಎಸ್‌ಐ ಇಂಗಳಹಳ್ಳಿ ಲೋಕಾ ಬಲೆಗೆ ಬಿದ್ದಿದ್ದಾರೆ. ಕಾರ್ಯಾಚರಣೆಯಲ್ಲಿ ಲೋಕಾ ಅಧಿಕಾರಿಗಳಾದ ವಿಜಯ ಬಿರಾದಾರ, ಪರಮೇಶ ಕವಟಗಿ, ಎಸ್.ಎಸ್.ತೇಲಿ, ಎಂ.ಎಂ.ಅಯ್ಯನಗೌಡ್ರ ಇದ್ದರು.

ಕಾನಡಾ ವೃತ್ತದ ಸಂಪಾದಕ ಶ್ರೀಕಾಂತ ಶಾನಭಾಗ ವಿಧಿವಶ



ಕುಮಟಾ: ಇಲ್ಲಿನ ಚಿತ್ರಿಗಿ ನಿವಾಸಿ, ಹಿರಿಯ ಪತ್ರಕರ್ತ ಹಾಗೂ 'ಕಾನಡಾ ವೃತ್ತ' ಪತ್ರಿಕೆಯ ಸಂಪಾದಕರಾಗಿದ್ದ ಶ್ರೀಕಾಂತ ಶಾನಭಾಗ (83) ಅವರು ನಿನ್ನೆ ನಿಧನರಾದರು. ಕಳೆದ ನಾಲ್ಕು ದಶಕಗಳ ಕಾಲ 'ಕಾನಡಾ ವೃತ್ತ'ಪತ್ರಿಕೆಗೆ ಸಂಪಾದಕರಾಗಿ ಸೇವೆ ಸಲ್ಲಿಸಿದ್ದ ಅವರು ಮೌಲ್ಯಾಧಾರಿತ ಪತ್ರಿಕೋದ್ಯಮದಪ್ರತಿನಿಧಿಯಾಗಿ ಹೆಸರಾಗಿದ್ದರು.

ಪತ್ರಿಕೋದ್ಯಮವನ್ನು ಕೇವಲ ವೃತ್ತಿಯಾಗಿ ಅಲ್ಲ, ಸಮಾಜಮುಖಿ ಧ್ಯೇಯವಾಗಿ ನೋಡುತ್ತಿದ್ದ ಶ್ರೀಕಾಂತ ಶಾನಭಾಗ ಅವರು ನೈತಿಕತೆ, ನಿಷ್ಠೆ ಹಾಗೂ ನಿಖರತೆಯನ್ನು ತಮ್ಮ ಕಾರ್ಯಕ್ಷೇತ್ರದಲ್ಲಿ ಅಳವಡಿಸಿಕೊಂಡಿದ್ದರು. ಜಿಲ್ಲೆಯ ಅನೇಕ ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಬೆಳವಣಿಗೆಗಳಿಗೆ 'ಕಾನಡಾ ವೃತ್ತ'ವೇದಿಕೆಯಾಗಲು ಅವರ ಸಂಪಾದಕೀಯ ದೃಷ್ಟಿಕೋನವೇ ಕಾರಣವಾಗಿತ್ತು.

ವಿಶೇಷವಾಗಿ ವಿಶ್ವಮುದ್ರಕರ ದಿನದಂದೇ ಅವರು ನಿಧನರಾದುದು ಪತ್ರಿಕೋದ್ಯಮ ವಲಯದಲ್ಲಿ ವ್ಯಥೆಯನ್ನುಂಟು ಮಾಡಿದೆ. ಹಿರಿಯ ಬರಹಗಾರ ಎನ್.ಆರ್.ಗಜು ಅವರು ಸಂತಾಪ ಸೂಚಿಸಿ, ಶ್ರೀಕಾಂತ ಅವರ ನಿಧನದಿಂದ ಜಿಲ್ಲೆಯ ಸಾಹಿತ್ಯ ಮತ್ತು ಪತ್ರಿಕೋದ್ಯಮ ಕ್ಷೇತ್ರಕ್ಕೆ ಅಪೂರಣೀಯ ನಷ್ಟ ಉಂಟಾಗಿದೆ ಎಂದು ಹೇಳಿದ್ದಾರೆ.

ಡಾ. ಬಾಳಿಗಾ ಕಾಲೇಜಿನ ನಿಕಟಪೂರ್ವ ಪ್ರಾಚಾರ್ಯ ಎನ್.ಕೆ.ನಾಯ್ಕ, ಚಿಂತಕ ತ್ರಿವಿಕ್ರಮ ಪೈ, ಎಂ.ಬಿ.ಪೈ, ಮುಕುಂದ ಶಾನಭಾಗ ಹೆಗಡೆಕರ ಸೇರಿದಂತೆ ಕೆನರಾ ಕಾಲೇಜು ಸೊಸೈಟಿಯ ಪ್ರಮುಖರು ದುಃಖ ವ್ಯಕ್ತಪಡಿಸಿದ್ದಾರೆ. ಮೃತರು ಪತ್ನಿ, ಓರ್ವ ಪುತ್ರ ಹಾಗೂ ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

ಪ್ರಕರಣ ದಾಖಲು

ಕೆರೂರ: ವಿವಾದಾತ್ಮಕ ಪೋಸ್ಟ್ ಹಂಚಿಕೊಂಡ ವ್ಯಕ್ತಿಯ ವಿರುದ್ಧ ಕೆರೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ವ್ಯಕ್ತಿಯು ಸಮೀಪದ ಮತ್ತಿಕಟ್ಟಿ ಗ್ರಾಮದ ನಿವಾಸಿಯಾದ ಮಂಜುನಾಥ ಶಿವಪ್ಪ ಕೋರಡ್ಡಿ ಈತನು ತನ್ನ ಫೇಸ್ ಬುಕ್ ಖಾತೆಯಲ್ಲಿ ವಿವಾದಾತ್ಮಕ, ಪ್ರಚೋದನಾತ್ಮಕ, ಕೋಮು ದ್ವೇಷ ಭಾವನೆ ಉಂಟು ಮಾಡುವ ಹಾಗೂ ಸಾರ್ವಜನಿಕ ಶಾಂತಿಗೆ ಭಂಗವುಂಟು ಮಾಡುವಂತಹ ಪೋಸ್ಟ್ ಹಂಚಿಕೊಂಡ ಹಿನ್ನೆಲೆಯಲ್ಲಿ ಈತನ ವಿರುದ್ಧ ಬುಧವಾರ ಕೆರೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಾಣಂತಿ, ಮಗು ಸಾವು ಪ್ರಕರಣ ವಾರದೊಳಗೆ ವರದಿ ಸಲ್ಲಿಸಲು ಸೂಚನೆ



ಸಿಂದಗಿ: ಇತ್ತೀಚೆಗೆ ವಿಜಯಪುರ ಜಿಲ್ಲೆಯ ಸಿಂದಗಿ ತಾಲೂಕಿನ ಯಂಕಂಚಿ ಸರ್ಕಾರಿ ಆಸ್ಪತ್ರೆ, ಸಿಂದಗಿ ತಾಲೂಲಕು ಆಸ್ಪತ್ರೆ ಹಾಗೂ ಸಿಂದಗಿ ಪಟ್ಟಣದ ಖಾಸಗಿ ಆಸ್ಪತ್ರೆಯಲ್ಲಿ ವೈದ್ಯರ ನಿರ್ಲಕ್ಷ್ಯದಿಂದ ಬಾಣಂತಿ ಮೈತ್ರಾ ಸುಂಗಠಾಣ (26) ಮತ್ತು ಅವರ ನವಜಾತ ಶಿಶು ಮೃತಪಟ್ಟಿರುವ ಕುರಿತು ಕುಟುಂಬಸ್ಥರು ಆರೋಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಅದರಂತೆ, ಈ ಕುರಿತು ಕೈಗೊಂಡ ಕ್ರಮಗಳ ವಿವರವಾದ ವರದಿಯನ್ನು ಒಂದು ವಾರದೊಳಗೆ ಕಚೇರಿಗೆ ವಿವರವಾಗಿ ವರದಿ ಸಲ್ಲಿಸುವಂತೆ ಸರ್ಕಾರದ ಮುಖ್ಯ ಪ್ರಧಾನ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ಸಂಬಂಧಿಸಿದ ಇಲಾಖೆಗೆ ಸೂಚಿಸಿದ್ದಾರೆ. ರಕ್ತಸ್ರಾವ ಹೆಚ್ಚಾಗಿದ್ದರೂ ಸಮಯೋಚಿತ ಹಾಗೂ ಸೂಕ್ತ ಚಿಕಿತ್ಸೆ ಲಭ್ಯವಾಗದಿರುವುದು ಹಾಗೂ ವೈದ್ಯರ ಅನುಪಸ್ಥಿತಿಯಿಂದ ಈ ದುರ್ಘಟನೆ ಸಂಭವಿಸಿದೆ ಎಂಬ ಆರೋಪಗಳು ವ್ಯಕ್ತವಾಗಿರುವ ದಿಸೆಯಲ್ಲಿ ಈ ಪ್ರಕರಣವು ಅತ್ಯಂತ ಗಂಭೀರ ಸ್ವರೂಪವಾಗಿ ಪರಿಣಮಿಸಿದ್ದು, ಈ ಹಿನ್ನೆಲೆಯಲ್ಲಿ ಇಂತಹ ಘಟನೆಗಳ ಬಗ್ಗೆ ರಾಜ್ಯವು ಹೆಚ್ಚಿನ ಎಚ್ಚರಿಕೆ ವಹಿಸುವುದು ಹಾಗೂ ಯಾವುದೇ ರೀತಿಯ ನಿರ್ಲಕ್ಷ್ಯಕ್ಕೆ ಅವಕಾಶ ನೀಡದಿರುವುದು ಅತ್ಯವಶ್ಯಕವಾಗಿದೆ. ಆದ್ದರಿಂದ ಈ ಪ್ರಕರಣದ ಕುರಿತು ಕೂಡಲೇ ಸಮಗ್ರ ಪರಿಶೀಲನೆ ನಡೆಸಿ ಈ ದುರ್ಘಟನೆಗೆ ಕಾರಣರಾಗಿರುವವರ ವಿರುದ್ಧ ತಕ್ಷಣ ಅವಶ್ಯಕ ಶಿಸ್ತು ಕ್ರಮಕೈಗೊಳ್ಳಲು ಸೂಚಿಸಿ, ಘಟನೆಯ ಮೂಲ ಕಾರಣ ವಿಶ್ಲೇಷಣೆ ರೂಟ್ ಕಾಜ್ ಅನಾಲಿಸಿಸ್ ಮಾಡಿ, ಚಿಕಿತ್ಸಾ ವ್ಯವಸ್ಥೆ, ವೈದ್ಯಕೀಯ ಸಿಬ್ಬಂದಿಗಳ ಲಭ್ಯತೆ, ತುರ್ತು ಪ್ರತಿಕ್ರಿಯೆ ಕ್ರಮಗಳು ಹಾಗೂ ಆಸ್ಪತ್ರೆಗಳ ನಡುವಿನ ರೆಫರಲ್ ವ್ಯವಸ್ಥೆಯ ಕಾರ್ಯಕ್ಷಮತೆ ಕುರಿತು ಪರಿಶೀಲಿಸಿ, ಇಂತಹ ಘಟನೆಗಳು ಭವಿಷ್ಯದಲ್ಲಿ ಮರುಕಳಿಸದಂತೆ ಕೈಗೊಳ್ಳಬೇಕಾದ ತಡೆಗಟ್ಟುವ ಹಾಗೂ ವ್ಯವಸ್ಥಾತ್ಮಕ ಕ್ರಮಗಳನ್ನು ಅನುಷ್ಠಾನಗೊಳಿಸಲು ತಕ್ಷಣ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದ್ದಾರೆ.

ಕಿರುಸುದ್ದಿ

ಮನವಿಗೆ ಸ್ಪಂದನೆ



•**ಲಕ್ಷ್ಮೇಶ್ವರ:** ಶಿರಹಟ್ಟಿ ತಾಲೂಕಿನ ಗ್ರಾಮಗಳನ್ನು ಶಿರಹಟ್ಟಿ ಪೊಲೀಸ್ ಠಾಣೆಗೆ ಹಾಗೂ ಲಕ್ಷ್ಮೇಶ್ವರ ತಾಲೂಕಿನ ಗ್ರಾಮಗಳನ್ನು ಲಕ್ಷ್ಮೇಶ್ವರ ಪೊಲೀಸ್ ಠಾಣೆಯ ವ್ಯಾಪ್ತಿಗೆ ಒಳಪಡಿಸುವಂತೆ ಜಿಲ್ಲಾ ಕೃಷಿಕ ಸಮಾಜದ ಅಧ್ಯಕ್ಷ ವಿರೇಂದ್ರಗೌಡ ಪಾಟೀಲ ಅವರು ಮಾಡಿದ ಮನವಿಗೆ ಗೃಹ ಮಂತ್ರಿಗಳು ಸಮ್ಮತ ಸೂಚಿಸಿದ್ದಾರೆ ಎಂದು ವಿರೇಂದ್ರ ಪಾಟೀಲ ತಿಳಿಸಿದ್ದಾರೆ. ಶಿರಹಟ್ಟಿ ಗ್ರಾಮಗಳಾದ ನಾಗಮಡುವ್ವ, ಆಂಕಲಿ, ಗೋನಾಳಹೊಪ್ಪ, ಬಿಜ್ಜೂರ, ಕೊಗನೂರ, ಕೊಂಚಿಗೇರಿ, ಕೊಕ್ಕರಗುಂದಿ, ಬೂದಿಹಾಳ ಈ ಗ್ರಾಮಗಳು ಸದ್ಯ ಲಕ್ಷ್ಮೇಶ್ವರ ಪೊಲೀಸ್ ಠಾಣೆಯ ವ್ಯಾಪ್ತಿಗೆ ಒಳಪಡುತ್ತವೆ. ಅದರಂತೆ ಲಕ್ಷ್ಮೇಶ್ವರ ತಾಲೂಕಿನ ಗ್ರಾಮಗಳಾದ ನಾದಿಗಟ್ಟಿ, ವಡ್ಡರಹಾಳ್ಳ, ನೆಲೋಗಲ್, ಮಾಡಳ್ಳಿ, ಯತ್ನಳ್ಳಿ, ಯಳವತ್ತಿ, ಕುಂದ್ರಳ್ಳಿ, ಕುಂದ್ರಳ್ಳಿ ತಾಂಡಾ, ಶಿಗ್ಲಿ ಕ್ರಾಸ್ ಈ ಗ್ರಾಮಗಳು ಶಿರಹಟ್ಟಿ ಪೊಲೀಸ್ ಠಾಣೆ ವ್ಯಾಪ್ತಿಗೊಳಪಟ್ಟಿವೆ. ಲಕ್ಷ್ಮೇಶ್ವರ ಸ್ವತಂತ್ರ ತಾಲೂಕು ಕೇಂದ್ರವಾಗಿ 8 ವರ್ಷಗಳೇ ಕಳೆದಿದ್ದರೂ ಇನ್ನೂ ಉಭಯ ತಾಲೂಕಿನ ಅನೇಕ ಗ್ರಾಮಗಳ ಪೊಲೀಸ್ ಠಾಣಾ ವ್ಯಾಪ್ತಿ ಮಾತ್ರ ಬದಲಾಗಿಲ್ಲ. ಇದರಿಂದ ಸಾರ್ವಜನಿಕರು ತಮ್ಮ ಸಣ್ಣಪುಟ್ಟ ವ್ಯಾಜ್ಯಗಳಿಗೂ ಸುತ್ತ ಈ ಗ್ರಾಮದ ವ್ಯಾಪ್ತಿಯಿರುವ ಠಾಣೆಗಳ ಸುತ್ತುತ್ತ ಅಲೆದಾಡುವುದು ತಪ್ಪಿಲ್ಲ. ಇದು ತಹಶೀಲ್ದಾರ್, ಪೊಲೀಸ್ ಅಧಿಕಾರಿಗಳಿಗೆ ಆಡಳಿತಾತ್ಮಕ ಸಮಸ್ಯೆಗಳನ್ನು ಸೃಷ್ಟಿಸುತ್ತಿದ್ದು, ಪಂಚನಾಮ ಮಾಡಲು ಹಾಗೂ ನ್ಯಾಯಾಲಯಕ್ಕೆ ಹಾಜರುಪಡಿಸಲು ಕಾನೂನು ತೊಡಕು ಆಗುತ್ತಿದೆ. ಅದ್ದರಿಂದ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಶಿರಹಟ್ಟಿ ತಾಲೂಕಿನ ಗ್ರಾಮಗಳನ್ನು ಶಿರಹಟ್ಟಿ ಪೊಲೀಸ್ ಠಾಣೆಗೆ ಹಾಗೂ ಲಕ್ಷ್ಮೇಶ್ವರ ತಾಲೂಕಿನ ಗ್ರಾಮಗಳನ್ನು ಲಕ್ಷ್ಮೇಶ್ವರ ಪೊಲೀಸ್ ಠಾಣೆಯ ವ್ಯಾಪ್ತಿಗೆ ವರ್ಗಾವಣೆ ಮಾಡಲು ಕಾನೂನು ಮಂತ್ರಿಗಳಾದ ಎಚ್.ಕೆ ಪಾಟೀಲರ ಶಿಫಾರಸಿನ ಮೇರೆಗೆ ಗೃಹ ಮಂತ್ರಿಗಳಿಗೆ ಮನವಿ ಮಾಡಲಾಗಿತ್ತು. ಇದೀಗ ಗೃಹ ಮಂತ್ರಿಗಳು ಮನವಿಗೆ ಸ್ಪಂದಿಸಿರುವುದಕ್ಕೆ ಮತ್ತು ಲಕ್ಷ್ಮೇಶ್ವರ ಠಾಣೆಯನ್ನು ಪಿಐ ಠಾಣೆಯಾಗಿಸಲು ಗ್ರೀನ್ ಸಿಗ್ನಲ್ ನೀಡಿರುವುದಕ್ಕೆ ಅಭಿನಂದನೆಗಳು ಎಂದಿದ್ದಾರೆ.

ಜಿಲ್ಲೆಗೆ ಇಂದು ಹೊರಟ್ಟಿ

•**ಗದಗ:** ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಫೆ.26 ರಂದು ಬೆಳಗ್ಗೆ 11ಕ್ಕೆ ಗದಗಿಗೆ ಆಗಮಿಸಿ ನಾಗಾವಿಯ ಮಹಾತ್ಮಾ ಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ಬಸವರಾಜ ಹೊರಟ್ಟಿ ಅವರ ಮಾತೋಶ್ರೀ ಹೆಸರಿನಲ್ಲಿ ನೀಡುವ ಮಹಿಳಾ ಪತ್ರಕರ್ತರಿಗೆ ಅವ್ವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 12.30ಕ್ಕೆ ಗದಗಿನಿಂದ ಹುಬ್ಬಳ್ಳಿಗೆ ಪ್ರಯಾಣ ಮಾಡುವರು ಎಂದು ಪ್ರಕಟಣೆ ತಿಳಿಸಿದೆ.

ಕೆ.ವಿ.ಪ್ರಭಾಕರ್ ಜಿಲ್ಲೆಗೆ ಇಂದು

•**ಗದಗ:** ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಫೆ.26 ರಂದು ಬೆಳಗ್ಗೆ 9.30ಕ್ಕೆ ಹುಬ್ಬಳ್ಳಿಯಿಂದ ಹೊರಟು ಬೆಳಗ್ಗೆ 10.30ಕ್ಕೆ ಗದಗಿನ ಆಗಮಿಸಿ ನಾಗಾವಿಯ ಮಹಾತ್ಮಾಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಗ್ರಾಮ ಗಂಗೋತ್ರಿ ಆವರಣದಲ್ಲಿ ಕೌಶಲ್ಯ ವಿಕಾಸ ಭವನದ ಸಭಾಂಗಣದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕ ಹಮ್ಮಿಕೊಂಡಿರುವ ಅವ್ವ ಸೇವಾ ಟ್ರಸ್ಟ್ ಮಾತೋಶ್ರೀ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಸ್ಮರಣಾರ್ಥ ರಾಜ್ಯ ಮಟ್ಟದಲ್ಲಿ ಮಹಿಳಾ ಪತ್ರಕರ್ತೆಗೆ ನೀಡುವ ದತ್ತಿ ನಿಧಿಯ ಪ್ರಶಸ್ತಿ ಪ್ರಧಾನ ಮತ್ತು ವಿಚಾರ ಸಂಕಿರಣದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜೆ ಶೇಂಗಾ	4169-8870
ಅಲಸಂದಿ	5969-6312
ಅಲಸಂದಿಕಾಳು	5969-6312
ಅವರೆ	3119-3119
ಕಡಲೆ	1207-5544
ಉದ್ದು	5743-5743
ಒಣಮೆಣಸಿನಕಾಯಿ	1599-60100
ಹೆಸರು	969-7469
ಜೋಳ	1499-4801
ಗೋವಿನಜೋಳ	1429-1700
ಸಾಸವಿ	5112-5112
ಕುಸಬಿ	4819-5549
ಸೂರ್ಯಕಾಂತಿ	5369-6742
ತೊಗರಿ	2000-5812
ಗೋಧಿ	1899-4477
ಗುರೆಳ್ಳು	10900-10900
ನವನಕ್ಕಿ	4800-4800



ಮುಂಡರಗಿ: ಪಟ್ಟಣದ ಆದಿಶಕ್ತಿ ಜಗನ್ಮಾತೆ ಬನಶಂಕರಿ ದೇವಿ ದೇವಸ್ಥಾನದಲ್ಲಿ ಶಾಸಕ ಡಾ.ಚಂದ್ರು ಲಮಾಣಿ ಅವರಿಗೆ ಬಂದಿರುವ ಕಳಂಕವನ್ನು ತೊಳೆದು ದೋಷಮುಕ್ತರಾಗಿ ಬರಲೆಂದು ಬನಶಂಕರಿ ದೇವಿಗೆ ವಿಶೇಷ ಪೂಜೆಯೊಂದಿಗೆ ಅಭಿಷೇಕ ಮಾಡಿಸಲಾಯಿತು. ಪುರಸಭೆ ಸದಸ್ಯೆ ಜ್ಯೋತಿ ಹಾನಗಲ್, ನಾಗರಾಜ ಹಾನಗಲ್, ಶಿವಕುಮಾರ ಕುರಿ, ಪವನ ಲೇಂಡವೆ, ಅಶೋಕ ಚೂರಿ, ಅಮರಗೋಳ ಹಿರೇಮಠ, ಕೆ.ಟಿ.ಗುಬ್ಬಿ, ಬಿ.ನಾಗರಾಜ, ಲೋಕಪ್ಪ ದೋತರಗಾವಿ, ಮಲ್ಲಪ್ಪ ದೋತರಗಾವಿ ಇತರರಿದ್ದರು.

ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವ

•**ಗದಗ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಜಗದ್ಗುರು ರೇಣುಕಾಚಾರ್ಯ ಜಯಂತಿ ಯುಗಮಾನೋತ್ಸವವನ್ನು ಮಾ.1 ರಂದು ಬೆಳಗ್ಗೆ 11ಕ್ಕೆ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಡಾ.ಶಿವರಾಜ ತಂಗಡಗಿ ಕಾರ್ಯಕ್ರಮದ ಉದ್ಘಾಟನೆ ವಹಿಸುವರು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅಧ್ಯಕ್ಷತೆ ವಹಿಸುವರು. ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹ್ಮದ್, ಶಾಸಕ ಜಿ.ಎಸ್.ಪಾಟೀಲ, ಸಂಸದರಾದ ಬಸವರಾಜ ಬೊಮ್ಮಾಯಿ, ಪಿ.ಸಿ.ಗದ್ದಿಗೌಡ್ರ, ರಾಜ್ಯ ವಿಕೇಂದ್ರೀಕರಣ ಯೋಜನೆ ಮತ್ತು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷ ಡಿ.ಆರ್.ಪಾಟೀಲ, ಶಾಸಕರಾದ ಸಿ.ಸಿ.ಪಾಟೀಲ, ಡಾ.ಚಂದ್ರು ಲಮಾಣಿ, ವಿಧಾನ ಪರಿಷತ್ ಶಾಸಕ ಎಸ್.ವಿ.ಸಂಕನೂರ, ಪ್ರದೀಪ ಶೆಟ್ಟರ, ಗದಗ ಬೆಟಗೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಅಕ್ಬರಸಾಬ ಬಬರ್ಚಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಬಿ.ಬಿ.ಅಸೂಟಿ ಆಗಮಿಸುವರು. ವಿಶೇಷ ಆಹ್ವಾನಿತರಾಗಿ ಯೋಜನೆ ಕಾರ್ಯಕ್ರಮಗಳು, ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಕಾರ್ಯದರ್ಶಿ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ರಮಣದೀಪ್ ಚೌಧರಿ, ಬೆಳಗಾವಿ ವಿಭಾಗದ ಪ್ರಾದೇಶಿಕ ಆಯುಕ್ತ ಜಾನಕಿ ಕೆ.ಎಂ. ಆಗಮಿಸಲಿದ್ದಾರೆ. ಉಪನ್ಯಾಸಕ ಡಾ.ಜಯಶ್ರೀ ಹೊಸಮನಿ ಉಪನ್ಯಾಸ ನೀಡುವರು.



ಗದಗ: ಜಿಲ್ಲೆಯ ಶಿರಹಟ್ಟಿ ತಾಲೂಕಿನ ದೇವಿಹಾಳ ಹಾಗೂ ತಂಗೋಡ ಗ್ರಾಮದ ಹಾಲು ಉತ್ಪಾದಕರ ಸಹಕಾರಿ ಸಂಘದ ಹಾಲು ಉತ್ಪಾದಕರ ಆಕಳು ಮೃತಪಟ್ಟ ಹಿನ್ನೆಲೆಯಲ್ಲಿ ಧಾರವಾಡ ಹಾಲು ಒಕ್ಕೂಟದಿಂದ ಫಲಾನುಭವಿಗಳಿಗೆ ಕೆಎಂಎಫ್ ನಿರ್ದೇಶಕ ಲಿಂಗರಾಜಗೌಡ ಪಾಟೀಲ ಚೆಕ್ ವಿತರಿಸಿದರು. ಜಿಲ್ಲಾ ಮುಖ್ಯಸ್ಥ ಡಾ.ಪ್ರಸನ್ನ ಪಟ್ಟೇದ, ತಾಲೂಕ ವಿಸ್ತಿರಣಾಧಿಕಾರಿ ಬಸವರಾಜ ಜುಮ್ಮಣ್ಣವರ, ಕಿರಣ ಪಾಟೀಲ ಹಾಗೂ ಹಾಲು ಉತ್ಪಾದಕರ ಆಡಳಿತ ಮಂಡಳಿ ಸೇರಿದಂತೆ ಗ್ರಾಮಸ್ಥರು ಇದ್ದರು.

ಕಾಮ-ರತಿ ಮೂರ್ತಿಗಳಿಗೆ ಅಂತಿಮ ಸ್ಪರ್ಶ

▸ರುದ್ರಗೌಡ ಪಾಟೀಲ

•**ಗದಗ:** ರಂಗಿನಾಟ ಹೋಳಿ ಹುಣ್ಣಿಮೆಗೆ ನಗರದ ವಿವಿಧೆಡೆ ಮಣ್ಣಿನ ಕಾಮ-ರತಿ ಮೂರ್ತಿಗಳನ್ನು ಹಲವು ದಶಕಗಳಿಂದ ತಯಾರಿಸುತ್ತಿದ್ದಾರೆ. ಹಲವು ದಿನಗಳಿಂದ ಮೂರ್ತಿ ತಯಾರಿಕೆಯಲ್ಲಿ ಕಮ್ಮಾರರು ತೊಡಗಿದ್ದಾರೆ. ಕಾಮ ರತಿ ಮೂರ್ತಿಗಳಿಗೆ ಅಂತಿಮ ಸ್ಪರ್ಶ ನೀಡುತ್ತಿದ್ದಾರೆ. ಬೇಡಿಕೆ ಅನುಗುಣವಾಗಿ ತಯಾರಿಕೆ ಮಾಡುತ್ತಿದ್ದಾರೆ. ಹೀಗಾಗಿ ಮಣ್ಣಿಮ ಕಾಮ-ರತಿ ಮೂರ್ತಿಗಳಿಗೆ ಬಣ್ಣ ಹಚ್ಚುತ್ತಿದ್ದಾರೆ.

ಜಿಲ್ಲೆಯಲ್ಲಿಹೋಳಿಹುಣ್ಣಿಮೆಗೆಕಟ್ಟಿಗೆಕಾಮಣ್ಣನೊಂದಿಗೆ ಅವಳಿ ನಗರಗಳಾದ ಗದಗ-ಬೆಟಗೇರಿಯಲ್ಲಿ ವಿಶೇಷ ಎನ್ನುವಂತೆ ಕಾಮ-ರತಿ ಮಣ್ಣಿನ ಮೂರ್ತಿ ಪ್ರತಿಷ್ಠಾಪಿಸಿ ಪೂಜಿಸುವ ಸಂಪ್ರದಾಯ ಇದೆ. ಹೀಗಾಗಿ ಕಳೆದ ಒಂದು ತಿಂಗಳಿಂದ ಕಮ್ಮಾರರು ಅವಳಿ ನಗರದಲ್ಲಿ ಕಾಮ-ರತಿ ಮೂರ್ತಿಗಳಿಗೆ ಅಂತಿಮ ಸ್ಪರ್ಶ ನೀಡಲಾಗುತ್ತಿದೆ.

ಅವಳಿ ನಗರದಲ್ಲಿ ಹೋಳಿ ಹಬ್ಬದ ನಿಮಿತ್ತ ಪ್ರತಿಷ್ಠಾಪನೆಯಾಗುವ ಕಾಮ-ರತಿ ಮೂರ್ತಿ ತಯಾರಿಕೆ ಒಂದು ತಿಂಗಳ ಪೂರ್ವದಿಂದಲೇ ನಡೆಯುತ್ತದೆ. ಮಣ್ಣು ಹದಗೊಳಿಸಿ, ಬೇಡಿಕೆಗೆತಕ್ಕಂತೆ1 ಅಡಿಯಿಂದ ಗರಿಷ್ಠ4 ಅಡಿ ಎತ್ತರದ ಮೂರ್ತಿಗಳನ್ನು ಕಲಾವಿದರು ತಯಾರಿಸುತ್ತಾರೆ. ಸಾಂಪ್ರದಾಯಿಕ ಮೂರ್ತಿಗಳಿಗೆ ಹೆಚ್ಚಾಗಿ ಹಳದಿ, ಕೆಂಪು, ಹಸಿರು, ನೀಲಿ ಬಣ್ಣ ಬಳಸಲಾಗುತ್ತದೆ. ಅವಳಿ ನಗರದ ಅಂದಾಜು ಇನ್ನೂರಕ್ಕೂ ಹೆಚ್ಚು ಸ್ಥಳಗಳಲ್ಲಿ ಕಾಮ-ರತಿ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗುತ್ತದೆ. ಕಾಮದಹನ ಬಳಿಕ ಮೂರ್ತಿಗಳನ್ನು ವಿಸರ್ಜಿಸಲಾಗುತ್ತದೆ. ಮೂರ್ತಿಗಳಿಗೆ 500-2500 ರೂ.ವರೆಗೆ ದರವಿದೆ. ಹೋಳಿ ಹುಣ್ಣಿಮೆ ಅಂಗವಾಗಿ 100 ಮೂರ್ತಿಗಳನ್ನು ತಯಾರಿಸಲಾಗಿದೆ. ಎಲ್ಲ ಮೂರ್ತಿಗಳು ಮಾರಾಟವಾಗುತ್ತಿವೆ. ಸುತ್ತ ಮುತ್ತಲಿನ ಗ್ರಾಮಸ್ಥರು ಸಹ ಮೂರ್ತಿ ತೆಗೆದುಕೊಂಡು ಹೋಗುತ್ತಾರೆ.

ಮಣ್ಣಿನ ಮೂರ್ತಿಗಳೊಂದಿಗೆ ಕೆಲವೆಡೆ ಕಟ್ಟಿಗೆ ಕಾಮ



> ಕಾಮ ರತಿ ಮೂರ್ತಿಗಳನ್ನು ಕಳೆದ ಒಂದು ತಿಂಗಳಿಂದ ನಿರ್ಮಾಣ ಮಾಡಲಾಗಿದೆ. ಸುಮಾರು 80 ಜೋಡಿ ಮೂರ್ತಿ ನಿರ್ಮಾಣ ಮಾಡಲಾಗಿದೆ. ಕೆಲವರು ಮೊದಲೇ ಬುಕ್ ಮಾಡಿ ತಮಗೆ ಬೇಕಾದ ಮೂರ್ತಿಗಳನ್ನು ಮಾಡಿಸಿಕೊಂಡಿ ಹೋಗುತ್ತಾರೆ. ಪ್ರಸಕ್ತ ವರ್ಷ ಉತ್ತಮ ವ್ಯಾಪಾರ ಆಗಿದೆ.
> ■ ಮುತ್ತಣ್ಣ ಭರಡಿ, ಮೂರ್ತಿ ತಯಾರಕ

ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಲಾಗುತ್ತದೆ. ಕಟ್ಟಿಗೆ ಅಟ್ಟಿಗೆಹುಣಸೆ ಬೀಜದಿಂದ ತಯಾರಿಸಿದ ಶೆರಿ, ಕಟ್ಟಿಗೆಪುಡಿ ಮಿಶ್ರಣ ಮತ್ತಿ ತಯಾರಿಸುವ ಕಾಮ-ರತಿ ಮೂರ್ತಿಗಳಿಗೆ ಕಟ್ಟಿದ ಮೂರ್ತಿಗಳು ಎನ್ನಲಾಗುತ್ತದೆ. ಈ ಮೂರ್ತಿಗಳಿಗೆ ಪ್ರತಿ 4-5 ವರ್ಷಕ್ಕೊಮ್ಮೆ ಬಣ್ಣ ಬಳಿದರೆ ಕನಿಷ್ಠ 60-70 ವರ್ಷದವರೆಗೆ ಬಾಳಿಕೆ ಬರುತ್ತವೆ. ಹೋಳಿಯಾಟದಂದು ಶಾಸ್ತ್ರದ ಕಾಮಣ್ಣನ್ನು ಮಾತ್ರ ಸುಟ್ಟು, ಇವುಗಳನ್ನು ಉಳಿಸಿಕೊಳ್ಳಲಾಗುತ್ತದೆ. ಹಿಂದೆ ಕೊಪ್ಪಳ ಜಿಲ್ಲೆ ಕಿನ್ನಾಳದಲ್ಲಿ ಮಾತ್ರ ಇಂಥ ಮೂರ್ತಿ ತಯಾರಿಸಲಾಗುತ್ತಿತ್ತು ಎನ್ನುತ್ತಾರೆ ತಯಾರಕರು.

ಹೋಳಿ ಹುಣ್ಣಿಮೆಗೆ ಅವಳಿ ನಗರದ ವಿವಿಧೆಡೆ ಮಣ್ಣಿನ ಕಾಮ-ರತಿ ಮೂರ್ತಿಗಳನ್ನು ಹಲವು ದಶಕಗಳಿಂದ ಪ್ರತಿಷ್ಠಾಪಿಸಿಕೊಂಡು ಬರಲಾಗುತ್ತದೆ. ಹೋಳಿ ಹುಣ್ಣಿಮೆ ದಿನ ಕಾಮನ ಸುಂದರ ಮೂರ್ತಿ ಮಾಡಿ ಅದನ್ನು ಶೃಂಗರಿಸಿ ಕಾಮನಕಟ್ಟೆಯಲ್ಲಿ ಮಂಟಪ ಕಟ್ಟಿ ಪ್ರತಿಷ್ಠಾಪಿಸಲಾಗಿದೆ. ಐದನೇ ದಿನ ಕಾಮ-ರತಿಗೆ ವಿಶೇಷ ಪೂಜೆ ಮಾಡಲಾಗುತ್ತಿದೆ. ರಂಗ ಪಂಚಮಿ ದಿನ ಕಾಮದಹನ ಮಾಡಲಾಗುತ್ತದೆ. ಅಂದು ಅವಳಿ ನಗರದಲ್ಲಿ ಬಣ್ಣದ ಓಕುಳಿ ಆಡಲಾಗುತ್ತದೆ. ಜಿಲ್ಲೆಯಲ್ಲಿ ಹೋಳಿ ಹುಣ್ಣಿಗೆ ಅಂಗವಾಗಿ ರಸ್ತೆ ಬದಿ ಹಾಗೂ ಅಂಗಡಿಗಳಿಗೆ ಹೋಗಿ ದೇಣಿಗೆ ಸಂಗ್ರಹ ಮಾಡುತ್ತಿದ್ದಾರೆ. ಹಿರಿಯರಿಂದ ದೇಣಿಗೆ ಪಡೆಯಲು ತಂಡಗಳೊಂದಿಗೆ ಹಲಗೆಗಳನ್ನು ಬಾರಿಸುತ್ತ ಮನೆ ಮನೆಗೆ ತೆರಳಿ ಹಣ ಸಂಗ್ರಹಿಸುವ ಕೆಲಸ ನಿರಂತರವಾಗಿ ನಡೆದಿದೆ.

ಶಾಸಕ ಚಂದ್ರು ಲಮಾಣಿ ಬಂಧನಕ್ಕೆ ಖಂಡನೆ

•**ಲಕ್ಷ್ಮೇಶ್ವರ:** ಶಿರಹಟ್ಟಿ ವಿಧಾನ ಸಭಾ ಕ್ಷೇತ್ರದ ಬಿಜೆಪಿ ಶಾಸಕ ಚಂದ್ರು ಲಮಾಣಿ ಅವರನ್ನು ಬಂಧಿಸಿರುವುದನ್ನು ಖಂಡಿಸಿ ಚಂದ್ರು ಲಮಾಣಿ ಅಭಿಮಾನಿ ಬಳಗದ ವತಿಯಿಂದ ಬುಧವಾರ ಪಟ್ಟಣದಲ್ಲಿ ಅಪಾರ ಸಂಖ್ಯೆಯಲ್ಲಿ ಅಭಿಮಾನಿಗಳು ಸೇರಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಶ್ರೀಸೋಮೇಶ್ವರ ತೇರಿನ ಮನೆ ಆವರಣದಲ್ಲಿ ಜಮಾಯಿಸಿದ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಶಾಸಕರೇ ನಿಮ್ಮ ಜೊತೆಗೆ ಇದ್ದೇವೆ ಎನ್ನುತ್ತಾ ಪ್ರತಿಭಟಿಸಿದರು. ನಂತರ ನಡೆದ ಸಭೆಯಲ್ಲಿ ಮಾತನಾಡಿದ ಡಾ.ಚಂದ್ರು ಲಮಾಣಿ ಅಭಿಮಾನಿ ಬಳಗದ ಸುನೀಲ ಮಹಾಂತಶೆಟ್ಟರ್, ಕಾಂಗ್ರೆಸ್ ನವರು ಯಾವಮುಖಇಟ್ಟುಕೊಂಡುಭ್ರಷ್ಟಾಚಾರ ಬಗ್ಗೆ ಮಾತನಾಡುತ್ತಾರೆ? ಭ್ರಷ್ಟಾಚಾರ ಎಂಬುವುದು ಕಾಂಗ್ರೆಸ್ ಅವರ ರಕ್ತದಲ್ಲಿಯೇ ಇದೆ. ದಲಿತ ಶಾಸಕರನ್ನು ಷಡ್ಯಂತ್ರ ಹೂಡಿ ಬಂಧಿಸಿ ಅವರನ್ನು ಕುಗ್ಗಿಸಿದ ಯತ್ನ ಮಾಡಿದರೆ ಇಂಥ ಗೊಡ್ಡು ಬೆದರಿಕೆಗಳಿಗೆ ಹೆದರುವುದಿಲ್ಲ ಎಂದರು.

ಕುಮಾರಸ್ವಾಮಿ ಹಿರೇಮಠ ಹಾಗೂ ನವೀನ ಹಿರೇಮಠ ಮಾತನಾಡಿ, ಕಡುಬಡತನ ಕುಟುಂಬದಿಂದ ಬಂದು, ಸೇವೆ ಮಾಡಿ ಶಾಸಕರಾಗಿದ್ದಾರೆ. ಅವರನ್ನು ಷಡ್ಯಂತ್ರ ಮಾಡಿ ಜೈಲಿಗೆ ಕಳುಹಿಸಲಾಗಿದೆ ಎಂದರು.

ಶಿವಣ್ಣ ಲಮಾಣಿ ಮಾತನಾಡಿ, ಶಾಸಕ ಡಾ. ಚಂದ್ರು ಲಮಾಣಿ ಅವರ ಕಡೆಯಿಂದ ಕೆಲಸ ತೆಗೆದುಕೊಂಡವರು ಜಾಸ್ತಿ ಕಾಂಗ್ರೆಸ್ ಕಾರ್ಯಕರ್ತರೇ. ಉಪಕಾರ ಮಾಡಿದ ಶಾಸಕರಿಗೆ ಮೋಸ ಮಾಡಿದ್ದಾರೆ. ಬಂಜಾರ ಶಾಸಕರನ್ನು ತುಳಿಯಲು ಬಿಡಲ್ಲ, ಲೋಕಾಯುಕ್ತ ಸಂಸ್ಥೆಯನ್ನು ಕಾಂಗ್ರೆಸ್ ಪಕ್ಷವು ದುರುಪಯೋಗ ಮಾಡಿಕೊಂಡಿದೆ ಎಂದು ಆರೋಪಿಸದರು.

ಯುವ ಮುಖಂಡ ಶಂಕರ ಮರಾಠೆ, ತಿಮ್ಮರಡ್ಡಿ ಮರಡ್ಡಿ ಮಾತನಾಡಿದರು. ಅಭಿಮಾನಿ ಬಳಗದ ,ಜಾನು ಲಮಾಣಿ, ಕೆ.ವಿ. ಹಂಚಿನಾಳ, ಶಿವಪ್ರಕಾಶ ಮಹಾಜನಶೆಟ್ಟರ, ಆನಂದಗೌಡ ಪಾಟೀಲ, ಮಲ್ಲಣ್ಣ ಅಣಜಿ, ನಾಗರಾಜ ಹೊಸೂರ, ರಮೇಶ ದನದಮನಿ, ಲಿಂಗರಾಜ ಪಾಟೀಲ್, ನಿಂಗಪ್ಪ ಬನ್ನಿ ಪುಂಡಲೀಕ ಲಮಾಣಿ, ಶಿವಣ್ಣ ಲಮಾಣಿ, ಥಾವರಪ್ಪ ಲಮಾಣಿ, ಎಂ.ಆರ್. ಪಾಟೀಲ, ಎಂ.ಎಸ್. ದೊಡ್ಡಗೌಡ್ರ, ಪೂರ್ಣಾಜಿ ಕರಾಟೆ, ಗಂಗಾಧರ ಮೆಣಸಿನಕಾಯಿ, ನೀಲಪ್ಪ ಹತ್ತಿ, ನಾಗರಾಜ ಲಕ್ಕುಂಡಿ, ಫಕ್ಕಿರೇಶ ರಟ್ಟೀಹಳ್ಳಿ, ಶಂಕರ ಬಾವಿ, ಬಸವರಾಜ ಇಟಗಿ, ಡಿ.ವೈ. ಹುನಗುಂದ, ಟೋಪಣ್ಣ ಲಮಾಣಿ, ಅಶೋಕ ಬಟಗುರ್ಕಿ, ತಿಪ್ಪಣ್ಣ ಕೊಂಚಿಗೇರಿ, ರಾಜು ಅಂದಲಗಿ, ಭೀಮಶಿಂಗ ರಾಠೋಡ, ಭೀಮಣ್ಣ ಯಂಗಾಡಿ, ಪ್ರವೀಣ ಬೋಮಲೆ, ಶಿವಯೋಗಿ ಅಂಕಲಕೋಟಿ, ಶಕ್ತಿ ಕತ್ತಿ, ಅಶೋಕ ಶಿರಹಟ್ಟಿ ಅನೀಲ ಮುಳುಗುಂದ, ವಿಜಯ ಕುಂಬಾರ, ನಂದಾ ಪಲ್ಲೇದ, ಜ್ಯೋತಿ ಹಾನಗಲ್, ಅಶ್ವಿನಿ ಅಂಕಲಕೋಟಿ, ವಾಣಿ ಹತ್ತಿ, ಮಂಜುಳಾ ಗುಂಜಳ ಇತರರಿದ್ದರು.



ಅಡುಗೆ ಸಿಬ್ಬಂದಿ ಬದಲಾವಣೆ: ವಿದ್ಯಾರ್ಥಿಗಳ ಆಕ್ರೋಶ

•**ಶಿರಹಟ್ಟಿ:** ಸ್ಥಳೀಯ ಕಿತ್ತೂರು ರಾಣಿ ಚನ್ನಮ್ಮ ವಸತಿ ನಿಲಯದಲ್ಲಿ ಅಡುಗೆ ಸಿಬ್ಬಂದಿ ಬದಲಾವಣೆ ಮಾಡಿದ್ದರಿಂದ ವಸತಿ ನಿಲಯದ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ವಿದ್ಯಾರ್ಥಿಗಳು ಮಾತನಾಡಿ, ಹಳೆ ಅಡುಗೆ ಸಿಬ್ಬಂದಿ ಮರಳಿ ಬಂದಿದ್ದು, ಅವರನ್ನು ಮತ್ತೆ ನೇಮಿಸಿಕೊಳ್ಳದೇ ಹೊಸದಾಗಿ ಬಂದ ಅಡುಗೆ ಸಿಬ್ಬಂದಿಯನ್ನು ಮುಂದುವರೆಸಬೇಕು. ಹಳಬರು ರುಚಿಯಾದಅಡುಗೆಮಾಡುವುದಿಲ್ಲ, ತಂಗಳ ಅನ್ನ, ಉಪ್ಪು ಹುಳಿ ಇಲ್ಲದ ಸಾಂಬಾರ್, ಅರ್ಧಂಬರ್ಧ ಬೆಯಿಸಿದ ಚಪಾತಿ, ರೊಟ್ಟಿ ಕೊಡುತ್ತಾರೆ. ಅಶುದ್ಧ ಆಹಾರಸೇವಿಸಿ ಕೆಲವಿದ್ಯಾರ್ಥಿಗಳು ಅಸ್ವಸ್ಥಗೊಂಡು ಹಲವು ಬಾರಿ ಆಸ್ಪತ್ರೆಗೆ ದಾಖಲಾಗಿದ್ದು ಉಂಟು. ಅಲ್ಲದೇ ಊಟ ಮಾಡುವ ಮೊದಲೇ ಮನೆಗೆ ತೆಗೆದುಕೊಂಡು ಹೋಗಲು ಕಟ್ಟಿಕೊಂಡಿರುತ್ತಾರೆ. ಕೆಲವು ಸಲ 40 ರಿಂದ 50 ವಿದ್ಯಾರ್ಥಿಗಳಿಗೆ ಊಟವೇ ಸಿಗುತ್ತಿರಲಿಲ್ಲ, ಬಾಳೆಹಣ್ಣು ತಿನ್ನಲು ಕೊಟ್ಟು ಸುಮ್ಮನಾಗುತ್ತಾರೆ. ನಮಗೆ ಊಟವಿಲ್ಲ ನೀವು ಮನೆಗೆ ಒಯ್ಯಲು ಕಟ್ಟಿಕೊಂಡಿದ್ದಿರಲ್ಲಾ ಎಂದು ಪ್ರಶ್ನಿಸಿದರೆ ಬಾಯಿಗೆ ಬಂದಂತೆ ಅವಾಚ್ಯ ಪದಗಳಿಂದ ಬೈದು, ಊಟ ಮಾಡೋಕೆ ಬಂದಿರೋ ಓದೋಕೆ ಬಂದಿರೋ ಎಂದು ಗದರಿಸಿ ಕಳಿಸುತ್ತಾರೆ. ಆದ್ದರಿಂದ ಹೊಸದಾಗಿ ಬಂದ ಅಡುಗೆ ಸಿಬ್ಬಂದಿಯನ್ನು ಮುಂದುವರೆಸಬೇಕು ಎಂದು ಒತ್ತಾಯಿಸಿದರು.

ವಸತಿ ನಿಲಯಕ್ಕೆ ಜಿಲ್ಲಾ ಉಪವಿಭಾಗಾಧಿಕಾರಿ ಗಂಗಪ್ಪ ಎಂ. ಹಾಗೂ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕಿ ನಂದಾ ಹಣಭರಟಿ, ತಹಶೀಲ್ದಾರ್ ಕೆ. ರಾಘವೇಂದ್ರ ರಾವ್ ಭೇಟಿ ನೀಡಿ ವಿದ್ಯಾರ್ಥಿಗಳ ಸಮಸ್ಯೆ ಆಲಿಸಿದರು. ಉಪವಿಭಾಗಾಧಿಕಾರಿ ಗಂಗಪ್ಪ ಎಂ. ಮಾತನಾಡಿ, ಸರ್ಕಾರದ ಆದೇಶದಂತೆ ಹಳೆ ಅಡುಗೆ ಸಿಬ್ಬಂದಿಯನ್ನು ಕರ್ತವ್ಯಕ್ಕೆ ನೇಮಿಸಲಾಗಿದೆ. ಹೊಸ ಸಿಬ್ಬಂದಿಯನ್ನು ಮರಳಿ ಏಜೆನ್ಸಿ ಅವರಿಗೆ ನೀಡಿದ್ದು, ಏಜೆನ್ಸಿಯವರು ಯಾವ ಹಾಸ್ಟೆಲ್‌ನಲ್ಲಿ ಸಿಬ್ಬಂದಿ ಕೊರತೆಯಿದೆ ಅಲ್ಲಿ ನಿಯೋಜನೆ ಮಾಡುತ್ತಾರೆ. ಹಳಬರಿಗೆ ಸರ್ಕಾರವೇ ಆದೇಶ ಪ್ರತಿ ನೀಡಿದ್ದರಿಂದ ನಾವು ಸರ್ಕಾರದ ಆದೇಶ ಪಾಲಿಸುತ್ತೇವೆ. ವಿದ್ಯಾರ್ಥಿಗಳಿಗೆ ತಿಳಿ ಹೇಳುತ್ತೇವೆ. ಮತ್ತು ವಿದ್ಯಾರ್ಥಿಗಳಿಗೆ ಮೆನು ಪ್ರಕಾರ ಊಟ, ಉಪಹಾರ ನೀಡಲು ಮತ್ತು ಸಹನೆ, ಸೌಜನ್ಯದಿಂದ ನಡೆದುಕೊಳ್ಳುವಂತೆ ಕಟ್ಟುನಿಟ್ಟಾಗಿ ಸೂಚಿಸಿದ್ದೇವೆ. ಮಕ್ಕಳೊಂದಿಗೆ ಮತ್ತೆ ಕೆಟ್ಟದಾಗಿ ವರ್ತಿಸಿದರೆ ಮುಲಾಜಿಲ್ಲದೇ ಕಿತ್ತುಹಾಕಲಾಗುವುದು ಎಂದು ಖಡಕ್ ಸಂದೇಶ ನೀಡಲಾಗಿದೆ ಎಂದರು.



ಮಾರ್ಚ್ 3ರಿಂದ ಶ್ರೀಕನಕ ಲಕ್ಷ್ಮೀನರಸಿಂಹ ಜಾತ್ರಾ ಮಹೋತ್ಸವ: ನಾಡಗೌಡ್ರ

•**ಮುಂಡರಗಿ:** ನಗರದಲ್ಲಿರುವ ಶ್ರೀಕನಕ ಲಕ್ಷ್ಮೀನರಸಿಂಹ ದೇವರ ಜಾತ್ರಾಮಹೋತ್ಸವವು ಮಾರ್ಚ್ 3ರಿಂದ ಪ್ರಾರಂಭವಾಗಿ ಮಾರ್ಚ 10 ರವರೆಗೆ ನಡೆಯುವುದು ಎಂದು ಜಾತ್ರಾ ಮಹೋತ್ಸವ ಉಸ್ತುವಾರಿ ಮತ್ತು ದೇವಸ್ಥಾನದ ಧರ್ಮದರ್ಶಿ ವಿ.ಎಲ್.ನಾಡಗೌಡ್ರ ಹೇಳಿದರು.

ಅವರು ಈ ಕುರಿತು ಪತ್ರಿಕಾಗೋಷ್ಠಿ ನಡೆಸಿ ಮಾಹಿತಿ ನೀಡಿ, ಮಾ.3ರಂದು ರಾತ್ರಿ 8ಕ್ಕೆ ಶ್ರೀ ಲಕ್ಷ್ಮೀನರಸಿಂಹ ದೇವರಿಗೆ ಮಂಗಲ ಸ್ನಾನ, ರಾತ್ರಿ 9ಕ್ಕೆ ನಾಂದಿ ದೇವತಾ ಸ್ಥಾಪನೆ, 10ಕ್ಕೆ ಶ್ರೀ ಲಕ್ಷ್ಮೀನರಸಿಂಹ ಕಲ್ಯಾಣೋತ್ಸವ ಮಾ.4ರಂದು ಸಂಜೆ ಬ್ರಾಹ್ಮಣ ಸಮಾಜದವರಿಂದ ಲಘು ರಥೋತ್ಸವ, 8 ಗಂಟೆಗೆ ಪಾಲಕಿ ಸೇವಾ ಮಹಾಮಂಗಳಾರತಿ, ಮಾ.5ರಂದು ಪ್ರಾತಃ ಕಾಲ ಕಾರ್ಯಕ್ರಮದ ಜೊತೆಗೆ ಸಾಯಂಕಾಲ ಮೂಲ ಕನಕಾಪೂರ ನಿವಾಸಿಗಳಾದ ಹಾಲುಮತ ಮತ್ತು ಉಪ್ಪಾರಮತದವರಿಂದ ಲಘು ರಥೋತ್ಸವ. ಮಾ.6 ರಂದು ಸಂಜೆ ವಾಲ್ಮೀಕಿ ಸಮಾಜದವರಿಂದ ಕುಟುಂಬ ಯಾತ್ರೆ ಮತ್ತು ಲಘುರಥೋತ್ಸವ, ಪಾಲಕಿ ಸೇವಾ ಕಾರ್ಯಕ್ರಮ ಜರಗುವುದು. ಮಾ.7 ರಂದು ಪ್ರಾತಃಕಾಲ-ಸುಪ್ರಭಾತ, ಉದಯರಾಗ, ರಥಾ ಕಳಾಸೋರಹಣ, ಲಘುರಥೋತ್ಸವ ವಿಶ್ವಕರ್ಮ ಸಮಾಜದವರಿಂದ. ಮಾ.8 ರಂದು ಬೆಳಗ್ಗೆ 9 ಗಂಟೆಗೆ ಹರಿಜನ ಸಮಾಜ ಬಾಂಧವರಿಂದ ಗರುಡಾರತಿ ಸೇವೆ, ಬೆಳಗ್ಗೆ 10.30ಕ್ಕೆ ಶ್ರೀ ಲಕ್ಷ್ಮೀ ನರಸಿಂಹ ಮಲ್ಲಿಕಾರ್ಜುನ ದರ್ಶನ ಗುಡ್ಡದ ಮೇಲೆ ರುದ್ರ ಪುಷ್ಕರಣೆ ಸ್ನಾನ, ಸಂಜೆ 6 ಗಂಟೆಗೆ ಮಹಾರಥೋತ್ಸವ, ಮಾ.9ರಂದು ಮಧ್ಯಾಹ್ನ ಗಿಡ ಕೀಳುವುದು, ದೇವತಾ ನಗರ ಸಂಕೀರ್ಣ, ಮುಳ್ಳಾವಿಗಿ, ಗುಡಿ ಪ್ರವೇಶ, ಮಾ.10 ರಂದು ಮಧ್ಯಾಹ್ನ 12 ಗಂಟೆಗೆ ರುಕ್ಮೀಣೇಶ ವಿಜಯ ಪಠಣ, ಮಹಾಮಂಗಳಾರತಿ, ಸಂಪ್ರೋಕ್ಷಣೆ, ಬ್ರಹ್ಮ ಸಂತರ್ಪಣೆ ನೆರವೇರುವುದು. ಸಂಪ್ರೋಕ್ಷಣೀ ಕಾರ್ಯ ಸಮಾಪ್ತಿಗೊಳ್ಳುವದು ಎಂದರು. ವೈ.ಎನ್. ಗೌಡರ, ರಾಮು ಕಲಾಲ, ರಾಜು ಡಾವಣಗೇರಿ ಉಪಸ್ಥಿತರಿದ್ದರು.



ಕಲಿಕಾ ನ್ಯೂನ್ಯತೆ ಬಗೆಹರಿಸಲು ಕಲಿಕಾ ಹಬ್ಬ ಸಹಕಾರಿ: ಎಚ್. ನಾಣಕಿ ನಾಯ್ಕ

•**ಲಕ್ಷ್ಮೇಶ್ವರ:** ಕಲಿಕಾ ಹಬ್ಬವು ಕಲಿಕಾ ನ್ಯೂನ್ಯತೆ ಇರುವ ಮಕ್ಕಳಿಗೆ ಆಶಾದೀಪ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಚ್. ನಾಣಕಿ ನಾಯ್ಕ ಹೇಳಿದರು.

ಅವರು ಪಟ್ಟಣದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ ನಂ 1ರಲ್ಲಿ ಉತ್ತರ ಕ್ಲಸ್ಟರ್ ಮಟ್ಟದ ಎಫ್ ಎಲ್ ಎನ್ ಕಲಿಕಾ ಹಬ್ಬದ ಸ್ಪರ್ಧಾ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಎಸ್‌ಡಿಎಂಸಿ ಅಧ್ಯಕ್ಷ ಯಲ್ಲಪ್ಪ ಶಿರಬಡಗಿ ಮಾತನಾಡಿ, ಕಲಿಕೆಯಲ್ಲಿ ಹಿಂದಿರುವ ಮಕ್ಕಳು ತಮ್ಮ ಮೂಲ ಸಾಮರ್ಥ್ಯವನ್ನು ಸಾಧಿಸಲು ಇದು ತುಂಬಾ ಸಹಕಾರಿಯಾಗಿದೆ. ಈ ಕಲಿಕಾಹಬ್ಬ ಇಂತಹ ಮಕ್ಕಳಿಗಾಗಿಯೆ ಹಮ್ಮಿಕೊಂಡ ಕಾರ್ಯಕ್ರಮವಾಗಿದೆ ಎಂದರು. ಕರಾಪ್ರಾ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಿ.ಎಸ್. ಹರ್ಲಾಪುರ ಹಾಗೂ ಕರಾಸನೌ ಸಂಘದ ಅಧ್ಯಕ್ಷ ಗುರುರಾಜ ಹವಳದ ಮಾತನಾಡಿ, ಇದೊಂದು ವಿಶಿಷ್ಟವಾದ ಕಾರ್ಯಕ್ರಮವಾಗಿದ್ದು, ಮಕ್ಕಳ ಪಾಲಕರು, ಸರ್ಕಾರಿ ಶಾಲೆಗಳ ಬಗ್ಗೆ ಒಲವು ತೋರಿಸಿ, ಆದಷ್ಟು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲಿಸಬೇಕು ಎಂದರು. ಉತ್ತರ ಕ್ಲಸ್ಟರ್ ಸಿಆರ್‌ಪಿ ಉಮೇಶ ನೇಕಾರ ಪ್ರಾಸ್ತಾವಿಸಿದರು. ಸಮಾರೋಪ ಸಮಾರಂಭದಲ್ಲಿ ಎಫ್‌ಎಲ್‌ಎನ್ ಕಲಿಕಾ ಹಬ್ಬ ಸ್ಪರ್ಧೆಯಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿ ಎಚ್. ನಾಣಕೀ ನಾಯ್ಕ ಸಾಹೇಬರು ಬಹುಮಾನ ವಿತರಿಸಿದರು. ಇಸಿಓ ರಾಘವೇಂದ್ರ ಜೋಶಿ, ಆರ್.ಬಿ. ಪವಾರ, ಮುಖ್ಯಶಿಕ್ಷಕ ಡಿ.ಎನ್. ದೊಡ್ಡಮನಿ, ಎಂ.ಎ. ನದಾಫ, ಚಂದ್ರಕಾಂತ ನೇಕಾರ, ಬಿಆರ್‌ಪಿ ಬಿ.ಎಂ. ಯರಗುಪ್ಪಿ, ಎಂ.ಡಿ. ವಾರದ, ಬಿ.ಎಂ. ಕುಂಬಾರ, ಬಿ.ಬಿ. ಯತ್ನಳ್ಳಿ, ಎ.ಎಂ. ಅಕ್ಕಿ, ಎಸ್.ಡಿ. ಲಮಾಣಿ, ದಿಗಂಬರ ಪೂಜಾರ, ಶಿವಲಿಂಗಯ್ಯ ಹೊತಗಿಮಠ, ಸಿಆರ್‌ಪಿ ಸಿ.ವಿ. ವಡಕಣ್ಣವರ, ಆರ್. ಮಹಾಂತೇಶ, ಎನ್.ಎ. ಮುಲ್ಲಾ, ಗಿರೀಶ್ ನೇಕಾರ, ತಿರಕಪ್ಪ ಪೂಜಾರ, ನವೀನ ಅಂಗಡಿ, ಜ್ಯೋತಿ ಗಾಯಕವಾಡ, ಶ್ರೀನಿವಾಸ ಮತ್ತೂರ, ಸತೀಶ ಬೊಮಲೆ, ಎಫ್.ಎಚ್. ನದಾಫ, ಎಸ್.ಎಸ್. ಮಹಾಲಿಂಗಶೆಟ್ಟರ ಇತರರಿದ್ದರು. ಆರ್.ಬಿ. ಆಡರಕಟ್ಟಿ ಮತ್ತು ಎನ್.ಎಸ್. ಬಂಕಾಪುರ ನಿರೂಪಿಸಿದರು. ಎಸ್.ಎಂ. ಬೊಮಲೆ ವಂದಿಸಿದರು.



ನೂತನ ಪದಾಧಿಕಾರಿಗಳ ಆಯ್ಕೆ



•**ಮುಂಡರಗಿ:** ವಿಶ್ವ ಕನ್ನಡ ರಕ್ಷಣಾ ವೇದಿಕೆ ಸಂಘಟನೆಯ ಮುಂಡರಗಿ ತಾಲೂಕಿನ ನೂತನ ಪದಾಧಿಕಾರಿಗಳನ್ನು ಗದಗ ಜಿಲ್ಲಾಧ್ಯಕ್ಷ ಎಂ.ಕೆ. ತಳಗಡೆ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ಆಯ್ಕೆ ಮಾಡಲಾಗಿತು.

ವಿಶ್ವ ಕನ್ನಡ ರಕ್ಷಣಾ ವೇದಿಕೆಯ ಮುಂಡರಗಿ ತಾಲೂಕು ಹಂಗಾಮಿ ಅಧ್ಯಕ್ಷರಾಗಿ ಈಶಪ್ಪ ಸಜ್ಜನ್, ತಾಲೂಕು ಉಪಾಧ್ಯಕ್ಷರಾಗಿ ನಿಂಗಪ್ಪ ಎನ್. ಹರಿಜನ ಆಯ್ಕೆಗೊಂಡಿದ್ದಾರೆ. ತಾಲೂಕು ರೈತ ಘಟಕದ ಅಧ್ಯಕ್ಷರನ್ನಾಗಿ ಈರಣ್ಣ ಡೋಣಿ ಆಯ್ಕೆ ಮಾಡಲಾಗಿದೆ. ಮುಂಡರಗಿ ಶಹರದ ಯುವ ಘಟಕದ ಉಪಾಧ್ಯಕ್ಷರಾಗಿ ಮಂಜುನಾಥ ರಾಟಿ ಹಾಗೂ ಬಾಬುಸಾಬ್ ಬಿಸನಹಳ್ಳಿ ಆಯ್ಕೆಯಾದರೆ, ಕಾರ್ಯದರ್ಶಿಯಾಗಿ ಅಲ್ಲಾಭಕ್ಷಿ ಎಸ್. ಅಳವಂಡಿ, ಶಹರದ ಮಹಿಳಾ ಘಟಕದ ಉಪಾಧ್ಯಕ್ಷರಾಗಿ ಶಾಂತ ಬಂಡಿವಡ್ಡರ್ ಆಯ್ಕೆಯಾಗಿದ್ದಾರೆ. ತಾಲೂಕಿನ ಪದಾಧಿಕಾರಿಗಳಾಗಿ ಆಯ್ಕೆಗೊಂಡ ಸರ್ವ ಸದಸ್ಯರಿಗೆ ಹಾಗೂ ಮುಂಡರಗಿ ತಾಲೂಕು ಪದಾಧಿಕಾರಿಗಳಿಗೆ ಜಿಲ್ಲಾಧ್ಯಕ್ಷ ಎಂ.ಕೆ. ತಳಗಡೆ ಆದೇಶ ಪತ್ರ ನೀಡಿದರು.

ರೋಸ್ಟರ್ ಬಿಂದು ಸರಿಪಡಿಸಲು ಆಗ್ರಹ

•**ನರಗುಂದ:** ರಾಜ್ಯ ಸರ್ಕಾರ ಜಾರಿ ಮಾಡಿದ ಡಾ.ನಾಗಮೋಹನದಾಸ ವರದಿ ಅವೈಜ್ಞಾನಿಕವಾಗಿದೆ. ಬಲಗೈ ಸಮುದಾಯಗಳಿಗೆ ಉಂಟಾಗಿರುವ ಹಾನಿ ಹಾಗೂ ಅನ್ಯಾಯಗಳನ್ನು ಅಧ್ಯಯನ ಮಾಡಲು ಉನ್ನತ ಮಟ್ಟದ ತಜ್ಞರ ಸಮಿತಿ ರಚಿಸಬೇಕೆಂದು ದಲಿತ ಸಂಘರ್ಷ ಸಮಿತಿ ರಾಜ್ಯ ಸಂಘಟನಾ ಸಂಚಾಲಕ ಎಫ್.ವೈ. ದೊಡಮನಿ ಸರ್ಕಾರವನ್ನು ಆಗ್ರಹಿಸಿದರು.

ಬುಧವಾರ ತಹಶೀಲ್ದಾರ್ ಕಾರ್ಯಾಲಯದಲ್ಲಿ ದಲಿತ ಸಂಘರ್ಷ ಸಮಿತಿಯ ಬಲಗೈ ಸಮಾಜದ ಹಾಗೂ ಒಳಮೀಸಲಾತಿಯಲ್ಲಿ ಅನ್ಯಾಯಕ್ಕೊಳಗಾದ ಚಿಕ್ಕ ಚಿಕ್ಕ ಸಮಾಜಗಳ ವತಿಯಿಂದ ತಹಶೀಲ್ದಾರ್‌ಗೆ ಮನವಿ ಅರ್ಪಿಸಿ ಮಾತನಾಡಿದರು.

ಸರ್ಕಾರವು ವರದಿಯನ್ನು ಕೂಲಂಕುಶವಾಗಿ ಪರಿಶಿಲನೆ ಮಾಡದೇ 111 ಜಾತಿಗಳನ್ನು 3 ವಿಭಾಗವಾಗಿ ಮಾಡಿ 6:6:5 ಅನುಪಾತದಲ್ಲಿ ಮೀಸಲಾತಿ ನೀಡಿದೆ. ರೊಸ್ಟರ ಬಿಂದು ಪ್ರಕಾರ ಬಿ ಮತ್ತು ಸಿ ಜಾತಿಗಳಿಗೆ ಶಿಕ್ಷಣ ಹಾಗೂ ಉದ್ಯೋಗ ಸಿಗುವುದು ಕನಸಿನ ಮಾತಾಗಿಯೇ ಉಳಿಯುತ್ತದೆ. ಹೀಗಾಗಿ ಸಣ್ಣ ಪುಟ್ಟ ಅಲೆಮಾರಿ ಹಾಗೂ ಇನ್ನು ಅನ್ಯ ಸಮಾಜಗಳಿಗೆ ಇದು ಅನ್ಯಾಯವಾಗಿದೆ. ರೋಸ್ಟರ ಬಿಂದುವನ್ನು ಸರಿ ಮಾಡಬೇಕೆಂದು ಆಗ್ರಹಿಸಿದರು. ಡಿಎಸ್‌ಎಸ್ ಜಿಲ್ಲಾ ಸಂಚಾಲಕ ವಿಜಯ ಚಲವಾದಿ, ಯಶವಂತ ನಡುವಿನಮನಿ, ಎಂ.ಡಿ. ದೊಡಮನಿ, ಗುರು ದೊಡಮನಿ, ಬಸವರಾಜ ಪೂಜಾರ, ಕಾಶಿ ನರಗುಂದ, ನೇತಾಜಿ ನರಗುಂದ, ಯಂಕಣ್ಣ ದೊಡಮನಿ, ಮುತ್ತು ಚಲವಾದಿ, ಮಂಜುನಾಥ ಹಳೇಮನಿ, ಸುನೀಲ ಚಲವಾದಿ, ರಾಜು ಚಲವಾದಿ, ಮಂಜು ರಂಗಣ್ಣವರ ಸೇರಿದಂತೆ ಇತರರಿದ್ದರು.



ಲೋಕಾ ದಾಳಿ ಹಿಂದೆ ಷಡ್ಯಂತ್ರ: ಆರೋಪ



•**ಗದಗ:** ಶಿರಹಟ್ಟಿ ಶಾಸಕ ಡಾ.ಚಂದ್ರು ಲಮಾಣಿ ಮೇಲೆ ನಡೆದಿರುವ ಲೋಕಾ ದಾಳಿ ಹಿಂದೆ ಷಡ್ಯಂತ್ರ ಅಡಗಿದೆ. ದಾಳಿಗೂ ಮುನ್ನ ದೊಡ್ಡ ಸಂಚು ನಡೆಸಿ, ಅವರನ್ನು ವ್ಯವಸ್ಥಿತ ರೀತಿಯಲ್ಲಿ ಪ್ರಕರಣದಲ್ಲಿ ಸಿಲುಕಿಸಿ, ಜೈಲಿಗೆ ಕಳುಹಿಸಿದ್ದಾರೆ ಎಂದು ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಾಲಚಂದ್ರ ತುಳಸಿಮನಿ ಆರೋಪಿಸಿದರು.

ನಗರದಪತ್ರಿಕಾಭವನದಲ್ಲಿನಡೆದಸುದ್ದಿಗೋಷ್ಠಿಯಲ್ಲಿಮಾತನಾಡಿ, ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ ಗುತ್ತಿಗೆದಾರ ವಿಜಯ್ ಪೂಜಾರ ಕಾಂಗ್ರೆಸ್ ಪಕ್ಷದ ಸಕ್ರಿಯ ಕಾರ್ಯಕರ್ತ. ಒಬ್ಬ ದಲಿತ ಶಾಸಕನನ್ನು ಹಣಿಯಲು ದಲಿತ ಗುತ್ತಿಗೆದಾರ, ಸ್ವಾಮೀಜಿಯನ್ನೇ ಬಳಕೆ ಮಾಡಿಕೊಂಡಿದ್ದಾರೆ. ಆದರಹಳ್ಳಿ ಮಠದ ಕುಮಾರ ಮಹಾರಾಜರು ಡಾ.ಚಂದ್ರು ಲಮಾಣಿ ಅವರನ್ನು ಶಾಸಕ ಸ್ಥಾನದಿಂದ ಇಳಿಸುವವರೆಗೆ ಹೋರಾಟ ಬಿಡುವುದಿಲ್ಲ ಎಂದಿದ್ದಾರೆ. ನಮ್ಮಲ್ಲಿ ಮಠ ಪರಂಪರೆಯಿಲ್ಲ, ಅವರು ತಾವೇ ಬಂಜಾರ ಸಮಾಜದ ಸ್ವಾಮೀಜಿ ಎಂದು ಹೇಳಿಕೊಂಡು ಅಡ್ಡಾಡುತ್ತಿದ್ದಾರೆ ಎಂದರು.

ಜಿಲ್ಲಾ ಸಂಘಟನಾ ಕಾರ್ಯದರ್ಶಿ ಶಿವಾನಂದ ಮಾತನಾಡಿ, ಗುತ್ತಿಗೆದಾರ ವಿಜಯ್ ಪೂಜಾರ ಕಾಮಗಾರಿಗೆ ಡಿಸೆಂಬರ್‌ನಲ್ಲಿ ಪೂಜೆ ಮಾಡಿದ್ದು, ಫೆಬ್ರುವರಿವರೆಗೂ ಕೆಲಸ ಆರಂಭಿಸಲಿಲ್ಲ, ಕೆಲಸ ವಿಳಂಬ ಆಗಿದ್ದಕ್ಕೆ ಶಾಸಕರು ಪ್ರಶ್ನಿಸಿದ್ದರು. ಅದಕ್ಕೆ ಷಡ್ಯಂತ್ರ ಮಾಡಿ, ಲೋಕಾ ಬಲೆಗೆ ಬೀಳಿಸಿದ್ದಾರೆ ಎಂದು ಆಪಾದಿಸಿದರು. ಕರ್ನಾಟಕ ಬಂಜಾರ ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ಶಿವಪ್ಪ ನಾಯ್ಕ ಇತರರಿದ್ದರು.

ಹೊಸಳ್ಳಿ ಗ್ರಾಪಂ: ಅವಿರೋಧ ಆಯ್ಕೆ

•**ರೋಣ:** ತಾಲೂಕಿನ ಹೊಸಳ್ಳಿ ಗ್ರಾಪಂ ಉಪಾಧ್ಯಕ್ಷ ಸ್ಥಾನಕ್ಕೆ ಸದಸ್ಯ ಪ್ರವೀಣ ಬಸೇವಡೆಯರ ಅವಿರೋಧವಾಗಿ ಆಯ್ಕೆಗೊಂಡರು. ಈ ಮೊದಲು ಉಪಾಧ್ಯಕ್ಷರಾಗಿದ್ದ ಶಿವಯೋಗಿ ಥಡಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ಪರಿಣಾಮ ಬುಧವಾರ ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಿಗದಿಯಾಗಿತ್ತು.

ಒಟ್ಟು 10 ಸದಸ್ಯರುಗಳನ್ನು ಹೊಂದಿರುವ ಹೊಸಳ್ಳಿ ಗ್ರಾಪಂನಲ್ಲಿ ಪ್ರವೀಣ ಬಸೇವಡೆಯರ ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದರು. ಇವರ ವಿರುದ್ಧ ಯಾವುದೇ ನಾಮಪತ್ರ ಸಲ್ಲಿಕೆಯಾಗದ ಹಿನ್ನೆಲೆಯಲ್ಲಿ ತಾಪಂ ಕಾರ್ಯನಿರ್ವಾಹಣಾಧಿಕಾರಿ ಚಂದ್ರಶೇಖರ ಕಂದಕೂರ ಅವರು ಗ್ರಾಪಂ ಉಪಾಧ್ಯಕ್ಷ ಸ್ಥಾನಕ್ಕೆ ಪ್ರವೀಣ ಬಸೇವಡೆಯರ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ ಎಂದು ಘೋಷಿಸಿದರು. ಹಿರಿಯ ಸದಸ್ಯ ಬಿ.ಎಸ್.ರೆಡ್ಡೆರ, ಗ್ರಾಪಂ ಅಧ್ಯಕ್ಷೆ ಬಸಮ್ಮ ಸ್ಥಾವರಮಠ,ರೇಖಾ ಮಾದರ, ಶಾರದಾ ಅಂಗಡಿ, ಬಸಪ್ಪ ಮಾರನಬಸರಿ, ಲಲಿತಾ ಕುರಿ, ಶೋಭಾ ಗೊಟಗೊಂಡ, ಅನ್ನಪೂರ್ಣ ಈರಗಾರ ಸೇರಿದಂತೆ ಪಿಡಿಓ ಹಾಗೂ ಇತರರಿದ್ದರು.



ರಥೋತ್ಸವದಲ್ಲಿ ಲಕ್ಷಾಂತರ ಭಕ್ತರು | ಜಾತ್ರಾ ಗದ್ದುಗೆ ಏರಿದ ಶ್ರೀಮಾರಿಕಾಂಬೆ

ಪ್ರಸಿದ್ಧ ಶಿರಸಿ ಜಾತ್ರೆಗೆ ಸಂಭ್ರಮದ ಚಾಲನೆ



◆ **ಶಿರಸಿ:** ದಕ್ಷಿಣ ಭಾರತದ ಅತಿದೊಡ್ಡ ಜಾತ್ರೆ ಎಂದೇ ಪ್ರಸಿದ್ಧಿ ಪಡೆದ ಶಿರಸಿ ಶ್ರೀ ಮಾರಿಕಾಂಬಾ ದೇವಿಯ ಜಾತ್ರೆಯು ರಥೋತ್ಸವ ಬುಧವಾರ ಅತ್ಯಂತ ಸಡಗಡ ಸಂಭ್ರಮದಿಂದ ಚಾಲನೆಗೊಂಡಿತು. ಶ್ರೀ ಮಾರಿಕಾಂಬೆಯ ದರ್ಶನಕ್ಕಾಗಿ ಆಗಮಿಸಿದ ಲಕ್ಷಾಂತರ ಜನ ಭಕ್ತ ಸಮೂಹದ ಈ ರಥೋತ್ಸವಕ್ಕೆ ಸಾಕ್ಷಿಯಾಗುವ ಮೂಲಕ ದೇವಿಯನ್ನು ಕಣ್ತುಂಬಿಕೊಂಡು ಕೃತಾರ್ಥರಾದರು.

ಮಂಗಳವಾರ ಮಧ್ಯರಾತ್ರಿ ದೇವಿಯ ಕಲ್ಯಾಣೋತ್ಸವದ ನಂತರ ಬುಧವಾರ ಮುಂಜಾನೆ ದೇವಿ ರಥಾರೂಢರಾಗುವುದನ್ನು ಭಕ್ತಾದಿಗಳು ಕಾತರದಿಂದ ಕಾಯುತ್ತಿದ್ದರು. ಬೆಳಗ್ಗೆ 7 ಗಂಟೆಯಿಂದ ಆರಂಭಗೊಂಡ ರಥೋತ್ಸವದ ಧಾರ್ಮಿಕ ವಿಧಿ ವಿಧಾನಗಳು ಶ್ರೀ ದೇವಿ ಮಾರಿಕಾಂಬೆ ಜಾತ್ರಾ ಗದ್ದುಗೆಗೆ ಬಂದು ಪ್ರತಿಷ್ಠಾಪಿಸುವ ಮೂಲಕ ಜಾತ್ರಾ ಮಹೋತ್ಸವ ಆರಂಭಗೊಂಡಿತು.

ಇದಕ್ಕೂ ಮುನ್ನ ಮಾರಿಕಾಂಬಾ ದೇವಾಲಯದ ಎದುರು ಸರ್ವಾಲಂಕಾರ ಭೂಷಿತ ಶ್ರೀ ಮಾರಿಕಾಂಬಾ ದೇವಿಯನ್ನು ಅಲಂಕೃತ ರಥದಲ್ಲಿ ಜಾತ್ರಾ ಗದ್ದುಗೆಯತ್ತ ಕರೆದೊಯ್ಯುವ ವಿಧಿ ವಿಧಾನಗಳು ವಿಧ್ಯುಕ್ತವಾಗಿ ವಿವಿಧ ಸಂಪ್ರದಾಯ, ಪರಂಪರೆಯಂತೆ ನಡೆದವು.

ಮೊಳಗಿದ ಜಯಘೋಷ :

ಶ್ರೀ ದೇವಿ ರಥಾರೂಢವಾಗುತ್ತಿದ್ದಂತೆಯೇ ನೆರೆದ ಲಕ್ಷಾಂತರ ಭಕ್ತರಿಂದ ಉಘೇ ಉಘೇ ಎನ್ನುವ ಜಯಘೋಷ ಮೊಳಗಿತು. ವಾದ್ಯ, ಡೊಳ್ಳುಕುಣಿತ, ಚಂಡೆ ವಾದನ, ಹಲವು ಜಾನಪದ ಕಲೆಯೊಂದಿಗೆ ಅದ್ದೂರಿಯಾಗಿ ರಥೋತ್ಸವದ ಶೋಭಾಯಾತ್ರೆ ನಡೆಯಿತು. ಈ ವೇಳೆ ಹಲವು ಹರಕೆಹೊತ್ತ ಮಹಿಳೆಯರು ತಮ್ಮ ಮೈಮೇಲೆ ದೇವಿ ಆಹ್ವಾನಗೊಂಡಂತೆ ಭಕ್ತಿಯ ಪರಾಕಾಷ್ಠೆಯಲ್ಲಿ ಭಾವಪರವಶವಾಗಿ ಹರಕೆ ತೀರಿಸಿದರು.

ಮಾರಿ ದೇವಿಯಯನ್ನು ಜಾತ್ರಾ ಚಪ್ಪರಕ್ಕೆ ರಥದ ಮೂಲಕ ಕರೆತರುವ ವೇಳೆಯಲ್ಲಿ ಲಕ್ಷಾಂತರ ಭಕ್ತರು ಆಗಮಿಸಿ ತಮ್ಮ ವಿಶೇಷ ಹರಕೆಯನ್ನು ಸಲ್ಲಿಸಿದರು. ಸುಶೋಭಿತವಾದ ಜಾತ್ರಾ ಚಪ್ಪರದ ಗದ್ದುಗೆಯಲ್ಲಿ ಮಧ್ಯಾಹ್ನ 1-10ರ ವೇಳೆಗೆ ಮಾರಿಕಾಂಬೆಯ ಪ್ರತಿಷ್ಠಾಪನಾ ವಿಧಿ ವಿಧಾನಗಳು ನೆರವೇರಿದವು. ಫೆ.26ರಿಂದ ಬೆಳಗ್ಗೆ 5 ಗಂಟೆಯಿಂದ ಇನ್ನು ಏಳು ದಿನಗಳ ಕಾಲ ನಿತ್ಯವೂ ಲಕ್ಷ ಲಕ್ಷ ಭಕ್ತರು ನಾಡಿನ ಎಲ್ಲ ಕಡೆಯಿದ ಬಂದು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡು ದೇವಿಯ ದರ್ಶನ ಪಡೆಯಲಿದ್ದಾರೆ.

ದೇವಾಲಯದ ಧರ್ಮದರ್ಶಿ ಮಂಡಳ ಸದಸ್ಯರು ಬಾಬುದಾರರು ಸಾವಿರಾರು ಮಂದಿ ಕಾರ್ಯಕರ್ತರು, ಲಕ್ಷಾಂತರ ಭಕ್ತರು ಆಗಮಿಸಿ ಭಕ್ತಿಭಾವ ಮೆರೆದರು.

ಗುರುವಾರದಿಂದ ಸೇವೆ ಆರಂಭ

ಬುಧವಾರ ಜಾತ್ರಾ ಗದ್ದುಗೆಯಲ್ಲಿ ಪ್ರತಿಷ್ಠಾಪಿಸಲಾಗುವ ದೇವಿಯ ದರ್ಶನ ಮತ್ತು ಪೂಜೆ ಹರಕೆ ಸೇವೆ ಸಮರ್ಪಣಾ ಕಾರ್ಯವು ಗುರುವಾರ ಮುಂಜಾನೆ 5ರಿಂದ ಪ್ರಾರಂಭವಾಗಲಿದೆ. ನಂತರದ ಎಂಟು ದಿನಗಳ ಕಾಲ ಮುಂಜಾನೆಯಿಂದ ರಾತ್ರಿ10ರ ವರೆಗೆ ಸಹಸ್ರ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವಿಯ ದರ್ಶನ ಪಡೆಯಲಿದ್ದಾರೆ.

ಕಾರ್ಯರೂಪಕ್ಕೆ ಬಾರದ ನವಲಿ ಸಮಾನಾಂತರ ಜಲಾಶಯ ಯೋಜನೆ

▸ ಮಂಜುನಾಥ ಗಂಗಾವತಿ

ದಿಗಂತ ವಿಶೇಷ



◆ **ಕೊಪ್ಪಳ:** ಕನಕಗಿರಿ ತಾಲೂಕಿನ ನವಲಿ ಬಳಿ ನಿರ್ಮಿಸಲು ಉದ್ದೇಶಿಸಲಾಗಿರುವ ಸಮಾನಾಂತರ ಜಲಾಶಯ ನಿರ್ಮಾಣ ದಶಕಗಳೇ ಕಳೆದರೂ ಕಾರ್ಯರೂಪಕ್ಕೆ ಬಂದಿಲ್ಲ. ಈ ಬಜೆಟ್‌ನಲ್ಲಾದರೂ ಕಾಂಗ್ರೆಸ್ ಸರ್ಕಾರ ಅನುದಾನ ಮೀಸಲಿದೆಯಾ ಎಂಬ ಪ್ರಶ್ನೆ ಮೂಡಿದೆ.

2022ರಲ್ಲಿ ಗೋವಿಂದ ಕಾರಜೋಳ ಜಲಸಂಪನ್ಮೂಲ ಇಲಾಖೆ ಸಚಿವರಾಗಿದ್ದಾಗ ಈ ಯೋಜನೆಗಾಗಿ 13,040 ಕೋಟಿ ಮೊತ್ತದ ಸಮಗ್ರ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲಾಗಿತ್ತು. ಆದರೆ, ಜಲಾಶಯ ನಿರ್ಮಾಣಕ್ಕೆ ಬಿಜೆಪಿ, ಕಾಂಗ್ರೆಸ್ ಸರ್ಕಾರ ಅನುದಾನವನ್ನೇ ನೀಡಿಲ್ಲ.

ತುಂಗಭದ್ರಾದಲ್ಲಿ 30 ಟಿಎಂಸಿ ಅಡಿಗಿಂತಲೂ ಹೆಚ್ಚು ಹೂಳು ತುಂಬಿಕೊಂಡಿರುವ ಕಾರಣ ಪರ್ಯಾಯವಾಗಿ ನವಲಿ ಬಳಿ ಹೊಸ ಜಲಾಶಯ ನಿರ್ಮಾಣ ಮಾಡುವುದಾಗಿ ಕಾಂಗ್ರೆಸ್, ಬಿಜೆಪಿ ಸರ್ಕಾರ ಹೇಳಿತ್ತು. ಆದರೆ, ಅನುದಾನ ನೀಡುವುದಾಗಿಯೂ ಘೋಷಣೆ ಮಾಡಿರಲಿಲ್ಲ.

ಪ್ರತಿ ಬಾರಿ ನೀರು ವ್ಯರ್ಥವಾಗಿ ಹರಿಯುವಾಗಲೆಲ್ಲ ಸಮಾನಾಂತರ ಜಲಾಶಯದ ಚರ್ಚೆ ಮುನ್ನಲೆಗೆ ಬರುತ್ತದೆ. ದಶಕದ ಹಿಂದಿನ ಯೋಜನೆ ಆರಂಭವಾಗಿದ್ದರೆ ಈ ಭಾಗದಲ್ಲಿ ಮಳೆ ಕೊರತೆಯಿದ್ದಾಗ ಕೃಷಿ ಚಟುವಟಿಕೆಗೆ ನೀರಿನ ತೊಂದರೆ ತಪ್ಪುತ್ತಿತ್ತು. ಈಗಿನ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಆಸಕ್ತಿ ತೋರಿ ಜಲಾಶಯ ನಿರ್ಮಿಸುವರೇ ಎಂಬುದು ಪ್ರಶ್ನೆಯಾಗಿದೆ.

ತುಂಗಭದ್ರಾ ಜಲಾಶಯ ಪ್ರಸ್ತುತ ಒಟ್ಟು 105.78 ಟಿಎಂಸಿ ಅಡಿ ನೀರು ಸಂಗ್ರಹಣಾ ಸಾಮರ್ಥ್ಯ ಹೊಂದಿದ್ದು, ತುಂಬಿದ ಬಳಿಕ ಪ್ರತಿ ಬಾರಿಯೂ ವ್ಯರ್ಥವಾಗಿ ನದಿಗೆ ನೀರು ಹರಿದು ಹೋಗುವ ಪ್ರಮಾಣ ಹೆಚ್ಚಾಗುತ್ತಿದೆ. 2022ರಲ್ಲಿ ಜಲಾಶಯದಲ್ಲಿ ಸಂಗ್ರಹವಾದ ಮತ್ತು ಹರಿದು ಹೋದ ನೀರು 604.64 ಟಿಎಂಸಿ ಆಗಿದೆ. ಅದೇ ರೀತಿ 2025ರಲ್ಲಿ ಜಲಾಶಯಕ್ಕೆ 470 ಟಿಎಂಸಿ ನೀರು ಹರಿದು ಬಂದಿದೆ. ಇದರಲ್ಲಿ ಕೇವಲ 80 ಟಿಎಂಸಿ ನೀರು ಸಂಗ್ರಹ ಮಾಡಿಕೊಳ್ಳಲಾಯಿತು.

ಇಚ್ಛಾಶಕ್ತಿ ಕೊರತೆ: ಈಗಾಗಲೇ ನವಲಿ ಜಲಾಶಯ ನಿರ್ಮಾಣಕ್ಕೆ ಡಿಪಿಆರ್ ಸಿದ್ಧವಾಗಿದೆ. ಅಂತಾರಾಜ್ಯಗಳ ಜತೆ ಸಮನ್ವಯತೆ ಸಾಧಿಸಿ ಅನುದಾನ ಮೀಸಲಿಟ್ಟು ಭೂ ಸ್ವಾಧೀನ ಪಡಿಸಿಕೊಂಡು ಕಾಮಗಾರಿ ಆರಂಭಿಸುವುದೊಂದೇ ಬಾಕಿ. ಆದರೆ, ಜಿಲ್ಲೆಯ ಜನಪ್ರತಿನಿಧಿಗಳ ಇಚ್ಛಾಶಕ್ತಿ ಕೊರತೆಯಿಂದ ಯೋಜನೆ ನನೆಗುದಿಗೆ ಬಿದ್ದಿದೆ.

ತುಂಗಭದ್ರಾ ಜಲಾಶಯದ ನೀರು ಪೋಲಾದಂತೆ ತಡೆಯಲು ನವಲಿ ಬಳಿ ಸಮಾನಾಂತರ ಜಲಾಶಯ ನಿರ್ಮಾಣಕ್ಕೆ ಈಗಾಗಲೇ ಡಿಪಿಆರ್ ಸಿದ್ಧವಾಗಿದೆ. ಈ ಬಾರಿ ಬಜೆಟ್‌ನಲ್ಲಿ ಅನುದಾನ ನೀಡುವಂತೆ ಸರ್ಕಾರಕ್ಕೆ ಜಿಲ್ಲಾಡಳಿತದಿಂದ ಪ್ರಸ್ತಾವನೆ ಸಲ್ಲಿಸಲಾಗಿದೆ.

■ **ಸುರೇಶ್ ಇಟ್ನಾಳ್, ಜಿಲ್ಲಾಧಿಕಾರಿ**

ಸಮನ್ವಯತೆ ಸಾಧಿಸಿದ ಸರ್ಕಾರಗಳು

ತುಂಗಭದ್ರಾ ನೀರಿನಲ್ಲಿ ಕರ್ನಾಟಕ ಶೇ.65ರಷ್ಟು, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳು ಶೇ.35ರಷ್ಟು ಪಾಲು ಹೊಂದಿವೆ. ಅಂತಾರಾಜ್ಯಗಳು ಪಾಲು ಹೊಂದಿರುವುದರಿಂದ ರಾಜ್ಯ ಸರ್ಕಾರ ಉಳಿದ ಎರಡು ರಾಜ್ಯಗಳ ಜೊತೆ ಸಮನ್ವಯತೆ ಸಾಧಿಸಿ ಯೋಜನೆ ಆರಂಭಿಸಬೇಕಾಗಿದೆ. ಬಿಜೆಪಿ ಅವಧಿಯಲ್ಲಿ ಸಚಿವ ಗೋವಿಂದ ಕಾರಜೋಳ ಅವರು ಅಂತಾರಾಜ್ಯಗಳ ಜತೆ ಚರ್ಚೆ ನಡೆದಿದೆ ಎಂದು ಹೇಳಿಕೆ ನೀಡುತ್ತಲೇ ಬಂದರು. ಅದೇ ರೀತಿ ಈಗಿನ ಡಿಸಿಎಂ ಹಾಗೂ ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ ಕೂಡ ಇದೇ ಉತ್ತರ ನೀಡುತ್ತಿದ್ದಾರೆ. ಸಭೆಯಲ್ಲಿ ಏನು ನಡೆಯಿತು ಎಂಬುದೇ ಈವರೆಗೆ ಗೊತ್ತಾಗಿಲ್ಲ.



ಶಿರಸಿ: ಶ್ರೀ ಮಾರಿಕಾಂಬಾ ದೇವಿಯ ಜಾತ್ರೆಯ ಸಂದರ್ಭದಲ್ಲಿ ಹೊಸದಿಗಂತ ಪತ್ರಿಕೆ ಹೊರ ತಂದಿರುವ ವಿಶೇಷ ಪುರವಣಿಯನ್ನು ಶಾಸಕ ಭೀಮಣ್ಣ ನಾಯ್ಕ ಜಾತ್ರಾ ಗದ್ದುಗೆ ಎದುರು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಧರ್ಮದರ್ಶಿ ಮಂಡಳಿಯ ಅಧ್ಯಕ್ಷ ರವೀಂದ್ರ, ಗಣಪತಿ ನಾಯ್ಕ, ಉಪಾಧ್ಯಕ್ಷ ಸುದೇಶ ಜೋಗಳೇಕರ, ಧರ್ಮದರ್ಶಿಗಳಾದ ಸುಧೀರ ಹಂದ್ರಾಳ, ವತ್ಸಲಾ ಹೆಗಡೆ, ಶಿವಾನಂದ ಶೆಟ್ಟಿ, ಹೊಸದಿಗಂತ ವರದಿಗಾರ ಪ್ರವೀಣ ಹೆಗಡೆ ಕೊಂಬೆಮನೆ, ಪ್ರಸರಣ ಪ್ರತಿನಿಧಿ ಜಿತೇಂದ್ರ ಭಟ್ಟ, ಹೊಸದಿಗಂತ ಏಜೆಂಟರಾದ ಗಣೇಶ ಪ್ರಭು, ಆನಂದ, ಮಾರುತಿ ಮಡಿವಾಳ, ಗಣೇಶ ನಿಲೇಕಣಿ, ರಾಘವೇಂದ್ರ ನಾಯ್ಕ ಮತ್ತಿತರರು ಇದ್ದರು.

ಎರಡು ಕೆಜಿ ಬಂಗಾರದ ಆಸೆಗೆ ಹತ್ತು ಲಕ್ಷ ರೂ. ಪಂಗನಾಮ

◆ **ಸಿದ್ದಾಪುರ:** ಎರಡು ಕೆಜಿ ಬಂಗಾರದ ನಾಣ್ಯಗಳು ಕೇವಲ 10 ಲಕ್ಷ ರೂ.ಗೆ ಸಿಗುತ್ತದೆ ಎಂಬ ಆಸೆಗೆ ಮರುಳಾಗಿ ಮೋಸ ಹೋದ ಘಟನೆ ತಾಲೂಕಿನಲ್ಲಿ ನಡೆದಿದೆ.

ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲೂಕಿನ ಕುರಿ ಮತ್ತು ಮಟನ್ ವ್ಯಾಪಾರಿ ಆಕಾಶ ಅಬೂಬಕ್ಕರ್ ಕಲಾಲ್ ಎಂಬುವವರಿಗೆ ಅಪ್ಪಟ ಬಂಗಾರದ ನಾಣ್ಯಗಳನ್ನು ನೀಡುತ್ತೇವೆ ಎಂದು ನಂಬಿಸಿ, ಹತ್ತು ಲಕ್ಷ ರೂ.ಗಳನ್ನು ಪಡೆದು ನಕಲಿ ನಾಣ್ಯ ನೀಡಿ ಮೋಸ ಮಾಡಲಾಗಿದೆ ಎಂದು ಹೇಳಲಾಗಿದೆ.

ಕಳೆದ ಒಂದು ತಿಂಗಳ ಹಿಂದೆ ಸೌದತ್ತಿ ಯಲ್ಲಮ್ಮನ ಜಾತ್ರೆಯಲ್ಲಿ ಪರಿಚಯವಾದ ಚಿಕ್ಕಮಗಳೂರಿನ ಹೊಸಳ್ಳಿಯ ರವಿ ಎಂಬಾತ ತನ್ನ ಮನೆಯ ಹತ್ತಿರ ನೆಲ ಅಗೆಯುವಾಗ 2 ಕೆಜಿ ಬಂಗಾರ ಸಿಕ್ಕಿದೆ ಎಂದು ಅದಾಗಲೇ ಪರಿಚಯ ಮಾಡಿಕೊಂಡಿದ್ದ ಆಕಾಶ ಅವರ ಮಾವನಿಗೆ ಫೋನ್ ಮಾಡಿ ನಂಬಿಸಿದ್ದನು.

ವಿಷಯ ತಿಳಿದು ಬಂಗಾರದ ಆಸೆಗೆ ಬಿದ್ದ ಆಕಾಶ ಅವರು ಶಿವಮೊಗ್ಗಾದ ಹಾರುವಳ್ಳಿಗೆ ಹೋದ ಸಂದರ್ಭದಲ್ಲಿ ರವಿ ನೀಡಿದ್ದ ಒಂದು ಸಣ್ಣ ಮಾದರಿ ನಾಣ್ಯವನ್ನು ಪರೀಕ್ಷಿಸಿದಾಗ ಅದು ಅಸಲಿ ಬಂಗಾರ ಎಂದು ತಿಳಿದುಬಂದಿತ್ತು. ಇದನ್ನೇ ಬಂಡವಾಳ ಮಾಡಿಕೊಂಡ ಆರೋಪಿಗಳು ಪೂರ್ಣ ಪ್ರಮಾಣದ ವ್ಯವಹಾರಕ್ಕಾಗಿ ಆಕಾಶ ಅವರನ್ನು ಸಿದ್ದಾಪುರಕ್ಕೆ ಕರೆಸಿಕೊಂಡಿದ್ದರು.

23-02-2026ರಂದು ಆಕಾಶ ಅವರು ಹತ್ತು ಲಕ್ಷ ರೂ.ಗಳನ್ನು ಬ್ಯಾಗ್‌ನಲ್ಲಿ ತುಂಬಿಕೊಂಡು ತಮ್ಮ ಮಾವ ಮತ್ತು ತಮ್ಮ ಅರುಣನ ಜೊತೆ ಬಾಡಿಗೆ ಕಾರಿನಲ್ಲಿ ಸಿದ್ದಾಪುರಕ್ಕೆ ಬರುತ್ತಾರೆ. ಆರೋಪಿ ರವಿ ಚಾಣಾಕ್ಷತನದಿಂದ ಜನಸಂದಣಿ ಇರುವ ಸ್ಥಳಗಳನ್ನು ತಪ್ಪಿಸಿ ಸಿದ್ದಾಪುರ-ಸಾಗರ ರಸ್ತೆಯ ಕವಂಚೂರು ಗ್ರಾಮದ ಹಿತ್ತಲಕೊಪ್ಪ ಕ್ರಾಸ್‌ಗೆ ಬರಲು ಅವರಿಗೆ ಸೂಚಿಸುತ್ತಾನೆ. ಅಲ್ಲಿ ರವಿಯ ಜೊತೆಗೆ ಸುಮಾರು 30ರಿಂದ 35 ವರ್ಷ ವಯಸ್ಸಿನ ಇನ್ನೂ ಐವರು ಅಪರಿಚಿತ ವ್ಯಕ್ತಿಗಳು ಹಾಜರಿರುತ್ತಾರೆ. ಅವರು ಬಿಳಿ ಬಟ್ಟೆಯಲ್ಲಿ ಸುತ್ತಿರುವ ಎರಡು ಗಂಟುಗಳನ್ನು ನೀಡಿ ಅದರಲ್ಲಿ ಚಿನ್ನದ ನಾಣ್ಯಗಳಿವೆ ಎಂದು ನಂಬಿಸಿ ಆಕಾಶ ಅವರಿಂದ ಹತ್ತು ಲಕ್ಷ ರೂ.ಗಳನ್ನು ಪಡೆದುಕೊಂಡು ಹಣ ಕೈ ಸೇರುತ್ತಿದ್ದಂತೆ ಅಲ್ಲಿಂದ ಕಾಲ್ಕಿತ್ತಿದ್ದರು.

ಆಕಾಶ ಅವರು ಆ ಗಂಟುಗಳನ್ನು ಬಿಚ್ಚಿ ನಾಣ್ಯಗಳನ್ನು ಹಲ್ಲಿನಿಂದ ಕಚ್ಚಿ ಪರಿಶೀಲಿಸಿದಾಗ ಅವು ನಕಲಿ ಎಂಬುದು ಸಾಬೀತಾಗಿ ಮೋಸ ಹೋದದ್ದು ಅರಿವಾಗಿದೆ. ಈ ಘಟನೆ ಕುರಿತಂತೆ ಆಕಾಶ ಅವರು ಸಿದ್ದಾಪುರ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ಸಿದ್ದಾಪುರ ಪೊಲೀಸರುಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದು ಆರೋಪಿಗಳ ಪತ್ತೆಗಾಗಿ ಬಲೆ ಬೀಸಿದ್ದಾರೆಂದು ಹೇಳಲಾಗಿದೆ.

8 ಜನ ಅಂತರ್ ರಾಜ್ಯ ದರೋಡೆಕೋರರ ಬಂಧನ

◆ **ಯಲ್ಲಾಪುರ:** ರಾಷ್ಟ್ರೀಯ ಹೆದ್ದಾರಿಯಲ್ಲಿ ಕೈಯಲ್ಲಿ ಮಾರಕಾಸ್ತ್ರಗಳನ್ನು ಹಿಡಿದುಕೊಂಡು ದರೋಡೆ ಮಾಡಲು ಸಿದ್ಧರಾಗಿದ್ದ ಅಂತರ್ ರಾಜ್ಯ ದರೋಡೆಕೋರರ ತಂಡವನ್ನು ಯಲ್ಲಾಪುರ ಪೊಲೀಸರು ಬಂಧಿಸಿರುವ ಘಟನೆ ಬುಧವಾರ ನಡೆದಿದೆ.

ಹುಬ್ಬಳ್ಳಿ ರಸ್ತೆಯ ಕೆ.ಮಿಲನ್ ಹೋಟೆಲ್ ಹತ್ತಿರ ನಸುಕಿನ ಜಾವದಲ್ಲಿ ಖಚಿತ ಮಾಹಿತಿಯ ಮೇರೆಗೆ ದಾಳಿ ನಡೆಸಿದ ಪಿಎಸ್‌ಐ ಸಿದ್ದಪ್ಪ ಗುಡಿ ಅವರ ತಂಡ ಮಹಾರಾಷ್ಟ್ರದ ಪುಣೆಯ 8 ಜನರನ್ನು ಬಂಧಿಸಿದ್ದಾರೆ.

ಆರೋಪಿತರಾದ ಉಮೇಶ ರಾಮಾ ಗಾಯಕವಾಡ, ಶ್ರೀನಾಥ ಶಂಕರ ಜಾದವ, ಲಖನ್ ಸುಹಾಸ್ ಜಾದವ, ಪ್ರಶಾಂತ ಅಖಿಲ್ ಪವಾರ, ದೀಪಕ ಚಂದರಲಾಲ್ ದುಂಬಾನಿ, ಸುಂದರ ಕೈಲಾಸ್ ಗಾಯಕವಾಡ, ನಾಗುಬಾಯಿ ಗಣೇಶ ಜಾದವ, ಅಂಬಿಕಾ ಪ್ರಕಾಶ ಜಾದವ ಅವರನ್ನು ಬಂಧಿಸಿ ತನಿಖೆ ನಡೆಸಿದ್ದು, ಶಿರಸಿಯ ಮಾರಿಕಾಂಬಾ ಜಾತ್ರೆಯಲ್ಲಿ ಕಳ್ಳತನ ನಡೆಸಲು ತೆರಳುತ್ತಿರುವುದಾಗಿ ಒಪ್ಪಿಕೊಂಡಿರುತ್ತಾರೆ.

ಆರೋಪಿತರು ಈ ಹಿಂದೆ ದಕ್ಷಿಣ ಭಾರತದ ಪ್ರವಾಸಿ ತಾಣ, ಸುಪ್ರಸಿದ್ಧ ಜಾತ್ರೆಗಳಿಗೆ ಹೋಗಿ ಕಳ್ಳತನ ಮಾಡುವ ಪ್ರವೃತ್ತಿಯುಳ್ಳವರಾಗಿರುತ್ತಾರೆ. ಕೃತ್ಯ ಎಸಗುವ ವೇಳೆ ಹಿಡಿಯಲು ಹೋದರೆ ಕಲ್ಲಿನಿಂದ ಹಲ್ಲೆ ಮಾಡುವ ಕ್ರೂರ ಸ್ವಭಾವದವರಾಗಿರುತ್ತಾರೆ. ಆರೋಪಿತರು ಕಳೆದ 3-4 ವರ್ಷದಿಂದ ಸತತವಾಗಿ ದಕ್ಷಿಣ ಭಾರತದ ಎಲ್ಲಾ ರಾಜ್ಯಗಳಲ್ಲಿ ಕಳ್ಳತನ ದರೋಡೆ, ಸುಲಿಗೆ ನಡೆಸುತ್ತಿದ್ದು, ಈ ಹಿಂದೆ ಉತ್ತರ ಕನ್ನಡ ಜಿಲ್ಲೆಯ ಗೋಕರ್ಣ, ಮುರ್ಡೇಶ್ವರ ಕಡೆಗಳಲ್ಲಿ ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿರುತ್ತಾರೆ.

ಆರೋಪಿತರಿಂದ ಒಂದು ಮಾರುತಿ ಎರ್ಟಿಗಾ ಕಾರು, 04 ಮಂಕಿ ಕ್ಯಾಪ್, ಖಾರದ ಪುಡಿ ಪ್ಯಾಕೆಟ್, 07 ಮೊಬೈಲ್, 04 ಕಬ್ಬಿಣದ ರಾಡ್ ಸೇರಿದಂತೆ ಹೀಗೆ ಒಟ್ಟೂ 4 ಲಕ್ಷ ರೂ. ಮೌಲ್ಯದ ಸ್ವತ್ತುಗಳನ್ನು ಜಪ್ತ ಪಡಿಸಿಕೊಳ್ಳಲಾಗಿದೆ.

ಸಿಪಿಐ ರಮೇಶ ಹನಾಪೂರ ಮಾರ್ಗದರ್ಶನದಲ್ಲಿ, ಪಿಎಸ್‌ಐ ರಾಜಶೇಖರ ವಂದಲಿ, ಸಿದ್ದಪ್ಪ ಗುಡಿ, ಅನೀಲ್ ಮಾದರ, ಮಹಾಂತೇಶ ಕುಂಬಾರ, ಎಎಸ್‌ಐ ಗಜಾನನ ನಾಯ್ಕ ಹಾಗೂ ಸಿಬ್ಬಂದಿಗಳಾದ ಮಹಮ್ಮದ್ ಶಫೀ ಶೇಖ್, ರಾಜೇಶ ನಾಯ್ಕ, ಬಸವರಾಜ ಹಗರಿ, ಪ್ರಶಾಂತ ಪಾವುಸ್ಕರ್, ಚಂದ್ರಪ್ಪ, ಶೋಭಾ ನಾಯ್ಕ, ರೇಖಾ ಎಮ್ ಎಸ್., ಶ್ರೀಕಾಂತ ಕಟಬರ, ಪರಮೇಶ್ವರ ಬೆಂಡಗಟ್ಟಿ, ಬಸವರಾಜ ಕಂಬಳಿ. ಗಿರೀಶ ಲಮಾಣಿ, ಪರಮೇಶ್ವರ ಎಸ್. ನಾಗರಾಜ್ ನಾಯ್ಕ, ಸುರೇಶ, ಮಹಾವೀರ, ಚನ್ನಕೇಶವ, ರಾಚಪ್ಪ, ಗಂಗಾಧರ, ಸಂತೋಷ ಬಾಳೆರ ಹಾಗೂ ಕಾರವಾರದ ಟೆಕ್ನಿಕಲ್ ಸೆಲ್ ಸಿಬ್ಬಂದಿಗಳು ಆರೋಪಿತರನ್ನು ದಸ್ತಗಿರಿ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿರುತ್ತಾರೆ.

ಅಂಬಿಕಾನಗರ-ಬೊಮ್ಮನಹಳ್ಳಿ ರಸ್ತೆಯಲ್ಲಿ ಒಂಟಿ ಸಲಗ ಪ್ರತ್ಯಕ್ಷ



◆ **ದಾಂಡೇಲಿ:** ತಾಲೂಕಿನ ಅಂಬಿಕಾನಗರ-ಬೊಮ್ಮನಹಳ್ಳಿ ರಸ್ತೆಯಲ್ಲಿ ಒಂಟಿ ಸಲಗವೊಂದು ಪ್ರತ್ಯಕ್ಷವಾಗಿ ಕೆಲ ಹೊತ್ತು ವಾಹನಗಳ ಸಂಚಾರಕ್ಕೆ ಬ್ರೇಕ್ ಹಾಕಿದ ಘಟನೆ ಬುಧವಾರ ನಡೆದಿದೆ.

ಆನೆ ರಸ್ತೆಯ ಮಧ್ಯೆ ನಿಂತು ಕೆಲ ಹೊತ್ತು ವಾಹನಗಳ ಸಂಚಾರಕ್ಕೆ ತಡೆವೊಡ್ಡಿ ನಂತರ ವಾಹನಗಳಿಗೆ ಮುಂದೆ ಹೋಗಲು ಅನುವು ಮಾಡಿಕೊಡುತ್ತಿರುವ ದೃಶ್ಯವನ್ನು ಕಾರು ಚಾಲಕರೊಬ್ಬರು ತಮ್ಮ ಮೊಬೈಲ್ ಕ್ಯಾಮೆರಾದಲ್ಲಿ ಸೆರೆ ಹಿಡಿದಿದ್ದಾರೆ. ಇದೀಗ ಈ ದೃಶ್ಯ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದೆ.

ಜನ್ಮದಿನಕ್ಕೆ ಆಯುಧ ಬಳಸಿ ಕೇಕ್ ಕಟ್: ಬಂಧನ


◆ **ಚನ್ನಮ್ಮನ ಕಿತ್ತೂರು:** ಮೋಟರ್ ಸೈಕಲ್ ಮೇಲೆ ಕೇಕ್‌ಗಳನ್ನು ಇಟ್ಟು ಖಡ್ಗದಿಂದ ಅವುಗಳನ್ನು ಕಟ್ ಮಾಡಿ ಜನ್ಮದಿನ ಆಚರಿಸಿಕೊಂಡ ಯುವಕರ ಮೇಲೆ ಕಿತ್ತೂರು ಪೊಲೀಸರು ಪ್ರಕಣ ದಾಖಲಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ತಾಲೂಕಿನ ಎಂ.ಕೆ.ಹುಬ್ಬಳ್ಳಿಯ ರಾಷ್ಟ್ರೀಯ ಹೆದ್ದಾರೆ ಪಕ್ಕದ ಎಚ್.ಪಿ.ಪೆಟ್ರೋಲ್ ಪಂಪ ಬಳಿಯಿರುವ ಸಾರ್ವಜನಿಕ ಸ್ಥಳದಲ್ಲಿ ಮಂಗಳವಾರ ರಾತ್ರಿ 8ಗಂಟೆಯ ಸುಮಾರಿಗೆ ಆರೋಪಿತರಾದ ಎಂ.ಕೆ.ಹುಬ್ಬಳ್ಳಿಯ ಜೈದ್ ನೂರಅಹಮ್ಮದ್ ಸನದಿ ಹಾಗೂ ತಬ್ರೇಜ್ ಹನೀಪ್ ಖಾದ್ರಿ ಅವರು ಖಡ್ಗದಿಂದ ಕೇಕ್ ಕತ್ತರಿಸುವ ಮೂಲಕ ಜನ್ಮದಿನ ಆಚರಸಿಕೊಂಡು ರಿಲ್ ಮಾಡಿ ವಿಡಿಯೋಗಳನ್ನು ರೆಹಾನ್ ಮುಸ್ತಾಕ್ ಅಹಮ್ಮದ ಬಡೇಘರ್ ಇತನು ಸಾಮಾಜಿಕ ಜಾಲ ತಾಣದಲ್ಲಿ ಹರಿ ಬಿಟ್ಟಿದ್ದು, ಕಿತ್ತೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ಆರೋಪಿತರು ಬಳಸಿದ ಎರಡು ಮೋಟರ್ ಸೈಕಲ್‌ನ್ನು ವಶಪಡಿಸಿಕೊಂಡಿದ್ದಾರೆ. ಸಿಪಿಆಯ್ ಶಿವಾನಂದ ಗುಡಗನಟ್ಟಿ, ಪಿಎಸ್‌ಐಗಳಾದ ಪ್ರವೀಣ ಗಂಗೋಳ, ಗಂಗಾಧರ ಹಂಪನ್ನವರ ಮುಂತಾದವರು ಉಪಸ್ಥಿತರಿದ್ದರು.

ಖಾಲಿ ಹುದ್ದೆ ತಕ್ಷಣ ಭರ್ತಿಗೆ ಆಗ್ರಹ

ಬೆಂಗಳೂರವರೆಗೂ ಪಾದಯಾತ್ರೆ: ಬೆಲ್ಲದ

◆ **ಹುಬ್ಬಳ್ಳಿ:** ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಬೇಕು ಹಾಗೂ ನೇಮಕಾತಿ ಪ್ರಕ್ರಿಯೆ ವೇಗವಾಗಿ ನಡೆಸುವಂತೆ ಆಗ್ರಹಿಸಿ ಸರ್ಕಾರಕ್ಕೆ ಒಂದು ವಾರ ಗಡುವು ನೀಡಲಾಗಿದೆ. ಅಷ್ಟರಲ್ಲಿ ಸರ್ಕಾರ ಸೂಕ್ತ ನಿರ್ಧಾರ ಕೈಗೊಳ್ಳದಿದ್ದರೆ ಧಾರವಾಡದಿಂದ ಬೆಂಗಳೂರುವರೆಗೆ ಉದ್ಯೋಗಾಕಾಂಕ್ಷಿಗಳು ಪಾದಯಾತ್ರೆ ಆರಂಭಿಸಲಿದ್ದಾರೆ ಎಂದು ವಿಧಾನಸಭೆ ವಿಪಕ್ಷ ನಾಯಕ ಹಾಗೂ ಶಾಸಕ ಅರವಿಂದ ಬೆಲ್ಲದ ಎಚ್ಚರಿಕೆ ನೀಡಿದರು.



ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವಿಷಯವಾಗಿ ಈಗಾಗಲೇ ಹಲವು ಬಾರಿ ಆಕಾಂಕ್ಷಿಗಳು ಹೋರಾಟ ನಡೆಸಿದರೂ ಸರ್ಕಾರ ಮಾತ್ರ ಎಚ್ಚೆತ್ತುಕೊಂಡಿಲ್ಲ. ಇದರ ಪರಿಣಾಮ ಬೃಹತ್ ಮಟ್ಟದಲ್ಲಿ ಏರ್ಪಡಿಸಿದ್ದ ಪ್ರತಿಭಟನೆಗೆ ಬಿಜೆಪಿ ಬೆಂಬಲ ವ್ಯಕ್ತಪಡಿಸಿ ಎಲ್ಲ ನಾಯಕರು ಪಾಲ್ಗೊಂಡಿದ್ದರು ಎಂದರು.

ಸರ್ಕಾರ ಈ ಹೋರಾಟವನ್ನು ನಿರ್ಲಕ್ಷಿಸಿದ್ದೇ ಆದಲ್ಲಿ, ಬೆಂಗಳೂರು, ಮಂಗಳೂರು, ಬೆಳಗಾವಿ, ವಿಜಯಪುರ, ಧಾರವಾಡ ಸೇರಿದಂತೆ ಇಡೀ ರಾಜ್ಯದಲ್ಲಿ ತೀವ್ರ ಸ್ವರೂಪದ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಾಗಿನಿಂದಲೂ ಹುದ್ದೆಗಳ ಭರ್ತಿಗೆ ಒಂದೂ ಅಧಿಸೂಚನೆ ಹೊರಡಿಸಿಲ್ಲ. ಮುಖ್ಯಮಂತ್ರಿ ಅವರಿಗೆ ಎಲ್ಲರೂ ಕರೆಯುವಂತೆ (ಸುಳ್ಳುರಾಮಯ್ಯ)ಯೇ ನಡೆದುಕೊಳ್ಳುತ್ತಿದ್ದಾರೆ. ಅಧಿವೇಶನದಲ್ಲಿ ಸರ್ಕಾರವೇ ನೀಡಿರುವ ದಾಖಲೆಗಳ ಪ್ರಕಾರ ಬರೀ 8157 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಮಾತ್ರ ನಡೆದಿದೆ. ಆದರೆ, ಸಿದ್ದರಾಮಯ್ಯ ಅವರು 40000 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಎಂದು ತಪ್ಪು ಸಂದೇಶ ನೀಡುವ ಮೂಲಕ ಜನರ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ.

ಖುದ್ದು ಮುಖ್ಯಮಂತ್ರಿಗಳು 2.84 ಲಕ್ಷ ಹುದ್ದೆಗಳು ಖಾಲಿ ಇರುವುದನ್ನು ಒಪ್ಪಿಕೊಂಡಿದ್ದಾರೆ. ಹಾಗಿದ್ದರೆ ತಮ್ಮ ಬಳಿಯೇ ಇರುವ ಆರ್ಥಿಕ ಇಲಾಖೆ ಒಪ್ಪಿಗೆ ಪಡೆದು ಎಲ್ಲ ಹುದ್ದೆಗಳನ್ನು ಭರ್ತಿ ಮಾಡುವ ಕೆಲಸ ಮಾಡಲಿ ಎಂದು ಆಗ್ರಹಿಸಿದರು.

ಕೇಂದ್ರ ಸರ್ಕಾರ 11 ವರ್ಷದಲ್ಲಿ 7.30 ಲಕ್ಷ ಹುದ್ದೆಗಳನ್ನು ನೇಮಕ ಮಾಡಿದೆ. ಯುಪಿಎ ಸರ್ಕಾರದಲ್ಲಿ 2.90 ಲಕ್ಷ ಹೊಸ ಇಪಿಎಫ್ ಖಾತೆ ತೆರೆಯಲಾಗಿದೆ. ಆದರೆ ನರೇಂದ್ರ ಮೋದಿ ಅವರ 11 ವರ್ಷ ಆಡಳಿತದಲ್ಲಿ 17.90 ಕೋಟಿ ಜನರು ನೋಂದಣಿಯಾಗಿದ್ದಾರೆ. ಕಳೆದ ವರ್ಷ ನವೆಂಬರ್ ತಿಂಗಳಲ್ಲೇ 14.5 ಲಕ್ಷ ಹೊಸ ನೋಂದಣಿಯಾಗಿದೆ. ಇದು ಕೇಂದ್ರ ಸರ್ಕಾರದ ನೇಮಕಾತಿಗೆ ಸಾಕ್ಷಿ ಎಂದು ಹೇಳಿದರು.

ಆರೋಗ್ಯ ಇಲಾಖೆಯ ಕಾರ್ಯಕ್ರಮವೊಂದರ ಆಮಂತ್ರಣ ಪತ್ರಿಕೆಯಲ್ಲಿ ಉರ್ದು ಭಾಷೆ ಮಾತ್ರ ಬಳಸಿರುವುದು ಸರಿಯಲ್ಲ. ಅತಿಯಾದ ರಾಜಕೀಯ ಓಲೈಕೆಯಿಂದ ಭಾಷಾ ಬಾಂಧವರ ನಡುವೆ ಕಾಂಗ್ರೆಸ್ ಜಗಳ ಹಚ್ಚುವ ಕೆಲಸ ಮಾಡುತ್ತಿದೆ. ಇದಕ್ಕೆ ಜನತೆ ಸರಿಯಾದ ಪಾಠ ಕಲಿಸಲಿದ್ದಾರೆ.

■ **ಅರವಿಂದ ಬೆಲ್ಲದ, ಶಾಸಕ**

ಹುದ್ದೆಗಳ ಭರ್ತಿಗೆ ವಾರದ ಗಡುವು

◆ **ಧಾರವಾಡ:** ಸರ್ಕಾರಿ ಇಲಾಖೆಗಳಲ್ಲಿನ ಖಾಲಿ ಹುದ್ದೆಗಳ ನೇಮಕಾತಿಗಾಗಿ ತೀವ್ರ ಸ್ವರೂಪದ ಹೋರಾಟದ ಬೆನ್ನಲ್ಲಿಯೇ ಒಂದು ವಾರದಲ್ಲಿಯೇ ನೇಮಕಾತಿಯ ಅಧಿಸೂಚನೆ ಹೊರಡಿಸಲು ಅಖಿಲ ಕರ್ನಾಟಕ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಕಾಂತಕುಮಾರ ಸರ್ಕಾರಕ್ಕೆ ಗಡುವು ನೀಡಿದ್ದಾರೆ. ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯ ಸರ್ಕಾರ ಹಲವು ಬಾರಿ ನೇಮಕಾತಿಯ ಭರವಸೆ ನೀಡಿದೆ. ಇದರಿಂದ ನಾವು ಸುಮ್ಮನಾಗುವ ಪ್ರಶ್ನೆ ಇಲ್ಲ. ಈಗಾಗಲೇ ಆರ್ಥಿಕ ಇಲಾಖೆಯು 65 ಸಾವಿರ ಹುದ್ದಗಳನ್ನು ಭರ್ತಿ ಮಾಡಿಕೊಳ್ಳಲು ಒಪ್ಪಿಗೆ ನೀಡಿದ್ದು, ವಾರದಲ್ಲಿ ಅಧಿಸೂಚನೆ ಹೊರಡಿಸಬೇಕು ಎಂದು ಒತ್ತಾಯಿಸಿದ್ದಾರೆ. ನೇಮಕಾತಿ ವಿಳಂಬ ಮಾಡಿದರೆ, ಧಾರವಾಡದಿಂದ ಬೆಂಗಳೂರಿಗೆ ಪಾದಯಾತ್ರೆ ಮುಖಾಂತರ ಹೋರಾಟ ಮುಂದುವರಿಸಬೇಕಾಗುತ್ತದೆ. ಈ ಪಾದಯಾತ್ರೆಗೆ ರಾಜ್ಯದ ವಿವಿಧ ಜಿಲ್ಲೆಗಳಿಂದ ಲಕ್ಷಾಂತರ ಆಕಾಂಕ್ಷಿಗಳು ಭಾಗವಹಿಸಲಿದ್ದಾರೆ. ಈ ವಿಷಯದಲ್ಲಿ ಮುಖ್ಯಮಂತ್ರಿಗಳು ಕೊಟ್ಟ ಮಾತಿನಂತೆ ನಡೆದುಕೊಳ್ಳಲಿ ಎಂದು ಕಾಂತಕುಮಾರ ಹೇಳಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ಇಂದು ಕಂಸ ದಿಗ್ವಿಜಯ ಯಕ್ಷಗಾನ ಪ್ರದರ್ಶನ

ಸಿದ್ದಾಪುರ: ಹೊಂಗಿರಣ ಫೌಂಡೇಶನ್, ಯಕ್ಷ ಶುಭೋದಯ ಶಿರಸಿ ಇವರಿಂದ ಸಂತೋಷ ಶೇಟ್ ಕಾನಸೂರು ಇವರ ಪ್ರಾಯೋಜಕತ್ವದಲ್ಲಿ ಹಾರ್ಸಿಕಟ್ಟಾ ಗಣೇಶ ಮಂಟಪದಲ್ಲಿ 'ಕಂಸದಿಗ್ವಿಜಯ' ಯಕ್ಷಗಾನ ಫೆ.26ರಂದು ಸಂಜೆ 6 ರಿಂದ ಪ್ರದರ್ಶನಗೊಳ್ಳಲಿದೆ. ಹಿಮ್ಮೇಳದಲ್ಲಿ ಸತೀಶ ಹೆಗಡೆ ದಂಟಕಲ್, ಶ್ರೀಧರ ಹೆಗಡೆ ಹೊಸ್ತೋಟ, ರಘುಪತಿ ಹೆಗಡೆ ಹೂಡೆಹದ್ದ ಸಹಕರಿಸುವರು. ಮುಮ್ಮೇಳದಲ್ಲಿ ನಾಟ್ಯಾಚಾರ್ಯ ಶಂಕರ ಭಟ್ಟ ಸಿದ್ದಾಪುರ, ಡಾ.ಜಿ.ಎ.ಹೆಗಡೆ ಸೋಂದಾ, ಪ್ರಸನ್ನ ಹೆಗಡೆ ಹೊಸಗದ್ದೆ, ಭೂಮಿಕಾ ಹೆಗಡೆ ಹೊಸಗದ್ದೆ, ಮೈತ್ರಿ ಗೌಡ ಸಂಪೇಸರ ಪಾತ್ರನಿರ್ವಹಿಸಲಿದ್ದಾರೆ ಎಂದು ಸಂಘಟಕರು ತಿಳಿಸಿದ್ದಾರೆ.



ಗೋಕರ್ಣ: ಪ್ರವಾಸಿ ತಾಣದಲ್ಲಿ ನಡೆಯುವ ಅವಘಡಗಳ ಮಾಹಿತಿ ಹಾಗೂ ಮುನ್ನೆಚ್ಚರಿಕೆ ಕ್ರಮದ ಕುರಿತು ಜಾಗೃತಿ, ಧಾರ್ಮಿಕ ತಾಣದಲ್ಲಿ ದೇವಾಲಯದಲ್ಲಿನ ವ್ಯವಸ್ಥೆ ಹಾಗೂ ಅನುಸರಿಸಬೇಕಾದ ನಿಯಮಗಳ ಬಗ್ಗೆ ಪಠ್ಯ ಶಿಕ್ಷಣದ ಜೊತೆ ಜೀವನಕ್ಕೆ ಅಗತ್ಯ ಅಂತ ತಿಳಿಸುವ ಶಿವ ಸೇವಾಕಾರ್ಯಕ್ರಮ ಭದ್ರಕಾಳಿ ಇಂಗ್ಲೀಷ್ ಮೀಡಿಯಂ ಶಾಲೆಯ ಆಡಳಿತ ಮಂಡಳಿಯಿಂದ ನಡೆಯಿತು.

ಗುಂಡು ಎಸೆತ: ನಂದಿನಿ ತೃತೀಯ

ಕುಮಟಾ: ವಿಶೇಷ ಚೇತನ ಮಕ್ಕಳಿಗಾಗಿ ಆಯೋಜಿಸಲಾದ ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಸೆಕೆಂಡರಿ ಹೈಸ್ಕೂಲ್, ಹಿರೇಗುತ್ತಿ ವಿದ್ಯಾರ್ಥಿನಿ ನಂದಿನಿ ಬಿ. ಗೌಡ ಗುಂಡು ಎಸೆತದಲ್ಲಿ ತೃತೀಯ ಸ್ಥಾನ ಪಡೆದು ತಾಲೂಕು ಹಾಗೂ ಜಿಲ್ಲೆಗೆ ಕೀರ್ತಿ ತಂದಿದ್ದಾಳೆ.



ಈ ಸಾಧನೆಗೆ ಹೈಸ್ಕೂಲ್ ಆಡಳಿತ ಮಂಡಳಿಯ ಅಧ್ಯಕ್ಷರಾದ ಹೊನ್ನಪ್ಪ ಎನ್. ನಾಯಕ ಹಾಗೂ ಸರ್ವ ಸದಸ್ಯರು, ಹಿರೇಗುತ್ತಿ ಗ್ರಾಪಂ ಅಧ್ಯಕ್ಷರಾದ ಶಾಂತಾ ಎನ್.ನಾಯಕ, ಶಾಲೆಯ ಮುಖ್ಯಾಧ್ಯಾಪಕ ವಿಶ್ವನಾಥ ಬೇವಿನಕಟ್ಟಿ ಹಾಗೂ ಯುವಕ ಸಂಘದ ಅಧ್ಯಕ್ಷರಾದ ಆಕಾಶ ಬಿ.ನಾಯಕ ಅವರು ಅಭಿನಂದನೆ ಸಲ್ಲಿಸಿದ್ದಾರೆ. ನಂದಿನಿಯ ಈ ಸಾಧನೆ ವಿಶೇಷ ಚೇತನ ಮಕ್ಕಳಲ್ಲಿರುವ ಅಸೀಮ ಪ್ರತಿಭೆ ಹಾಗೂ ದೃಢಸಂಕಲ್ಪಕ್ಕೆ ಸಾಕ್ಷಿಯಾಗಿದ್ದು, ಇತರ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದೆ.

ರಸ್ತೆ ಬದಿಯ ಗುಜರಿ ವಾಹನ ತೆರವು



ದಾಂಡೇಲಿ: ನಗರದ ಬರ್ಚಿ ರಸ್ತೆ ಬದಿಯಲ್ಲಿ ಕಳೆದ ಅನೇಕ ತಿಂಗಳಿನಿಂದ ನಿಲ್ಲಿಸಿಟ್ಟದ್ದ ಗುಜರಿ ವಾಹನವನ್ನು ಬುಧವಾರ ತೆರವುಗೊಳಿಸಲಾಯಿತು. ನಗರಸಭೆಯ ಪೌರಾಯುಕ್ತ ವಿವೇಕ್ ಬನ್ನೆ ಅವರ ಮಾರ್ಗದರ್ಶನದಲ್ಲಿ ನಗರ ಸಭೆ ಆರೋಗ್ಯ ನಿರೀಕ್ಷಕ ವಿಲಾಸ ಹಾಗೂ ಆದಿನಾರಾಯಣ ನೇತೃತ್ವದಲ್ಲಿ ಪೌರಕಾರ್ಮಿಕರ ಸಹಕಾರದೊಂದಿಗೆ ಗುಜರಿ ವಾಹನವನ್ನು ತೆರವುಗೊಳಿಸಲಾಯಿತು. ದಾಂಡೇಲಿ ನಗರದ ರಸ್ತೆ ಬದಿಗಳಲ್ಲಿ ಹಾಗೂ ಫುಟ್ಪಾತ್‌ಗಳಲ್ಲಿ ನಿಲ್ಲಿಸಲಾಗಿರುವ ಗುಜರಿ ವಾಹನಗಳನ್ನು ತೆರವುಗೊಳಿಸುವ ಕಾರ್ಯವನ್ನು ಇನ್ನು ನಿರಂತರವಾಗಿ ಮುಂದುವರಿಸಲಿರುವುದರಿಂದ ಸಂಬಂಧಪಟ್ಟ ವಾಹನಗಳ ಮಾಲೀಕರು ಕೂಡಲೇ ಇಂತಹ ವಾಹನಗಳನ್ನು ತೆರವುಗೊಳಿಸುವಂತೆ ನಗರಸಭೆ ಈ ವಾಹನವನ್ನು ತೆರವುಗೊಳಿಸುವ ಮೂಲಕ ಅರಿವು ಮೂಡಿಸುವ ಕಾರ್ಯಕ್ಕೆ ಮುಂದಾಗಿದೆ.



ಯಲ್ಲಾಪುರ: ತಾಲೂಕಿನ ಉಪಳೇಶ್ವರದಲ್ಲಿ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ವತಿಯಿಂದ ಆಯೋಜಿಸಲಾದ ಗ್ರಾಮೀಣ ಶಿಬಿರ ಕಾರ್ಯಕ್ರಮಕ್ಕೆ ಶಾಸಕ ಶಿವರಾಮ ಹೆಬ್ಬಾರ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಸ್ಥಳೀಯ ಮುಖಂಡರು ಶಾಸಕರನ್ನು ಸನ್ಮಾನಿಸಿ ಗೌರವಿಸಿದರು. ಗ್ರಾಮಸ್ಥರು ಶಿಬಿರದ ಸದುಪಯೋಗ ಪಡೆದುಕೊಂಡರು.

ಸವಾಲುಗಳನ್ನು ಸಮರ್ಥವಾಗಿ ಎದುರಿಸಿ

ಸಿದ್ದಾಪುರ: ಇಪ್ಪತ್ತೊಂದನೆಯ ಶತಮಾನದಲ್ಲಿ ಭಾರತವನ್ನೊಳಗೊಂಡಂತೆ ಜಗತ್ತಿನ ವಿವಿಧ ದೇಶಗಳಲ್ಲಿ ಎದುರಾಗುತ್ತಿರುವ ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಪರಿಸರ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ಸೂಕ್ತ ಪರಿಹಾರ ರೂಪಿಸಲು ಸಂಶೋಧನಾತ್ಮಕ ಅಧ್ಯಯನಗಳು ಸಹಾಯಕ ಎಂದು ಸಾಗರದ ಇಂದಿರಾಗಾಂಧಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಸಮಾಜಶಾಸ್ತ್ರ ಸಹಾಯಕ ಪ್ರಾಧ್ಯಾಪಕ ಡಾ.ಮಾದೇಶ ಎ. ಹೇಳಿದರು. ಸ್ಥಳೀಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಐಕ್ಯುಎಸಿ ಹಾಗೂ ಸಮಾಜಶಾಸ್ತ್ರ ವಿಭಾಗದ ವತಿಯಿಂದ ಸಂಘಟಿಸಿದ್ದ ಸಾಮಾಜಿಕ, ಆರ್ಥಿಕ ಅಧ್ಯಯನಗಳಲ್ಲಿ ಸಂಶೋಧನಾ ವಿಧಾನಗಳು ಮತ್ತು ನವೀನ ತಂತ್ರಗಳು ಎಂಬ ವಿಷಯದ ಕುರಿತ ಒಂದು ದಿನದ ತರಬೇತಿ ಕಾರ್ಯಾಗಾರದಲ್ಲಿ ಉಪನ್ಯಾಸ ನೀಡಿದರು. ಉಪನ್ಯಾಸಕಿ ಡಾ.ರಶ್ಮಿ ಕರ್ಕಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಸಂಪನ್ಮೂಲ ವ್ಯಕ್ತಿಗಳಾಗಿದ್ದ ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಜಿ.ಕೆ.ಚೇತನಕುಮಾರ,ಅಧ್ಯಕ್ಷತೆ ವಹಿಸಿದ್ದ ಪ್ರಾ. ಡಾ.ಸತೀಶ ನಾಯ್ಕ, ಪ್ರೊ. ನಾರಾಯಣ ಗೌಡ ಮಾತನಾಡಿದರು. ಉಪನ್ಯಾಸಕರಾದ ದಿವಾಕರ, ಮಹಾಲಕ್ಷ್ಮಿ, ಡಾ. ಕಿರಣಕುಮಾರಿ, ರೇಖಾ ಬೆಳಗಲಿ, ಮಧುರಾಕ್ಷಿ, ಜಯಶ್ರೀ ನಾಯ್ಕ, ಈಶ್ವರ ನಾಯ್ಕ, ದೀಪಿಕಾ, ಲೋಹಿತ ನಾಯ್ಕ, ಮಾರುತಿ ಗಾವಡಿ ಇತರರು ಉಪಸ್ಥಿತರಿದ್ದರು. ಸಮಾಜಶಾಸ್ತ್ರ ವಿಭಾಗ ಮುಖ್ಯಸ್ಥರಾದ ಡಾ.ಎಮ್.ಬಿ.ಗಣಪತಿ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಅರ್ಚನಾ ಸಂಗಡಿಗರು ಪ್ರಾರ್ಥಿಸಿದರು. ಮನೀಷ ಸ್ವಾಗತಿಸಿದರು. ಸೌಮ್ಯ ಪರಿಚಯಿಸಿದರು. ನವ್ಯಶ್ರೀ ನಾಯ್ಕ ನಿರ್ವಹಿಸಿದರು. ಮಧುರಾ ವಂದಿಸಿದರು.



ಭಟ್ಕಳ : ಕರ್ನಾಟಕ ಬ್ಯಾಂಕ್ ಸಿ.ಎಸ್.ಆರ್. ಫಂಡ್‌ನಿಂದ ಇಲ್ಲಿನ ತಹಶೀಲ್ದಾರ್ ಕಚೇರಿಗೆ ಎರಡು ಕಂಪ್ಯೂಟರ್ ಹಾಗೂ ಒಂದು ಝೆರಾಕ್ಸ್ ಯಂತ್ರ ನೀಡಲಾಯಿತು. ಈ ಸಂದರ್ಭದಲ್ಲಿ ಕುಮಟಾ ವಲಯದ ಮುಖ್ಯ ಪ್ರಬಂಧಕ ರಂಜಿತ್ ಶೆಟ್ಟಿ, ಭಟ್ಕಳ ಶಾಖಾ ವ್ಯವಸ್ಥಾಪಕ ಸುನಿಲ್ ಪೈ, ಸಿಬ್ಬಂದಿ ನಂದನ ಎಂ., ತಹಶೀಲ್ದಾರ್ ಕಚೇರಿಯ ಸಿಬ್ಬಂದಿ ಉಪಸ್ಥಿತರಿದ್ದರು.

ಗದ್ದುಗೆ ಏರಿದ ಮಾರಿಕಾಂಬೆ | ಹರಿದು ಬಂದ ಜನಸಾಗರ

ಶಿರಸಿ ಜಾತ್ರಾ ಸಂಭ್ರಮದಲ್ಲಿ ಭಕ್ತಗಣ

ಪ್ರವೀಣ ಹೆಗಡೆ ಕೊಂಬೇಮನೆ

ಶಿರಸಿ: ನೂರಾರು ವರ್ಷದ ಇತಿಹಾಸ ಹೊಂದಿರುವ ಶಕ್ತಿ ದೇವತೆ ಶಿರಸಿಯ ಮಾರಿಕಾಂಬೆ ದೇವಿಯ ಜಾತ್ರೆಯು ಬುಧವಾರದಿಂದ ಆರಂಭವಾಗಿದ್ದು ಲಕ್ಷಾಂತರ ಭಕ್ತ ಸಮೂಹದೊಂದಿಗೆ ಜಾತ್ರಾ ಗದ್ದುಗೆಗೆ ಮಾರಿಕಾಂಬಾ ದೇವಿ ವಿರಾಜಮಾನಳಾಗಿದ್ದಾಳೆ.ಎರಡು ವರ್ಷಕ್ಕೊಮ್ಮೆ 9 ದಿನಗಳ ಕಾಲ ನಡೆಯುವ ಶಿರಸಿ ಮಾರಿಕಾಂಬಾ ದೇವಿ ಜಾತ್ರೆ, ರಾಜ್ಯ ಅತಿದೊಡ್ಡ ಜಾತ್ರೆ ಎನ್ನುವ ಹೆಗ್ಗಳಿಕೆ ಪಡೆದಿದೆ.

ಎರಡು ಗಂಟೆ ರಥೋತ್ಸವ :

ಶ್ರೀ ಮಾರಿಕಾಂಬಾ ದೇವಸ್ಥಾನದಿಂದ ಅರ್ಧ ಕಿಲೋಮೀಟರ್ ದೂರದ ಜಾತ್ರಾ ಗದ್ದುಗೆ ರಥವನ್ನು ಭಕ್ತಾದಿಗಳು ಸುಮಾರು ಎರಡು ತಾಸುಗಳ ಅವಧಿಯಲ್ಲಿ ಎಳೆದರು. ಹಲವು ಕಷ್ಟಗಳನ್ನು ಪರಿಹರಿಸುವ ಮಹಾತಾಯಿ ಎಂದೇ ಹೆಸರಾದ ಶಿರಸಿ ಶ್ರೀ ಮಾರಿಕಾಂಬೆಯ ರಥೋತ್ಸವದಲ್ಲಿ ಒಂದು ಕಡೆ ಡೊಳ್ಳುಕುಣಿತಕ್ಕೆ ಕುಣಿಯುವ ಜನರು, ಇನ್ನೊಂದು ಕಡೆ ಹರಕೆ ಹೊತ್ತ ಭಕ್ತರು. ಮೈ, ಮುಖಕ್ಕೆ ಕುಂಕುಮ, ಅರಿಶಿಣ ಸವರಿಕೊಂಡು, ದೇವರು ಮೈಮೇಲೆ ಬಂದಂತೆ ಕಾಣುವ ದುರ್ಗೆಯರು ಆವೇಶ ಭರಿತ ಕುಣಿತ ಗಮನ ಸೆಳೆಯುವಂತಿತ್ತು. ಸಾವಿರಾರು ಜನರ ಮಹಿಳೆಯರು ಪುರುಷರು ದೇವಿಯನ್ನು ಮೈ ಮೇಲೆ ಆಹ್ವಾನಿಸಿಕೊಂಡು ಭಕ್ತಿಯಲ್ಲಿ ಭಾವಪರವಶರಾದರು.

ನಂತರ ಜಾತ್ರಾ ಗದ್ದುಗೆಯಲ್ಲಿ ದೇವಿಯನ್ನು ಪ್ರತಿಷ್ಠಾಪಿಸುವ ಕಾರ್ಯ ನೆರವೇರಿತು. ಈ ವೇಳೆ ತಮ್ಮ ಹರಕೆಯಂತೆ ಬಾಳೆಹಣ್ಣು, ಕಡಲೆ, ಅಕ್ಕಿ, ಕೋಳಿಗಳನ್ನು ರಥಕ್ಕೆ ಎಸೆದು ಕೃತಾರ್ಥರಾದರು. ದೇವಾಲಯದ ಧರ್ಮದರ್ಶಿ ಮಂಡಳ ಸದಸ್ಯರು ಬಾಬುದಾರರು ಸಾವಿರಾರು ಮಂದಿ ಕಾರ್ಯಕರ್ತರು, ಲಕ್ಷಾಂತರ ಭಕ್ತರು ಆಗಮಿಸಿ ಭಕ್ತಿಭಾವ ಮೆರೆದರು.



ಗುರುವಾರದಿಂದ ಸೇವೆ ಆರಂಭ

ದೇವಿಯ ದರ್ಶನ ಮತ್ತು ಪೂಜೆ ಹರಕೆ ಸೇವೆ ಸಮರ್ಪಣಾ ಕಾರ್ಯವು ಗುರುವಾರ ಮುಂಜಾನೆ 5 ರಿಂದ ಪ್ರಾರಂಭವಾಗಲಿದೆ. ನಂತರದ ಎಂಟು ದಿನಗಳ ಕಾಲ ಮುಂಜಾನೆಯಿಂದ ರಾತ್ರಿ 10 ರವರೆಗೆ ಸಹಸ್ರ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವಿಯ ದರ್ಶನ ಪಡೆಯಲಿದ್ದಾರೆ. ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಹರಕೆ ತೀರಿಸುವುದು ವಾಡಿಕೆ. ಹಣ್ಣು ಕಾಯಿ ಕುಂಕುಮಾರ್ಚನೆ, ಉಡಿ, ಬೇವಿನ ಉಡಿ, ಸೀರೆ, ಹಾರುಕೋಳಿ, ಕುರಿ, ಹರಕೆಳನ್ನು ಹರಕೆ ಹೊತ್ತವರು ತೀರಿಸಿದರು. ಮಕ್ಕಳಾಗದವರು, ಕಲ್ಯಾಣ ಆಗದವರು, ನೌಕರಿ ಸಿಗದವರು, ಪರೀಕ್ಷೆ ತೇರ್ಗಡೆ ಆಗದವರು, ದೀರ್ಘಕಾಲದ ಆರೋಗ್ಯ ಸಮಸ್ಯೆ ಎದುರಿಸುತ್ತಿರುವ ಭಕ್ತರು ಹರಕೆಯನ್ನು ದೇವರಿಗೆ ಅರ್ಪಿಸಿದರು.

15ಸಾವಿರ ಮಂದಿಗೆ ಅನ್ನಪ್ರಸಾದ

ಮಾರಿಕಾಂಬಾ ದೇವಸ್ಥಾನದಿಂದ ದೇಗುಲ ಹಿಂಬಾಗದಲ್ಲಿ ಅನ್ನಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಬುಧವಾರ ಸುಮಾರು 15ಸಾವಿರ ಮಂದಿ ಊಟ ಮಾಡಿದರು. ಅನ್ನ, ಸಾಂಬಾರ, ಪಲ್ಯ, ಪಾಯಸವನ್ನು ಮಂಜುನಾಥ ಹೆಮ್ಮಾಡಿ ನೇತೃತ್ವದಲ್ಲಿ ತಯಾರಿಸಿ ಬಡಿಸಲಾಯಿತು. ಇನ್ನು ನಗರದ ವಿವಿಧೆಡೆ ಸಂಘಸಂಸ್ಥೆಗಳವರು ಅನ್ನಪ್ರಸಾದ ವ್ಯವಸ್ಥೆ ಮಾಡಿದ್ದರು.

ಭರ್ಜರಿ ವ್ಯಾಪಾರ: ರಥೋತ್ಸವದ ಸಂದರ್ಭದಲ್ಲಿ ವ್ಯಾಪಾರಿಗಳು ಹೂವು, ಕೋಳಿ , ಬಾಜಳೆ ಹಣ್ಣು ಸೇರಿ ಹಲವು ಬಗೆಯ ವಸ್ತುಗಳ ಭರ್ಜರಿ ವ್ಯಾಪಾರ ನಡೆಸಿದ್ದು ವಿಶೇಷ. ರಥೋತ್ಸವದಲ್ಲಿ ತೇರಿಗೆ ಬಾಳೆ ಹಣ್ಣು ಎಸೆಯುವುದರಿಂದ ಅದನ್ನು ನೂರಕ್ಕೂ ವ್ಯಾಪಾರಸ್ಥರು ರಥೋತ್ಸವದುದ್ದಕ್ಕೂ ಮಾರಾಟ ಮಾಡಿದರು. ದೇವಿಯ ಭಾರ ಮೈಮೇಲೆ ಬರುವ ಪಾತ್ರಿಗಳು ಹೂಮಲೆ ಹಾಕಿಕೊಳ್ಳುವುದರಿಂದ ಇವುಗಳ ಮಾರಾಟಕ್ಕೆ ಮಾಲೆ ಕೈಹಿಡಿದು ಓಡಾಡುತ್ತಿದ್ದ ವ್ಯಾಪಾರಸ್ಥರು, ಅಡಕೆ ಸಿಂಗಾರ ಮಾರಾಟಗಾರರು ಕಂಡುಬಂತು. ಇನ್ನು ರಥಕ್ಕೆ ಹಾರುಗೋಳಿ ಹಾರಿಬಿಡುವ ಹರಕೆ ಹೊತ್ತ ಭಕ್ತರು ಇರುವುದರಿಂದ ಇದರ ವ್ಯಾಪಾರವೂ ಜೋರಾಗಿತು.

ಸಂಸ್ಕೃತಿ, ಸಂಸ್ಕಾರ ಅರಿವು ಅಗತ್ಯ: ಶ್ರೀಗಳು

ಅಂಕೋಲಾ: ಸಂಸ್ಕಾರದ ಕೊರತೆಯಿಂದ ಇಂದು ಸಮಾಜ ದಾರಿ ತಪ್ಪುತ್ತಿದ್ದು, ಮಕ್ಕಳಲ್ಲಿ ಬಾಲ್ಯದಿಂದಲೇ ಹಿಂದೂ ಸಂಸ್ಕೃತಿಯ ಹಿರಿಮೆ, ಆಚಾರ ವಿಚಾರಗಳನ್ನು ತಿಳಿ ಹೇಳುವ ಮೂಲಕ ಸರಿಯಾದ ದಾರಿ ತೋರಬೇಕಿದೆ ಹಿಂದೂ ಸಂಸ್ಕೃತಿಯಲ್ಲಿ ಸಂಸ್ಕಾರ ಅಡಗಿದ್ದು, ಅದನ್ನು ಅರಿಯುವ ಅಗತ್ಯತೆ ಇದೆ ಎಂದು ಸಿದ್ದಾಪುರ ಮನ್ನಲೆಮಾವಿನ ಮಠದ ಮಠಾಧೀಶ ಶ್ರೀ ಮಾಧವಾನಂದ ಭಾರತೀ ಶ್ರೀಗಳು ನುಡಿದರು.

ಅಂಕೋಲಾ ತಾಲೂಕು ಭಾವಿಕೇರಿ ಮಂಡಲದ ವತಿಯಿಂದ ಕೇಣಿಯ ವಿವೇಕಾನಂದ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದ್ದ ಹಿಂದೂ ಸಾಮಾಜೋತ್ಸವದ ಸಾನಿಧ್ಯ ವಹಿಸಿ ಮಾತನಾಡಿದ ಅವರು ಸಕಲರಿಗೂ ಒಳ್ಳೆಯದಾಗಬೇಕು ಜಗತ್ತೇ ಒಂದು ಕುಟುಂಬ ಎಂಬುದು ಹಿಂದೂ ಧರ್ಮದ ಮೂಲ ತತ್ವವಾಗಿದ್ದು, ಹಿಂದೂ ಸಂಸ್ಕೃತಿಯ ಕುರಿತಂತೆ ಪ್ರತಿಯೊಬ್ಬರೂ ಹೆಮ್ಮೆ ಪಡಬೇಕು ಎಂದು ಹೇಳಿದರು.

ಮುಖ್ಯ ವಕ್ತಾರರಾಗಿ ಕರ್ನಾಟಕ ಉತ್ತರ ಪ್ರಾಂತ ಸಹ ಬೌದ್ಧಿಕ ಪ್ರಮುಖ ರಾಮಚಂದ್ರ ಏಡಕೆ ಮಾತನಾಡಿ, ಹಿಂದುಗಳು ಸಂಘಟಿತರಾಗದಿದ್ದರೆ ಮುಂದಿನ ದಿನಗಳಲ್ಲಿ ಅಪಾಯ ಕಾದಿದೆ ಹಿಂದೂ ಸಮಾಜ ಸಂಘಟಿತರಾಗಿ ಧರ್ಮ ರಕ್ಷಣೆಯ ಜೊತೆಗೆ ರಾಷ್ಟ್ರ ರಕ್ಷಣೆಗೆ ಎದ್ದು ನಿಲ್ಲಬೇಕಿದೆ ಎಂದರು.

ಒಡೆದು ಆಳುವ ನೀತಿಯ ಮೂಲಕ ಹಿಂದೂ ಧರ್ಮದ ಮೇಲೆ ಪ್ರಹಾರ ಮಾಡಲಾಗುತ್ತಿದ್ದು, ಹಿಂದೂ ಸಂಘಟನಾ ಶಕ್ತಿಯನ್ನು ತೋರುವ ಕಾರ್ಯಕ್ರಮಗಳು ಹೆಚ್ಚಬೇಕಿದೆ ಎಂದರು.

ಹಿಂದೂ ಸಾಮಾಜೋತ್ಸವ ಭಾವಿಕೇರಿ ಮಂಡಲದ ಉಪಾಧ್ಯಕ್ಷ ಸಂದೀಪ ಬಂಟ ಮಾತನಾಡಿ, ಮುಂದಿನ ದಿನಗಳಲ್ಲಿ ಹಿಂದುಗಳು ಸಾಮಾಜಿಕವಾಗಿ ಒಗ್ಗೂಡುವ ಜೊತೆಗೆ ಶೈಕ್ಷಣಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರದಿಂದ ಬಾಳಬೇಕಿದೆ ಎಂದರು.

ಅಂಕೋಲಾ ತಾಲೂಕು ಹಿಂದೂ ಸಾಮಾಜೋತ್ಸವ ಸಮಿತಿಯ ಅಧ್ಯಕ್ಷ ನಾಗೇಶ ನಾಯ್ಕ, ಉಪಾಧ್ಯಕ್ಷ ಸತೀಶ ನಾಯ್ಕ ಉಪಸ್ಥಿತರಿದ್ದರು.

ಸಮಿತಿಯ ಅಧ್ಯಕ್ಷ ರಾಜೇಶ ನಾಯಕ ಸ್ವಾಗತಿಸಿದರು. ಸಂಜಯ ನಾಯ್ಕ ಕಾರ್ಯಕ್ರಮ ನಿರ್ವಹಿಸಿ ವಂದಿಸಿದರು.

ಕಾರ್ಯಕ್ರಮದ ಪ್ರಯುಕ್ತ ಕೇಣಿಯ ಮದ್ದಲೇಶ್ವರ ದೇವಾಲಯದಿಂದ ಆಕರ್ಷಕ ಶೋಭಾಯಾತ್ರೆ ರಾತ್ರಿ ಪೌರಾಣಿಕ ಯಕ್ಷಗಾನ ನಡೆಯಿತು.



ಧರ್ಮ ಜಾಗೃತಿ ಜ್ಯೋತಿ ರಥಯಾತ್ರೆಗೆ ಸ್ವಾಗತ

ದಾಂಡೇಲಿ: ಜಗದ್ಗುರು ರೇಣುಕಾಚಾರ್ಯರ ಜಯಂತಿ ಪ್ರಯುಕ್ತ ನಗರಕ್ಕಾಗಮಿಸಿದ ಧರ್ಮ ಜಾಗೃತಿ ಜ್ಯೋತಿಯ ರಥಯಾತ್ರೆಗೆ ಮೃತ್ಯುಂಜಯ ಮಠದ ಆವರಣದಲ್ಲಿ ವೀರಶೈವ ಲಿಂಗಾಯತ ಸೇವಾ ಟ್ರಸ್ಟ್ ಸಮಿತಿ ಹಾಗೂ ಬೇಡ ಜಂಗಮ ಸಮಾಜದ ವತಿಯಿಂದ ಬುಧವಾರ ಅದ್ದೂರಿಯಾಗಿ ಸ್ವಾಗತಿಸಿದರು.

ಮೃತ್ಯುಂಜಯ ಮಠಕ್ಕೆ ಆಗಮಿಸಿದ ಧರ್ಮ ಜಾಗೃತಿ ಜ್ಯೋತಿಯ ರಥಯಾತ್ರೆಯನ್ನು ಉದ್ದೇಶಿಸಿ ವೀರಶೈವ ಲಿಂಗಾಯತ ಸೇವಾ ಟ್ರಸ್ಟ್ ಸಮಿತಿ ಹಾಗೂ ಬೇಡ ಜಂಗಮ ಸಮಾಜದ ಉಪಾಧ್ಯಕ್ಷ ಗುರು ಮಠಪತಿಯವರು ಮಾತನಾಡಿ, ಸತತವಾಗಿ 11 ವರ್ಷಗಳಿಂದ ಧರ್ಮ ಜಾಗೃತಿ ಜ್ಯೋತಿಯ ರಥಯಾತ್ರೆಯು ಸಮಾಜದ ಜನರಲ್ಲಿ ಧರ್ಮದ ಬಗ್ಗೆ ಜಾಗೃತಿಯನ್ನು ಮೂಡಿಸುವ ನಿಟ್ಟಿನಲ್ಲಿ ಹಮ್ಮಿಕೊಳ್ಳಲಾಗಿದ್ದು, ಸರಿ ಸುಮಾರು 900 ಕಿಮೀವರೆಗೆ ಕ್ರಮಿಸುವ ಧರ್ಮ ಜಾಗೃತಿ ಜ್ಯೋತಿಯ ರಥವು ಶಂಭುಲಿಂಗ ಹಿರೇಮಠ ಅವರ ಸಾರಥ್ಯದಲ್ಲಿ ಯಶಸ್ವಿಯಾಗಿ ನಡೆಯುವುದರ ಜೊತೆಗೆ ಧರ್ಮದ ಅರಿವನ್ನು ಮೂಡಿಸುತ್ತಾ ಬಂದಿದೆ. ರಥ ಯಾತ್ರೆಯ ಮಾರ್ಗದ ಪಯಣ ಸುಖಮಯವಾಗಲೆಂದು ಶುಭ ಹಾರೈಸಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಸಮಾಜದತಾಲೂಕುಅಧ್ಯಕ್ಷಸಿದ್ದಪ್ಪಕುರುಗುಂದ ಮತ್ತು ಬೇಡ ಜಂಗಮ ಸಮಾಜ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಂಕ್ರಯ್ಯಾ ಹಿರೇಮಠ ಅವರು ಮಾತನಾಡಿ, ಧರ್ಮ ಜಾಗೃತಿ ಜ್ಯೋತಿಯ ರಥ ಯಾತ್ರೆಗೆ ಸಮಾಜದವರೆಲ್ಲರು ಸಹಕಾರ ನೀಡಬೇಕೆಂದರು.

ವೃತ್ತಿ ಚೈತನ್ಯ ರತ್ನ ಪ್ರಶಸ್ತಿ ಪುರಸ್ಕೃತರು ಹಾಗೂ ಸೊರಬ ತಾಲೂಕಿನ ಪಂಚಾಚಾರ್ಯ ಸೇವಾ ಸಮಿತಿ ಅಧ್ಯಕ್ಷ ಶಂಭುಲಿಂಗಯ್ಯ ಹಿರೇಮಠ ಮಾತನಾಡಿ, ಫೆ.24ರಿಂದ ಪ್ರಾರಂಭವಾದ ಧರ್ಮ ಜಾಗೃತಿ ಜ್ಯೋತಿಯ ರಥ ಯಾತ್ರೆಯು ಮಾ.1 ರಂದು ಬಾಳೆಹೊನ್ನೂರಿನ ರಂಭಾಪುರಿ ಪೀಠವನ್ನು ತಲುಪಿದ ನಂತರ ಸಂಪನ್ನಗೊಳ್ಳಲಿದೆ ಎಂದರು.

ಸಮಾಜದ ಪ್ರಮುಖರಾದ ಎಸ್.ಎಮ್.ಪಾಟೀಲ್, ಮಧುಕೇಶ್ವರಹಿರೇಮಠ, ಅಶೋಕ್ ಪಾಟೀಲ್, ಶಾರದಾ ಹಿರೇಮಠ,ಪಾರ್ವತಿ ಕುರುಗುಂದ್, ಮಾದೇವಪ್ಪ ಅಂದಕಾರ, ಲಿಂಗಯ್ಯ ಪೂಜಾರ, ಸಂಜಯ ಕಲ್ಯಾಣಿ, ಉಮಾ ಹನುಮಸಾಗರ, ಸುಜಾತಾ ಗಡದ, ನೇತ್ರಾ ರಿತ್ತಿ, ರೂಪಾ ರಿತ್ತಿ, ಶಾಂತಾ ಸಾವಳಗಿ, ರುದ್ರಪ್ಪ ತೊಟಗೇರ ಬಸಯ್ಯ ಹಿರೇಮಠ ಮತ್ತು ಬಲವಂತ ಬೊಮ್ಮನಹಳ್ಳಿ ಹಾಗೂ ಸಮಾಜ ಬಾಂಧವರು ಉಪಸ್ಥಿತರಿದ್ದರು.



ಅದ್ದೂರಿ ಮೈಲಾರಲಿಂಗೇಶ್ವರ ಜಾತ್ರಾ ಮಹೋತ್ಸವ

ಮುಂಡಗೋಡ: ತಾಲೂಕಿನ ಚವಡಳ್ಳಿ ಗ್ರಾಮದಲ್ಲಿರುವ ದೊಡ್ಡ ಆಲದ ಮರದ ಕೆಳಗೆ ಶ್ರೀ ಮೈಲಾರಲಿಂಗೇಶ್ವರ ಜಾತ್ರೆ ಮಹೋತ್ಸವ ಅದ್ದೂರಿಯಾಗಿ ನಡೆಯಿತು.

ಜಿಲ್ಲೆಯಲ್ಲಿಯೇ ಅತಿ ದೊಡ್ಡ ಆಲದ ಮರ ಎಂದು ಖ್ಯಾತಿ ಪಡೆದ ತಾಲೂಕಿನ ಚವಡಳ್ಳಿ ಹಾಗೂ ಕ್ಯಾಸನಕೇರಿ ಗ್ರಾಮಗಳ ಮಧ್ಯೆ ಇರುವ ಬೃಹದಾಕಾರದ ಆಲದ ಮರದ ಕೆಳಗೆ ಇರುವ ಮೈಲಾರಲಿಂಗೇಶ್ವರ ಜಾತ್ರಾ ಮಹೋತ್ಸವವು ಪ್ರತಿ ವರ್ಷದಂತೆ ಬುಧವಾರ ಜರುಗಿತು.

ಮಂಗಳವಾರ ರಾತ್ರಿ ಬಂಡಿ ಉತ್ಸವವು ಚವಡಳ್ಳಿ ಹಾಗೂ ಕ್ಯಾಸನಕೇರಿ ಗ್ರಾಮಗಳ ಭಜನೆ, ಜಾಂಜ ಮೇಳ, ಡೊಳ್ಳಿನ ಮಜಲು ಹಾಗೂ ಶಹನಾಯಿ ಇತ್ಯಾದಿ ವಾದ-ವೈಭವಗಳೊಂದಿಗೆ ಹೊರಟು ಏಳುಕೋಟಿ ಏಳುಕೋಟಿ ಏಳುಕೋಟಿಗ್ಯೋ ಛಾಂಗಮಲೋ ಎಂಬ ಘೋಷಣೆಯೊಂದಿಗೆ ಎರಡು ಗ್ರಾಮಗಳ ಮಧ್ಯವಿರುವ ಮೈಲಾರಲಿಂಗೇಶ್ವರನ ಸನ್ನಿಧಿಗೆ ಆಗಮಿಸಿ ಮಾಹಾಭಿಷೇಕ ಮಹಾಪೂಜೆ ನಡೆದವು.

ಬುಧವಾರ ಚವಡಳ್ಳಿ ಗ್ರಾಮದಲ್ಲಿ ಭಕ್ತರ ಜಯಘೋಷಗಳ ಮಧ್ಯೆ ಬಿಲ್ಲು ಏರಿದ ಗೊರವಪ್ಪ 'ಮಳೆ ಬೆಳೆ ಸಂಪಾತಲೇ ಪರಾಕ್' ಎಂದು ಕಾರ್ಣಿಕ ನುಡಿದರು. ವಿಶೇಷ ಪೂಜೆ ನಂತರ ಗದ್ದುಗೆ ಎದುರು ಕಟ್ಟಲಾಗಿದ್ದ ಏಳು ಕಬ್ಬಿಣದ ಸರಪಳಿಗಳನ್ನು ಏಳು ಕೋಟಿ, ಏಳು ಕೋಟಿ ಚಾಂಗಮಲೋ ಎನ್ನುತ್ತ ಕ್ಷಣಾರ್ಧದಲ್ಲಿ ಕೈಯಿಂದ ಸರಪಳಿ



ತುಂಡರಿಸಿ ಭಕ್ತಿಯ ಪರಾಕಾಷ್ಠೆ ಮೆರೆದರು. ಸರಪಳಿ ಪವಾಡ ನೋಡಲು ಆಲದ ಮರದ ಮೇಲೆ, ದೇವಸ್ಥಾನ ಆವರಣದಲ್ಲಿ ದೃಶ್ಯವನ್ನು ಭಕ್ತರು ಕಣ್ತುಂಬಿಕೊಂಡರು. ಕರಿ ಕಂಬಳಿಯನ್ನು ಹೊದ್ದುಕೊಂಡು, ಕೈಯಲ್ಲಿ ಡಮರುಗ ಬಾರಿಸುತ್ತ, ಭಕ್ತರಿಗೆ ಹಳದಿ ಭಂಡಾರ ಹಚ್ಚುತ್ತಿರುವ ಗೊರವಯ್ಯನವರ ದಂಡು ಜನರನ್ನು ಭಕ್ತಿಯ ಅಲೆಯಲ್ಲಿ ತೇಲಿಸಿತ್ತು. ಶಸ್ತ್ರಗಳನ್ನು ಹಾಕಿಸಿಕೊಂಡು ಭಕ್ತರು ದೇವರಿಗೆ ತಮ್ಮ ಹರಕೆಯನ್ನು ಅರ್ಪಿಸಿದರು. ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ನಡೆಯಿತು. ತಾಲೂಕಿನ ಸುತ್ತ-ಮುತ್ತಲಿನ ಹಳ್ಳಿಗಳ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು.

ಸರ್ಕಾರಿ ಭೂಮಿ ಕಬಳಿಕೆ: ಬಲಸೆ ಆರೋಪ

ಹೊನ್ನಾವರ: ಜಿಲ್ಲೆಯಲ್ಲಿ ಸರ್ಕಾರಿ ಜಮೀನುಗಳನ್ನು ಅಧಿಕಾರಿಗಳಿಗೆ ಆಮಿಷ ಒಡ್ಡಿ ಕಬಳಿಸುವ ಮೂಲಕ ಜನಪ್ರತಿನಿಧಿಗಳು ತಮ್ಮ ಆಪ್ತರ ಹೆಸರಿನಲ್ಲಿ ಬೇನಾಮಿ ಮಾಡಿಸುತ್ತಿದ್ದಾರೆ ಎಂದು ಸಾಮಾಜಿಕ ಹೋರಾಟಗಾರ ಮಾಸ್ತಪ್ಪ ನಾಯ್ಕ ಬಲಸೆ ಗಂಭೀರ ಆರೋಪ ಮಾಡಿದ್ದಾರೆ.

ಪಟ್ಟಣದ ಖಾಸಗಿ ಹೋಟೆಲನಲ್ಲಿ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿ, ನಾಲ್ಕು ಎಕರೆ ಭೂಮಿಯ ಮಾರುಕಟ್ಟೆಯ ಬೆಲೆ ಐವತ್ತು ಕೋಟಿ ರೂ.ಗಳಷ್ಟು ಆಗಬಹುದು ಎಂದರು.

ಭಟ್ಕಳ- ಹೊನ್ನಾವರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಪ್ರಭಾವಿ ರಾಜಕಾರಣಿಯೊಬ್ಬರು ಹೊನ್ನಾವರ ಪಟ್ಟಣದ ಪ್ರಭಾತನಗರದಲ್ಲಿರುವ ಬಹುಕೋಟಿ ರೂ. ಬೆಲೆಬಾಳುವ ನಾಲ್ಕು ಎಕರೆ ಸರ್ಕಾರಿ ಭೂಮಿಯನ್ನು ಬೇರೆ ನಾಲ್ಕು ಜನರ ಹೆಸರಿನಲ್ಲಿ ಮಾಡಿಕೊಂಡು ಕಬಳಿಸಿದ್ದಾರೆ ಎಂದು

ಪಟ್ಟಣದ ಪ್ರಭಾತನಗರದ ಸರ್ವೆ ನಂಬರ್ 238 ಹಾಗೂ 239ರಲ್ಲಿ ನಾಲ್ಕು ಎಕರೆ ಸರ್ಕಾರಿ ಭೂಮಿಯನ್ನು ಕಬಳಿಸಲಾಗಿದೆ ಎಂದು ಅವರು ಆರೋಪಿಸಿದರು.

1974 ರಲ್ಲಿ ಮತ್ತು 2004 ರಲ್ಲಿ ಎರಡು ಸಲವೂ ಈ ಭೂಮಿ ಸರ್ಕಾರಕ್ಕೆ ಸೇರಿದ್ದು ಎಂದು ಈ ಹಿಂದೇಯೆರ ಆದೇಶವಾಗಿದೆ. ಈ ಭೂಮಿಯನ್ನು 12



ಜನವರಿ 2026ರಂದು ಭೂ ನ್ಯಾಯ ಮಂಡಳಿಯಲ್ಲಿ ನಾಲ್ಕು ಜನರ ಹೆಸರಿಗೆ ಮಂಜೂರಾತಿ ಮಾಡಿ ಆದೇಶ ಮಾಡಲಾಗಿದೆ. ಪ್ರಭಾವಿ ರಾಜಕಾರಣಿಗಳು ಅಧಿಕಾರಿಗಳ ಮೇಲೆ ತಮ್ಮ ಪ್ರಭಾವ ಬಳಸಿ ನಾಲ್ಕು ಜನರ ಹೆಸರಿಗೆ ಮಂಜೂರಾತಿ ಮಾಡಿಸಿಕೊಂಡಿದ್ದಾರೆ ಎಂದು ಆರೋಪಿಸಿದರು.

ಇದು ರದ್ದಾಗಿ ವಾಪಸ್ ಸರ್ಕಾರಿ ಭೂಮಿಯಾಗಬೇಕು. ಸಾರ್ವಜನಿಕ ಉಪಯೋಗಕ್ಕೆ ಬಳಕೆಯಾಗಬೇಕು. ಈ ಅಕ್ರಮ ಮಂಜೂರಾತಿ ವಿರುದ್ಧ ನ್ಯಾಯಾಲಯದ ಮೊರೆ ಹೋಗುವುದಾಗಿ ತಿಳಿಸಿದರು.

ದಿನೇಶ ಮಡಿವಾಳ, ಬಾಸ್ಕರ ದೇವಾಡಿಗ, ಯೋಗೇಶ ಶೆಟ್ಟಿ, ನವೀನ ನಾಯ್ಕ, ವಿಶ್ವ ನಾಯ್ಕ, ಪ್ರದೀಪ ಮಡಿವಾಳ, ವಾಸು ಗೊಂಡ, ಮಾಸು ನಾಯ್ಕ, ರಾಜೇಶ ಬಳ್ಕೂರು, ಹರೀಶ ಗೌಡ ಉಪಸ್ಥಿತರಿದ್ದರು.

ಮಾ.3ಕ್ಕೆ ಬೆಳಂಬಾರ ಸುಗ್ಗಿ ತಾಲೂಕು ಕಚೇರಿಗೆ



ಅಂಕೋಲಾ: ರಾಜ್ಯದಲ್ಲಿಯೆ ಪ್ರಸಿದ್ಧಿ ಪಡೆದ ಬೆಳಂಬಾರ ಸುಗ್ಗಿ ನಿನ್ನೆ ಬೆಳಂಬಾರ ಗೌಡರ ಮನೆಯಲ್ಲಿ 'ಬಂದಿ' ಹಾಕುವ ಮೂಲಕ ಆರಂಭವಾಗಿದ್ದು, ಆರೇಳು ದಿನಗಳ ಸಂಭ್ರಮಾಚರಣೆಯಲ್ಲಿ ಮಿರಾಶಿ ಜಾಗರ ಮುಗಿಸಿ ಮಾ.3ರಂದು ಹೋಳಿ ಹುಣ್ಣಿಮೆಯು ದಿನ ಸುಗ್ಗಿ ಕಚೇರಿಗೆ ಬರುತ್ತದೆ. ಅಂದು ತಾಲೂಕಿನ ಮುಖ್ಯ ಬೀದಿಯಲ್ಲಿ ಸಹಸ್ರಾರು ಸಂಖ್ಯೆಯು ಕಿಕ್ಕಿರಿದ ಜನರ ಮಧ್ಯೆ ನೂರಾರು ಹಗರಣಗಳೊಂದಿಗೆ ಸುಗ್ಗಿ ತಾಲೂಕು ಕಚೇರಿಯಲ್ಲಿ ಸ್ವಾತಂತ್ರ್ಯ ಪೂರ್ವ ಬ್ರಿಟಿಷ್ ಅಮಲ್ದಾರ ಕಾಲದಿಂದಲೂ ಅನೂಚಾನವಾಗಿ ನಡೆದುಕೊಂಡು ಬಂದ 'ಕಚೇರಿ ಗೌರವ ತಸ್ತಿಕ್ ಹಕ್ಕು' ಸ್ವೀಕರಿಸಲು ಬರುತ್ತದೆ.

ಅಂದಿನ ದಿನ ಪ್ರತಿ ವರ್ಷದಂತೆ ಸಹಸ್ರಾರು ಸಂಖ್ಯೆಯಲ್ಲಿ ಜನರು ಸಂಭ್ರಮಾಚರಣೆಯಲ್ಲಿ ಪಾಲ್ಗೊಳ್ಳಬೇಕೆಂದು ಊರ ಗೌಡರಾದ ಷಣ್ಮುಖ ಗೌಡ ಮತ್ತು ಬುದವಂತ ಕೊಲಕಾರ ಹತ್ತು ಮಂದಿಯನ್ನೊಳಗೊಂಡ ಬೆಳಂಬಾರ ಸುಗ್ಗಿ ಸಮಿತಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಆತ್ಮ ತೃಪ್ತಿಗಾಗಿ ಸಮಾಜ ಸೇವೆ ಮಾಡಲಿ: ನಾಯಕ

ಅಂಕೋಲಾ: ಇಂದಿನ ದಿನಗಳಲ್ಲಿ ಸಮಾಜ ಸೇವೆಯೆನ್ನುವುದು ತೋರಿಕೆಗಾಗಿ, ಪ್ರಚಾರಕ್ಕಾಗಿ ಮಾಡುವ ಸರಕಾಗಿರುವುದು ವಿಷಾದದ ಸಂಗತಿ. ಆತ್ಮ ತೃಪ್ತಿಗಾಗಿ ಮಾಡುವ ಸೇವೆಯು ಮನಸ್ಸಿಗೆ ಸಂತೃಪ್ತಿಯನ್ನು ತರುತ್ತದೆ. ಶತಮಾನದ ಇತಿಹಾಸವುಳ್ಳ ಮಾನವ ಸೇವೆಯನ್ನು ಧ್ಯೇಯವನ್ನಾಗಿಸಿಕೊಂಡ ಲಯನ್ಸ್ ಅಂತರಾಷ್ಟ್ರೀಯ ಸೇವಾ ಸಂಸ್ಥೆಯ ಸದಸ್ಯರಾಗುವುದೇ ಸೌಭಾಗ್ಯವೆಂದರು.

ಜಗತ್ತಿನ 212 ರಾಷ್ಟ್ರಗಳಲ್ಲಿ ವ್ಯಾಪಿಸಿರುವ ಲಯನ್ಸ್ ಸಂಸ್ಥೆ 14 ಲಕ್ಷ ನಿಸ್ವಾರ್ಥ ಲಯನ್ಸ್ ಸದಸ್ಯರನ್ನು ಹೊಂದಿದೆ. ಪರಿಸರ, ಹಸಿವು ನಿವಾರಣೆ, ಕಣ್ಣಿನ ಆರೋಗ್ಯ, ಯುವ ಜನರ ಏಳ್ಗೆ, ಚಿಕ್ಕಮಕ್ಕಳ ಕ್ಯಾನ್ಸರ್ ಬಗ್ಗೆ ತಿಳುವಳಿಕೆ ನೀಡುವ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿದೆ ಎಂದು ಲಯನ್ಸ್ ಝೋನ್ ಪರ್ಸನ್ ಎಂಜೆಎಫ್ ಮಂಗಲಾ ನಾಯಕ ಹೇಳಿದರು. ಅವರು 317ಬಿ ಯ 12 ನೇ ರೀಜನ್‌ನ 3 ನೇ ಝೋನಿನ ಸಲಹಾ ಸಮಿತಿಯ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ಅಂಕೋಲೆಯ ಸಪ್ನಾ ಕಂಪರ್ಟ್ಸ್‌ನಲ್ಲಿ ಲಯನ್ಸ್ ಕ್ಲಬ್ ಅಂಕೋಲಾ ಕರಾವಳಿ ಏರ್ಪಡಿಸಿದ ಈ ಸಮಾವೇಶದಲ್ಲಿ, ಮುರ್ಡೇಶ್ವರ, ಕುಮಟಾ, ಹೊನ್ನಾವರ, ಅಂಕೋಲಾ ಲಾಯನ್ಸ್ ಕ್ಲಬ್‌ನ ಪದಾಧಿಕಾರಿಗಳು ಲಯನ್ಸ್ ಸದಸ್ಯರು ಭಾಗವಹಿಸಿದ್ದರು. ವಿವಿಧ ಲಯನ್ಸ್ ಕ್ಲಬ್‌ಗಳ ಈವರೆಗಿನ ಸಾಧನೆ ಹಾಗೂ ಮುಂದಿನ



ಯೋಜನೆಗಳ ಕುರಿತು ಸಮಗ್ರ ಚರ್ಚೆ ನಡೆಯಿತು. ಲಯನ್ಸ್ ಸದಸ್ಯರಾದ ಗಣಪತಿ ನಾಯಕ, ಮಂಜುನಾಥ ನಾಯಕ, ದುರ್ಗಾನಂದ ದೇಸಾಯಿ, ಕೇಶವಾನಂದ ನಾಯಕ, ಜಿ.ಆರ್.ತಾಂಡೇಲ, ಚೈನ್ ಸಿಂಗ್ ಚವ್ಹಾಣ ಮಾಜಿ ಗವರ್ನರ್ ಗಿರೀಶ ಕುಚಿನಾಡ, ರೀಜನ್ ಚೇರ್‌ಪರ್ಸನ್ ಆರ್.ಸಿ.ರಾಜೇಶ ಸಾಲೆಹಿತ್ತಲ ಉಪಸ್ಥಿತರಿದ್ದರು.

ಕ್ಯಾನ್ಸರ್ ರೋಗಿಗೆ 25 ಸಾವಿರ ರೂಪಾಯಿ ದಾನ ನೀಡಿದ ದಾನಿ ಅರುಣ ಅಂಕೋಲೆಕರ ಅವರನ್ನು ಸನ್ಮಾನಿಸಲಾಯಿತು. ಲಯನ್ಸ್ ಹಿರಿಯ ಸದಸ್ಯ ಮಹಾಂತೇಶ ರೇವಡಿ ಪ್ರಾಸ್ತಾವಿಕವಾಗಿ ಮಾತನಾಡಿ ಕಾರ್ಯಕ್ರಮ ನಿರೂಪಿಸಿದರು. ಸಂಜಯ ಅರುಂಧೇಕರ ಧ್ವಜವಂದನೆ ಕಾರ್ಯಕ್ರಮ ನಿರ್ವಹಿಸಿದರು. ಕಾರ್ಯದರ್ಶಿ ಕೆ.ಎಮ್.ಗೌಡ ವರದಿ ವಾಚಿಸಿದರು. ದೇವಾನಂದ ಗಾಂವಕರ ಸಾಂದರ್ಭಿಕವಾಗಿ ಮಾತನಾಡಿದರು. ಸದಾನಂದ ಶೆಟ್ಟಿ ವಂದಿಸಿದರು.

ಎಲೆ ಚುಕ್ಕೆ ರೋಗ ನಿವಾರಣೆಗೆ ಕ್ರಮ ಕೈಗೊಳ್ಳಿ

ಕುಮಟಾ: ಹತ್ತಾರು ವರ್ಷಗಳ ಕಾಲ ಸಾಕಿದ ಅಡಿಕೆ ಮರಗಳು ವಿವಿಧ ರೋಗಗಳಿಗೆ ತುತ್ತಾಗಿ ಬಲಿಯಾಗುತ್ತಿದ್ದರೆ, ಇತ್ತ ಎಲೆಚುಕ್ಕೆ ರೋಗವು ರೈತರನ್ನು ಕಾಡುತ್ತಿರುವುದು ಕಳವಳಕಾರಿ ಎಂದು ಪ್ರಗತಿ ಪರ ಕೃಷಿಕ ಸಿ.ಜಿ.ಹೆಗಡೆ ಅಸಮಾಧಾನ ವ್ಯಕ್ತಪಡಿಸಿದರು.

ತಾಲೂಕಿನ ಕಲ್ಲಬ್ಬೆಯ ನಂದಿಕೇಶ್ವರ ಸಭಾಭವನದಲ್ಲಿ ನಡೆದ ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟಗಳ ನಿರ್ವಹಣೆ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಅಡಿಕೆ ಬೆಳೆಗಾರರು ಕೊಳೆ ರೋಗಕ್ಕೆ ಹೈರಾಣಾಗಿದ್ದಾರೆ. ಈ ನಡುವೆ ಎಲೆ ಚುಕ್ಕೆ ರೋಗದಿಂದ ಕಂಗಾಲಾಗಿದ್ದು, ಸರ್ಕಾರ ರೈತರಿಗೆ ಅನುಕೂಲತೆ ಮಾಡಿಕೊಡಬೇಕು. ಕರಾವಳಿ ಭಾಗದಲ್ಲಿ ಅಡಿಕೆ ಬೆಳಯುವ ಬೆಳೆಗಾರರು ಕಡಿಮೆ ಜಾಗದಲ್ಲಿ ಬೆಳೆ ಬೆಳೆಯಲಾಗುತ್ತಿದೆ. ಅಡಿಕೆ ಬೆಳೆಗಳನ್ನು ಮಕ್ಕಳಂತೆ ರಕ್ಷಣೆ ಮಾಡಿಕೊಂಡು ಬಂದಿದ್ದೇವೆ. ಅಡಿಕೆಗೆ ಚೆನ್ನದ ಬೆಲೆ



ಬಂದರೂ ಕೂಡ ಎಲೆ ಚುಕ್ಕೆ ರೋಗ ಎದುರಾಗಿದ್ದರಿಂದ ರೈತರು ಸಂಕಷ್ಟದ ಪರಿಸ್ಥಿತಿಯಲ್ಲಿ ದಿನ ಕಳೆಯುವ ಸ್ಥಿತಿ ನಿರ್ಮಾಣವಾಗಿದೆ ಎಂದರು.

ಶಿರಸಿ ತೋಟಗಾರಿಕೆ ಕಾಲೇಜಿನ ಉಪನ್ಯಾಸಕ ಡಾ.ಪ್ರಸಾದ ರೈತರಿಗೆ ರೋಗಬಾದೆಗಳ ಬಗ್ಗೆ ಮಾಹಿತಿ ನೀಡಿ, ಮಳೆಗಾಲದ ಮುನ್ನ ಅಂದರೆ ಏಪ್ರಿಲ್ ಮತ್ತು ಮೇ ಸಮಯದಲ್ಲಿ ಬೋರ್ಡೋ ಮಿಶ್ರಣ ಸಿಂಪಡಿಸಬೇಕು. ಮಣ್ಣು ಪರೀಕ್ಷೆ ನಡೆಸಿ ಪೊಟ್ಯಾಷ್ ಗೊಬ್ಬರವನ್ನು ಸಮತೋಲಿತವಾಗಿ ನೀಡಬೇಕು. ಎಲೆ ಚುಕ್ಕೆ ರೋಗ ಕಂಡುಬಂದ ತೋಟಗಳಿಗೆ ಹೆಚ್ಚಿನ ಪೊಟ್ಯಾಷ್ ಹಾಕಬೇಕು ಎಂದು ವಿವಿಧ ರೋಗಗಳ ನಿಯಂತ್ರಣಾ ಕ್ರಮ ಮತ್ತು ಅನುಸರಿಸಬೇಕಾದ ವಿಧಾನಗಳ ಬಗ್ಗೆ ಸಮಗ್ರ ಮಾಹಿತಿ ನೀಡಿದರು.

ಸುರೇಶ ತಿಮ್ಮಣ್ಣ ಭಟ್ಟ ಅಧ್ಯಕ್ಷತೆ ವಹಿಸಿದ್ದರು, ಪ್ರಮುಖರಾದ ಗೋವಿಂದ ಭಟ್ಟ, ವಿನಾಯಕ ಭಟ್ಟ, ಎನ್.ಎಸ್.ಹೆಗಡೆ, ಪ್ರದೀಪ ಕುಮಾರ್, ಗಣಪತಿ ನಾಯ್ಕ ಇತರರಿದ್ದರು.

ಹೊನ್ನಾವರ, ಕುಮಟಾ, ಅಂಕೋಲಾ ಸೇರಿ ನೂರಕ್ಕೂ ಹೆಚ್ಚು ರೈತರು ಪಾಲ್ಗೊಂಡು ಕಾರ್ಯಾಗಾರದ ಪ್ರಯೋಜನ ಪಡೆದರು.

ಕಿರುಸುದ್ದಿ

ಪ್ರೇಮವಾಹಿನಿ ರಥಯಾತ್ರೆ: ವಿಶೇಷ ಪೂಜೆ

ಹಾವೇರಿ: ಸತ್ಯಸಾಯಿ ಬಾಬಾರವರ ಅವತರಣ ಶತಮಾನೋತ್ಸವ ಪ್ರಯುಕ್ತ ಸಾಯಿಬಾಬಾರ ದಿವ್ಯಾವತಾರದ ಸೌರಭವನ್ನು ಹಾಗೂ ದಿವ್ಯಪ್ರೇಮದ ಸಂದೇಶಕಾರರು ಹಮ್ಮಿಕೊಂಡಿದ್ದ ಸತ್ಯಸಾಯಿ ಪ್ರೇಮವಾಹಿನಿ ರಥಯಾತ್ರೆ ಬುಧವಾರ ತಾಲೂಕಿನ ಅಗಡಿಯ ಆನಂದವನದ ಶ್ರೀ ಶೇಷಾಚಲ ಮಠಕ್ಕೆ ಆಗಮಿಸಿತು. ಹಾವೇರಿ ನಗರದಿಂದ ಬೆಳಗ್ಗೆ ಕರ್ಜಗಿ ಗ್ರಾಮಕ್ಕೆ ತೆರಳಿ ನಂತರ ಅಗಡಿಯ ಆನಂದವನದಲ್ಲಿ ರಥಯಾತ್ರೆಯನ್ನು ಆನಂದವನದ ಪರಮ ಪೂಜ್ಯ ಗುರುದತ್ತಮೂರ್ತಿ ಚಕ್ರವರ್ತಿ ಸ್ವಾಮೀಜಿ ರಥಯಾತ್ರೆಗೆ ವಿಶೇಷ ಪೂಜೆಸಲ್ಲಿಸಿ, ಮಠದ ಮಹಾದ್ವಾರದಲ್ಲಿ ಶೇಷಾಚಲ ಸದ್ಗುರು ಪ್ರೌಢ ಶಾಲೆಯ ವಿದ್ಯಾರ್ಥಿಗಳಿಂದ ಪುಷ್ಪವೃಷ್ಟಿ ನಡೆಯಿತು ನಂತರ ಪಾದುಕಾ ನಮಸ್ಕಾರ ಮತ್ತು ವಿಭೂತಿ ಪ್ರಸಾದ ಪಡೆದು ಆಗಮಿಸಿದ ಭಕ್ತರು ಪುನಿತರಾದರು.

ರಾಷ್ಟ್ರೀಯ ಪ್ರಶಸ್ತಿಗೆ ಡಾ.ಇಸ್ಮಾಯಿಲ್ ಮುಲ್ಲಾ ಆಯ್ಕೆ

ತಡಸ: ಇಲ್ಲಿನ ಡಾ.ವಿ. ಬಿ. ಹಿರೇಮಠ ಮಹಾವೇದಿಕೆ, ಅಶ್ವಿನಿ ಪ್ರಕಾಶನ ಹಾಗೂ ಡಾ.ವಿ. ಬಿ. ಹಿರೇಮಠ ಮೆಮೋರಿಯಲ್ ಪ್ರತಿಷ್ಠಾನದ ಸಂಯುಕ್ತ ಆಶ್ರಯದಲ್ಲಿ ನೀಡಲಾಗುವ ಪ್ರತಿಷ್ಠಿತ ಶ್ರೀ ಗುರು ಪುಟ್ಟರಾಜ ಕವಿ ಗವಾಯಿಗಳವರ ಸದ್ಭಾವನಾ ರಾಷ್ಟ್ರೀಯ ಪ್ರಶಸ್ತಿಗೆ ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲೂಕಿನ ತಡಸ ಗ್ರಾಮದ ಖ್ಯಾತ



ಪಾರಂಪರಿಕ ನಾಟಿ ವೈದ್ಯರಾದ ಡಾ.ಇಸ್ಮಾಯಿಲ್ ಮುಲ್ಲಾ ಅವರು ಆಯ್ಕೆಯಾಗಿದ್ದಾರೆ. ಲಿಂಗೈಕ್ಯ ಪಂಡಿತ ಪುಟ್ಟರಾಜ ಕವಿ ಗವಾಯಿಗಳವರ 112ನೇ ಜಯಂತ್ಯೋತ್ಸವ ಸಮಾರಂಭದ ಅಂಗವಾಗಿ ವೈದ್ಯಕೀಯ ಕ್ಷೇತ್ರದಲ್ಲಿ ಅವರು ಸಲ್ಲಿಸಿದ ಗಣನೀಯ ಸೇವೆಯನ್ನು ಪರಿಗಣಿಸಿ ಈ ಗೌರವಕ್ಕೆ ಆಯ್ಕೆ ಮಾಡಲಾಗಿದೆ. ಡಾ. ಇಸ್ಮಾಯಿಲ್ ಮುಲ್ಲಾ ಅವರು ದಶಕಗಳಿಂದ ಪಾರಂಪರಿಕ ನಾಟಿ ವೈದ್ಯ ಪದ್ಧತಿಯ ಮೂಲಕ ಜನಸಾಮಾನ್ಯರ ಆರೋಗ್ಯ ರಕ್ಷಣೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಕೇವಲ ವೈದ್ಯಕೀಯ ಕ್ಷೇತ್ರ ಮಾತ್ರವಲ್ಲದೆ, ಕಲೆ, ಸಾಹಿತ್ಯ, ಸಂಗೀತ ಮತ್ತು ರಂಗಭೂಮಿ ಚಟುವಟಿಕೆಗಳಿಗೆ ಬೆಂಬಲ. ಜಾನಪದ, ಕೃಷಿ ಹಾಗೂ ಸಾಮಾಜಿಕ ಸೌಹಾರ್ದತೆಯ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿನ ಅವರ ನಿರಂತರ ಸಾಧನೆ ಹಾಗೂ ಸಮಾಜಮುಖಿ ಕಳಕಳಿಯನ್ನು ಗುರುತಿಸಿ ರಾಷ್ಟ್ರೀಯ ಪ್ರಶಸ್ತಿಯನ್ನು ಘೋಷಿಸಿದೆ.

ಜಿಲ್ಲೆಯ ವಿವಿಧೆಡೆ ಮಳೆ

ಹಾವೇರಿ: ಜಿಲ್ಲೆಯ ವಿವಿಧೆಡೆ ಬುಧವಾರ ಸಂಜೆ ಕೆಲಕಾಲ ಮಳೆಯಾಗಿದ್ದು, ವಾತಾವರಣ ತಂಪಾಗಿದೆ. ಜಿಲ್ಲೆಯಾದ್ಯಂತ ದಿನವಿಡಿ ಬಿಸಿಲಿನ ವಾತಾವರಣ ಹಿನ್ನೆಲೆಯಲ್ಲಿ ಸೆಕೆ ಹೆಚ್ಚಾಗಿತ್ತು. ಸಂಜೆ ಏಕಾಏಕಿ ಗಾಳಿಯೊಂದಿಗೆ ಅಲ್ಲಲ್ಲಿ ಅಲ್ಪ ಪ್ರಮಾಣದಲ್ಲಿ ಮಳೆಯಾಗಿದೆ. ಹಾವೇರಿ, ಶಿಗ್ಗಾವಿ, ಸವಣೂರು ತಾಲೂಕಿನ ವಿವಿಧ ಭಾಗದಲ್ಲಿ ಮಳೆ ಸುರಿದಿದೆ. ರಾಣಿಬೆನ್ನೂರ, ರಟ್ಟೀಹಳ್ಳಿ ಹಿರೇಕೆರೂರು ತಾಲೂಕಿನಲ್ಲಿ ಮೋಡ ಕವಿತ ವಾತಾವರಣ ಕಂಡು ಬಂದಿತು. ಕಳೆದ ಎರಡು ದಿನಗಳಿಂದ ಅಲ್ಲಲ್ಲಿ ಅಕಾಲಿಕವಾಗಿ ಮಳೆಯಾಗುತ್ತಿದ್ದರಿಂದ ಬೆಳೆಗಳ ಒಕ್ಕಲುತನದಲ್ಲಿ ತೊಡಗಿರುವ ರೈತರು ಸಮಸ್ಯೆ ಎದುರಿಸುವಂತಾಗಿದೆ.

ಮಾ.1ಕ್ಕೆ ರಾಜ್ಯ ಪೊಲೀಸ್ ಓಟ

ಹಾವೇರಿ: ಕರ್ನಾಟಕ ರಾಜ್ಯ ಪೊಲೀಸ್ ಓಟ (ಕರ್ನಾಟಕ ಸ್ಟೇಟ್ ಪೊಲೀಸ್ ರನ್) ರ 10 ಕಿ.ಮೀ. ಹಾಗೂ 5 ಕಿ.ಮೀ ಓಟ ಮಾ.1ರಂದು ಬೆಳಿಗ್ಗೆ 6.30ಗಂಟೆಗೆ ಹಾವೇರಿ ನಗರದ ಜಿಲ್ಲಾ ಪೊಲೀಸ್ ಕಚೇರಿ ಆವರಣದಿಂದ ಆರಂಭಗೊಳ್ಳಲಿದೆ. ಎಸ್‌ಬಿಐ ಅಧಿಕಾರಿ ಮತ್ತು ಸಿಬ್ಬಂದಿಗಳು, ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಹಾಗೂ ಸಾರ್ವಜನಿಕರಿಗೆ ಸೇರಿ ಮೂರು ವಿಭಾಗಗಳಲ್ಲಿ ಜರುಗಲಿದೆ ಎಂದು ಪೊಲೀಸ್ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ವಾರ್ಷಿಕೋತ್ಸವ

ಹಾನಗಲ್ಲ: ತಾಲೂಕಿನ ವರ್ದಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಯ ವಾರ್ಷಿಕೋತ್ಸವ ಫೆ.26ರಂದು ಸಂಜೆ 5 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಶಾಸಕ ಶ್ರೀನಿವಾಸ ಮಾನೆ ಕಾರ್ಯಕ್ರಮ ಉದ್ಘಾಟಿಸಲಿದ್ದು, ಬಿಇಒ ಆರ್.ವಿ.ಚಿನ್ನಿಕಟ್ಟಿ, ಜನಪ್ರತಿನಿಧಿಗಳು, ಗಣ್ಯರು, ಎಸ್ಡಿಎಂಸಿ ಅಧ್ಯಕ್ಷರು, ಸದಸ್ಯರು, ಊರಿನ ನಾಗರಿಕರು, ಪಾಲಕರು ಪಾಲ್ಗೊಳ್ಳಲಿದ್ದಾರೆ. ಸಂಜೆ 6 ಗಂಟೆಯಿಂದ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ ಎಂದು ಮುಖ್ಯಾಧ್ಯಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಹಾವೇರಿ: ಸತ್ಯಸಾಯಿ ಬಾಬಾರವರ ಅವತರಣ ಶತಮಾನೋತ್ಸವ ಪ್ರಯುಕ್ತ ಸಾಯಿಬಾಬಾರ ದಿವ್ಯಾವತಾರದ ಸೌರಭವನ್ನು ಹಾಗೂ ದಿವ್ಯಪ್ರೇಮದ ಸಂದೇಶಕಾರರು ಹಮ್ಮಿಕೊಂಡಿದ್ದ ಸತ್ಯಸಾಯಿ ಪ್ರೇಮವಾಹಿನಿ ರಥಯಾತ್ರೆ ಬುಧವಾರ ತಾಲೂಕಿನ ಅಗಡಿಯ ಆನಂದವನದ ಶ್ರೀ ಶೇಷಾಚಲ ಮಠಕ್ಕೆ ಆಗಮಿಸಿತು. ರಥಕ್ಕೆ ವಿಶೇಷ ಪೂಜೆ ಸಲ್ಲಿಸಿ ಸ್ವಾಗತಿಸಿದರು.

ಹಿಂದಿನ ಕಾಲದ ಆಹಾರ ಪದ್ಧತಿ ಬಳಸಿ: ಕೋಡದ

ರಾಣೇಬೆನ್ನೂರ: ಹಳೆಯ ಕಾಲದ ಆಹಾರ ಪದ್ಧತಿಯು ಮಣ್ಣಿನ ಮಡಿಕೆಯಲ್ಲಿ ಸೌದೆ ಒಲೆಯಲ್ಲಿ ಬೇಯಿಸಿದ ತಾಜಾ, ಪೌಷ್ಟಿಕ ಮತ್ತು ಸಾತ್ವಿಕ ಆಹಾರವನ್ನು ಒಳಗೊಂಡಿತ್ತು. ಸಿರಿಧಾನ್ಯಗಳು, ಹಣ್ಣು-ತರಕಾರಿ ಮತ್ತು ಋತುಮಾನಕ್ಕೆ ತಕ್ಕ ಆಹಾರದ ಸೇವನೆ, ಅತಿಯಾದ ಒತ್ತಡವಿಲ್ಲದ ಅಡುಗೆ ಮತ್ತು ನೈಸರ್ಗಿಕ ರುಚಿಕಾರಕಗಳ ಬಳಕೆಯೇ ಇದರ ಪ್ರಮುಖ ವೈಶಿಷ್ಟ್ಯಗಳಾಗಿದ್ದವು. ಇದು ಜೀರ್ಣಕ್ರಿಯೆಗೆ ಉತ್ತಮ ಮತ್ತು ದೀರ್ಘಾಯುಷ್ಯ ನೀಡುತ್ತಿತ್ತು ಎಂದು ಪ್ರಾ. ಪ್ರಭುಲಿಂಗ ಕೋಡದ ಹೇಳಿದರು. ಇಲ್ಲಿನ ರಾಜ-ರಾಜೇಶ್ವರಿ ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ ಸಹಯೋಗದಲ್ಲಿ ನಡೆದ ಸಂಸ್ಕೃತಿ ಸಂಭ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಇಂದಿನ ಆಹಾರ ಪದ್ಧತಿಯಲ್ಲಿ ಫಾಸ್ಟ್‌ಫುಡ್ ಸೇವನೆ, ವ್ಯಾಯಾಮದ ಇಲ್ಲದಿರುವುದು. ಒತ್ತಡ ಜೀವನದಿಂದಾಗಿ ಹೃದಯ ಖಾಯಿಲೆ, ಮಧುಮೇಹ, ಅಧಿಕ ರಕ್ತದೊತ್ತಡ ಸೇರಿದಂತೆ ಅನೇಕ ಕಾಯಿಲೆಗಳಿಂದ ಬಳಲುತ್ತಿರುವುದು ಸರ್ವೆ ಸಾಮಾನ್ಯವಾಗಿದೆ. ಆದ್ದರಿಂದ ನಾವು ಮರಳಿ ಹಳೆ ಕಾಲದ ಆಹಾರ ಪದ್ಧತಿಯನ್ನು ಜೀವನದಲ್ಲಿ ಅಳವಡಿಸಿಕೊಂಡಲ್ಲಿ ಆರೋಗ್ಯವಾಗಿ ಜೀವನ ನಡೆಸಬಹುದು ಎಂದರು. ಪ್ರೊ.ಎಮ್.ಎನ್ ಸೂರಣಗಿ ಅಧ್ಯಕ್ಷತೆ ವಹಿಸಿದ್ದರು. ಸುಮಾ ಕೊರವರ, ಪ್ರೊ. ನಾಗರಾಜ ಗವಿಯಪ್ಪನವರ ಪ್ರೊ. ವೀರೇಶ ಕುರಹಟ್ಟಿ, ಅಫ್ರೀನ್ ಕಿತ್ತೂರ, ಕೌಶಲ್ಯ ರಾಮಪ್ಪನವರ, ಪ್ರೊ. ಶೋಭಾ ದೊಡ್ಡನಾಗಳ್ಳಿ, ಪ್ರೊ. ಸಾಯಿಲತಾ ಮಡಿವಾಳರ ಸೇರಿದಂತೆ ಮತ್ತಿತರರು ಇದ್ದರು.



ರಾಣೇಬೆನ್ನೂರ: ಇಲ್ಲಿನ ರಾಜ-ರಾಜೇಶ್ವರಿ ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ ಸಹಯೋಗದಲ್ಲಿ ನಡೆದ ಸಂಸ್ಕೃತಿ ಸಂಭ್ರಮವನ್ನುಪ್ರಾ. ಪ್ರಭುಲಿಂಗ ಕೋಡದ ಉದ್ಘಾಟಿಸಿದರು.

ಪರೀಕ್ಷೆ ಪೂರ್ವಭಾವಿ ಸಭೆ | ಎಡಿಸಿ ಡಾ.ನಾಗರಾಜ ಎಲ್.ಸೂಚನೆ

ವ್ಯವಸ್ಥಿತ, ಪಾರದರ್ಶಕ ಪರೀಕ್ಷೆ ನಡೆಸಿ

ಹಾವೇರಿ: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ವಸತಿ ಶಾಲೆಗಳ ಪ್ರವೇಶ ಪರೀಕ್ಷೆ ಮಾ.1ರಂದು ಜಿಲ್ಲೆಯ 39 ಪರೀಕ್ಷಾ ಕೇಂದ್ರಗಳಲ್ಲಿ ಜರುಗಲಿದ್ದು, ಯಾವುದೇ ಲೋಪದೋಷವಾಗದಂತೆ ವ್ಯವಸ್ಥಿತವಾಗಿ ಹಾಗೂ ಪಾರದರ್ಶಕವಾಗಿ ಪರೀಕ್ಷೆ ನಡೆಸಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ನಾಗರಾಜ ಎಲ್.ಸೂಚಿಸಿದರು.

ಡಿಸಿ ಕಚೇರಿ ಸಭಾಂಗಣದಲ್ಲಿ ಬುಧವಾರ ಕ್ರೈಸ್ ಅಡಿ ಕಾರ್ಯನಿರ್ವಹಿಸುವ ವಿವಿಧ ವಸತಿ ಶಾಲೆಗಳ ಪ್ರವೇಶ ಪರೀಕ್ಷೆ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿ, ಈವರೆಗೆ ಜಿಲ್ಲೆಯಲ್ಲಿ ಎಲ್ಲ ಪರೀಕ್ಷೆಗಳನ್ನು ಅತ್ಯಂತ ಅಚ್ಚುಕಟ್ಟಾಗಿ ಮಾಡಲಾಗಿದೆ. ಜಿಲ್ಲೆಗೆಕಪ್ಪುಚುಕ್ಕೆ ಬರದಂತೆಎಲ್ಲರೂ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು ಎಂದು ಸಲಹೆ ನೀಡಿದರು. ಈ ಪರೀಕ್ಷಾ ಕಾರ್ಯಕ್ಕೆ ನಿಯೋಜಿಸಲಾದ ವಿವಿಧ ಇಲಾಖೆ ಅಧಿಕಾರಿಗಳು, ಮಾರ್ಗಾಧಿಕಾರಿಗಳು, ವೀಕ್ಷಕರು, ಕೊಠಡಿ ಮೇಲ್ವಿಚಾರಕರು ತಮ್ಮ ಕರ್ತವ್ಯಗಳಲ್ಲಿ ಯಾವುದೇ ಲೋಪವಾಗದಂತೆ ಜವಾಬ್ದಾರಿಯಿಂದ ಹಾಗೂ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಹಾಗೂ ಪರೀಕ್ಷಾ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಸೂಚಿಸಿದರು.

12 ತಂಡ ರಚನೆ : ಪ್ರಶ್ನೆಪತ್ರಿಕೆ ಬಂಡಲ್ ತೆಗೆದುಕೊಂಡು ಹೋಗಲು ಪ್ರತಿ ತಾಲೂಕಿಗೂ ತಹಶೀಲ್ದಾರ, ಬಿಇಒ ಹಾಗೂ ಪ್ರಿನ್ಸಿಪಾಲ್ ಒಳಗೊಂಡ ತ್ರಿಸದಸ್ಯ ಸಮಿತಿಯ 12ತಂಡಗಳನ್ನು ನೇಮಕ ಮಾಡಲಾಗಿದೆ. ಒಂದು ಕೊಠಡಿಯಲ್ಲಿ 24 ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ವ್ಯವಸ್ಥೆ ಮಾಡಬೇಕು. ಪರೀಕ್ಷೆಮುಗಿದನಂತರ ಉತ್ತರ ಪತ್ರಿಕೆ ಬಂಡಲ್‌ಗಳನ್ನು ಸೂಕ್ತ ಪೊಲೀಸ್ ಬಂದೋಬಸ್ತ್‌ನಲ್ಲಿ ಜಿಲ್ಲಾ ಖಜಾನೆಗೆ ಸಲ್ಲಿಸಬೇಕು. ಡಿ ಗ್ರೂಪ್ ಸೇರಿದಂತೆ ಪರೀಕ್ಷೆ ಕಾರ್ಯಕ್ಕೆ ನಿಯೋಜಿಸಿದ ಎಲ್ಲರಿಗೂ ಗುರುತು ಪತ್ರ ನೀಡಬೇಕು ಎಂದರು. ಸಭೆಯಲ್ಲಿ ವಿವಿಧ ತಾಲೂಕುಗಳ ತಹಶೀಲ್ದಾರರು, ಬಿಇಒ, ವಿವಿಧ ಇಲಾಖೆಗಳ ಅಧಿಕಾರಿಗಳು, ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ಉಪಸ್ಥಿತರಿದ್ದರು.



ಸಭೆಗೆ ಮಾಹಿತಿ
ಪದವಿಪೂರ್ವ ಶಿಕ್ಷಣ ಇಲಾಖೆ ಪ್ರಭಾರ ಉಪನಿರ್ದೇಶಕ ಬಸವರಾಜ ಇಟ್ಟಿಗುಡಿ ಮಾತನಾಡಿ, ಪರೀಕ್ಷಾ ರೂಪರೇಷೆಗಳ ಮಾಹಿತಿ ನೀಡಿದರು ಹಾಗೂ ಜಿಲ್ಲೆಯಲ್ಲಿ 11,908 ವಿದ್ಯಾರ್ಥಿಗಳು ಪರೀಕ್ಷೆ ನೋಂದಾಯಿಸಿಕೊಂಡಿದ್ದಾರೆ. ಬೆಳಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಪರೀಕ್ಷೆ ಜರುಗಲಿದೆ ಎಂದು ಸಭೆಗೆ ಮಾಹಿತಿ ನೀಡಿದರು.

39ಪರೀಕ್ಷಾ ಕೇಂದ್ರಗಳು: ಶಿಗ್ಗಾಂವಿಯ ಸರ್ಕಾರಿ ಪಿಯು, ಎಸ್‌ಬಿಬಿಎಂಡಿ ಪಿಯು, ಎಸ್‌ಆರ್‌ಜೆವಿ ಪಿಯು, ಜೆಎಂಜೆ ಪಿಯು, ಸವಣೂರಿನ ಸರ್ಕಾರಿ ಮಜೀದ ಪಿಯು ಕಾಲೇಜು, ವಿದ್ಯಾಭಾರತಿ ಎಜುಕೇಷನ್ ಸೊಸೈಟಿ ಪಿಯು, ಮಹಿಳಾ ಸರ್ಕಾರಿ ಪಿಯು, ಸರ್ಕಾರಿ ಮಜೀದ ಪ್ರೌಢಶಾಲೆ, ಹಾನಗಲ್‌ನ ನವೀನ ಹಿರಿಯ ಪ್ರಾಥಮಿಕ ಶಾಲೆ, ಹಜರತ್ ಮಕ್ಬೂಲಿಯ ಉರ್ದು ಪ್ರೌಢ ಶಾಲೆ, ಜನತಾ ಮಹಿಳಾ ಪ್ರೌಢಶಾಲೆ, ಕುಮಾರೇಶ್ವರ ಪ್ರೌಢಶಾಲೆ, ಕುಮಾರೇಶ್ವರ ಪಿಯು, ಸರ್ಕಾರಿ ಪಿಯು, ಕೆಎಲ್‌ಇ ಸೊಸೈಟಿ ಪಿಯು, ನ್ಯೂ ಕಾಂಪೋಸಿಟ್ ಪಿಯು, ಅಂಜುಮನ್ ಕಾಂಪೋಸಿಟ್ ಪಿಯು ಕಾಲೇಜಿನಲ್ಲಿ ಪರೀಕ್ಷಾ ಕೇಂದ್ರ ಸ್ಥಾಪಿಸಲಾಗಿದೆ. ಹಾವೇರಿಯ ಎಸ್‌ಎಂಎಸ್ ಪಿಯು, ಲಯನ್ಸ್ ಪಿಯು, ಎಸ್ ಎಸ್ ಮಹಿಳಾ ಪಿಯು, ಸರಕಾರಿ ಮಹಿಳಾ ಪಿಯು, ಶಿವಲಿಂಗೇಶ್ವರ ಮಹಿಳಾ ಪದವಿ ಕಾಲೇಜು, ರಾಚೋಟೇಶ್ವರ ಪಿಯು, ಸರ್ಕಾರಿ ಪಿಯು, ಬ್ಯಾಡಗಿಯ ಸರ್ಕಾರಿ ಎಸ್‌ಜೆಜೆಎಂ ಪಿಯು, ನೂತನ ಎಜುಕೇಷನ್ ಸೊಸೈಟಿ, ಆದರ್ಶ ಕೇಂದ್ರೀಯ ಶಾಲೆ, ಹಿರೇಕೆರೂರಿನ ತರಳಬಾಳು ಶಾಲೆ, ಡಿಆರ್ ತಂಬಾಕದ ಬಾಯ್ಸ್ ಶಾಲೆ, ಕೆ.ಎಚ್. ಪಾಟೀಲ್ ಪಿಯು, ಸರ್ಕಾರಿ ಪಿಯು, ರಾಣೇಬೆನ್ನೂರಿನ ಕೆಎಲ್‌ಇ ರಾಜರಾಜೇಶ್ವರಿ ಪಿಯು, ರೋಟರಿ ಪಿಯು, ಬಿಎಜೆಎಸ್‌ಎಸ್ ಪಿಯು, ದೇವಿಕಾ ಪಿಯು, ಎಚ್ ಎಸ್ ಪಿಯು, ಸರ್ಕಾರಿ ಪಿಯು ಹಾಗೂ ರಟ್ಟೀಹಳ್ಳಿಯ ಎಸ್.ಕೆ. ಪಿಯು, ಸರ್ಕಾರಿ ಪಿಯು ಕಾಲೇಜ್‌ನಲ್ಲಿ ಪರೀಕ್ಷಾ ಕೇಂದ್ರ ಸ್ಥಾಪಿಸಲಾಗಿದೆ.

ಸರ್ವಜ್ಞ ವೃತ್ತ ನಿರ್ಮಾಣಕ್ಕೆ ಒತ್ತಾಯ

ರಾಣೇಬೆನ್ನೂರ: ನಗರದ ಪ್ರಮುಖ ಭಾಗದ ಸರ್ಕಲ್‌ನಲ್ಲಿ ಸರ್ವಜ್ಞವೃತ್ತ ಮತ್ತು ಮೂರ್ತಿಯನ್ನು ಸ್ಥಾಪಿಸಬೇಕು ಎಂದು ಒತ್ತಾಯಿಸಿ ರಾಣೇಬೆನ್ನೂರ ತಾಲೂಕು ಕುಂಬಾರ ಸಂಘದ ಪದಾಧಿಕಾರಿಗಳು ಶಾಸಕ ಪ್ರಕಾಶ ಕೋಳಿವಾಡ ಅವರಿಗೆ ಮನವಿ ಸಲ್ಲಿಸಿದರು.

ಸಮಾಜದ ಮುಖಂಡ ಬಿ.ಸಿ.ಚಕ್ರಸಾಲಿ ಮಾತನಾಡಿ, ಹಾವೇರಿ ಜಿಲ್ಲೆಯ ರಾಣೇಬೆನ್ನೂರ ತಾಲೂಕಿನಲ್ಲಿ ಕುಂಬಾರ ಸಮುದಾಯ ಜನಸಂಖ್ಯೆ ಹೆಚ್ಚಿನ ಸಂಖ್ಯೆಯಲ್ಲಿದೆ. ಸಮಾಜದ ಆರಾಧ್ಯ ದೈವ ತ್ರಿಪದಿ ಸರ್ವಜ್ಞ ನಮ್ಮ ಜಿಲ್ಲೆಯಲ್ಲಿಯೇ ಜನಸಿರುವುದು ಹೆಮ್ಮೆಯ ಸಂಗತಿ. ಸಮಾಜದ ಬಾಂದವರು ಸೇರಿ ಸರ್ವಜ್ಞ ಜಯಂತಿ ಆಚರಣೆ ಮಾಡಲು ಸಮುದಾಯ ಭವನ ಅಗತ್ಯವಿದೆ. ಹೀಗಾಗಿ ಸರ್ಕಾರ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ರಾಜಕೀಯವಾಗಿ ಗಮನ ಹರಿಸಬೇಕಿದೆ ಎಂದರು.

ತಾಲೂಕು ಅಧ್ಯಕ್ಷ ಕೊಟ್ರೇಶ ಕೆಂಚಪ್ಪನವರ ಮಾತನಾಡಿ, ನಗರ ಆಧುನಿಕವಾಗಿ ಬೆಳೆಯುತ್ತಿದ್ದು, ನಗರದ ಪ್ರಮುಖ ಸರ್ಕಲ್‌ನಲ್ಲಿ ಸರ್ವಜ್ಞ ವೃತ್ತ ನಿರ್ಮಿಸಬೇಕು ಎಂದು ಒತ್ತಾಯಿಸಿದರು.

ಈ ಬಾರಿ ಸರ್ವಜ್ಞ ಪ್ರಾಧಿಕಾರಕ್ಕೆ ಹೆಚ್ಚಿನ ಅನುದಾನ ನೀಡಬೇಕು. ಇದರಿಂದ ಸರ್ವಜ್ಞ ಜನ್ಮಸ್ಥಳ ಮಾಸೂರಿನಲ್ಲಿ ಕೂಡಲ ಸಂಗಮ ಮಾದರಿಯಲ್ಲಿ ಐಕ್ಯಮಂಟಪ ಹಾಗೂ ಸರ್ವಜ್ಞ ಮೂಸಿಯಂ, ಪಾರ್ಕ ಸೇರಿದಂತೆ ವಿವಿಧ ಕಾಮಗಾರಿಗಳಿಗೆ ಅನುದಾನ ಅವಶ್ಯವಿದೆ. ಈ ಕುರಿತು ಈಗಾಗಲೇ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗಿದೆ.
■ ಸಂಪತ ಕುಮಾರ, ಸರ್ವಜ್ಞ ಪ್ರಾಧಿಕಾರದ ನಿರ್ದೇಶಕ

ಉಪಾಧ್ಯಕ್ಷ ಕೊಟ್ರೇಶ ಕೆಜಿಕೆ, ಕಪ್ಪತಪ್ಪ ಸಾಲಿಮನಿ, ಇತಿಹಾಸ ಸಂಶೋಧಕ ಡಾ.ಮಂಜಪ್ಪ ಶರಣರು, ನಿವೃತ್ತ ಪಿಡಿಒ ಚಂದ್ರಶೇಖರ, ಮಹಾದೇವಪ್ಪ ಚಕ್ರಸಾಲಿ, ಗದಿಗೆಪ್ಪ ಚಕ್ರಸಾಲಿ, ನಾಗಪ್ಪ ಕೆಂಚಪ್ಪನವರ, ಈರಣ್ಣ ನಂದಿಹಳ್ಳಿ, ಸಂಗಪ್ಪ ಕೆಂಚಪ್ಪನವರ, ಶೇಖರ ಕೆಂಚಪ್ಪನವರ, ಬಿ.ಎಚ್. ಕುಂಬಾರ, ಗಣೇಶ ಸಾಲಿಮನಿ ಸೇರಿದಂತೆ ಸಮಾಜದ ಮುಖಂಡರು ಇದ್ದರು.



ಕಾಮಗಾರಿಗೆ ಶಾಸಕ ಭೂಮಿಪೂಜೆ

ಹಾನಗಲ್ಲ: ಚಿಕ್ಕಾಂಶಿ ಹೊಸೂರು ಗ್ರಾಮದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಕಟ್ಟಡ ನಿರ್ಮಾಣಕ್ಕೆ 16 ಕೋಟಿ ರೂ. ಮತ್ತು ಸಿಬ್ಬಂದಿ ವಸತಿ ಗೃಹ ನಿರ್ಮಾಣಕ್ಕೆ 5 ಕೋಟಿ ರೂ. ಹಾಗೂ ಶಂಕರಿಕೊಪ್ಪ ಗ್ರಾಮದಲ್ಲಿ ವಸತಿ ಕಾಲೇಜು ಕಟ್ಟಡ ನಿರ್ಮಾಣಕ್ಕೆ 16 ಕೋಟಿ ರೂ. ಬಿಡುಗಡೆಯಾಗಿದ್ದು, ಕಾಮಗಾರಿಗಳು ಶೀಘ್ರ ಚಾಲನೆ ಪಡೆಯಲಿವೆ ಎಂದು ಶಾಸಕ ಶ್ರೀನಿವಾಸ ಮಾನೆ ಹೇಳಿದರು.

ತಾಲೂಕಿನ ಬ್ಯಾತನಾಳ ಗ್ರಾಮದ ಮೊರಾರ್ಜಿ ದೇಸಾಯಿ ಅಲ್ಪಸಂಖ್ಯಾತರ ವಸತಿ ಶಾಲೆಯಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ 5 ಕೋಟಿ ರೂ. ವೆಚ್ಚದಲ್ಲಿ ಸಿಬ್ಬಂದಿ ವಸತಿ ಗೃಹ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿದ ಅವರು, ನರೇಗಲ್, ತಿಳವಳ್ಳಿ ಗ್ರಾಮಗಳಿಗೆ ಮೌಲಾನಾ ಆಜಾದ್ ಮಾದರಿ ಶಾಲೆಗಳು ಮಂಜೂರಿಯಾಗಿವೆ. ಹಾನಗಲ್ ನಗರದ ಮೌಲಾನಾ ಆಜಾದ್ ಮಾದರಿ ಶಾಲೆಯ ಆವರಣ ಗೋಡೆ ನಿರ್ಮಾಣಕ್ಕೆ ಒಂದು ಕೋಟಿ ರೂ. ಬಿಡುಗಡೆಯಾಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಅಗತ್ಯ ಮೂಲಭೂತ ಸೌಲಭ್ಯಗ ಕಲ್ಪಿಸುವ ಮೂಲಕ ಗ್ರಾಮೀಣ ಪ್ರದೇಶದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ದೊರಕಿಸುವಲ್ಲಿ ಕಾಳಜಿ ವಹಿಸಲಾಗಿದೆ. ತಾಲೂಕಿನಲ್ಲಿ ಹೊಸದಾಗಿ 3 ಸರ್ಕಾರಿ ಪ್ರೌಢಶಾಲೆಗಳು, ಕರ್ನಾಟಕ ಪಬ್ಲಿಕ್ ಸ್ಕೂಲ್ ಮಾದರಿಯಲ್ಲಿ 11 ಶಾಲೆಗಳನ್ನು ಉನ್ನತೀಕರಿಸಿ ಒಂದೇ ಸೂರಿನಡಿ ಎಲ್‌ಕೆಜಿಯಿಂದ ದ್ವಿತೀಯ ಪಿಯುಸಿವರೆಗೆ ಶಿಕ್ಷಣ ಸಿಗುವ ವ್ಯವಸ್ಥೆ ಮಾಡಲಾಗಿದೆ ಎಂದರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿ ಅಬ್ದುಲ್‌ರಶೀದ್ ಇಮಿರಜೆಣ್ಣನವರ, ಪ್ರಾಚಾರ್ಯ ಸಕ್ಲೇನ್ ಅಹ್ಮದ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಂಜು ಗೊರಣ್ಣನವರ, ತಾಪಂ ಮಾಜಿ ಸದಸ್ಯ ಫಯಾಜ್ ಲೋಹಾರ, ಮುಖಂಡರಾದ ಗೋಪಾಲ ಕಾನಮನಿ, ಲೋಕೇಶ ಅಗಸಿಬಾಗಿಲ, ಪರಮೇಶಪ್ಪ ಜಿಗಡಿ, ಕೃಷ್ಣ ಮಡ್ಲೂರ, ವೆಂಕಟೇಶ ಅಗಸಿಬಾಗಿಲ, ರಮೇಶ ಮುದಿಯಣ್ಣನವರ, ಕರಿಯಪ್ಪ ತಹಶೀಲ್ದಾರ್, ನಾಗಪ್ಪ ಪೂಜಾರ, ಬಸವರಾಜ ಮಾಳಣ್ಣನವರ, ಹರೀಶ ರೊಟ್ಟಿ, ಬಸವಂತ ನಾಯ್ಕ, ಬಸವರಾಜ ಚವ್ಹಾಣ, ನಿಲಯ ಪಾಲಕ ಮಾರುತಿ ತಳವಾರ, ಗುತ್ತಿಗೆದಾರ ಅಲ್ಲಾರೆಡ್ಡಿ ಸೇರಿದಂತೆ ಸಿಬ್ಬಂದಿ ಮತ್ತು ಗ್ರಾಮಸ್ಥರು ಇದ್ದರು.



ಸಾರ್ವಜನಿಕರ ಸೇವೆ ಶಿಕ್ಷಕರ ಗುರಿಯಾಗಲಿ: ಕುಬೇರಪ್ಪ

ರಾಣೇಬೆನ್ನೂರ: ಗ್ರಾಮೀಣ ಬದುಕಿನ ಎಲ್ಲಾ ಮುಖಗಳನ್ನು ಪರಿಚಯಿಸುವ ಕಾರ್ಯವನ್ನು ಎನ್‌ಎಸ್‌ಎಸ್ ಮಾಡುತ್ತದೆ. ಪರೋಪಕಾರಂ ಇದಂ ಶರೀರಂ ಎಂಬಂತೆ ನನಗಾಗಿ ಸ್ವಲ್ಪ, ಸಮಾಜಕ್ಕೆ ಸರ್ವಸ್ವ ಎಂಬ ಧ್ಯೇಯದೊಂದಿಗೆ ಸುಸಂಸ್ಕೃತ ನಾಗರೀಕ ನಿರ್ಮಾಣದ ಜವಾಬ್ದಾರಿ ಶಿಕ್ಷಕರದ್ದಾಗಿದೆ ಎಂದು ಡಾ.ಆರ್.ಎಂ.ಕುಬೇರಪ್ಪ ಹೇಳಿದರು.

ತಾಲೂಕಿನ ಆರೇಮಲ್ಲಾಪುರ ಗ್ರಾಮದಲ್ಲಿ ಬಿಎ ಜೆಎಸ್‌ಎಸ್ ಬಿ.ಇಡಿ ಕಾಲೇಜಿನಿಂದ ಆಯೋಜಿಸಿದ್ದ ಎನ್‌ಎಸ್‌ಎಸ್ ವಿಶೇಷ ವಾರ್ಷಿಕ ಶಿಬಿರ ಉದ್ಘಾಟಿಸಿ ಅವರು ಮಾತನಾಡಿ, ಶಿಕ್ಷಕರು ಈ ಸೇವಾ ಯೋಜನೆಯ ಅನುಷ್ಠಾನವನ್ನು ಸಮರ್ಪಕವಾಗಿ ಮಾಡಬೇಕು ಹಾಗೂ ಸಾರ್ವಜನಿಕರ ಸೇವೆ ನಿಮ್ಮ ಗುರಿಯಾಗಬೇಕು ಎಂದರು. ಪತ್ರಕರ್ತ ನಾಗರಾಜ ಕೆ.ಎಸ್. ಸಂಪಾದಕ ಎಸ್.ಜಿ ಮಹಾನುಭಾವಿಮಠ, ಶೇಖಪ್ಪ ಸಣ್ಣಬೊಮ್ಮಾಜಿ, ಎನ್‌ಎಸ್‌ಎಸ್ ನ ಸಂಯೋಜನಾಧಿಕಾರಿ ಪರಶುರಾಮ ಪವಾರ, ಬಿ.ಇಡಿ ಕಾಲೇಜಿನ ಪ್ರಾ. ಡಾ. ಎಂ.ಎಂ. ಮೃತ್ಯುಂಜಯ ಮಾತನಾಡಿದರು.

ನಿಂಗಪ್ಪ ವಗ್ಗನವರ, ರಾಜಕುಮಾರ ಹಲವಾಗಲ, ಬಸವರಾಜಪ್ಪ ನಾಗರಜ್ಜಿ, ಹನುಂತಪ್ಪ ದೊಡ್ಡತಮ್ಮಣ್ಣನವರ, ಮಾರುತಿ ಹಲವಾಗಲ, ಎಸ್.ಹೆಚ್.ಹುಚ್ಚಗೊಂಡರ, ಧೂಳಾಜಪ್ಪ ಶೆಟ್ಟರ, ಸುಮಾ ಜಾಧವ ಪಕ್ಕೀರಪ್ಪ ಸೂರ್ವೆ ರಾಜೀವ್ ಕೆ ಎಂ, ನಿಕೇತನ ಕಮ್ಮಾರ ಹಾಗೂ ಎಲ್ಲಾ ಶಿಬಿರಾರ್ಥಿಗಳು, ಸಿಬ್ಬಂದಿ ಇದ್ದರು. ಬಸವರಾಜ ಅಂಬಿಗೇರ ಪ್ರಾರ್ಥಿಸಿದರು. ಪೂಜಾ ಹೆಗಡೇರ ಸ್ವಾಗತಿಸಿದರು. ಲಕ್ಷ್ಮೀ ಹಣಚಿಕ್ಕಿ ನಿರೂಪಿಸಿದರು. ನಾಗರಾಜ ತಾವರಗೊಂದಿ ವಂದಿಸಿದರು.



ಜೆಡಿಎಸ್ ಸಮಾವೇಶ: ಜಿಲ್ಲೆಯ ಕಾರ್ಯಕರ್ತರ ಪ್ರಯಾಣ ರದ್ದು

ಹಾವೇರಿ: ವಿಜಯಪುರದಲ್ಲಿ ಫೆ.27ರಂದು ಆಯೋಜಿಸಿರುವ ಜೆಡಿಎಸ್ ಪಕ್ಷದ ಸಮಾವೇಶದಲ್ಲಿ ಸ್ಥಳಾವಕಾಶ ಕೊರತೆ, ದೂರದ ಪ್ರಯಾಣದ ಹಿನ್ನೆಲೆಯಲ್ಲಿ ಪಕ್ಷದ ನಾಯಕರ ಸೂಚನೆ ಮೇರೆಗೆ ಜಿಲ್ಲೆಯ ಪಕ್ಷದ ಕಾರ್ಯಕರ್ತರು, ಅಭಿಮಾನಿಗಳ ಪ್ರಯಾಣವನ್ನು ರದ್ದುಪಡಿಸಲಾಗಿದೆ ಎಂದು ಜೆಡಿಎಸ್ ಜಿಲ್ಲಾಧ್ಯಕ್ಷ ಮಂಜುನಾಥ ಗೌಡಶಿವಣ್ಣನವರ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಪಕ್ಷದ ಕರೆಗೆ ಓಗೊಟ್ಟು ವಿಜಯಪುರದಲ್ಲಿ ನಡೆಯಲಿರುವ ಸಮಾವೇಶಕ್ಕೆ ತೆರಳಲು ಹೆಚ್ಚಿನ ಸಂಖ್ಯೆಯಲ್ಲಿ ಜಿಲ್ಲೆಯ ಪಕ್ಷದ ಕಾರ್ಯಕರ್ತರು ಸಿದ್ಧರಾಗಿದ್ದು, ಇದಕ್ಕೆ ನಾನು ತಮ್ಮೆಲ್ಲರಿಗೂ ಅಭಾರಿಯಾಗಿರುವೆ. ಜೊತೆಗೆ ಪಕ್ಷದ ಮೇಲಿನ ತಮ್ಮ ಅಭಿಮಾನಕ್ಕೆ ಚಿರಋಣಿಯಾಗಿದ್ದೇನೆ. ಆದರೆ ಎರಡು ದಿನಗಳ ದೂರದ ಪ್ರಯಾಣ ಹಾಗೂ ಸಮಾವೇಶದಲ್ಲಿ ಸ್ಥಳಾವಕಾಶ ಕೊರತೆ ಹಿನ್ನೆಲೆಯಲ್ಲಿ ಪಕ್ಷದ ರಾಜ್ಯಾಧ್ಯಕ್ಷ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿಯವರ ಸೂಚನೆ ಮೇರೆಗೆ ಸಮಾವೇಶಕ್ಕೆ ಕಾರ್ಯಕರ್ತರು ತೆರಳುವುದನ್ನು ರದ್ದು ಮಾಡಲಾಗಿದೆ. ಆದರೆ ವಿಜಯಪುರ ಸಮಾವೇಶ ನಡೆಯಲಿದೆ.

ಅಲ್ಲದೇ ಶೀಘ್ರದಲ್ಲಿಯೇ ಗದಗ, ಧಾರವಾಡ, ಹಾವೇರಿ, ಮತ್ತು ದಾವಣಗೇರಿ ಜಿಲ್ಲೆಗಳ ಭಾಗದಲ್ಲಿ ಸಮಾವೇಶ ಮಾಡಲು ಪಕ್ಷದ ನಾಯಕರು ತೀರ್ಮಾನ ಮಾಡಿದ್ದಾರೆ. ಹೀಗಾಗಿ ಈ ಭಾಗದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಜಿಲ್ಲೆಯ ಪಕ್ಷದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಪಕ್ಷದ ರಾಜ್ಯ ನಾಯಕರು ಸೂಚಿಸಿದ್ದಾರೆ. ಆದ್ದರಿಂದ ಫೆ.27ರಂದು ಹಾವೇರಿ ಜಿಲ್ಲೆಯ ಕಾರ್ಯಕರ್ತರು ಬಿಜಾಪುರಕ್ಕೆ ತೆರಳಬೇಕಾದ ಪ್ರಯಾಣವನ್ನು ರದ್ದುಗೊಳಿಸಿದ್ದು, ಕಾರ್ಯಕರ್ತರು, ಅಭಿಮಾನಿಗಳಿಗೆ ಉಂಟಾದ ಅಡಚಣೆಗೆ ವಿಷಾಧಿಸುತ್ತೇನೆ ಎಂದು ತಿಳಿಸಿದ್ದಾರೆ.

ಶಿವಾಜಿ ಜಯಂತಿ: ಫೆ.28ರಂದು ಬೃಹತ್ ಮೆರವಣಿಗೆ

ಹಾವೇರಿ: ಕೋವಿಡ್ ನಂತರ ಮೊದಲ ಬಾರಿಗೆ ಕರ್ನಾಟಕ ಕ್ಷತ್ರೀಯ ಒಕ್ಕೂಟ ಜಿಲ್ಲಾ ಘಟಕದ ನೇತೃತ್ವದಲ್ಲಿ ಫೆ.28ರಂದು ಸಂಜೆ 4ಕ್ಕೆ ಛತ್ರಪತಿ ಶಿವಾಜಿ ಮಹಾರಾಜರ ಜಯಂತ್ಯುತ್ಸವ ಪ್ರಯುಕ್ತ ಬೃಹತ್ ಮೆರವಣಿಗೆ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಕ್ಷತ್ರೀಯ ಒಕ್ಕೂಟದ ಜಿಲ್ಲಾಧ್ಯಕ್ಷ ಶಂಕರ ಮೆಹರವಾಡೆ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2000ನೇ ಇಸ್ವಿಯಲ್ಲಿ ಹರಿಸಾ ಕೋಡೆ ಅವರು ಹಿಂದೂ ಕ್ಷತ್ರೀಯ ಮಹಾಸಭಾ ಎಂಬ ಸಂಘಟನೆಯನ್ನು ಸ್ಥಾಪಿಸಿದರು. ಮುಂದೆ 2018ರಲ್ಲಿ ಪ್ರಸ್ತುತ ರಾಜ್ಯಾಧ್ಯಕ್ಷ ಉದಯ ಸಿಂಗ್‌ರು ಕರ್ನಾಟಕ ಕ್ಷತ್ರೀಯ ಒಕ್ಕೂಟ ಎಂದು ಮರುನಾಮಕರಣ ಮಾಡುವ ಮೂಲಕ ರಾಜ್ಯದ್ಯಂತ ಎಲ್ಲಾ ಜಿಲ್ಲಾ ಹಾಗೂ ತಾಲೂಕು ಘಟಕಗಳಲ್ಲಿ ಸಂಘವನ್ನು ಕಟ್ಟಿದರು. ಹಾವೇರಿ ಜಿಲ್ಲೆಯಲ್ಲಿ 16 ಉಪ ಪಂಗಡಗಳ ಜನರು ಇದ್ದಾರೆ.



ಭಾವಸಾರ ಕ್ಷತ್ರೀಯ, ಮರಾಠಾ ಕ್ಷತ್ರೀಯ, ಸೋಮವಂಶ ಕ್ಷತ್ರೀಯ, ರಾಮವಂಶ ಕ್ಷತ್ರೀಯ, ನಾಮದೇವ, ಕಲಾಲ, ಜೋಗಿ, ಕಿಳ್ಳಿಕ್ಯಾತರ, ಲಂಬಾಣಿ, ಗೊಂದಳಿ ಕ್ಷತ್ರೀಯ ಹೀಗೆ ಅನೇಕ ಸಮುದಾಯದ ಜನರು ಇದ್ದಾರೆ. ಈ ಎಲ್ಲ ಸಮಾಜದವರು ಸೇರಿಕೊಂಡು ಫೆ.28ರಂದು ಹಾವೇರಿಯಲ್ಲಿ ಬೃಹತ್ ಮೆರವಣಿಗೆ ನಡೆಸಲಾಗುತ್ತಿದೆ ಎಂದರು.

ನಗರದ ಪುರಸಿದ್ದೇಶ್ವರ ದೇವಸ್ಥಾನದಿಂದ ಮೆರವಣಿಗೆ ಹೊರಟು, ಮೇಲಿನಪೇಟೆ, ಸುಭಾಸ್ ಸರ್ಕಲ್, ಪುನಃ ಮೇಲಿನಪೇಟೆ ಮಾರ್ಗವಾಗಿ ದ್ಯಾಮವ್ವನಗುಡಿ ಪಾದಗಟ್ಟಿ, ಎಂ.ಜಿ ರಸ್ತೆ, ಎಂ.ಜಿ ವೃತ್ತ, ಜೆ.ಪಿ ವೃತ್ತ, ಹೊಸಮನಿ ಸಿದ್ದಪ್ಪ ವೃತ್ತ, ಮಾರ್ಗದಿಂದ ಶಿವಾಜಿ ನಗರದಲ್ಲಿರುವ ಮರಾಠಾ ಸಮುದಾಯ ಭವನ ತಲುಪಲಿದೆ. ಮೆರವಣಿಗೆಯಲ್ಲಿ ನಾಸಿಕ್ ಡೋಲು ತಂಡ ಭಾಗವಹಿಸಲಿದೆ. ಪುರುಷರು ಬಿಳಿ ಶರ್ಟ್, ಬಿಳಿ ಪ್ಯಾಂಟ್, ಜುಬ್ಬಾ ಪೇಟಾ ಧರಿಸಲಿದ್ದು, ಮಹಿಳೆಯರು ಸೀರೆ, ಪೇಟಾ ಧರಿಸಿ ಗಮನಸೆಳೆಯಲಿದ್ದಾರೆ ಎಂದರು.

ಹುಕ್ಕೇರಿಮಠದ ಸದಾಶಿವ ಸ್ವಾಮೀಜಿ, ಮೈಲಾರಲಿಂಗೇಶ್ವರ ದೇವಸ್ಥಾನದ ವೆಂಕಪ್ಪ ಒಡೆಯರ್, ಹೊಸಮಠದ ಬಸವಶಾಂತಲಿಂಗ ಸ್ವಾಮೀಜಿ, ಹರಸೂರ ಬಣ್ಣದಮಠದ ಅಭಿನವ ಚೆನ್ನಮಲ್ಲಿಕಾರ್ಜುನ ಸ್ವಾಮೀಜಿ ಸಾನಿಧ್ಯ ವಹಿಸಿ ಚಾಲನೆ ನೀಡಲಿದ್ದಾರೆ. ಕರ್ನಾಟಕ ಕ್ಷತ್ರೀಯ ಒಕ್ಕೂಟದ ರಾಜ್ಯಾಧ್ಯಕ್ಷ ಉದಯ ಸಿಂಗ, ಶಾಸಕರಾದ ರುದ್ರಪ್ಪ ಲಮಾಣಿ, ಶ್ರೀನಿವಾಸ ಮಾನೆ, ಬಿಜೆಪಿ ಜಿಲ್ಲಾಧ್ಯಕ್ಷ ವಿರೂಪಾಕ್ಷಪ್ಪ ಬಳ್ಳಾರಿ, ಕಾಂಗ್ರೆಸ್ ಅಧ್ಯಕ್ಷ ಸಂಜೀವಕುಮಾರ ನೀರಲಗಿ, ಗವಿಸಿದ್ದಪ್ಪ ದ್ಯಾಮಣ್ಣವರ ಸೇರಿದಂತೆ ಹಿಂದೂಪರ ಸಂಘಟನೆಗಳ ಮುಖಂಡರು ಭಾಗವಹಿಸಲಿದ್ದಾರೆ ಎಂದರು.

ಒಕ್ಕೂಟದ ಗೌರವಾಧ್ಯಕ್ಷ ನಾಗರಾಜ ಜೋರಾಪುರಿ, ಯುವ ಒಕ್ಕೂಟದ ಗೌರವಾಧ್ಯಕ್ಷ ದರ್ಶನ ಲಮಾಣಿ ಮಾತನಾಡಿದರು. ಮಹಾವೀರ ಘನಾತೆ, ಪ್ರಮೋದ ನವಲೆ, ಉದಯ ತಾಂಗಳೆ, ಭಾಗ್ಯಶ್ರೀ ಮೋರೆ, ಚಂದ್ರಶೇಖರ ಜಾಧವ, ನಾಮದೇವ ಸಿಂಪಿ, ರಮೇಶ ಮಾಳೋದೆ, ಲಕ್ಷ್ಮಣಸಿಂಗ್ ರಜಪೂತ, ಧರ್ಮರಾಜ ಕಜೂರಕರ, ದೇವರಾಜ ಗುಂಡೆ, ನಾಗೇಂದ್ರಪ್ಪ ಡಿ.ಕೆ., ವಿಶಾಲ ಸುಲಾಕೆ, ಶ್ರೀಕಾಂತ ಮಾಳದಕರ ಇದ್ದರು.

ಪ್ರಗತಿ ಪರಿಶೀಲನಾ ಸಭೆ: ಹಲವು ವಿಷಯಗಳ ಚರ್ಚೆ

ಹಾನಗಲ್ಲ: ಸರ್ಕಾರಿ ಆಸ್ತಿಗಳನ್ನು ಉಳಿಸಿಕೊಳ್ಳುವಲ್ಲಿ ಸರ್ಕಾರದ ಇಲಾಖೆಗಳು ನಿರ್ಲಕ್ಷ್ಯ, ಈ ವಿಷಯದಲ್ಲಿ ಅಧಿಕಾರಿಗಳ ನಡುವೆ ಹೊಂದಾಣಿಕೆ ಇಲ್ಲ, ಇಲಾಖೆ ಹಿನ್ನಡೆಗಳನ್ನು ತಿದ್ದಿಕೊಂಡು ಸಾರ್ವಜನಿಕರಿಗೆ ಸರಿಯಾದ ಸೇವೆ ಕೊಡಬೇಕು, ತಾಲೂಕಿನ 14 ಆಸ್ಪತ್ರೆಗಳಿಗೆ ಇಬ್ಬರೇ ಸರ್ಕಾರಿ ವೈದ್ಯರು ಎಂಬ ಚರ್ಚೆಗಳ ಮೂಲಕ ತಾಪಂ ಪ್ರಗತಿ ಪರಿಶೀಲನಾ ಸಭೆ ಗಮನ ಸೆಳೆಯಿತು.

ಹಾನಗಲ್ಲ ತಾಪಂ ಸಭಾಭವನದಲ್ಲಿ ನಡೆದ ಪ್ರಗತಿ ಪರಿಶೀಲನೆ ಸಭೆಯಲ್ಲಿ ಆರೋಗ್ಯ ಇಲಾಖೆಯ ಚರ್ಚೆಯಲ್ಲಿ ಕೆಡಿಪಿ ಸದಸ್ಯೆ ಅನಿತಾ ಡಿಸೋಜಾ ಮಾತನಾಡಿ, ಆರೋಗ್ಯ ಇಲಾಖೆ ಗ್ರಾಮೀಣ ಸೇವೆ ನೀಡುವಲ್ಲಿ ವಿಫಲವಾಗಿದೆ. ಅಗತ್ಯಕ್ಕೆ ಅನುಗುಣವಾಗಿ ಇಲ್ಲಿ ಸಭೆಗಳು ಆಗುತ್ತಿಲ್ಲ, ಸ್ಟಾಫ್ ಇಲ್ಲ, ಔಷಧಿ ಇಲ್ಲ ಎಂಬ ದೂರುಗಳಿವೆ. ಇದನ್ನೆಲ್ಲ ಸರಿಪಡಿಸಲು ಬೇಕಾದ ಕಾಳಜಿ ತೋರುವಲ್ಲಿ ವೈದ್ಯಾಧಿಕಾರಿಗಳು ವಿಫಲರಾಗಿದ್ದಾರೆ ಎಂದು ದೂರಿದರು.



ಅಧಿಕಾರಿಗಳ ನಿರ್ಲಕ್ಷದಿಂದ ಯಾವುದೇ ಸಾರ್ವಜನಿಕರಿಗೆ ತೊಂದರೆಯಾಗದಂತೆ ಗಮನ ಕೊಡಿ. ಸಾರ್ವಜನಿಕರಿಂದ ದೂರು ಬರದಂತೆ ಗಮನಹರಿಸಿ, ಜನರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಿ.
■ ಶ್ರೀನಿವಾಸ ಮಾನೆ, ಶಾಸಕ

ಸರ್ಕಾರಿ ಆಸ್ತಿಗಳನ್ನು ಉಳಿಸುವಲ್ಲಿ ಸರ್ಕಾರದ ಇಲಾಖೆಗಳು ನಿರ್ಲಕ್ಷವಹಿಸುತ್ತಿವೆ. ರಸ್ತೆ ಬದಿಗಳಲ್ಲಿ ಗಿಡ ನೆಡುವಾಗ ವಿದ್ಯುತ್ ತಂತಿಗಳಿವೆ ಎಂಬುದನ್ನು ಗಮನಿಸದೇ ಗಿಡ ನೆಟ್ಟು ಎರಡು ವರ್ಷಗಳ ನಂತರ ಅದನ್ನೇ ಕತ್ತರಿಸಿ ಹಾಕುತ್ತಾರೆ. ಇಲಾಖೆಗಳ ನಡುವೆ ಸರಿಯಾದ ಹೊಂದಾಣಿಕೆ ಇದ್ದರೆ ಇಂಥಹ ಕೆಲಸಗಳನ್ನು ನಿಲ್ಲಿಸಬಹುದು. ಧರ್ಮಾ ನದಿಯ ಚೆಕ್ ಡ್ಯಾಮಗಳಿಗೆ ಗೇಟ ಅಳವಡಿಸುವಲ್ಲಿ ನೀರಾವರಿ ಇಲಾಖೆ ನಿರ್ಲಕ್ಷ ತೋರಿದೆ ಎಂದು ದೂರಿದರು.

ನೀರಾವರಿ ಕೆರೆಗಳು ಯಾವ ಯಾವ ಇಲಾಖೆಗೆ ಎಂದು ಒಮ್ಮೆ ಸರಿಯಾಗಿ ನಿರ್ಣಯ ಮಾಡಿಕೊಳ್ಳಬೇಕು. ವಿದ್ಯುತ್ ವಿತರಣೆ ಸರಿಯಾಗಿ ನಿರ್ವಹಿಸಬೇಕು. ತಹಶೀಲ್ದಾರ ಕಚೇರಿಯಲ್ಲಿ ಸಿಬ್ಬಂದಿ ಸರಿಯಾದ ಸಮಯಕ್ಕೆ ಹಾಜರಿರಬೇಕು. ಶಾಲೆಗಳ ಅನ್ನ ದಾಸೋಹಕ್ಕೆ ತೊಂದರೆಯಾದರೆ ಸಿರ್‌ಸಿ ಬಿಆರ್‌ಸಿ ಅವರನ್ನು ಹೊಣೆ ಮಾಡಿ. ತಾಲೂಕಿನಲ್ಲಿ ಅಬಕಾರಿ ಇಲಾಖೆ ಗಮನವಿಟ್ಟು ಅನಧೀಕೃತ ಸಾರಾಯಿ ಮಾರಾಟ ನಿಲ್ಲಿಸಬೇಕು ಎಂಬ ಚರ್ಚೆ ನಡೆದವು.

» ರಸ್ತೆ ಸಮಸ್ಯೆ ಪರಿಹರಿಸಿ
» ಅನಧೀಕೃತ ಸಾರಾಯಿ ಮಾರಾಟ ನಿಲ್ಲಿಸಿ

ಸಭೆಯವೇದಿಕೆಯಲ್ಲಿ ತಹಶೀಲ್ದಾರ ಎಸ್.ರೇಣುಕಾ, ಆಡಳಿತಾಧಿಕಾರಿ ಡಾ.ಶಿವಯೋಗಿ ಎಲಿ, ಇಒ ಗಿರೀಶ ರಡ್ಡೇರ, ಗ್ರೇಡ್-2 ತಹಶೀಲ್ದಾರ್ ವಿಠಲ ಚೌಗುಲಾ, ವಿಜಯಕುಮಾರ ದೊಡ್ಡಮನಿ, ಮಹೇಶ ಬಣಕಾರ, ಅನಿತಾ ಡಿಸೋಜಾ, ರಾಜೇಶ ಚವ್ಹಾಣ, ರಾಜಕುಮಾರ ಜೋಗಪ್ಪನವರ, ಮಹ್ಮದಹನೀಫ್ ಬಂಕಾಪೂರ, ಮಾರ್ತಂಡಪ್ಪ ಮಣ್ಣಮ್ಮನವರ, ಪ್ರಕಾಶ ಈಳಿಗೇರ ಇದ್ದರು.

ಕಿರುಸುದ್ದಿ

ಮಾ.1ರಂದು ರೇಣುಕಾಚಾರ್ಯ ಜಯಂತಿ

ಬೆಳಗಾವಿ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ, ಬೆಳಗಾವಿ ಸಂಯುಕ್ತಶ್ರಯದಲ್ಲಿ ಮಾ.1ರಂದು ಬೆಳಿಗ್ಗೆ 11 ಗಂಟೆಗೆ ನಗರದ ಕುಮಾರ ಗಂಧರ್ವ ಕಲಾ ಮಂದಿರದಲ್ಲಿ ಜಗದ್ಗುರು ರೇಣುಕಾಚಾರ್ಯರ ಜಯಂತಿ ಆಚರಣೆ ಆಯೋಜಿಸಲಾಗಿದೆ. ಹುಕ್ಕೇರಿಯ ಶ್ರೀಗುರು ಶಾಂತೇಶ್ವರ ಸಂಸ್ಥಾನ ಮಠದ ಚಂದ್ರಶೇಖರ ಮಹಾಸ್ವಾಮಿಗಳು ಹಾಗೂ ಬೆಳಗಾವಿಯ ಕಾರಂಜಿಮಠದ ಗುರುಸಿದ್ದ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಸಚಿವರಾದ ಸತೀಶ ಜಾರಕಿಹೊಳಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಸಚಿವೆ ಲಕ್ಷ್ಮೀ ಹೆಬ್ಬಾಳಕರ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಶಾಸಕರಾದ ಆಸೀಫ್ ಸೇಠ್ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಲಿದ್ದು, ಬೆಳಗಾವಿಯ ಸಾಹಿತಿಗಳಾದ ಡಾ.ಗುರುದೇವಿ ಹುಲೆಪ್ಪನವರಮಠ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಸರ್ಕಾರಿ ಮುಖ್ಯ ಸಚೇತಕರಾದ ಅಶೋಕ ಪಟ್ಟಣ, ಕರ್ನಾಟಕ ಸರ್ಕಾರದ ಮಾನ್ಯ ವಿಶೇಷ ಪ್ರತಿನಿಧಿ 2 ನವದೆಹಲಿ ಪ್ರಕಾಶ ಹುಕ್ಕೇರಿ, ವಾಯುವ್ಯ ಸಾರಿಗೆ ನಿಗಮ ನಿಯಮಿತ ಅಧ್ಯಕ್ಷರಾದ ಭರಮಗೌಡ ಕಾಗೆ ಮತ್ತು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಅಧ್ಯಕ್ಷರಾದ ಮಹಾಂತೇಶ ಕೌಜಲಗಿ ಅವರುಗಳು ವಿಶೇಷ ಆಮಂತ್ರಿಗಳಾಗಿ ಆಗಮಿಸಲಿದ್ದಾರೆ. ರಾಜ್ಯ ಸಭೆ ಸಂಸದರಾದ ಈರಣ್ಣ ಕಡಾಡಿ, ಚಿಕ್ಕೋಡಿ ಲೋಕ ಸಭಾ ಸಂಸದರಾದ ಪ್ರಿಯಾಂಕಾ ಜಾರಕಿಹೊಳಿ, ಜಿಲ್ಲಾ ಲೋಕ ಸಭಾ ಸಂಸದರಾದ ಜಗದೀಶ್ ಶೆಟ್ಟರ, ಉತ್ತರ ಕನ್ನಡ ಲೋಕ ಸಭಾ ಸಂಸದರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರುಗಳು ಗೌರವಾನ್ವಿತ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಅಧ್ಯಕ್ಷರಾಗಿ ಬಸವರಾಜ ಬಂ. ಬನ್ನಿಶೆಟ್ಟಿ ಆಯ್ಕೆ

ಗೋಕಾಕ: ವಿಶ್ವ ಮುದ್ರಕರ ದಿನದ ಅಂಗವಾಗಿ ಗೋಕಾಕ ನಗರದಲ್ಲಿ ಗೋಕಾಕ ತಾಲೂಕು ಮುದ್ರಕರ(ಪ್ರಿಂಟಿಂಗ ಪ್ರೆಸ್) ಕ್ಷೇಮಾಭಿವೃದ್ಧಿ ಸಂಘದ, ಗೋಕಾಕ (ರಿ) ವತಿಯಿಂದ ಗೋಕಾಕ ನಗರದ ಎಲ್ಲ ಮುದ್ರಣ ಬಳಗದವರಿಂದ ಮೊದಲ ಬಾರಿಗೆ ಚಲಿಸುವ ಮುದ್ರಣ ಮಶೀನ್ ವಿನ್ಯಾಸಗೊಳಿಸಿದ ಜರ್ಮನಿಯ ಯೋಹಾನ್ಸ ಬರ್ಗರವರ ಭಾವಚಿತ್ರ ಹಾಗೂ ಸಂಘದ ನೂತನ ನೋಂದಣಿ ಪ್ರಮಾಣ ಪತ್ರಕ್ಕೆ ಮಾಲಾರ್ಪಣೆ ಮಾಡುವ ಮೂಲಕ ಆಚರಿಸಲಾಯಿತು.

ನೂತನವಾಗಿ ನೋಂದಣಿಯಾಗಿ ಚಾಲಿತಗೊಂಡಿರುವ ಗೋಕಾಕ ತಾಲೂಕಾ ಮುದ್ರಕರ (ಪ್ರಿಂಟಿಂಗ ಪ್ರೆಸ್ ಕ್ಷೇಮಾಭಿವೃದ್ಧಿ ಸಂಘಕ್ಕೆ ಮಾರ್ಗದರ್ಶಕರಾಗಿ ಸಚೀನ ಜಾಧವ, ಈಶ್ವರ ಸಿ. ದೊಡ್ಡನ್ನವರ, ರಾಜಶೇಖರ ಹೂಗಾರ, ಶಿವಯ್ಯ ಪೂಜೇರಿ, ಸಂಗಮೇಶ ಕಪಲಿ, ದಶರಥ ಸುಪಲಿ, ಹನಮಂತ ಕಾಳಮ್ಮನಗುಡಿ ಹಾಗೂ ಕಾರ್ಯಕಾರಿ ಆಡಳಿತ ಮಂಡಳಿಯಲ್ಲಿ ಅಧ್ಯಕ್ಷರಾಗಿ ಬಸವರಾಜ ಬಂ. ಬನ್ನಿಶೆಟ್ಟಿ, ಉಪಾಧ್ಯಕ್ಷರಾಗಿ ಮಾಯಪ್ಪ ಲ. ತುಳಜನ್ನವರ, ಪ್ರಧಾನ ಕಾರ್ಯದರ್ಶಿಯಾಗಿ ರಾಯಪ್ಪಾ ಬಾ. ಗುದಗನವರ, ಸಹಕಾರ್ಯದರ್ಶಿಯಾಗಿ ರವಿಕಿರಣ ಸೋ. ಬಳೋಜಿ, ಖಜಾಂಚಿಯಾಗಿ ಅಬ್ದುಲರಹಮಾನ ನೂ. ಬೋಟಿಯಾಲ, ಸದಸ್ಯರಾಗಿ ಪರಶುರಾಮ ಈ. ಕಾಂಬಳೆ, ಭಾರತಿ ಮ. ಕಾಮಗೌಡರ ಇವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಯಿತು. ಈ ಸಂದರ್ಭದಲ್ಲಿ ಮಹಾಂತೇಶ ಹತಪಾಕಿ, ಎಸ್. ಎಸ್.ಹಿರೇಮಠ, ರಾಜು ಸುಪಲಿ, ಚಂದು ಬಬಲಿ, ಸಚೀನ ಭೂತಿ, ಪ್ರಸಾದ ಹೆಬ್ಬಳ್ಳಿ, ಅಮೀರ ತೇರದಾಳ, ಸುಮಿತ್ರಾ ಮಾದರ ಹಾಗೂ ಇತರರು ಉಪಸ್ಥಿತರಿದ್ದರು.

ಇಂದಿನಿಂದ ಜಾತ್ರೆ,ಮಂದಿರ ಲೋಕಾರ್ಪಣೆ

ಚಿಕ್ಕೋಡಿ: ಚಿಕ್ಕೋಡಿ ಸಮೀಪದ ಧುಳಗನವಾಡಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿದ ಶ್ರೀ ರೇಣುಕಾ ಮಾತಂಗಿ ಮಂದಿರ ಲೋಕಾರ್ಪಣೆ ಹಾಗೂ ಜಾತ್ರಾ ಮಹೋತ್ಸವ ಕಾರ್ಯಕ್ರಮ ಫೆ.26, 27 ರಂದು ಆಯೋಜಿಸಲಾಗಿದ್ದು, ಪ್ರಭುಲಿಂಗೇಶ್ವರ ಶಿವಾಚಾರ್ಯ ಸ್ವಾಮೀಜಿ, ಪಟ್ಟದೇವರ ಮಠ ಹೋಳಿಹಿಟ್ನಿ ಸಾನಿಧ್ಯದಲ್ಲಿ ಜರುಗುವ ಕಾರ್ಯಕ್ರಮದಲ್ಲಿ ಕೇದಾರಲಿಂಗ ಶರಣರು, ಕೇರೂರ, ಚನ್ನಮಲ್ಲಯ್ಯ ಮಠಪತಿ, ಸಾವಿತ್ರಮ್ಮ ಬ. ಪಾಟೀಲ, ಮಜಲಟ್ಟಿ, ಸಾವಿತ್ರಮ್ಮ ವಿಜಯನಗರೆ, ಖಡಕಲಾಟ ಇವರು ಆಶೀರ್ವಚನ ನೀಡುವರು.ಗುರುವಾರ 26 ರಂದು ಬಸವೇಶ್ವರ ಭಜನಾ ಮಂಡಳ ಯಾದಗೂಡ ಹಾಗೂ ಅಲ್ಲಮಪ್ರಭು ಭಜನಾ ಮಂಡಳ, ಚಿಂಚಣಿ ಇವರಿಂದ ಭಜನಾ ಪದಗಳು, ರೇಣುಕಾದೇವಿ ಚೌಡಕಿ ಮೇಳ ಖಡಕಲಾಟ ಇವರಿಂದ ಚೌಡಕಿ ಪದ, ಬಸವೇಶ್ವರ ನಾಟ್ಯ ಸಂಘ ಕುಂಗಟೋಳಿ ಇವರಿಂದ ಸಂಗ್ಯಾ-ಬಾಳ್ಯಾ ಸಣ್ಣಾಟ, ಶುಕ್ರವಾರ 27 ರಂದು ಶ್ರೀ ರೇಣುಕಾ ಮಾತಂಗಿ ಭಾವಚಿತ್ರ ಯಲ್ಲಮ್ಮ ಜಗ ಕುಂಭಮೇಳ ವಾದ್ಯ ಮೇಳದೊಂದಿಗೆ ಮಂದಿರಕ್ಕೆ ಬರಮಾಡಿಕೊಳ್ಳುವುದು. ಸಂಜೆ ಶ್ರೀ ಮಲ್ಲಿಕಾರ್ಜುನ ನಾಟ್ಯ ಸಂಘ, ಮಧರಖಂಡಿ ಇವರಿಂದ ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ ಭಕ್ತಿ ಪ್ರಧಾನ ನಾಟಕ ಜರುಗುವುದು. ಸಾಧಕ ಕಲಾವಿದರನ್ನು ಸತ್ಕರಿಸಲಾಗುವದೆಂದು ಸಂಘಟಕರಾದ ಭರತ ಕಲಾಚಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಬೆಳಗಾವಿ: ಮಹಾನಗರ ಪಾಲಿಕೆಯ ನೂತನ ಎರಡು ಅತ್ಯಾಧುನಿಕ ಮುಕ್ತಿ ವಾಹನಗಳನ್ನು ಉತ್ತರ ಶಾಸಕ ಆಸೀಫ್ ಸೇಠ್, ಮಹಾಪೌರ ಮಂಗೇಶ್ ಪವಾರ, ಉಪ ಮಹಾಪೌರ ವಾಣಿ ಜೋಶಿ ನೇತೃತ್ವದಲ್ಲಿ ಹಸಿರು ನಿಶಾನೆ ತೋರಿಸುವುದರ ಮೂಲಕ ಲೋಕಾರ್ಪಣೆಗೊಳಿಸಲಾಯಿತು.

ಎರಡು ಮುಕ್ತಿವಾಹನ ಲೋಕಾರ್ಪಣೆ

ಬೆಳಗಾವಿ: ಇಲ್ಲಿನ ಮಹಾನರ ಪಾಲಿಕೆ ವ್ಯಾಪ್ತಿಯಲ್ಲಿನ ಜನತೆಗೆ ಅನಕೂಲವಾಗುವ ನಿಟ್ಟಿನಲ್ಲಿ ಪಾಲಿಕೆಯು ನೂತನ ಎರಡು ಅತ್ಯಾಧುನಿಕ ಮುಕ್ತಿ ವಾಹನಗಳನ್ನು ಉತ್ತರ ಶಾಸಕ ಆಸೀಫ್ ಸೇಠ್, ಮಹಾಪೌರ ಮಂಗೇಶ್ ಪವಾರ, ಉಪ ಮಹಾಪೌರ ವಾಣಿ ಜೋಶಿ ನೇತೃತ್ವದಲ್ಲಿ ಹಸಿರು ನಿಶಾನೆ ತೋರಿಸುವುದರ ಮೂಲಕ ಲೋಕಾರ್ಪಣೆಗೊಳಿಸಲಾಯಿತು. ಬುಧವಾರ ನೂತನ ಎರಡು ಶವಗಾರ ವಾಹನಗಳನ್ನು ಉದ್ಘಾಟಿಸಿದ ಬಳಿಕ ಮಾತನಾಡಿದ, ಬೆಳಗಾವಿ ಉತ್ತರ ಶಾಸಕ ಆಸೀಫ್ ಸೇಠ್ ಅವರು, ಬೆಳಗಾವಿ ಮಹಾನಗರ ಪಾಲಿಕೆಯ ವತಿಯಿಂದ 2 ಅತ್ಯಾಧುನಿಕ ಮುಕ್ತಿವಾಹನ ಶವವಾಹಕಗಳನ್ನು ಖರೀದಿಸಲಾಗಿದೆ. ಮುಂಬರುವ ದಿನಗಳಲ್ಲಿ ಇನ್ನೆರಡು ವಾಹನಗಳನ್ನು ಖರೀದಿಸುವ ಚಿಂತನೆಯಿದೆ. ಡೈರಿ ಮೆಂಟೆನ್ ಮಾಡಿ ವಾಹನಗಳನ್ನು ನಿರ್ವಹಿಸಬೇಕು. ಎಲ್ಲರೂ ಒಗ್ಗೂಡಿ ಬೆಳಗಾವಿಯ ಅಭಿವೃದ್ಧಿಗೆ ಶ್ರಮಿಸೋಣ ಎಂದು ಹೇಳಿದರು. ದಕ್ಷಿಣ ಶಾಸಕ ಅಭಯ್ ಪಾಟೀಲ್ ಅವರ ಬೇಡಿಕೆಯಂತೆಯೇ ಇದೀಗ ಎರಡು ನೂತನ ಶವ ಸಂಸ್ಕಾರ ವಾಹನಗಳನ್ನು ಲೋಕಾರ್ಪಣೆ ಮಾಡಲಾಗಿದೆ ಎಂದರು. ಕಳೆದ ಬಾರಿ ಶವವಾಹನಗಳ ಎಂಜಿನ್ ಸೀಜ್ ಆಗಿದೆ. ಅದೇ ರೀತಿ ಮತ್ತೆ ಮರುಕಳಿಸಿದರೇ, ಅದಕ್ಕೆ ಪಾಲಿಕೆಯ ಅಧಿಕಾರಿಗಳೇ ನೇರ ಹೊಣೆಯಾಗಲಿದ್ದಾರೆ. ನಿಮ್ಮ ವೇತನದಲ್ಲಿ ಕಡಿತಗೊಳಿಸಲಾಗುವುದು ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ಈ ವೇಳೆ ಮಹಾಪೌರ ಮಂಗೇಶ್ ಪವಾರ್, ಉಪ ಮಹಾಪೌರ ವಾಣಿ ಜೋಷಿ, ಉತ್ತರ ಶಾಸಕ ಆಸೀಫ್ ಸೇಠ್, ದಕ್ಷಿಣ ಶಾಸಕ ಅಭಯ್ ಪಾಟೀಲ್, ಆಯುಕ್ತರಾದ ಕಾರ್ತಿಕ್ ಎಂ., ಸೇರಿದಂತೆ ನಗರಸೇವಕರು ಅಧಿಕಾರಿಗಳು ಇದ್ದರು.



ರಾಮದುರ್ಗ: ಬಾಗಲಕೋಟೆಯಲ್ಲಿ ಶಿವಾಜಿ ಜಯಂತಿ ಆಚರಣೆ ವೇಳೆ ಕಲ್ಲು ತೂರಾಟ ನಡೆದಿರುವ ಘಟನೆ ಖಂಡಿಸಿ ಸಿ.ಪಿ.ಐ(ಎಂ) ಪಕ್ಷದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ದುಷ್ಕರ್ಮಿಗಳ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಪ್ರತಿಭಟನಾಕಾರರು ಸರ್ಕಾರವನ್ನು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಸಿ.ಪಿ.ಎಂ. ಪಕ್ಷದ ಮುಖಂಡರಾದ ನಾಗಪ್ಪ ಸಂಗೊಳ್ಳಿ, ಮಾರುತಿ ಮುದಗುರಿ, ತುಳಸಮ್ಮ ಮಾಳದಕರ, ಫಾರುಕ ಶೇಖ ಮತ್ತು ತೌಫಿಕ ಗೋಕಾಕ ಸೇರಿದಂತೆ ಮುಂತಾದವರು ಭಾಗವಹಿಸಿದ್ದರು.

ಕುಂದು ಕೊರತೆ ಸಭೆ | ದಲಿತ ಮುಖಂಡರ ಆಗ್ರಹ
ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕಿ

ಸವದತ್ತಿ: ತಾಲೂಕಿನ ಬಹಳಷ್ಟು ಗ್ರಾಮಗಳಲ್ಲಿ ಮತ್ತು ನಗರದಲ್ಲಿ ಅಕ್ರಮವಾಗಿ ಮದ್ಯ ಮಾರಾಟವಾಗುತ್ತಿದೆ. ಮಟ್ಕಾ, ಇಸ್ಪೇಟ್ ದಂಧೆಗಳು ಹೆಚ್ಚಾಗಿದ್ದರಿಂದ ನಮ್ಮ ಯುವಕರು ದಾರಿ ತಪ್ಪುವುದರ ಜೊತೆಗೆ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ ಆದ್ದರಿಂದ ಅವುಗಳನ್ನು ಸಂಪೂರ್ಣವಾಗಿ ಬಂದ್ ಮಾಡಬೇಕು ಎಂದು ದಲಿತ ಮುಖಂಡರು ಪೊಲೀಸ್ ಅಧಿಕಾರಿಗಳಿಗೆ ಮನವಿ ಮಾಡಿದರು.

ಅವರು ಪೊಲೀಸ್ ಇಲಾಖೆ ವತಿಯಿಂದ ನಡೆದ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದ ಜನರ ಕುಂದು ಕೊರತೆ ಸಭೆಯಲ್ಲಿ ಮಾತನಾಡಿದ ಅವರು, ತಾಲೂಕಿನಲ್ಲಿ ರಾಜಾರೋಷವಾಗಿ ಅಕ್ರಮ ಮದ್ಯ ಮಾರಾಟ ನಡೆಯುತ್ತಿದೆ. ತಪ್ಪಿತಸ್ಥರ ಮೇಲೆ ಕ್ರಮ ಜರುಗುಸಬೇಕು ಎಂದು ದಲಿತ ಸಮಾಜದ ಮುಖಂಡರು ಒತ್ತಾಯಿಸಿದರು.ತಾಲೂಕಿನಾದ್ಯಂತ ನಿರ್ಮಿಸಿರುವ ಅಂಬೇಡ್ಕರ್ ಭವನಗಳಿಗೆ ಕಂಪೌಂಡ್ ಇಲ್ಲದ ಹಿನ್ನೆಲೆಯಲ್ಲಿ ಅನೈತಿಕ ಚಟುವಟಿಕೆಗಳ ತಾಣವಾಗಿವೆ. ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದರು. ಅಯ್ಯಪ್ಪ ಸ್ವಾಮಿಯ ನಗರದ ಜನರಿಗೆ ಶೌಚಾಲಯಗಳನ್ನು ಪುರಸಭೆಯಿಂದ ನಿರ್ಮಿಸಿ ಕೊಡಬೇಕು ಮತ್ತು ಅಲ್ಲಿನ ಜನರಿಗೆ ಮನೆಗಳ ಹಕ್ಕು ಪತ್ರವನ್ನು ನೀಡಬೇಕೆಂದು ನಗರ ಸಭೆ ಅಧಿಕಾರಿಗಳಿಗೆ ತಿಳಿಸಬೇಕು ಎಂದರು. ಸವದತ್ತಿ ಪೊಲೀಸ್ ಠಾಣೆಯ ಪಿಐ ಸುರೇಶ್ ಬಂಡೆಗುಂಬಳ ಮಾತನಾಡಿ, ಈಗಾಗಲೇ ಯಲ್ಲಮ್ಮನ ಗುಡ್ಡದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವವರ ಮೇಲೆ ಕ್ರಮ ಕೈಗೊಳ್ಳಲಾಗಿದೆ ಎಂದರು.



> ಸಮಾಜದ ಯಾವುದೇ ಕುಂದುಕೊರತೆಗಳು ಇದ್ದಲ್ಲಿ ತಿಳಿಸಿದರೆ ಸಂಬಂಧ ಪಟ್ಟ ಅಧಿಕಾರಿಗಳೊಂದಿಗೆ ಮಾತನಾಡಿ ಶಿಘ್ರದಲ್ಲೇ ಪರಿಹಾರ ಒದಗಿಸಲಾಗುವುದು.
> ■ ಚಿದಂಬರ ಮಡಿವಾಳರ, ರಾಮದುರ್ಗದ ಡಿವೈಎಸ್‌ಪಿ

ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಕಾರ್ಯಾಲಯದವ್ಯವಸ್ಥಾಪಕರಾದಜಿ.ಬಿ. ಪಾಟೀಲ್ ಮತ್ತು ಪಿ ಎಸ್ ಐ ಕಲ್ಮೇಶ ಬನ್ನೂರ್ ಸೇರಿದಂತೆ ಪೊಲೀಸ್ ಇಲಾಖೆ ಎಲ್ಲಾ ಸಿಬ್ಬಂದಿಗಳು ಹಾಗೂ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.ಸಭೆಯಲ್ಲಿ ದಲಿತ ಮುಖಂಡರಾದ ವೈ. ವೈ. ಕಾಳಪ್ಪನವರ, ರವಿ ದೊಡಮನಿ , ಎಲ್ಲಪ್ಪ ಗೊರವನ ಕೊಳ್ಳ , ಮಹದೇವ ಬಡ್ಲಿ, ಪಕೀರಪ್ಪ ಬಂಡಿವಡ್ಡರ, ಬಸವರಾಜ ತಳವಾರ, ಎಲ್ಲಪ್ಪ ತಳವಾರ, ಕೃಷ್ಣಾ ಮಲ್ಲೂರ, ರಾಘವೇಂದ್ರ ಪೂಜಾರ್ ಸೇರಿದಂತೆ ದಲಿತ ಸಮಾಜದ ಅನೇಕ ಮುಖಂಡರು ಸಭೆಯಲ್ಲಿ ಉಪಸ್ಥಿತರಿದ್ದರು.

ಹೈ ವೋಲ್ಟೇಜ್ ವಿದ್ಯುತ್ ತಂತಿ ಸ್ಥಳಾಂತರಕ್ಕೆ ಆಗ್ರಹ

ಯರಗಟ್ಟಿ: ಪಟ್ಟಣದ ಅಂಬೇಡ್ಕರ್ ಶಾಲಾ ಮೈದಾನದಲ್ಲಿ 11 ಕೆ.ವಿ ವಿದ್ಯುತ್ ತಂತಿ ಹಾದು ಹೋಗಿದೆ. ಇದರಿಂದ ಶಾಲಾ ಮಕ್ಕಳು ಆತಂಕದಲ್ಲಿ ಜೀವನ ಸಾಗಿಸಬೇಕಿದೆ ಎಂದು ಎಸ್‌ಡಿಎಂಸಿ ಅಧ್ಯಕ್ಷ ರಫೀಕ ಡಿ. ಕೆ. ಆರೋಪಿಸಿದ್ದಾರೆ.

» ಆತಂಕದಲ್ಲಿ ಶಾಲಾ ವಿದ್ಯಾರ್ಥಿಗಳು

ಈ ಶಾಲೆಯ ಮೇಲೆ ಹೈ ವೋಲ್ಟೇಜ್ ವಿದ್ಯುತ್ ತಂತಿ ಹಾದು ಹೋಗಿವೆ. ಇವುಗಳನ್ನು ಬದಲಿಸುವಂತೆ ದೂರು ನೀಡಿದ್ದರೂ ಇಲಾಖೆಯವರು ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ದೂರಿದ್ದಾರೆ.

ಶಾಲೆಯ ಮೇಲೆ ಹೋದರೆ ತಲೆಗೆ ತಗುಲುವಂತೆ ವಿದ್ಯುತ್ ತಂತಿಗಳಿವೆ. ಮಳೆ ಬಂದರೆ ಎಲ್ಲಿ ಶಾಲೆಯ ಗೋಡೆಗಳಿಗೆ ವಿದ್ಯುತ್ ಪ್ರವಹಿಸಿ ಅನಾಹುತ ಸಂಭವಿಸುತ್ತದೆಯೊ ಎಂಬ ಭಯ ಇಲ್ಲಿನ ಮಕ್ಕಳಲ್ಲಿದೆ.

ಕೆಲ ಎರಡು ದಿನಗಳ ಹಿಂದೆ ಮೇನ್ ಲೈನ್ ಕಟ್ಟಾಗಿ ಹೋಗಿತ್ತು. ಇಷ್ಟಾದರೂ ಅಧಿಕಾರಿಗಳು ತಂತಿ ಸ್ಥಳಾಂತರಿಸದೆ ಬೇಜವಾಬ್ದಾರಿ ಪ್ರದರ್ಶಿಸುತ್ತಿದ್ದಾರೆ ಎಂದು ಆರೋಪಿಸಿದರು.

ಕೂಡಲೇ ವಿದ್ಯುತ್ ತಂತಿಗಳನ್ನು ಸ್ಥಳಾಂತರಿಸಬೇಕು ಎಂದು ಶಿಕ್ಷಣ ಸಂಯೋಜಕ ಎಂ. ಬಿ. ಕಡಕೋಳ, ಸಿಆರ್‌ಪಿ ವಸಂತ ಬಡಿಗೇರ,ಶಾಲಾ ಪ್ರಧಾನ ಗುರುಗಳಾದ ಪಿ. ಎಂ. ತಳವಾರ, ಶಿಕ್ಷಕರಾದ ಬಿ. ಆರ್. ಮಲ್ಲೂರ, ಎಚ್. ಎ. ಮುಗಚಿಹೋಳ, ಡಿ.ಎಚ್.ಭಜಂತ್ರಿ, ಆರ್. ಎ. ಗಂಗೂರ, ಸಂತೋಷ ಚನ್ನಮೆತ್ರಿ, ಫಾರೂಕ್ ಅತ್ತಾರ, ಹಣಮಂತ ಉದ್ದಪ್ಪನವರ ಹಸನ ಹುಸೇನಾಯ್ಕರ, ಹಸನ ಶೀಗಿಹಳ್ಳಿ, ಸೋಮು ರೈನಾಪೂರ ಹಾಗೂ ಶಾಲಾ ಎಸ್‌ಡಿಎಂಸಿ ಸದಸ್ಯರು ಮತ್ತು ಅಂಬೇಡ್ಕರ್ ನಗರದ ನಿವಾಸಿಗಳು ಒತ್ತಾಯಿಸಿದ್ದಾರೆ.



ಜೆಟಿಟಿಸಿ ವಿದ್ಯಾರ್ಥಿಗೆ ಹೈದರಾಬಾದ್‌ನಲ್ಲಿ ರಜತ ಪದಕ



ಚಿಕ್ಕೋಡಿ: ಪಟ್ಟಣದ ಹೊರವಲಯದಲ್ಲಿರುವ ಸರ್ಕಾರಿ ಉಪಕರಣಾಗಾರ ಹಾಗೂ ತರಬೇತಿ ಕೇಂದ್ರ (ಜಿಟಿಟಿಸಿ)ದ ಡಿಪ್ಲೋಮಾ ಮೆಕ್ಯಾಟ್ರಾನಿಕ್ಸ್ ವಿಭಾಗದ 2ನೇ ವರ್ಷದ ವಿದ್ಯಾರ್ಥಿ ಕೌಶಲ್ ಧಾಂದಲೆ ಹೈದರಾಬಾದ ನಗರದಲ್ಲಿ ಈಚೆಗೆ ಆಯೋಜಿಸಿದ್ದ ದಕ್ಷಿಣ ಭಾರತದ ರಾಜ್ಯಗಳ ಮಟ್ಟದ ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿ ಅತ್ಯುತ್ತಮ ತಾಂತ್ರಿಕ ನೈಪುಣ್ಯತೆ ಪ್ರದರ್ಶಿಸಿ ರಜತ ಪದಕ ಪಡೆದುಕೊಂಡು ಕೇಂದ್ರಕ್ಕೆ ಕೀರ್ತಿ ತಂದಿದ್ದಾರೆ. ಈ ಮೂಲಕ ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆಎಂದು ಕೇಂದ್ರದ ಪ್ರಾಚಾರ್ಯ ಶೀತಲಕುಮಾರ ದೇವಲಾಪೂರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರ್ಕಾರ ರೈತರ ಬೇಡಿಕೆ ಈಡೇರಿಸಲಿ



ರಾಯಬಾಗ: ದೇಶಕ್ಕೆ ಅನ್ನ ನೀಡುವ ರೈತರು ದೇಶದ ಮಾಲೀಕರೇ ಹೊರತು ಗುಲಾಮರಲ್ಲ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕಾ ಅಧ್ಯಕ್ಷ ಶಿವಾಜಿ ಪಾಟೀಲ ಹೇಳಿದರು.

ತಾಲೂಕಿನ ಭಿರಡಿ ಗ್ರಾಮದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ನೂತನ ರೈತ ಸಂಘದ ಗ್ರಾಮ ಘಟಕವನ್ನು ಉದ್ಘಾಟಿಸಿ ಮಾತನಾಡಿದ ಅವರು ರೈತ ಸಂಘವು ಭ್ರಷ್ಟಾಚಾರ ವಿರುದ್ಧ ಸದಾ ಹೋರಾಟ ನಡೆಸುತ್ತಲೇ ಇದೆ. ರೈತರೆಲ್ಲರೂ ಒಗ್ಗಟ್ಟಾಗಿ ಸರ್ಕಾರದ ವಿರುದ್ಧ ಹೋರಾಟಮಾಡಿಯೇ ನಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕಾಗಿದೆ. ರೈತರ ಸಂಕಷ್ಟಗಳನ್ನು ಅರಿತು ಸೌಲಭ್ಯಗಳನ್ನು ಒದಗಿಸುವಷ್ಟು ಉದಾರತೆಸರ್ಕಾರಕ್ಕೆ ಇಲ್ಲ ಎಂದರು. ರೈತ ಸಂಘದ ಜಿಲ್ಲಾ ಸಂಚಾಲಕ ಪ್ರಕಾಶ ಪಾಟೀಲ ಮಾತನಾಡಿದರು.

ತಾಲೂಕು ಸಂಚಾಲಕ ಪುಂಡಲೀಕ ಮಾನೆ, ತಾಲೂಕಾ ಮಹಿಳಾ ಅಧ್ಯಕ್ಷೆ ಲಕ್ಷ್ಮೀ ಪೂಜೇರಿ, ಸಂಜು ಪೂಜೇರಿ, ಪ್ರದೀಪ ಸಾಗರೆ, ಭಿರಡಿ ಘಟಕದ ಅಧ್ಯಕ್ಷ ಶಿದ್ರಾಮ ತೇಲಿ, ಉಪಾಧ್ಯಕ್ಷ ರಾಜು ಹಿಪ್ಪರಗಿ, ಕಾರ್ಯದರ್ಶಿ ರಾಜು ತಿಗಡಿ, ಶ್ರೀಶೈಲ ತೇಲಿ, ಪವನ ಯಲಗುದ್ರೆ, ರಾಜು ಯಲಗುದ್ರೆ, ಸುರೇಶ ಕರಿಗಾರ, ಚಿದಾನಂದ ಬೋರಗಾಂವೆ, ಸಂಜು ಬೋರಗಾಂವೆ, ಸತೀಶ ಪಾಟೀಲ, ದಾದಾ ಮೈಶಾಳೆ, ಸದಾಶಿವ ನಿಶಾನದಾರ, ಕ್ಯಾದು ಕರ್ಲಟ್ಟಿ ಹಾಗೂ ರೈತ ಮುಖಂಡರುಉಪಸ್ಥಿತರಿದ್ದರು.

ಸರ್ಕಾರಿ ಶಾಲೆಗಳಿಗೆ ಭೇಟಿ ನೀಡಿದ ಶಾಸಕ

ಬೆಳಗಾವಿ : ಸರ್ಕಾರಿ ಶಾಲೆಗಳ ಅಭಿವೃದ್ಧಿಗಳಿಗೆ ಮೂಲಸೌಕರ್ಯಗಳನ್ನು ಒದದಗಿಸುವ ನಿಟ್ಟಿನಲ್ಲಿ, ಶಾಸಕ ಆಸೀಫ್ ಸೇಠ್ ಅವರು ತಾವೇ ಸ್ವತಃ ಶಾಲೆಗಳಿಗೆ ಭೇಟಿ ನೀಡಿ ಶಾಲೆಯಲ್ಲಿರುವ ಮೂಲಭೂತ ಸೌಕರ್ಯಗಳ ಬಗ್ಗೆ ಪರಿಶೀಲನೆ ನಡೆಸಿದರು. ಬುಧವಾರ ಬೆಳಗಾವಿ ನಗರದಲ್ಲಿರುವ ಮಾಲಿ ಗಲ್ಲಿಯ ವಿವಿಧ ಶಾಲೆಗಳಿಗೆ ಭೇಟಿ ನೀಡಿದ ಅವರು, ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ ನಡೆಸುವ ಮೂಲಕ ಶಿಕ್ಷಣದ ಗುಣಮಟ್ಟಕ್ಕೆ ಪೂರಕವಾದ ಪರಿಸರ ನಿರ್ಮಿಸುವ ಭರವಸೆ ನೀಡಿದರು. ನಗರದಲ್ಲಿರುವ ಮಾಳಿ ಗಲ್ಲಿಯಲ್ಲಿರುವ ಸರಕಾರಿ, ಮರಾಠಿ ಹಿರಿಯ ಪ್ರಾಥಮಿಕ ಶಾಲೆ ನಂ. 4, ಉರ್ದು ಹಿರಿಯ ಪ್ರಾಥಮಿಕ ಶಾಲೆ ನಂ. 2 ಮತ್ತು ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಶಾಸಕ ಆಸೀಫ್ ಸೇಠ್ ಅವರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಬೇಸಿಗೆ ಸಮಯದಲ್ಲಿ ತರಕಾರಿ, ಹೆಚ್ಚಿನ ನೀರು ಸೇವಿಸಿ

ನೇಸರಗಿ. ಬೇಸಿಗೆ ಸಮಯದಲ್ಲಿ ತಮ್ಮ ಮನೆಯ ಮೇಲೆ ಪಕ್ಷಿಗಳ ಸಲುವಾಗಿ 4 ಬಟ್ಟಲು ಕಾಳು, ನಾಲ್ಕು ಕಡೆ ನೀರು ಇಟ್ಟು, ಅದನ್ನು ಪಕ್ಷಿಗಳು ಸೇವಿಸಿ ಬಾವಿ, ಕೆರೆ, ಹಳ್ಳ ಹೊಳೆಗಳಲ್ಲಿ ಇಸಿದರೆ ಪ್ರಕೃತಿ ಸುಮಧುರವಾಗಿ ಇರುತ್ತದೆ ಎಂದು ವರದಶ್ರೀ ಫೌಂಡೇಶನ್ ಸ್ವಯಂ ಸೇವಕರಾದ ವಿಶ್ವನಾಥ ಸಣ್ಣಗೌಡರ ಹೇಳಿದರು.



ಅವರು ಇಲ್ಲಿನ ಶ್ರೀ ಚನ್ನವೃಷಬೇಂದ್ರ ಅಜ್ಜನವರ ಲೀಲಾ ಮಠದಲ್ಲಿ ವರದಶ್ರೀ ಫೌಂಡೇಶನ್ ವತಿಯಿಂದ ಜನರಿಗೆ ಕಣ್ಣು, ಕಿವಿ, ಮೂಗು ಸಂರಕ್ಷಣೆಗೆ ಸಿದ್ಧ ಹನಿ ರಸ ಹಾಕುವ ಕಾರ್ಯಕ್ರಮದಲ್ಲಿ ಮಾತನಾಡಿ, ಬೇಸಿಗೆ ಆರಂಭವಾದ ಹಿನ್ನೆಲೆಯಲ್ಲಿ ತಾವುಗಳು ಹೆಚ್ಚಿನ ಮಠದ ತರಕಾರಿ ಪಲ್ಲೆ, ನೆನೆದ ವಿವಿಧ ಕಾಳು, ಜವಾರಿ ಆಕಳಿನ ಮಜ್ಜಿಗೆ, ಹೆಚ್ಚಿನ ಪ್ರಮಾಣದಲ್ಲಿ ಸತತವಾಗಿ ನೀರು ಸೇವಿಸಿ ಆರೋಗ್ಯ ಕಾಪಾಡಿಕೊಳ್ಳಿ ಎಂದರು.

ಈ ಸಂದರ್ಭದಲ್ಲಿ ನಿವೃತ್ತ ಪ್ರಧಾನ ಶಿಕ್ಷಕರಾದ ಮಲ್ಲಿಕಾರ್ಜುನ ಮದನಬಾವಿ, ಶ್ರೀ ವಿನಾಯಕ ಕಂಪ್ಯೂಟರ್ ಮಹಾವಿದ್ಯಾಲಯದ ಸಂಸ್ಥಾಪಕರಾದ ಬಸವರಾಜ ಹಿರೇಮಠ, ಅಶೋಕ ಅಗಸಿಮನಿ, ಬಾಬಣ್ಣ ಮಾರಿಹಾಳ, ಅಣ್ಣಪ್ಪ ಮಾಳಣ್ಣವರ, ನಿವೃತ್ತ ಸೈನಿಕ ಯಲ್ಲಪ್ಪ ರೊಟ್ಟಿ ಸೇರಿದಂತೆ ಗ್ರಾಮದ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಹಿರಿಯರು,ಸಿದ್ಧ ಹನಿ ರಸ ಹಾಕಿಸಲು ಜಿಲ್ಲೆಯ ಅನೇಕ ಭಾಗಗಳಿಂದ ಬಂದಂತ ಸಾರ್ವಜನಿಕರು ಭಾಗವಹಿಸಿದ್ದರು.

ಶಾಂತಿಯುತವಾಗಿ ಹಬ್ಬ ಆಚರಿಸಿ: ಸಿಪಿಐ ಬಡಿಗೇರ

ಸುರೇಬಾನ: ಬೇರೆ ಜಿಲ್ಲೆಗಳಲ್ಲಿ ಹಿಂದು-ಮುಸ್ಲಿಂ ಗಲಾಟೆಗಳಾಗಿವೆ. ಆದರೆ, ನಮ್ಮ ಭಾಗದಲ್ಲಿ ಎಲ್ಲವೂ ಶಾಂತಿಯುತವಾಗಿದೆ ಎಂದು ರಾಮದುರ್ಗ ಸಿಪಿಐ ವಿನಾಯಕ ಬಡಿಗೇರ ಹೇಳಿದರು.

ಅವರು, ಸ್ಥಳೀಯ ಪೊಲೀಸ್ ಠಾಣೆ ಆವರಣದಲ್ಲಿ ನಡೆದ ಹೋಳಿ ಹಬ್ಬ ಹಾಗೂ ರಂಜಾನ್ ಹಬ್ಬದಪ್ರಯುಕ್ತ ನಡೆದ ಶಾಂತಿಪಾಲನಾ ಸಭೆಯನ್ನುದ್ದೇಶಿಸಿ ಮಾತನಾಡಿ, ಮದ್ಯಪಾನ, ಶಾಂತಿಭಂಗ ಮಾಡಿದ ವ್ಯಕ್ತಿಯ ಮೇಲೆ ಪ್ರತ್ಯೇಕ ಪ್ರಕರಣವನ್ನು ದಾಖಲಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸುರೇಬಾನ ಗ್ರಾಪಂನ ಮಾಜಿ ಅಧ್ಯಕ್ಷ ಶಂಕ್ರಯ್ಯ ಚಿಕ್ಕಮಠ ಮಾತನಾಡಿ, ನಮ್ಮ ಭಾಗದಲ್ಲಿ ಹಿಂದು-ಮುಸ್ಲಿಂ ಜನರು ಅನೋನ್ಯವಾಗಿದ್ದು, ನಮ್ಮಲ್ಲಿ ಯಾವುದೇ ತಂಟೆ-ತಕರಾರುಗಳಿಲ್ಲ ಎಂದು ಹೇಳಿದರು.



ಫೀರಸಾಬ ಹಿರೇಕೊಪ್ಪ ಮಾತನಾಡಿ, ಹೋಳಿ ಹಬ್ಬವಾಗಲಿ ರಂಜಾನ್ ಹಬ್ಬವಾಗಲಿ ಹಬ್ಬದ ದಿನಗಳಲ್ಲಿ ಎಲ್ಲರೂ ಸಹೋದರತೆಯಿಂದ ಹಬ್ಬಗಳನ್ನು ಆಚರಿಸುತ್ತೇವೆ. ಏನೆ ಸಣ್ಣ-ಪುಟ್ಟ ಗಲಾಟೆಗಳಾದರೆ ನಮ್ಮ ನಮ್ಮಲ್ಲೇ ಹಿರಿಯರ ಸಮ್ಮುಖದಲ್ಲಿ ಬಗೆಹರಿಸಿಕೊಳ್ಳೋಣ ಎಂದು ಮನವಿ ಮಾಡಿದರು.

> ಈಗ ಪರಿಕ್ಷಾ ದಿನ. ಮಕ್ಕಳು ಅಭ್ಯಾಸ ಮಾಡುವ ಸಂದರ್ಭದಲ್ಲಿ ಧ್ವನಿ ವರ್ಧಕ ಹಾಗೂ ಗದ್ದಲ ಗಲಾಟೆ ಮಡಬೇಡಿ. ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆ ಕೊಟ್ಟು ಅವರ ಮುಂದಿನ ಭವಿಷ್ಯ ಹಾಳು ಮಾಡಬೇಡಿ.
> ■ ವಿನಾಯಕ ಬಡಿಗೇರ,ಸಿಪಿಐ ರಾಮದುರ್ಗ.

ಈ ವೇಳೆ ಎಎಸ್‌ಐ ಎಮ್.ಬಿ.ಚೋಪ್ದಾರ ವೇದಿಕೆಯ ಮೇಲೆ ಇದ್ದರು. ಸುರೇಬಾನ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಸುತ್ತಮುತ್ತಲಿನ ಗ್ರಾಮಗಳ ಹಿಂದು ಹಾಗೂ ಮುಸ್ಲಿಂ ಮುಖಂಡರುಗಳು ಹಾಜರಿದ್ದರು. ಎಎಸ್‌ಐ ಎಸ್. ಎಲ್.ಪವಾರ ಸ್ವಾಗತಿಸಿ ವಂದಿಸಿದರು.

ವಿಜೃಂಭಣೆಯ ಅಡ್ಡ ಪಲ್ಲಕ್ಕಿ ಮೆರವಣಿಗೆ

ಯಮಕನಮರಡಿ: ಸ್ಥಳೀಯ ಸುಕ್ಷೇತ್ರ ಶೂನ್ಯ ಸಂಪಾದನ ಪೀಠ ಹುಣಸಿಕೊಳ್ಳ ಮಠದ ಗುರುಸಿದ್ಧ ಮಹಾಸ್ವಾಮಿಗಳ 32ನೇ ಪುಣ್ಯ ಸ್ಮರಣೋತ್ಸವ ಸಮಾರಂಭ ಅಂಗವಾಗಿ ಆಯೋಜಿಸಲಾಗಿದ್ದ ಏಳು ದಿನಗಳ ಆಧ್ಯಾತ್ಮಿಕ ಪ್ರವಚನ ಹಾನಿಗಳಿಗೆ ಸನ್ಮಾನ ವೇದ ಮಠಾಧೀಶರಿಂದ ಆಶೀರ್ವಚನ ಇತ್ಯಾದಿ ಕಾರ್ಯಕ್ರಮಗಳು ಯಶಸ್ವಿಯಾಗಿ ಜರುಗಿದವು. ಬುಧವಾರ ಪೂಜ್ಯರ ಭಾವಚಿತ್ರದ ಅಡ್ಡ ಪಲ್ಲಕ್ಕಿ ಮೆರವಣಿಗೆ ಕಾರ್ಯಕ್ರಮವು ಯಶಸ್ವಿಯಾಗಿ ಜರುಗಿತು.

ಕಾರ್ಯಕ್ರಮಕ್ಕೆ ಹರ ಗುರು ಚರಮೂರ್ತಿಗಳು ಉಪಸ್ಥಿತರಿದ್ದು, ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಪಲ್ಲಕ್ಕಿ ಮೆರವಣಿಗೆ ಶ್ರೀಮಠಕ್ಕೆ ಆಗಮಿಸಿದಾಗ ಶ್ರೀ ಮಠದ ಪೂಜ್ಯರಾದ ರಾಚೋಟಿ ಮಹಾಸ್ವಾಮಿಗಳು ಘಟಸ್ಥಳ ಧ್ವಜಾರೋಹಣ ನೆರವೇರಿಸಿ ಶ್ರೀ ಮಠಕ್ಕೆ ಬರಮಾಡಿಕೊಂಡು ನಂತರ ವೇದಿಕೆಯ ಮುಖಾಂತರ ಧರ್ಮಸಭೆಯು ಜರುಗಿತು.



ಶ್ರೀ ಮಠಕ್ಕೆ 800 ವರ್ಷಗಳ ಇತಿಹಾಸವಿತ್ತು. ಶ್ರೀಮಠವನ್ನು ಅನೇಕ ಹರ ಗುರು ಶರಣರು ಮುಂದುವರಿಸಿಕೊಂಡು ಬಂದು ಶ್ರೀಮಠಕ್ಕೆ ಲಿಂಗೈಕ್ಯ ಗುರುಸಿದ್ಧ ಮಹಾಸ್ವಾಮಿಗಳನ್ನು ನೇಮಕ ಮಾಡಿ ಶ್ರೀಮಠವನ್ನು ಪುಣ್ಯಕ್ಷೇತ್ರವನ್ನಾಗಿ ಮಾಡಿದ ಲಿಂಗೈಕ ಗುರುಸಿದ್ಧ ಮಹಾಸ್ವಾಮಿಗಳನ್ನು ನಾವು ಇಲ್ಲಿ ಸ್ಮರಿಸಬಹುದಾಗಿದೆ. ಮುಂಬರುವ ದಿನಗಳಲ್ಲಿ ಅಷ್ಟಶತಮಾನೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು. ಅಲ್ಲದೇ ಶ್ರೀಮಠಕ್ಕೆ ಬೇಕಾಗುವ ಎಲ್ಲಾ ವಸ್ತುಗಳಾದ ಪಲ್ಲಕ್ಕಿ ಶ್ರೀಗಳ ಮೆರವಣಿಗೆಗಾಗಿ ಬೆಳ್ಳಿ ಮೂರ್ತಿ ಮಾಡಿಸುವಲ್ಲಿ ಭಕ್ತರು ಮುಂದಾಗಿ ತಮ್ಮ ತಮ್ಮ ದೇಣಿಗೆಯನ್ನು ಸಭೆಯಲ್ಲಿ ಪ್ರಕಟಿಸಿದರ. ಬಸವ ತತ್ವ ಚಿಂತಕರು ಹಾಗೂ ಸಾಹಿತಿಗಳಾದ ಪ್ರೇಮಕ್ಕ ಅಂಗಡಿ ಅವರು ಮಾರ್ಮಿಕವಾಗಿ ಶ್ರೀಮಠದ ಪರಂಪರೆಯನ್ನು ತಮ್ಮ ಮಾತಿನಿಂದ ಭಕ್ತರ ಮನಕ್ಕೆ ಮುಟ್ಟುವಂತೆ ಮಾತನಾಡಿ ಶ್ರೀಮಠದ ಕುರಿತು ಸ್ವರಚಿತ ಕವನವನ್ನು ಹೇಳಿದರು.

ಈ ಸಂದರ್ಭದಲ್ಲಿ ಶ್ರೀಮಠದ ಆಡಳಿತ ಮಂಡಳಿ ಅಧ್ಯಕ್ಷರನ್ನು ಉಪಾಧ್ಯಕ್ಷರನ್ನು ಸರ್ವ ಸದಸ್ಯರನ್ನು ಸನ್ಮಾನಿಸಲಾಯಿತು. ಪತ್ರಕರ್ತರು ಸೇರಿದಂತೆ ಮಹಾದಾನಿಗಳಾದ ಕಿರಣ ಸಿಂಗ್ ರಜಪೂತ್ ದಂಪತಿಗಳನ್ನು ವೇದಿಕೆ ಮುಖಾಂತರ ಸನ್ಮಾನಿಸಲಾಯಿತು ಶ್ರೀಮಠದ ಉತ್ತರಾಧಿಕಾರಿಗಳಾದ ಸಿದ್ಧಬಸವ ದೇವರು ಪ್ರಾರಂಭದಲ್ಲಿ ಎಲ್ಲ ಭಕ್ತರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು, ಲೈನ್‌ಮನ್ ವಿಭೂತಿ ಮಠ ಅವರನ್ನು ವೇದಿಕೆ ಮುಖಾಂತರ ಸನ್ಮಾನಿಸಲಾಯಿತು. ನಂತರ ಮಂಗಳಾರತಿ ಮೂಲಕ ಕಾರ್ಯಕ್ರಮ ಮುಕ್ತಾಯಗೊಳಿಸಲಾಯಿತು.

ನಿರಂತರ ಅಭ್ಯಾಸದಿಂದ ಸಾಧನೆ



ಗೋಕಾಕ: ವಿದ್ಯಾರ್ಥಿಗಳು ತರಬೇತಿ ಮುಗಿದ ನಂತರವೂ ಸಹ ನಿರಂತರ ಅಭ್ಯಾಸವನ್ನು ಮಾಡಿಕೊಳ್ಳುವ ಹವ್ಯಾಸ ಬೆಳೆಸಿಕೊಂಡರೆ ಒಳ್ಳೆಯ ಸಾಧಕರಾಗಲು ಸಾಧ್ಯ ಎಂದು ಐ.ಸಿ.ಟಿ ಅಕ್ಯಾಡಮಿಯ ಸಂಸ್ಥೆಯ ಮುಖ್ಯಸ್ಥ ಡಿ.ವಿಷ್ಣು ಪ್ರಸಾದ್ ಹೇಳಿದರು.

ಬುಧವಾರ ನಗರದ ಶ್ರೀ ಸಿದ್ಧಲಿಂಗೇಶ್ವರ ಬಿ.ಸಿ.ಎ ಮಹಾವಿದ್ಯಾಲಯದಲ್ಲಿ ಬಿಸಿಎ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ ಐಸಿಟಿ ಅಕಾಡೆಮಿ ಸಂಸ್ಥೆ ಮತ್ತು ಐಬಿಎಂ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡ ನಾಲ್ಕು ದಿನಗಳ ಕೌಶಲ್ಯ ನಿರ್ಮಾಣ ತರಬೇತಿ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.ವಿದ್ಯಾರ್ಥಿಗಳು 16 ತಾಸುಗಳ ಸ್ವಯಂ ಓದಿನ ಹವ್ಯಾಸ್ಯವನ್ನು ಕರಗತ ಮಾಡಿಕೊಳ್ಳಬೇಕು ಎಂದರು.

ಸಂಸ್ಥೆಯ ನಿರ್ದೇಶಕ ಡಾ.ವಿಶ್ವನಾಥ ಶಿಂಧೋಳಿಮಠ ಮಾತನಾಡಿ, ವಿದ್ಯಾರ್ಥಿಗಳು ಅಂಕ ಗಳಿಸುವುದಕ್ಕೆ ಸಿಮಿತವಾಗದೆ ಸಮೂಹ ಸಂವಹನ ಕೌಶಲ್ಯಗಳನ್ನು ಕಲಿಯಬೇಕು. ತಂತ್ರಜ್ಞಾನ ಯುಗದಲ್ಲಿ ಕಾಪಿ ಪೇಸ್ಟ ಮಾಡದೆ ಸತ್ಯಾಸತ್ಯತೆಯನ್ನುದೃಢೀಕರಣಮಾಡಿಕೊಳ್ಳಬೇಕುಎಂದರು.ಈಸಂದರ್ಭದಲ್ಲಿ ಸಂಸ್ಥೆಯ ಆಡಳಿತಾಧಿಕಾರಿ ಅಡಿವೇಶ ಗವಿಮಠ, ಐ.ಸಿ.ಟಿ ಅಕ್ಯಾಡಮಿ ಸಂಸ್ಥೆಯ ಪ್ರವೀಣ್ ಗಸ್ತಿ, ತರಬೇತುದಾರ ಶಶಿಕಾಂತ ಉಪಸ್ಥಿತರಿದ್ದರು.

ಆರೋಗ್ಯದತ್ತ ಗಮನಹರಿಸಿ

ರಾಮದುರ್ಗ: ಕಂಪ್ಯೂಟರ್ ಯುಗದಲ್ಲಿ ಕೆಲಸದ ಒತ್ತಡ ಹಾಗೂ ಆಹಾರ ಮತ್ತು ಆಧುನಿಕ ಜೀವನ ಶೈಲಿಯಲ್ಲಿ ಮನುಷ್ಯ ತನ್ನ ಆರೋಗ್ಯ ಕಾಪಾಡಿಕೊಳ್ಳಲು ಕ್ರೀಡೆ ಪ್ರತಿಯೊಬ್ಬರಿಗೂ ಅಗತ್ಯ ಎಂದು ಹಿರಿಯ ಅಂಚೆ ಅಧೀಕ್ಷಕ ಬಸವರಾಜ ವಾಲಿಕಾರ ಹೇಳಿದರು.

ತಾಲೂಕಿನ ಚಂದರಗಿ ಕ್ರೀಡಾಶಾಲೆಯಲ್ಲಿ ನಡೆದ ಅಂಚೆ ಇಲಾಖೆಯ ಬೆಳಗಾವಿಯ ವಿಭಾಗ ಮಟ್ಟದ ಸ್ನೇಹ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದರು.



ಕಾರ್ಯಕ್ರಮದಲ್ಲಿ ಸ್ಪೋರ್ಟ್ಸ್ ಶಾಲೆ ಚಂದರಗಿ ವ್ಯವಸ್ಥಾಪಕ ಜೆ. ಬಿ. ಮೇಟಿ, ವಿಜಯ ವಾಡೋಣಿ, ನಾಗರಾಜ ಪಾಟೀಲ, ಜುಡೋ ಅಂತರ ರಾಷ್ಟ್ರೀಯ ಕ್ರೀಡಾಪಟು ಮಲಪ್ರಭಾಜಾಧವ,ಡಿವೈಎಸ್‌ಪಿ ಶ್ರೀಕಾಂತ ಮುರನಾಳ, ಬಿ ಪಿ ಮಾಳಗೆ, ನಾಗರಾಜ ಮಳ್ಳಿ , ಪ್ರವೀಣ ಶೀಲವಂತ, ಸೋಮಶೇಖರ, ಸದಾಶಿವ ಮಾಲೂರ, ಲಕ್ಷ್ಮಣ ಚವಡಿಮನಿ, ಕಾರ್ಯದರ್ಶಿ ದೇವೇಂದ್ರ ಉಳ್ಳಿಕಾಶಿ, ಮಹಾಂತೇಶ ಹೊಸಮನಿ ಇದ್ದರು.

ದಾವಲಸಾಬ ಅಣ್ಣಿಗೇರಿ ಸ್ವಾಗತಿಸಿದರು. ರಾಜು ನಡವಿನಮನಿ ನಿರೂಪಿಸಿದರು. ಶ್ರೀಶೈಲ ಹೊಸಮನಿ ವಂದಿಸಿದರು.

ಕಿರುಸುದ್ದಿ

ತೆರಿಗೆ ಪಾವತಿಸುವ ಮೂಲಕ ಸಹಕರಿಸಿ:ಶಾಸಕ ಕತ್ತಿ

ಹುಕ್ಕೇರಿ: ಗ್ರಾಮಗಳ ವಿಕಾಸ ಮತ್ತು ಅಭಿವೃದ್ಧಿಗೆ ಗ್ರಾಮಸ್ಥರ ತೆರಿಗೆ ಅವಶ್ಯಕ. ಕಾರಣ ಗ್ರಾಮಸ್ಥರು ಮನೆ ತೆರಿಗೆ ಸೇರಿದಂತೆ ವಿವಿಧ ತೆರಿಗೆಗಳನ್ನು ಪಾವತಿಸುವ ಮೂಲಕ ಸಹಕರಿಸಬೇಕೆಂದು ಶಾಸಕ ನಿಖಿಲ ಕತ್ತಿ ತಿಳಿಸಿದರು.ತಾಲೂಕಿನ ಬಸ್ತವಾಡ ಗ್ರಾಮದಲ್ಲಿ ಮನೆ ಮನೆಗೆ ತೆರಳಿ ಮೆಗಾ ತೆರಿಗೆ ವಸೂಲಾತಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು. ಗ್ರಾಮ ಪಂಚಾಯತಿಗೆ ಮೂಲಭೂತ ಸೌಲಭ್ಯ ಒದಗಿಸಲು ಮತ್ತು ಗ್ರಾಮಾಭಿವೃದ್ಧಿಗೆ ಸ್ಥಳೀಯ ತೆರಿಗೆ ಬಳಸಿಕೊಳ್ಳಲು ಅವಕಾಶ ಇದ್ದು ಅದಕ್ಕಾಗಿ ತೆರಿಗೆ ವಸೂಲಾತಿಗೆ ಗ್ರಾಮಸ್ಥರ ಸಹಕಾರ ಅವಶ್ಯವೆಂದರು. ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಒಂದು ವಾರದಿಂದ ಹುಕ್ಕೇರಿ ಮತಕ್ಷೇತ್ರದ ಎಲ್ಲ ಗ್ರಾಮಗಳಿಗೆ ಭೇಟಿ ನೀಡಿ ಜನರ ಸಮಸ್ಯೆ ಆಲಿಸಿ ಅವುಗಳನ್ನು ಪರಿಹರಿಸಲು ಸಂಬಂಧಿತ ಅಧಿಕಾರಿಗಳಿಗೆ ತಿಳಿಸಿದ್ದೇನೆ. ಕೆಲವು ಗ್ರಾಮಗಳಲ್ಲಿ ಅವಶ್ಯಕತೆ ಇರುವ ಮೂಲಭೂತ ಸಮಸ್ಯೆಗಳನ್ನು ತ್ವರಿತವಾಗಿ ಈಡೇರಿಸಲು ಹೇಳಿದ್ದೇನೆ. ಪ್ರಮುಖವಾಗಿ ಬಸ್ತವಾಡ ಗ್ರಾಮದಿಂದ ಹುಕ್ಕೇರಿ ಸಂಪರ್ಕ ರಸ್ತೆ ಸುಧಾರಣೆ, ನಿರಂತರ ಜ್ಯೋತಿಗಾಗಿ ಹೆಚ್ಚುವರಿ ಟಿ.ಸಿ ಅಳವಡಿಕೆಯ ಮನವಿ ಈಡೇರಿಸುವುದು. ಎಲಿಮುನ್ನೋಳಿ ಗ್ರಾಮದ ರಸ್ತೆ ಸುಧಾರಣೆ, ಪ್ರಾಥಮಿಕ ಆರೋಗ್ಯ ಕೇಂದ್ರ, ಹಳ್ಳದ ಬಳಿ ಸೇತುವೆ ಎತ್ತರಗೊಳಿಸುವುದು, ಬೆಳವಿ ಗ್ರಾಮದಲ್ಲಿ 64 ಲಕ್ಷ ರೂ ವೆಚ್ಚದಲ್ಲಿ ಆಯುಷ್ಯ ಆರೋಗ್ಯ ಆಸ್ಪತ್ರೆ ನಿರ್ಮಾಣ, ಎಸ್.ಸಿ ಸಮುದಾಯಕ್ಕೆ ಪ್ರತ್ಯೇಕ ಎರಡು ಸಮುದಾಯ ಭವನಗಳ ನಿರ್ಮಾಣಕ್ಕೆ ಅನುಮೋದನೆ, ಕಡಹಟ್ಟಿ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಪೂರೈಕೆ, ರಸ್ತೆ ಹಾಗೂ ಚರಂಡಿ ನಿರ್ಮಾಣ, ದೇವಸ್ಥಾನಗಳಿಗೆ ಆವರಣ ಗೋಡೆ ಸೇರಿದಂತೆ ಹಲವಾರು ಕಾರ್ಯಗಳನ್ನು ಕೈಗೊಳ್ಳುತ್ತಿರುವುದಾಗಿ ತಿಳಿಸಿದರು. ಗ್ರಾಮಸ್ಥರು ಶಾಸಕರನ್ನು ಸನ್ಮಾನಿಸಿದರು.ವಿದ್ಯುತ್ ಸಹಕಾರಿ ಸಂಘದ ಅಧ್ಯಕ್ಷ ಮಹಾವೀರ ನಿಲಜಗಿ, ನಿರ್ದೇಶಕರಾದ ಸತ್ತೆಪ್ಪಾ ನಾಯಿಕ, ಕೆಂಪಣ್ಣಾ ವಾಸೇದಾರ, ಶಿವನಗೌಡ ಮದವಾಲ, ಮುಖಂಡರಾದ ಮಹಾನಿಂಗ ಸನದಿ, ತಮ್ಮಣ್ಣಾ ಕರಗುಪ್ಪಿ, ಈರಣ್ಣಾ ಹೂಗಾರ, ಆನಂದ ಲಕ್ಕುಂಡಿ, ಬಿ.ಕೆಮಗೆನ್ನವರ, ದಯಾನಂದ ವಂಟಮೂರಿ, ಅಶೋಕ ಪಾಟೀಲ, ನೇಮಣ್ಣಾ ಮಗದುಮ್ಮ, ಭುವನೇಶ ಪಾಟೀಲ, ಶ್ರೀಕಾಂತ ಖೇಮಲಾಪುರೆ, ಗುರುರಾಜ ಕುಲಕರ್ಣಿ, ಅಶೋಕ ಚೌಗಲಾ, ಮನೋಹರ ಚೌಗಲಾ, ಮಹಾವೀರ ಹಲಕರ್ಣಿ, ಎನ್.ಬಿ. ತೇರದಾಳ ಸೇರಿದಂತೆ ಆಯಾ ಗ್ರಾಮಗಳ ಮುಖಂಡರು ಮತ್ತು ಅಧಿಕಾರಿಗಳಿದ್ದರು.

ಇಂದು ಉಚಿತ ಆರೋಗ್ಯ ತಪಾಸಣೆ ಶಿಬಿರ

ಯಮಕನಮರಡಿ : ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕೆಎಲ್ಇ ಆಸ್ಪತ್ರೆ ಬೆಳಗಾವಿ ಹಾಗೂ ಮಹಿಳಾ ಕಲ್ಯಾಣ ಸಂಸ್ಥೆ, ಬೆಳಗಾವಿ ಸಹಯೋಗದಲ್ಲಿ ಯಮಕನಮರಡಿ ಗ್ರಾಮದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು



ಆಯೋಜಿಸಲಾಗಿದೆ.ಫೆ.26 ರಂದು ಬೆಳಿಗ್ಗೆ 10ಗಂಟೆಯಿಂದ ಮಧ್ಯಾಹ್ನ 3ಗಂಟೆಯವರೆಗೆ ಹುಕ್ಕೇರಿ ತಾಲೂಕಿನ ಯಮಕನಮರಡಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಶಿಬಿರ ನಡೆಯಲಿದೆ. ಶಿಬಿರದಲ್ಲಿ ನುರಿತ ಸ್ತ್ರೀರೋಗ ತಜ್ಞರು ಭಾಗವಹಿಸಿ ಸ್ತನ ಕ್ಯಾನ್ಸರ್, ಗರ್ಭಕೋಶ ಕ್ಯಾನ್ಸರ್ ಕುರಿತು ಮಾಹಿತಿ ನೀಡಲಿದ್ದಾರೆ. ಕೆ.ಎಲ್.ಇ. ಆಸ್ಪತ್ರೆಯ ವೈದ್ಯರು ಬಾಯಿ ಕ್ಯಾನ್ಸರ್ ಸೇರಿದಂತೆ ವಿವಿಧ ಕ್ಯಾನ್ಸರ್‌ಗಳ ಕುರಿತು ತಪಾಸಣೆ ಮತ್ತು ಮಾರ್ಗದರ್ಶನ ನೀಡಲಿದ್ದಾರೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶಿಬಿರದ ಸದುಪಯೋಗ ಪಡೆದುಕೊಳ್ಳುವಂತೆ ಮಹಿಳಾ ಕಲ್ಯಾಣ ಸಂಸ್ಥೆಯ ಗೌರವ ಕಾರ್ಯದರ್ಶಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜ್ಯೋತಿಬಾ ಪಾಟೀಲ ಕಾಣೆ

ಬೆಳಗಾವಿ : ಅವಚಾರಹಟ್ಟಿಯ ವಿಠಲಾಯಿಗಲ್ಲಿ ನಿವಾಸಿ ಜ್ಯೋತಿಬಾ ಮಾರುತಿ ಪಾಟೀಲ (37) ಎಂಬ ವ್ಯಕ್ತಿ ಡಿಸೆಂಬರ್ 12, 2024 ರಂದು ಎಲ್ಲಿಯೋ ಹೋಗಿ ಇಲ್ಲಿಯವರೆಗೆ, ಮರಳಿ ಬಾರದೇ ಕಾಣೆಯಾಗಿರುತ್ತಾನೆ. ಈ ಕುರಿತು ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾಣೆಯಾದ ವ್ಯಕ್ತಿಯ ಚಹರೆ ಪಟ್ಟಿ; 5 ಫೂಟ್ 5 ಇಂಚು ಎತ್ತರ, ಹೋಳು ಮುಖ, ಅಗಲ ಮೂಗು, ಗೋಧಿಗೆಂಪು ಮೈ ಬಣ್ಣ, ಕನ್ನಡ, ಮರಾಠಿ ಭಾಷೆ ಮಾತನಾಡುತ್ತಾನೆ ಹಾಗೂ ಕ್ರೀಮ್ ಬಣ್ಣದ ಟೀ ಶರ್ಟ ಮತ್ತು ಕಪ್ಪು ಬಣ್ಣದ ಪ್ಯಾಂಟ್ ಧರಿಸಿರುತ್ತಾನೆ. ಈ ಪ್ರಕಾರದ ಚಹರೆಯುಳ್ಳ ವ್ಯಕ್ತಿಯ ಬಗ್ಗೆ ಮಾಹಿತಿ ದೊರೆತಲ್ಲಿ ಪೊಲೀಸ್ ಆಯುಕ್ತರು ಬೆಳಗಾವಿ ನಗರ ಅಥವಾ ಪೊಲೀಸ್ ಇನ್‌ಸ್ಪೆಕ್ಟರ ಬೆಳಗಾವಿ ಗ್ರಾಮೀಣ ಪೊಲೀಸ್ ಠಾಣೆ ಬೆಳಗಾವಿ ಇವರಿಗೆ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.



ಹುಕ್ಕೇರಿ: ತಾಲೂಕಿನ ಬಸ್ತವಾಡ ಗ್ರಾಮದಲ್ಲಿ ಮನೆ ಮನೆಗೆ ತೆರಳಿ ಮೆಗಾ ತೆರಿಗೆ ವಸೂಲಾತಿ ಅಭಿಯಾನಕ್ಕೆ ಚಾಲನೆ ನೀಡಿದ ಶಾಸಕ ನಿಖಿಲ ಕತ್ತಿ ಅವರನ್ನು ಗ್ರಾಮಸ್ಥರು ಹಾಗೂ ಗ್ರಾಪಂ ಸಿಬ್ಬಂದಿ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಇದ್ದರು.

ರಸ್ತೆ ಸುಧಾರಣಾ ಕಾಮಗಾರಿಗೆ ಭೂಮಿಪೂಜೆ

ಚಿಕ್ಕೋಡಿ: ಕರಗಾಂವ, ಬೆಂಡವಾಡ ಹಾಗೂ ಜೈ ಹನುಮಾನ, ಶಿವಶಕ್ತಿ ಏತ ನೀರಾವರಿ ಯೋಜನೆಗಳನ್ನು ಹಂತ ಹಂತವಾಗಿ ಜಾರಿಗೆ ತರುವ ಮೂಲಕ ರಾಯಬಾಗ ಮತಕ್ಷೇತ್ರವನ್ನು ಹಸಿರಾಗಿಸುತ್ತೇನೆ ಎಂದು ರಾಯಬಾಗ ಶಾಸಕ ದುರ್ಯೋಧನ ಐಹೊಳೆ ಹೇಳಿದರು.

ತಾಲೂಕಿನ ಕರೋಶಿ ಗ್ರಾಮದ ಹೊರವಲಯದಲ್ಲಿ ಬುಧವಾರ 60 ಲಕ್ಷ ರೂ. ಅನುದಾನದಲ್ಲಿ ಕರೋಶಿ-ಕುಂಗಟೋಳಿ ಮುಖ್ಯರಸ್ತೆಯಿಂದ ಕಮತೇನಹಟ್ಟಿ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಕರಗಾಂವ ಏತ ನೀರಾವರಿ ಯೋಜನೆ ಪ್ರಗತಿಯಲ್ಲಿದ್ದು, ಇನ್ನುಳಿದ ನೀರಾವರಿ ಯೋಜನೆಗಳಿಗೆ ಅನುದಾನ ತರಲು ಪ್ರಯತ್ನಿಸಲಾಗುತ್ತಿದೆ. 30 ಕೋಟಿ ರೂ.ವೊತ್ತದಲ್ಲಿ ಜೈನಾಪೂರ ಬಹುಗ್ರಾಮ ಕುಡಿಯುವ ನೀರು ಪೂರೈಕೆ ಯೋಜನೆ ಮುಕ್ತಾಯದ ಹಂತದಲ್ಲಿದೆ ಎಂದರು.

ಬಿಜೆಪಿ ಮುಖಂಡ ಮಹೇಶ ಭಾತೆ ಮಾತನಾಡಿ, ಯಾದಗೂಡ, ಕರಗಾಂವ, ಬೆನ್ನಿಹಳ್ಳಿ ಹಾಗೂ ಕಮತನೇಹಟ್ಟಿ ಗ್ರಾಮದ ಜನರಿಗೆ ಈ ರಸ್ತೆಯಿಂದ ಸಾಕಷ್ಟು ಅನುಕೂಲವಿದೆ. ಇನ್ನುಳಿದ ರಸ್ತೆ ಅಭಿವೃದ್ಧಿ ಕಾಮಗಾರಿಗೂ ಶೀಘ್ರ ಅನುದಾನ ಬಿಡುಗಡೆ ಮಾಡಿ ಪೂರ್ಣಗೊಳಿಸಲು ಪ್ರಯತ್ನಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ವಿಜಯ ಕೋಟಿವಾಲೆ, ಪಂಚಾಕ್ಷರಿ ಹಳಿಜೋಳೆ, ಬಾಳು ಮುಗಳಿ, ದುಂಡಯ್ಯ ಪೂಜೇರಿ, ರಾಜು ಕೊಟಗಿ, ಸುರೇಶ ಕೇಸ್ತಿ, ಕಲ್ಲಪ್ಪ ಕುಂಬಾರ, ಏಕನಾಥ ಜಡೆ, ಯುಸೂಫ ಪಟೇಲ, ಬಾಬು ಪಾಟೀಲ ಮುಂತಾದವರು ಇದ್ದರು.



ಚಿಕ್ಕೋಡಿ:ತಾಲೂಕಿನ ಕರೋಶಿ ಗ್ರಾಮದ ಹೊರ ವಲಯದಲ್ಲಿ ಬುಧವಾರ 60 ಲಕ್ಷ ರೂ.ಅನುದಾನದಲ್ಲಿ ಕರೋಶಿ-ಕುಂಗಟೋಳಿ ಮುಖ್ಯರಸ್ತೆಯಿಂದ ಕಮತೇನಹಟ್ಟಿ ರಸ್ತೆ ಕಾಮಗಾರಿಗೆ ಶಾಸಕ ದುರ್ಯೋಧನ ಐಹೊಳೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಗ್ರಾಮಸ್ಥರು ಹಾಗೂ ಕಾರ್ಯಕರ್ತರು, ಅಭಿಮಾನಿಗಳು ಇದ್ದರು.

ಪರಿಸರ ಸ್ನೇಹಿ ಮನೆಗಳಿಗೆ ಆಸ್ತಿ ತೆರಿಗೆಯಲ್ಲಿ ರಿಯಾಯಿತಿ!

ಬೆಳಗಾವಿ: ಇಲ್ಲಿನ ಮಹಾನಗರ ಪಾಲಿಕೆಯ ಸಭಾಂಗಣದಲ್ಲಿ ವಿಶೇಷ ಪರಿಷತ್ ಸಭೆ ಜರುಗಿತು. 2026-27ನೇಸಾಲಿನವಾರ್ಷಿಕ ಆಯವ್ಯಯವನ್ನು ಮಂಡಿಸಿದ ತೆರಿಗೆ ಮತ್ತು ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷೆ ರೇಖಾ ಹೂಗಾರ ಅವರು, ನಗರದ ಸಮಗ್ರ ಅಭಿವೃದ್ಧಿ ಹಾಗೂ ಜನಕಲ್ಯಾಣಕ್ಕೆ ಒತ್ತು ನೀಡುವ 92 ಲಕ್ಷ ರೂ.ಗಳ ಉಳಿತಾಯ ಬಜೆಟ್ ಮಂಡಿಸಲಾಯಿತು.

ಬುಧವಾರ ಮಹಾನಗರ ಪಾಲಿಕೆಯ ಆಡಳಿತಾರೂಢ ಮಂಡಳಿಯು, ಬೆಳಗಾವಿ ನಗರದ ಅಭಿವೃದ್ಧಿಗಾಗಿ 442.54 ಕೋಟಿ ರೂಪಾಯಿಗಳ ಬಜೆಟ್ ಮಂಡಿಸಿತು. ಸ್ಥಾಯಿ ಸಮಿತಿ ಅಧ್ಯಕ್ಷೆ ರೇಖಾ ಹೂಗಾರ ಅವರು ಮಂಡಿಸಿದರು.

ಈ ಆಯವ್ಯಯದಲ್ಲಿ ಒಟ್ಟು 441.62 ಕೋಟಿ ರೂಪಾಯಿಗಳನ್ನು ಅಭಿವೃದ್ಧಿ ಕಾರ್ಯಗಳಿಗಾಗಿ ವೆಚ್ಚ ಮಾಡಲು ನಿರ್ಧರಿಸಲಾಗಿದ್ದು, ಅಂತಿಮವಾಗಿ 92.32 ಲಕ್ಷ ರೂಪಾಯಿಗಳ ಉಳಿತಾಯವನ್ನು ತೋರಿಸಲಾಗಿದೆ. ಬಜೆಟ್‌ನಲ್ಲಿ ಎಸ್ಸಿ-ಎಸ್ಟಿ ವರ್ಗದ ಅಭಿವೃದ್ಧಿ, ಮಹಿಳಾ ಸಬಲೀಕರಣ ಹಾಗೂ ಸ್ವಚ್ಛ ನಗರದ ಗುರಿಯೊಂದಿಗೆ ವೈಜ್ಞಾನಿಕ ಘನತ್ಯಾಜ್ಯ ವಿಲೇವಾರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

ಈ ಬಾರಿಯ ಬಜೆಟ್‌ನಲ್ಲಿ ಪೌರಕಾರ್ಮಿಕರು ಮತ್ತು ಪಾಲಿಕೆ ಸಿಬ್ಬಂದಿಗೆ ವಿಶೇಷ ಆದ್ಯತೆ ನೀಡಲಾಗಿದ್ದು, ಅವರಿಗಾಗಿ ಆರೋಗ್ಯ ವಿಮೆ ಹಾಗೂ ದಿನನಿತ್ಯದ ಉಪಹಾರ ವ್ಯವಸ್ಥೆಯನ್ನು ಘೋಷಿಸಲಾಗಿದೆ.



- ಬೆಳಗಾವಿ ಪಾಲಿಕೆಯ 442 ಕೋಟಿ ರೂ.ಗಳ ಉಳಿತಾಯ ಬಜೆಟ್ ಮಂಡನೆ
- ಸ್ಥಾಯಿ ಸಮಿತಿ ಅಧ್ಯಕ್ಷೆ ರೇಖಾ ಹೂಗಾರ ಅವರು ಮಂಡಿಸಿದರು.

ವಿಶೇಷವಾಗಿ ಪರಿಸರ ಸ್ನೇಹಿ ಕಟ್ಟಡಗಳನ್ನು ಉತ್ತೇಜಿಸಲು ಅಂತಹ ಮನೆಗಳ ಆಸ್ತಿ ತೆರಿಗೆಯಲ್ಲಿ ರಿಯಾಯಿತಿ ನೀಡಲು ನಿರ್ಧರಿಸಲಾಗಿದೆ. ಅಲ್ಲದೆ, ಸ್ವಾತಂತ್ರ್ಯದ ಯೋಧರಿಗೆ ನೀಡಲಾಗುತ್ತಿರುವ ಶೇ.10ರಷ್ಟು ಆಸ್ತಿ ತೆರಿಗೆ ರಿಯಾಯಿತಿಯನ್ನು ಈ ವರ್ಷವೂ ಮುಂದುವರಿಸಲು ಪಾಲಿಕೆ ನಿರ್ಧರಿಸಿದೆ.

ಆಡಳಿತ ಪಕ್ಷದ ನಾಯಕ ಹನಮಂತ ಕೊಂಗಾಲಿ ಅವರು 92.32 ಲಕ್ಷ ಉಳಿ ತಾಯ ಮೌಲ್ಯದ ಬಜೆಟ್ ಮೊದಲ ಬಾರಿ ಮಂಡಿಸಲಾಗುತ್ತಿದೆ. ಶೇಕಡಾ 85 ರಷ್ಟು ಕರವನ್ನು ಸಂಗ್ರಹವನ್ನು ನಿರೀಕ್ಷಿಸಲಾಗಿದೆ ಎಂದು ಹೆಚ್ಚಿನ ಮಾಹಿತಿಯನ್ನು ನೀಡಿದರು.

ವಿಪಕ್ಷ ಸದಸ್ಯ ರವಿ ಸಾಳುಂಕೆ ಅವರು ಮೊದಲಿನ ಕಮಿಷ್ನರಂತೆ ರಸ್ತೆಗಿಳಿದು ಬಾಕಿ ಉಳಿದ ಕರವನ್ನು ಕೈಗಾರಿಕೋದ್ಯಮಿಗಳು, ವಾಣಿಜ್ಯೋದ್ಯಮಗಳಿಂದ ಪಡೆಯಲು ಸಲಹೆ ನೀಡಿದರು. ಇನ್ನು ವಿಪಕ್ಷ ಸದಸ್ಯ ರಿಯಾಝು ಕಿಲ್ಲೇದಾರ ಅವರು ಬಾಕಿ ಕರ ಸಂದಾಯವಾಗುವವರೆಗೂ ಅಭಿವೃದ್ಧಿ ಅಸಾಧ್ಯ ಎಂದರು. ಇನ್ನು ಅಝೀಮ್ ಪಟ್ವೆಗಾರ ಅವರು ಬಜೆಟಿಗೆ ಸಂಬಂಧಿಸಿದಂತೆ ಸಭೆ ಕರೆದು ಇನ್ನಷ್ಟು ಅಧ್ಯಯನ ಮಾಡಬೇಕಿದೆ ಎಂದರು.

ಮೇಯರ್ ಮಂಗೇಶ ಪವಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ಉಪಮೇಯರ್ ವಾಣಿ ಜೋಶಿ, ಆಯುಕ್ತ ಕಾರ್ತಿಕ್ ಎಂ. ಸೇರಿದಂತೆ ಹಲವು ಕಾರ್ಪೊರೇಟರ್ ಇದ್ದರು.

ಆಸ್ತಿಗಾಗಿ ವ್ಯಕ್ತಿಯ ಬರ್ಬರ್ ಕೊಲೆ: ಪತ್ನಿ, ಮಗ ಸೇರಿ ನಾಲ್ವರ ಬಂಧನ

ಚನ್ನಮ್ಮನ ಕಿತ್ತೂರು : ಜಮೀನು ಕಬಳಿಸುವ ಉದ್ದೇಶದಿಂದ ತಾಯಿ, ಮಗ ಮತ್ತು ಇತರರು ಇಬ್ಬರು ಸೇರಿಕೊಂಡು ಹತ್ಯೆ ಮಾಡಿದ ಘಟನೆ ಕಿತ್ತೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬೆಳಕಿಗೆ ಬಂದಿದೆ.

ತನಿಖೆಯ ವೇಳೆ ಮೃತ ವ್ಯಕ್ತಿ ಹಿರೇನಂದಿಹಳ್ಳಿ ಗ್ರಾಮದ ಕಲ್ಮೇಶ ಶಂಕರಪ್ಪ ಕೋಟಿ (50) ಎಂದು ಗುರುತಿಸಲಾಗಿದೆ. ಆರೋಪಿತರಾದ ಹಿರೇನಂದಿಹಳ್ಳಿ ಗ್ರಾಮದ ಮಹೇಶ ಮಡಿವಾಳಪ್ಪ ಅಂಬಣ್ಣವರ ಹಾಗೂ ಮುದಕಪ್ಪ ಪದ್ಮರಾಜ ಕೋಳಿಕರ, ಮೃತನ ಪತ್ನಿ ಕಸ್ತೂರಿ ಕಲ್ಮೇಶ ಕೋಟಿ, ಮೃತನ ಪುತ್ರ ಕಿರಣ ಕಲ್ಮೇಶ ಕೋಟಿ ಆರೋಪಿತರೊಂದಿಗೆ ಸೇರಿ, ಮೃತನ ಹೆಸರಿನಲ್ಲಿರುವ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸಂಚು ರೂಪಿಸಿ ಕೊಲೆ ಮಾಡಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಕಳೆದ 8 ದಿನಗಳ ಹಿಂದೆ ಗೋವಿನ ಜೋಳದ ಜಮೀನಿನಲ್ಲಿ ಪತ್ತೆಯಾಗಿದ್ದ ಅಪರಿಚಿತ ವ್ಯಕ್ತಿಯ ಕೊಲೆ ಪ್ರಕರಣವನ್ನು ಕಿತ್ತೂರ ಪೊಲೀಸರು ಭೇದಿಸಿ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ. ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಆಯುಧದಿಂದ ಹೊಡೆದು ಕೊಲೆ ಮಾಡಿ, ಸಾಕ್ಷ್ಯ ನಾಶ ಮಾಡುವ ಉದ್ದೇಶದಿಂದ ತಾಲೂಕಿನ ಹಿರೇನಂದಿಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿ ಗೋವಿನ ಜೋಳದ ಬೆಳೆ ನಡುವೆ ಶವವನ್ನು ತಂದು ಹಾಕಿರುವದು ಈ ಬಗ್ಗೆ ಕಿತ್ತೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಚಂದ್ರಶೇಖರ ಹನುಮನಾಳ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ಬೆಳಕಿಗೆ ಬಂದಿದೆ.

ಪ್ರಕರಣದ ತನಿಖೆಯನ್ನು ಹೆಚ್ಚುವರಿ ಪೊಲೀಸ್ ಅಧೀಕ್ಷಕ ರಾಮಗೊಂಡ ಬಸರಗಿ, ಬೈಲಹೊಂಗಲ ಡಿಎಸ್.ಪಿ ಡಾ. ವೀರಯ್ಯ ಹಿರೇಮಠ ಮಾರ್ಗದರ್ಶನದಲ್ಲಿ, ಕಿತ್ತೂರ ಸಿಪಿಐ ಶಿವಾನಂದ ಗುಡಗನಟ್ಟಿ, ಪಿಎಸ್ಐ ಪ್ರವೀಣ ಗಂಗೋಳ ನೇತೃತ್ವದ ತಂಡ ಯಶಸ್ವಿಯಾಗಿ ನಡೆಸಿದೆ. ತನಿಖಾ ತಂಡದ ಕಾರ್ಯವನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಶ್ಲಾಘಿಸಿದ್ದಾರೆ.



ಮಾಜಿ ಸಚಿವ ಎ.ಬಿ. ಪಾಟೀಲ, ನಾನು ಒಂದೇ: ಸಚಿವ ಜಾರಕಿಹೊಳಿ

ಹುಕ್ಕೇರಿ: ಸಂಘ- ಸಂಸ್ಥೆ ವಿಚಾರ ಬಂದಾಗ ಎ.ಬಿ. ಪಾಟೀಲ ಹಾಗೂ ನಾವು ಬೇರೆ ಬೇರೆ, ಆದರೆ ಪಕ್ಷದ ವಿಚಾರ ಬಂದಾಗ ನಾವು ಅವರು ಒಂದೇ ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.



ಬುಧವಾರ ಹುಕ್ಕೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸ್ಥಳೀಯವಾಗಿ ಸಂಘ-ಸಂಸ್ಥೆಗಳ ಚುನಾವಣೆ ಬಂದಾಗ ಮಾಜಿ ಸಚಿವ ಎ.ಬಿ.ಪಾಟೀಲ ಅವರು ಬೇರೆ ಬೇರೆಯಾಗಿದ್ದೇವೆ ಹೊರತು ಪಕ್ಷದ ವಿಚಾರ ಬಂದಾಗ ನಾವು ಅವರು ಕೂಡಿ ಪ್ರಚಾರ ಮಾಡುತ್ತೇವೆ. ಹೀಗಾಗಿ ಪಕ್ಷದ ಚಿಹ್ನೆ ಬಂದಾಗ ನಾವು- ಮಾಜಿ ಸಚಿವ ಎ.ಬಿ.ಪಾಟೀಲ ಒಟ್ಟಾಗಿ ಪಕ್ಷದ ಪರ ಪ್ರಚಾರ ಮಾಡುತ್ತೇವೆ ಎನ್ನುವ ಮೂಲಕ ವಿರೋಧಿಗಳಿಗೆ ನಾವು ಒಗ್ಗಟ್ಟಾಗಿದ್ದೇವೆ ಎಂಬ ಸಂದೇಶ ಸಾರಿದರು.

ಭೂಗಳ್ಳರ ವಿರುದ್ಧ ಕಠಿಣ ಕಾನೂನು ಕ್ರಮ: ನಕಲಿ ಆಧಾರಕಾರ್ಡ್ ಸೃಷ್ಟಿಸಿ ಜಮೀನು ಕಬಳಿಕೆ ಮಾಡುವಂತಹ ಭೂಗಳ್ಳರ ವಿರುದ್ಧ ಈಗಾಗಲೇ ಕಠಿಣ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೇ ಹುಕ್ಕೇರಿ ತಾಲೂಕಿನಲ್ಲಿ ಭೂಗಳ್ಳರ ಪ್ರಕರಣಗಳು ಸಾಕಷ್ಟು ಕಂಡು ಬರುತ್ತಿದ್ದು, ಇಂಥಹ ದಂಧೆಗೆ ಕೈಹಾಕಿದ ವ್ಯಕ್ತಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಇಡಿ ಜಿಲ್ಲೆಯಲ್ಲೇ ಈ ಭೂ ಮಾಫೀಯಾಗೆ ಕಡಿವಾಣ ಹಾಕಲು ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು. 25 ಶಾಸಕರು ನಮಗೂ ಸಚಿವ ಸ್ಥಾನ ನೀಡಬೇಕೆಂದು ಹೈಕಮಾಂಡ್ ಗೆ ಪತ್ರ ಬರೆದಿದ್ದಾರೆ. ಎಂಬ ಪ್ರಶ್ನೆಗೆ ಉತ್ತರಿಸಿದ ಸಚಿವರು, 25 ಶಾಸಕರಿಗೆ ಸಚಿವ ಸ್ಥಾನ ಬೇಕೆನ್ನುವದರಲ್ಲಿ ತಪ್ಪೇನಿದೆ. ಅವರವರ ಅರ್ಹತೆ ನೋಡಿ ಅವರಿಗೆ ಕೊಡಬಹುದು. ಇಲ್ಲವೆಂದು ಯಾರು ಎಲ್ಲಿಯೂ ಹೇಳಿಲ್ಲ ಎಂದು ಹೇಳಿದರು.

ಸರಕಾರಿ ಹುದ್ದೆಗಳ ನೇಮಕಾತಿಯಲ್ಲಿ ವಿಳಂಬ ಮಾಡುತ್ತಿರುವುದನ್ನು ಖಂಡಿಸಿ ವಿದ್ಯಾರ್ಥಿಗಳು ಪ್ರತಿಭಟನೆ ಮಾಡಿದ್ದಾರೆ. ಇದು ಬಿಜೆಪಿ ಹಾಗೂ ಕಾಂಗ್ರೆಸ್ ಸಮಸ್ಯೆಯಲ್ಲ. ಇದರ ಬಗ್ಗೆ ಈಗಾಗಲೇ ಸಿಎಂ ಸಿದ್ದರಾಮಯ್ಯ ಅವರು ಕೂಡಾ ಒಂದು ಸಭೆ ಮಾಡಿದ್ದಾರೆ ಎಂದು ಹೇಳಿದರು.

ದಲಿತ ಸಿಎಂ ಕೂಗು; ನಮ್ಮ ಕೈಯಲ್ಲಿ ಇಲ್ಲ

ದಲಿತ ಸಿಎಂ ಬಗ್ಗೆ ಹೇಳುವದರಿಂದ ಸುಮ್ಮನೆ ಅನಾವಶ್ಯಕ ಸಮಸ್ಯೆ ಉದ್ಭವವಾಗುತ್ತಿದೆ ಹೊರತು ಉಪಯೋಗ ಏನು ಆಗುವದಿಲ್ಲ. ಅಷ್ಟಾಗ್ಯೂ ದಲಿತ ಸಿಎಂ ಕೂಗು ನಮ್ಮ ಕೈಯಲ್ಲಿಲ್ಲ ಎಂದು ಹೇಳಿದರು.

ಚಿದಂಬರ ಸೌಹಾರ್ದ ಪತ್ತಿನ ನೂತನ ಶಾಖೆ ಉದ್ಘಾಟನೆ

ಸವದತ್ತಿ: ನಗರ ಸಭೆ ಪಕ್ಕದಲ್ಲಿರುವ ಇಜಂತಕರವರ ಕಟ್ಟಡದಲ್ಲಿ ಶಾಸಕ ವಿಶ್ವಾಸ ವೈದ್ಯರವರು ಚಿದಂಬರ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಬೆಂಗಳೂರು ನೂತನ 19ನೇ ಶಾಖೆ ಸವದತ್ತಿಯಲ್ಲಿ ಪ್ರಾರಂಭವಾಯಿತು. ಇದರ ಉದ್ಘಾಟನೆಯನ್ನು ಶಾಸಕ ವಿಶ್ವಾಸ ವೈದ್ಯರವರು ನೆರವೇರಿಸಿದರು.

ಬಳಿಕ ಚಿದಂಬರ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ ಬೆಂಗಳೂರು ಹಾಗೂ ಸವದತ್ತಿ ಶಾಖೆ ವತಿಯಿಂದ ಶಾಸಕ ವಿಶ್ವಾಸ ವೈದ್ಯರವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಬೆಡಸೂರು ಚಿದಂಬರೇಶ್ವರ ದೇವಸ್ಥಾನದ ಎಚ್. ಡಿ. ಟಕ್ಕಳಕಿ ಹಾಗೂ ಬ್ರಾಹ್ಮಣ ಸಮಾಜದ ಮುಖಂಡರಾದ ಗಿರೀಶ್ ಮುನವಳ್ಳಿ, ಕೃಷ್ಣಾಜಿ ಆರ್. ಕುಲಕರ್ಣಿ, ಗುರಾಚಾರ್ಯ ಕಟ್ಟಿ, ವೆಂಕಟೇಶ ವೈದ್ಯ, ಅಶ್ವತ್ ವೈದ್ಯ,ಸುಧೀಂದ್ರ ವೈದ್ಯ, ಲಕ್ಷ್ಮಣರಾವ್ ಕುಲಕರ್ಣಿ, ವಿಲಾಸ ಪಾಟೀಲ, ಬಿ.ಕೆ. ಪಾಟೀಲ, ಗೋವಿಂದ ಪಾಟೀಲ, ರಾಜು ಕುಲಕರ್ಣಿ, ಧೀರೇಂದ್ರ ಕಾನಡೆ, ಬಂಡುರಾವ್ ಕುಲಕರ್ಣಿ, ಸಂದೀಪ್ ಸಬನಿಸ, ಪ್ರವೀಣ್ ವೈದ್ಯ ಮತ್ತು ಚಿದಂಬರ ಸೌಹಾರ್ದಪತ್ತಿನ ಸಹಕಾರಿ



ಬೆಂಗಳೂರು ಪದಾಧಿಕಾರಿಗಳಾದ ಅರವಿಂದ್ ಕೆ. ಪೂಜಾರ, ಜಿ.ಕೆ. ಕುಲಕರ್ಣಿ ಸೇರಿದಂತೆ ಸ್ಥಳೀಯ ಬ್ರಾಹ್ಮಣ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಬೆಳಿಗ್ಗೆ 6 ಗಂಟೆಗೆ ಲಕ್ಷ್ಮಿ ಪೂಜೆ ಗಣಪತಿ ಪೂಜೆ ಮತ್ತು ಶ್ರೀ ಸೂಕ್ತ ಹೋಮ ಸೇರಿದಂತೆ ಅನೇಕ ಧಾರ್ಮಿಕ ಕಾರ್ಯಕ್ರಮಗಳನ್ನು ಶೇಷಗಿರಿ ಶರ್ಮ ಜೋಶಿ ಯೋಗೀಶ್ ಶರ್ಮಾ ಜೋಶಿ ಮತ್ತು ಕೃಷ್ಣಾಜಿ ಕುಲಕರ್ಣಿ ಯವರು ನಡೆಯಿಸಿಕೊಟ್ಟರು.

ಹುಕ್ಕೇರಿ ಹಿರೇಮಠ ಶ್ರೀಗಳಿಗೆ 'ಕಲ್ಪವೃಕ್ಷಶ್ರೀ' ಪ್ರದಾನ

ರಾಯಬಾಗ: ಕರ್ನಾಟಕ-ಮಹಾರಾಷ್ಟ್ರ ಗಡಿ ಭಾಗದಲ್ಲಿ ಕನ್ನಡ ಉಳಿಸಿ ಬೆಳೆಸುವಲ್ಲಿ ನಿರಂತರವಾಗಿ ಶ್ರಮಿಸುತ್ತಿರುವ ಅಖಿಲ ಭಾರತ ವೀರಶೈವ ಶಿವಾಚಾರ್ಯ ಸಂಸ್ಥೆಯ ರಾಷ್ಟ್ರೀಯ ಉಪಾಧ್ಯಕ್ಷ, ಹುಕ್ಕೇರಿ ಹಿರೇಮಠದ ಅಧಿಪತಿ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ ಅವರಿಗೆ ಸವಣೂರು ದೊಡ್ಡ ಹುಣಸಿಕಲ್ಮಠದ ಪ್ರತಿಷ್ಠಿತ 'ಕಲ್ಪವೃಕ್ಷ ಶ್ರೀ' ಪ್ರಶಸ್ತಿ ನೀಡಿ ಗೌರವಿಸುತ್ತಿರುವುದು ಅಭಿಮಾನ ತಂದಿದೆ' ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಹಾವೇರಿ ಜಿಲ್ಲೆಯ ಸವಣೂರುನಲ್ಲಿ ಸೋಮವಾರ ನಡೆದ ದೊಡ್ಡ ಹುಣಸಿಕಲ್ಮಠದ ಶ್ರೀ ಗುರು ರಾಚೋಟೇಶ್ವರ ಸ್ವಾಮಿಗಳ 49ನೇ ಸ್ಮರಣೋತ್ಸವದಲ್ಲಿ ಹುಕ್ಕೇರಿ ಶ್ರೀಗಳಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು. ವಿಧಾನಸಭೆಯ ಉಪಸಭಾಪತಿ ರುದ್ರಪ್ಪ ಲಮಾಣಿ, ದೊಡ್ಡ ಹುಣಸಿಕಲ್ಮಠದ ಚನ್ನಬಸವ ಸ್ವಾಮೀಜಿ ಮಾತನಾಡಿದರು.

ಕರ್ನಾಟಕ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹ್ಮದ್ ಹುಕ್ಕೇರಿ ಹಿರೇಮಠದ ಚಂದ್ರಶೇಖರ ಸ್ವಾಮೀಜಿ ಅವರಿಗೆ ಹಾವೇರಿ ದೊಡ್ಡ ಹುಣಸಿಕಲ್ಮಠದ 'ಕಲ್ಪವೃಕ್ಷ ಶ್ರೀ' ಪ್ರಶಸ್ತಿಯನ್ನು ಸಂಸದ ಬಸವರಾಜ ಬೊಮ್ಮಾಯಿ ಪ್ರದಾನ ಮಾಡಿದರು



ಧಾರವಾಡ ಮುರುಘಾಮಠದ ಮಲ್ಲಿಕಾರ್ಜುನ ಸ್ವಾಮೀಜಿ ಪ್ರಶಸ್ತಿ ಪ್ರದಾನ ಮಾಡಿದರು. ಅಥಣಿ ಮೋಟಗಿಮಠದ ಪ್ರಭು ಚನ್ನಬಸವ ಸ್ವಾಮೀಜಿ, ಹಾವೇರಿ ಜಿಲ್ಲಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ, ಅಕ್ಕಿಆಲೂರಿನ ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಪುಣ್ಯಕೋಟಿ ಮಠದ ಜಗದೀಶ್ವರ ಸ್ವಾಮೀಜಿ ಇದ್ದರು.

ಪತ್ರಿಕಾ ವಿತರಕರ ರಾಜ್ಯ ಸಮ್ಮೇಳನ ಪೂರ್ವಭಾವಿ ಸಭೆ

ಬೆಳಗಾವಿ : ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಸಂಘದ ನೇತೃತ್ವದಲ್ಲಿ, ಬೆಳಗಾವಿ ಜಿಲ್ಲಾ ದಿನಪತ್ರಿಕಾ ವಿತರಕರ ಸಂಘವು, ಆರನೇ ರಾಜ್ಯ ಸಮ್ಮೇಳನದ ಪೂರ್ವಭಾವಿ ಸಭೆ ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ರಾಜ್ಯಾಧ್ಯಕ್ಷ ಶಂಭುಲಿಂಗ ಚಿತ್ರದುರ್ಗ, ಬಿಜಿಕೆರೆ ಮಲ್ಲಿಕಾರ್ಜುನ್, ಬೆಳಗಾವಿ ಜಿಲ್ಲಾ ಸಂಘದ ಅಧ್ಯಕ್ಷರಾದ ದೀಪಕ್ ರಾಜಗೋಳಕರ್ ನೇತೃತ್ವದಲ್ಲಿ ನಡೆಯಿತು.

ನಗರದ ವಿಷ್ಣು ಗಲ್ಲಿಯ ಅನುಶಾ ಕಾಲೋನಿಯ ಸಭಾ ಭವನದಲ್ಲಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ, ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ರಾಜ್ಯಾಧ್ಯಕ್ಷ ಶಂಭುಲಿಂಗ ಚಿತ್ರದುರ್ಗ ಅವರು, ಪ್ರತಿನಿತ್ಯ ಬೆಳಗಿನ ಜಾವ ಪತ್ರಿಕಾ ವಿತರಕರು ಮಳೆ, ಗಾಳಿ, ಚಳಿಯನ್ನು ಲೆಕ್ಕಿಸದೆ ಪ್ರತಿ ಮನೆ ಮನೆಗೆ ಪತ್ರಿಕೆಯನ್ನು ತಲುಪಿಸುವ ಕೆಲಸವನ್ನು ಕಳೆದ ಹಲವು ದಶಕಗಳಿಂದ ಮಾಡಿಕೊಂಡು ಬಂದಿದ್ದಾರೆ. ಆದರೆ, ಸರ್ಕಾರದಿಂದ ಇನ್ನು ಹೆಚ್ಚಿನ ಮೂಲಭೂತ ಸೌಕರ್ಯಗಳ ಅವಶ್ಯಕತೆ ಇದೆ ಎಂದರು.

2018 ರಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ವೇಳೆ ಪತ್ರಿಕಾ ವಿತರಕರಿಗೆ ಜೀವ ವಿಮೆ, ಸೇರಿದಂತೆ ಮೂಲ ಸೌಕರ್ಯಗಳಿಗೆ 2 ಕೋಟಿ ರೂ. ಅನುದಾನ ನೀಡಿದ್ದರು. ಆದರ ಬಳಿಕ ಸರ್ಕಾರವು ಪತ್ರಿಕಾ ವಿತರಕರನ್ನು ಸಂಪೂರ್ಣಗಿ ಮರೆತ್ತು ಬಿಟ್ಟಿದೆ. ವರ್ಷಗಳು ಕಳೆದಂತೆ ದಿನನಿತ್ಯ ಖರ್ಚು ವೆಚ್ಚಗಳು



ಹೆಚ್ಚಾಗುತಿವೆ. ಈ ಹಿನ್ನೆಲೆಯಲ್ಲಿ ಈ ಬಾರಿ ಸುಮಾರು 10 ಕೋಟಿ ರೂ. ಅನುದಾನ ನೀಡಿ ಪತ್ರಿಕಾ ವಿತರಕರಿಗೆ ವಿವಿಧ ಯೋಜನೆಗಳನ್ನು ಜಾರಿಗೆ ತರಬೇಕೆಂದು ರಾಜ್ಯ ಸರ್ಕಾರಕ್ಕೆ ಪತ್ರಿಕಾ ವಿತರಕರ ಕಾರ್ಯಕ್ರಮದ ಮೂಲಕ ರಾಜ್ಯ ಸರಕಾರಕ್ಕೆ ಮನವಿ ಮಾಡಿಕೊಂಡರು.

ಇದೇ ಸಂದರ್ಭದಲ್ಲಿ ಬೆಳಗಾವಿ ಜಿಲ್ಲಾ ಸಂಘದ ಅಧ್ಯಕ್ಷ ದೀಪಕ್ ರಾಜಗೋಳಕರ್ ಮಾತನಾಡಿ, ಬೆಳಗಾವಿ ಜಿಲ್ಲೆ ರಾಜ್ಯದಲ್ಲಿಯೇ ದೊಡ್ಡ ಜಿಲ್ಲೆ, ನಿತ್ಯವೂ ನಗರ ಬೆಳೆಯುತ್ತಲೆ ಇದೆ. ಹಾಗಾಗಿ ಇಲ್ಲಿನ ಪತ್ರಿಕಾ ವಿತರಕ ಕೆಲಸವು ಹೆಚ್ಚುತ್ತಿದೆ. ನಾವುಗಳು ಎಲ್ಲರಂತೆ ಬದುಕುವ ಹಕ್ಕಿದೆ, ನಮಗೂ ಎಲ್ಲ ಕ್ಷೇತ್ರಗಳಂತೆ ಮೂಲ ಸೌಕರ್ಯಗಳ ಜೊತೆಗೆ ರಾಜ್ಯ ಸರ್ಕಾರವು ಬರುವ ಬಜೆಟ್‌ನಲ್ಲಿ 10 ಕೋಟಿ ರೂಗಳನ್ನು ಪತ್ರಿಕಾ ವಿತರಕರ ಸಂಘಕ್ಕೆ ಮೀಸಲಿಡಬೇಕು ಎಂದರು.

- 10 ಕೋಟಿ ರೂ. ಅನುದಾನ ನೀಡಲು ಕೋರಿಕೆ

ಪತ್ರಿಕಾ ವಿತರಕರ ರಾಜ್ಯ ಸಮ್ಮೇಳನ ಯಶಸ್ವಿಗೊಳಿಸೋಣ ಹಾಗೂ ಸರ್ಕಾರದಿಂದ ಇನ್ನು ಹೆಚ್ಚಿನ ಸೌಲಭ್ಯ ಪಡೆಯೋಣ ಎಂದು ಕರ್ನಾಟಕ ರಾಜ್ಯ ಪತ್ರಿಕ ವಿತರಕರ ಒಕ್ಕೂಟ ಬೆಳಗಾವಿ ಜಿಲ್ಲಾ ದಿನಪತ್ರಿಕೆ ವಿತರಕರ ಸಂಘ ಕರೆ ನೀಡಿತು.

ಈ ವೇಳೆ ರಘುವೀರ್ ಕುಲಕರ್ಣಿ, ಹೊಸ ದಿಗಂತ ಪತ್ರಿಕೆಯ ಪ್ರಸರಣ ಪ್ರತಿನಿಧಿ ಸಂದೀಪ್ ಮೇಲಿನಮನಿ, ಪ್ರತಾಪ್ ಬೋಸ್ಲೆ ರಾಜು ಬೋಸ್ಲೆ ಸಂಜಯ್ ಗೋಡ್ಸಡೆ ಸತೀಶ್ ನಾಯಕ್ ರಾಜಶೇಖರ್ ಜಮಖಂಡಿ, ರಾಜು ಜಾದವ್, ರಾಜು ಮುಚ್ಚಂಡಿ ಸಂಜಯ್ ಕದಂ, ಸಾಗರ್ ಅಜೋಳ್ಕರ್, ಶ್ರೀಕಾಂತ್ ನಿಯೋಗಿ ಪ್ರಶಾಂತ್ ಶಾಪುಲ್ಕರ್ ಬಹು ಪವಾರ್, ಸೇರಿದಂತೆ ಹಲವು ಪತ್ರಿಕಾ ವಿತರಕರ ಮಿತ್ರರು ಇದ್ದರು.

ತಂತ್ರಜ್ಞಾನ ಯುಗದಲ್ಲಿ ಶಿಕ್ಷಣಕ್ಕೆ ಆದ್ಯತೆ: ಸವದಿ

ಕೊಕಟನೂರ: ಹೊಸ ತಂತ್ರಜ್ಞಾನದ ಯುಗ ಪ್ರಾರಂಭವಾಗಿದೆ ಪ್ರತಿಯೊಬ್ಬರು ಶಿಕ್ಷಣ ಕಲಿಯಬೇಕು ಎಂದು ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಸಮೀಪದ ಬಾಡಗಿ ಸರಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಶತಮಾನೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮದವರು ಕೇಳಿರುವ ಪಿಯು ಕಾಲೇಜು 2 ನೇ ಹಂತದಲ್ಲಿ ಮಂಜೂರ ಮಾಡಿಸುವ ಕೆಲಸ ಮಾಡಲಾಗುವುದು. ಈಗಾಗಲೇ ತಾಲೂಕಿನ ರೈತರ ಮಕ್ಕಳು ಶಿಕ್ಷಣದಿಂದ ವಂಚಿತರಾಗದಿರಲಿ ಎಂಬ ಉದ್ದೇಶದಿಂದ ಪ್ರಾಥಮಿಕ, ಪ್ರೌಢ, ಕೇಂದ್ರಿಯ ವಿದ್ಯಾಲಯ, ಪಿಯು ಕಾಲೇಜುಗಳನ್ನು ಮಂಜೂರು ಮಾಡಿಸಿದ್ದೇನೆ. ರೈತರ ಮಕ್ಕಳು ಪಶು ವೈದ್ಯರ ಆಗಬೇಕು ಎನ್ನುವ ಉದ್ದೇಶದಿಂದ ಪಶು ವಿದ್ಯಾಲಯ ಪಾರಂಭವಾಗಿದೆ. ಮುಂದಿನ ದಿನಗಳಲ್ಲಿ ಕೃಷಿ ವಿದ್ಯಾಲಯ ಆರಂಭಿಸಲಾಗುವುದು.

ಮುಂದಿನ ದಿನಗಳಲ್ಲಿ ರೈತರು ತಮ್ಮ ಜಮೀನಿನಲ್ಲಿ ತಂತ್ರಜ್ಞಾನದ ಮೂಲಕ ಬೆಳೆ ಬೆಳೆಯುತ್ತಾರೆ. ತಾಲೂಕಿನ ರೈತರ ಜಮೀನು ನೋಡಲು ರಾಜ್ಯದ ಜನರು ಬರುತ್ತಾರೆ ಅಷ್ಟೊಂದು ತಾಲೂಕು ಕ್ಷೇತ್ರ ಅಭಿವೃದ್ಧಿ



ಹೊಂದುತ್ತಿದೆ ಎಂದರು.

ಬೆಳಗಾವಿ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಮಾತನಾಡಿ, ಪಾಲಕರು ಮಕ್ಕಳಿಗೆ ಶಿಕ್ಷಣದ ಜೊತೆಗೆ ಒಳ್ಳೆಯ ಸಂಸ್ಕಾರ ಕೊಡಿ. ಮೊದಲು ಮಕ್ಕಳ ಕೈಯಲ್ಲಿ ಮೊಬೈಲ್ ಬಿಡಿಸಿ ಪುಸ್ತಕ ಕೊಡಿ. ಸಮಾಜದಲ್ಲಿ ಜಾತಿ, ಮತ, ಪಂತ ಇರಬಾರದು ಎಂದರೆ ಮೊದಲು ಶಿಕ್ಷಣಬೇಕು. ಜಿಲ್ಲೆ ಅಭಿವೃದ್ಧಿಯಾಗಬೇಕಾದರೆ ಗ್ರಾಮೀಣ ಪ್ರದೇಶ ಮಕ್ಕಳು ಒಳ್ಳೆಯ ಶಿಕ್ಷಣ ಪಡೆಯಬೇಕು ಎಂದರು.

ರಾಮಣ್ಣ ಹುನ್ನೂರ ಪಾಸ್ತಾವಿಕವಾಗಿ ಮಾತನಾಡಿದರು. ಸಾನ್ನಿಧ್ಯ ವಹಿಸಿದ್ದ ಶೇಗುಣಸಿ ಡಾ.ಮಹಾಂತಪ್ರಭು ಸ್ವಾಮೀಜಿ, ಕೌಲಗುಡ್ಡದ ಅಮರೇಶ್ವರ ಮಹಾರಾಜರು ಮಾತನಾಡಿದರು. ಬಾಡಗಿ ಚನ್ನಸಿದ್ದಲಿಂಗ ಸಾಧು ಮಹಾರಾಜರು, ಸಂಗಯ್ಯ ಹಿರೇಮಠ , ಅಧ್ಯಕ್ಷತೆ ವಹಿಸಿದ್ದ ಸಂಗನಗೌಡ ಪಾಟೀಲ, ವಿಜಯಪೂರ ಸಿಪಿಐ ಚಂದ್ರಕಾಂತ ಚಿಕ್ಕೋಡಿ, ಬಿಇಒ ಎಂ. ಆರ್. ಮುಂಜೆ, ಜಿ. ಎ. ಖೋತ, ಜಿ. ಎಸ್. ಹಿರೇಮಠ, ರಾಮಗೊಂಡ ಪಾಟೀಲ, ಎಸ್. ಎಸ್. ಹೂಗಾರ, ಶ್ರೀಶೈಲ ಭಜಂತ್ರಿ,

ಎಸ್. ಟಿ. ಬೆಳಂಕಿ, ಸುರೇಶ ಮಾಯನ್ನವರ, ರಾಮನಗೌಡ ಬಿರಾದಾರ, ರಾವಸಾಬ ಬಿರಾದಾರ, ರೇವಪ್ಪ ತೇಲಿ, ಹಣಮಂತ ಪಡಸಲಗಿ, ಬಸಪ್ಪ ಬನಹಟ್ಟಿ ಗ್ರಾಮಸ್ಥರು ಇದ್ದರು. ಕಾರ್ಯಕ್ರಮವನ್ನು ಎಸ್.ಎಮ್. ಕುಂಬಾರ ನಿರೂಪಿಸಿದರು, ಬಿ. ಕೆ. ಮುಧೋಳ ಸ್ವಾಗತಿಸಿದರು, ಸುರೇಶ ಸನದಿ. ಗಣ್ಯಮಾನ್ಯರು ಹಾಗೂ ಗ್ರಾಮಸ್ಥರು ಹಿರಿಯರು ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರು ಹಾಗೂ ಶಿಕ್ಷಕ ಶಿಕ್ಷಕಿಯ ಇದ್ದರು.

ಕಿರುಸುದ್ದಿ

ಸರ್ವಾಧ್ಯಕ್ಷರಾಗಿ ಪ್ರೊ.ಶೀಲವಂತರ ಆಯ್ಕೆ



ಬಾದಾಮಿ: ಪಟ್ಟಣದ ಎಸ್‌ವಿಪಿ ಸಂಸ್ಥೆಯ ಬಸವ ಭವನದಲ್ಲಿ ಮಾ.2ರಂದು ನಡೆಯಲಿರುವ ಬಾದಾಮಿ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ನಿವೃತ್ತ ಪ್ರಾಚಾರ್ಯ ಪ್ರೊ.ಜಿ.ಬಿ.ಶೀಲವಂತರ ಆಯ್ಕೆಯಾಗಿದ್ದಾರೆ. ಪ್ರೊ. ಶೀಲವಂತರ ಅವರು ಕನ್ನಡ ಸಾರಸ್ವತ ಲೋಕಕ್ಕೆ ಸ್ವತಂತ್ರ ಹಾಗೂ ಸಹಲೇಖಕರಾಗಿ ನಾಲ್ವತ್ತು ಕೃತಿಗಳನ್ನು ಅರ್ಪಿಸಿದ್ದಾರೆ. ಇದರಲ್ಲಿ ಜೀವನ ಚರಿತ್ರೆಗಳು ಕೂಡ ಸೇರಿವೆ. ಇವರು ರಾಜಕೀಯ, ವ್ಯಕ್ತಿಚಿತ್ರಣ, ಕಲಾವಿದರ ಪರಿಚಯ ಇತ್ಯಾದಿ ಬಹಳಷ್ಟು ಲೇಖನಗಳು ಸ್ಪರ್ಧಾತ್ಮಕ ಸಂಚಿಕೆ, ದೈನಿಕ, ವಾರಪತ್ರಿಕೆ, ಮಾಸಿಕ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಲೇಖಕರು ಅಷ್ಟೇ ಅಲ್ಲದೆ ಪ್ರಸಿದ್ಧ ವಾಗ್ಮಿಗಳು. ಆಕಾಶವಾಣಿಯಲ್ಲಿ ಭಾಷಣಗಳು ಪ್ರಸಾರಗೊಂಡಿವೆ. ಉಪನ್ಯಾಸಕರಾಗಿ ವಿದ್ಯಾರ್ಥಿಗಳ ಮೆಚ್ಚಿನವರು. ಕಾರ್ಯಕ್ರಮ ನಿರೂಪಕರಾಗಿ ಪಟ್ಟದಕಲ್ಲು, ಚಾಲುಕ್ಯ ಉತ್ಸವಗಳಲ್ಲಿ ಕಾವ್ಯ ಮಾಡಿರುವರು. ವೀರಪುಲಿಕೇಶಿ ವಿದ್ಯಾವರ್ಧಕ ಸಂಸ್ಥೆ ಬಾದಾಮಿಯ ಎಸ್‌ಎಸ್‌ಬಿಎಂ ಪದವಿ ಕಾಲೇಜಿನ ಪ್ರಾಚಾರ್ಯರಾಗಿಯೂ ಕೆಲಸ ಮಾಡಿ ನಿವೃತ್ತರಾಗಿದ್ದಾರೆ.

ವಿದ್ಯಾರ್ಥಿನಿಯರ ಸಾಧನೆ



ಬಾದಾಮಿ: ಇಲ್ಲಿನ ಶಾರದಾ ಶಿಕ್ಷಣ ಸಂಸ್ಥೆಯ ಐ ಲರ್ನ್ ಕೋಚಿಂಗ್ ಸೆಂಟರ್‌ನಲ್ಲಿ ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿನಿಯರು ಕಿತ್ತೂರು ರಾಣಿ ಚನ್ನಮ್ಮ ಸೈನಿಕ ಶಾಲೆಯ 6ನೇ ತರಗತಿಯ ಪ್ರವೇಶ ಪರೀಕ್ಷೆಯಲ್ಲಿ ತರಬೇತಿ ಕೇಂದ್ರದ 4 ಜನ ವಿದ್ಯಾರ್ಥಿನಿಯರು ಉತ್ತಮ ಸಾಧನೆ ಮಾಡಿದ್ದಾರೆ. ವೇದಶ್ರೀ ಮುಚಖಂಡಿ, ಶ್ರಾವಣಿ ಜೆ, ಸಾನ್ವಿ ಸ್ವಾದಿ, ಶ್ರೇಯಾ ನೆಕ್ಕರಗುಂದಿ ಇವರ ಸಾಧನೆಗೆ ಐ ಲರ್ನ್ ಕೋಚಿಂಗ್ ಸೆಂಟರ್ ಮುಖ್ಯ ತರಬೇತುದಾರರು ಹಾಗೂ ಸಂಚಾಲಕ ವೆಂಕಟೇಶ ರಾಠೋಡ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಪೋಷಕರು ಮಕ್ಕಳ ಸಾಧನೆ ಬಗ್ಗೆ ಹರ್ಷ ವ್ಯಕ್ತಪಡಿಸಿದ್ದಾರೆ.

ಅಂಗನವಾಡಿ ಕಾರ್ಯಕರ್ತೆ ನೇಮಕಕ್ಕೆ ಒತ್ತಾಯ

ಬಾದಾಮಿ ತಾಲೂಕಿನ ಹಲಕುರ್ಕಿ ಗ್ರಾಮದ ಅಂಗನವಾಡಿ ಕಾರ್ಯಕರ್ತೆಯೊಬ್ಬರ ನಿವೃತ್ತಿಯಿಂದ ಕಳೆದ ಕೆಲವು ತಿಂಗಳುಗಳಿಂದ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಬೇಗನೇ ಅರ್ಜಿ ಕರೆದು ನೇರ ನೇಮಕಾತಿ ಮಾಡಬೇಕೆಂದು ಗ್ರಾಮದ ಜನಪ್ರತಿನಿಧಿಗಳು, ಮಕ್ಕಳ ಪಾಲಕರು ಒತ್ತಾಯಿಸಿದ್ದಾರೆ. ಅವರು ಈ ಕುರಿತು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕರು ಮತ್ತು ತಾಲೂಕಾ ಶಿಸು ಹಾಗೂ ಮಹಿಳಾ ಕಲ್ಯಾಣ ಇಲಾಖೆ ಅಧಿಕಾರಿಗಳಿಗೆ ಲಿಖಿತ ಮನವಿ ಸಲ್ಲಿಸಿದ್ದಾರೆ. ಹಲಕುರ್ಕಿ ಗ್ರಾಮ ಪಂಚಾಯತಿ ಐದು ಸದಸ್ಯರು ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರು ಜಂಟಿ ಸಹಿ ಮಾಡಿದ ಮನವಿ ಪತ್ರದಲ್ಲಿ ಗ್ರಾಮದಲ್ಲಿ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಬೇಗನೇ ಜಾಹೀರಾತು ನೀಡಿ ಗ್ರಾಮದಲ್ಲಿ ಡಂಗುರ ಸಾರಿಸಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಬೇಕು. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಲ್ಲಿ ಇಲಾಖೆಯ ನೇಮಕಾತಿ ನಿಯಮಗಳ ಪ್ರಕಾರ ಪಾರದರ್ಶಕವಾಗಿ ನೇಮಕ ಮಾಡಿಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ. ಈ ಹುದ್ದೆಗೆ ಬೇರೆ ಗ್ರಾಮದವರನ್ನು ವರ್ಗಾವಣೆ ಮಾಡಿ ಇಲ್ಲವೆ ಪದೋನ್ನತಿ ನೆಪದಲ್ಲಿ ನೇಮಕ ಮಾಡಿಕೊಳ್ಳಬಾರದು. ಒಂದು ವೇಳೆ ರಾಜಕೀಯ ಒತ್ತಡಕ್ಕೆ ಮಣಿದು ನೇಮಕಾತಿ ನಿಯಮಗಳನ್ನು ಬದಿಗೆ ಸರಿಸಿ ಅರ್ಜಿ ಆಹ್ವಾನ ಮಾಡದೇ ಈ ಹುದ್ದೆಗೆ ಒಳದಾರಿ ಮೂಲಕ ಭರ್ತಿ ಮಾಡಲು ಇಲಾಖೆ ಮುಂದಾದರೆ ಅದನ್ನು ಕಾನೂನು ಮೂಲಕ ವಿರೋಧಿಸುವುದಾಗಿ ಗ್ರಾಮದ ಪ್ರಮುಖರು ತಿಳಿಸಿದ್ದಾರೆ.

ಸಂಗವ್ವ ಸದಲಗಿ ನಿಧನ



ಮುಧೋಳ: ನಗರದ ಸೈದಾಪುರ ಗಲ್ಲಿ ನಿವಾಸಿ ಸಂಗವ್ವ ಮಹಾರುದ್ರಪ್ಪ ಸದಲಗಿ(82)ನಿಧನರಾಗಿದ್ದಾರೆ. ಮೃತರು ಪತಿ, ಪುತ್ರ, ಇಬ್ಬರು ಪುತ್ರಿಯರು ಹಾಗು ಅಪಾರ ಬಂಧು-ಬಳಗ ಇದ್ದಾರೆ.



ಬಾಗಲಕೋಟೆ: ಅಗ್ನಿಶಾಮಕ ಇಲಾಖೆಯಿಂದ ನೀಡುವ ಮುಖ್ಯಮಂತ್ರಿಗಳ ಚಿನ್ನದ ಪದಕವನ್ನು ಜಿಲ್ಲೆಯ ಬೀಳಗಿ ತಾಲೂಕಿನ ಅಗ್ನಿಶಾಮಕ ಠಾಣೆ ಬೀಳಗಿಯ ಸಿಬ್ಬಂದಿ ಆದಂತಹ ಫಾರೂಕ್ ಅಲ್ಲಾಸಾಬ ಹುಡೇದವರು ಪಡೆದುಕೊಂಡಿದ್ದಾರೆ. ಗೃಹ ಮಂತ್ರಿ ಡಾ.ಜಿ.ಪರಮೇಶ್ವರ ಅವರು ಹಾಗೂ ಅಧಿಕಾರಿಗಳು ಸಮ್ಮುಖದಲ್ಲಿ ಚಿನ್ನದ ಪದಕ ನೀಡಿ ಗೌರವಿಸಲಾಯಿತು.

ಅಪಘಾತಗಳಿಗೆ ನಿರ್ಲಕ್ಷ್ಯವೇ ಕಾರಣ

ಬೀಳಗಿ: ಬಹುತೇಕ ಅಪಘಾತಗಳಿಗೆ ನಾವು ಮಾಡುವ ನಿರ್ಲಕ್ಷವೇ ಕಾರಣ. ಪ್ರತಿಯೊಬ್ಬರು ಎಚ್ಚರಿಕೆಯಿಂದ ದೈನಂದಿನ ಚಟುವಟಿಕೆಗಳನ್ನು ನಿರ್ವಹಿಸಬೇಕು ಎಂದು ನೋಡಲ್ ಶಿಕ್ಷಕ ಗಿರೀಶ ಸೊಲ್ಲಾಪುರ ಹೇಳಿದರು. ತಾಲೂಕಿನ ಕೊಂತಿಕಲ್ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಅಪಘಾತ ಹಾಗೂ ಅಪರಾಧ ಎಚ್ಚರಿಕೆ ಜಾಗೃತಿ ಕಾರ್ಯಕ್ರಮದಲ್ಲಿ ಹಿಂಸೆ, ಅಪರಾಧ, ಅಪಘಾತಗಳ ಸಂದರ್ಭದಲ್ಲಿ ರಕ್ಷಣೆ ಮತ್ತು ಭದ್ರತೆ ವಿಷಯ ಕುರಿತು ಮಾತನಾಡಿ, ಮಕ್ಕಳು ಅಪಾಯಕಾರಿ ವಸ್ತುಗಳಿಂದ ದೂರವಿರಬೇಕು. ಒಂದು ವೇಳೆ ಬಳಸಲೇಬೇಕಾದ ಸಂದರ್ಭದಲ್ಲಿ ಹಿರಿಯರ ಮಾರ್ಗದರ್ಶನ ಪಡೆಯಬೇಕು ಎಂದು ಹೇಳಿದರು. ಮುಖ್ಯ ಗುರು ಜೆ.ಎಂ.ಬಂದುಗೋಳ ಅಧ್ಯಕ್ಷತೆ ವಹಿಸಿ ಮಾತನಾಡಿ, ಅಪಘಾತಗಳ ಸಂದರ್ಭದಲ್ಲಿ ಪ್ರಥಮ ಚಿಕಿತ್ಸೆಯ ಅಗತ್ಯವಿರುತ್ತದೆ. ತಡ ಮಾಡದೆ ಚಿಕಿತ್ಸೆ ನೀಡಿದಲ್ಲಿ ಮುಂದೆ ಆಗುವ ದೊಡ್ಡ ಹಾನಿಯನ್ನು ತಡೆಯಲು ಸಾಧ್ಯ. ನಮಗೆ ಹಿಂಸೆ, ಅಪರಾಧ ಹಾಗೂ ಅಪಘಾತಗಳ ಅರಿವಿರಬೇಕು ಎಂದು ಹೇಳಿದರು. ಮನೆಗಳಲ್ಲಿ, ಶಾಲೆಗಳಲ್ಲಿ, ಬೆಂಕಿ ಬಳಸುವ ಸಂದರ್ಭದಲ್ಲಿ, ನೀರಿನ ಮೂಲಗಳ ಹತ್ತಿರ ಹೋದಾಗ ಹಾಗೂ ಆಟದ ಮೈದಾನಗಳಲ್ಲಿ ವಹಿಸಬೇಕಾದ ಎಚ್ಚರಿಕೆಯ ಕುರಿತು ಮಕ್ಕಳು ಚರ್ಚಿಸಿದರು. ಶಿಕ್ಷಕ ಡಿ.ಬಿ.ಬಸರಿಗಿಡದ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಥಮ ಚಿಕಿತ್ಸೆ ಪೆಟ್ಟಿಗೆ ವಿಷಯದ ಕುರಿತು ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ವಿಜೇತರಾದ ಮಕ್ಕಳಿಗೆ ಬಹುಮಾನಗಳನ್ನು ವಿತರಿಸಲಾಯಿತು.



ಬೀಳಗಿ: ಕೊಂತಿಕಲ್ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಥಮ ಚಿಕಿತ್ಸೆ ಪೆಟ್ಟಿಗೆ ವಿಷಯದ ಕುರಿತು ಏರ್ಪಡಿಸಿದ ಚಿತ್ರಕಲಾ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳು ತಾವು ಬಿಡಿಸಿದ ಚಿತ್ರಗಳನ್ನು ಪ್ರದರ್ಶನ ಮಾಡಿದರು.

ಶಿವಾಜಿ ಮೆರವಣಿಗೆ ಮೇಲೆ ಕಲ್ಲೆಸೆದ ಘಟನೆ ಖಂಡಿಸಿ ಪ್ರತಿಭಟನೆ

ಆರೋಪಿಗಳ ಗಡಿಪಾರಿಗೆ ಆಗ್ರಹ

ಕಲಾದಗಿ: ಬಾಗಲಕೋಟೆಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಮೆರವಣಿಗೆ ಮೇಲೆ ನಡೆದ ಕಲ್ಲೆಸೆತ ಚಪ್ಪಲಿ ಎಸೆತದಂತಹ ಘಟನೆಗಳು ಶಾಂತಿಯುತ ಸಮಾಜಕ್ಕೆ ಕಂಟಕವಾಗಿದ್ದು, ಸೆರೆ ಸಿಕ್ಕ ಮುಸ್ಲಿಂ ಕಿಡಿಗೇಡಿ ಆರೋಪಿಗಳನ್ನು ಕೂಡಲೇ ಬಾಗಲಕೋಟೆ ಜಿಲ್ಲೆಯಿಂದ ಗಡಿಪಾರು ಮಾಡಬೇಕೆಂದು ಮುಧೋಳದ ಹಿಂದೂ ಜಾಗರಣ ವೇದಿಕೆಯ ಪ್ರಮುಖ ಕೃಷ್ಣಾ ಸುಲಾಖೆ ಆಗ್ರಹಿಸಿದರು.

ಹಿಂದೂ ಜಾಗರಣ ವೇದಿಕೆ ಕಲಾದಗಿ ಘಟಕ ಹಾಗೂ ಸಕಲ ಸಮಾಜದ ನೇತೃತ್ವದಲ್ಲಿ ಗ್ರಾಮದ ರಂಗಮಂದಿರದಿಂದ ಪ್ರಾರಂಭವಾದ ಪ್ರತಿಭಟನಾ ಮೆರವಣಿಗೆ ಡಾ.ಅಂಬೇಡ್ಕರ ವೃತ್ತದ ಮೂಲಕ ಸಾಗಿ ಉಪತಹಶೀಲ್ದಾರ್ ಕಾರ್ಯಾಲಯದ ಹತ್ತಿರ ಬಂದ ಪ್ರತಿಭಟನಾ ರ್‍ಯಾಲಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಹಿಂದೂ ವಿರೋಧಿ ಕಾಂಗ್ರೆಸ್ ಸರ್ಕಾರದ ತುಷ್ಟೀಕರಣ ನೀತಿಯಿಂದಾಗಿ ಶಾಂತ ವಾಗಿದ್ದ ಬಾಗಲಕೋಟೆಯಲ್ಲಿ ಕಲ್ಲೆಸೆತದಂತಹ ಘಟನೆಯಿಂದಾಗಿ ಕೋಮು ಗಲಭೆಗಳು ಸೃಷ್ಟಿಯಾಗುತ್ತಿದೆ ಎಂದರು.

ಶಾಂತವಾಗಿ ಸಾಗುತ್ತಿದ್ದ ಶಿವಾಜಿ ಮಹಾರಾಜರ ಜಯಂತಿ ಮೆರವಣಿಗೆ ಮೇಲೆ ಎಸೆದ ಕಲ್ಲು ಸ್ವತಃ ಪೊಲೀಸ್ ಇಲಾಖೆಯ ಎಸ್ಪಿಯವರಿಗೆ ತಾಗಿದ್ದರು ಕೂಡಾ ಯಾವುದೇ ರೀತಿಯ ಕಾನೂನು ಕ್ರಮ ತೆಗೆದುಕೊಳ್ಳದೇ ಇರುವುದು ಪೊಲೀಸ್ ಇಲಾಖೆಯ ವೈಫಲ್ಯ ಕಾಣುತ್ತಿದೆ. ಹಿಂದೂಗಳು ಸಹಿಷ್ಣುಗಳಾಗಿದ್ದು ಅದರ ದುರುಪಯೋಗ ರಾಜ್ಯದಲ್ಲಿ ಆಗುತ್ತಿದೆ. ಹಿಂದೂ ಸಮಾಜಕ್ಕೆ ಅನ್ಯಾಯವಾದಾಗ ಅದನ್ನು ಪ್ರತಿಭಟಿಸುವ ನಮ್ಮ ಹಕ್ಕನ್ನು ಹತ್ತಿಕ್ಕುವ ಕೆಲಸ ಮಾಡಬೇಡಿ ಫೆ.26ರಂದು ನಡೆಯುವ ಪ್ರತಿಭಟನೆಗೂ ಮುಂಚೆ ನಮ್ಮ ಬೇಡಿಕೆಗಳಾದ ಬಾಗಲಕೋಟೆಯ ಪಂಕಾ ಮಸೀದಿಯ ಮುಖ್ಯಸ್ಥರ ಮೇಲೆ ಕಾನೂನು ಕ್ರಮ ಜರುಗಿಸುವುದು. ಹಾಗೂ ಈ ಅಹಿತಕರ ಘಟನೆಗೆ ಪ್ರಚೋದಿಸಿದ ಮುಸ್ಲಿಂ ಯುವಕರನ್ನು ಗೂಂಡಾ ಕಾಯ್ದೆ ಹಾಕಿ ಬಾಗಲಕೋಟೆ ಜಿಲ್ಲೆಯಿಂದ ಗಡಿಪಾರು ಮಾಡುವುದು ಸೇರಿದಂತೆ ಈ ಘಟನೆಗೆ ಸಂಬಂದಿಸಿದಂತೆ ನಮ್ಮ ಹಿಂದೂ ಕಾರ್ಯಕರ್ತರ ಮೇಲೆ ಹಾಕಿರುವ ಸುಳ್ಳು ಕೇಸ್ ವಾಪಸ್ ತೆಗೆದುಕೊಳ್ಳಬೇಕೆಂದು ಆಗ್ರಹಿಸಿದರು.

ವಿಎಚ್‌ಪಿ ಮುಖಂಡ ವಸಂತ ಮಮದಾಪೂರ, ನಿಂಗಪ್ಪ ಆಗಸರ ಮಾತನಾಡಿ ಯಾವುದೇ ಸಕಾರಣ ನೀಡದೇ ಹಿಂದೂಪರ ಕಾರ್ಯಕರ್ತರಿಗೆ ನೀಡಿರುವ ನೋಟಿಸ್‌ಗಳನ್ನು ಕೂಡಲೇ ಹಿಂಪಡೆಯಬೇಕೆಂದು ಪೊಲೀಸ್ ಇಲಾಖೆಗೆ ಆಗ್ರಹಿಸಿದರು. ಉಪತಹಶೀಲ್ದಾರ್ ಆರ್.ಆರ್.ಕುಲಕರ್ಣಿ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಬಸೆಟ್ಟೆಪ್ಪ ಅಂಗಡಿ, ಶ್ರೀಧರ ವಾಘ, ಲಕ್ಷ್ಮಣ ಶಿರಬೂರ, ದಯಾನಂದ ವಾಘ, ಅಜಯ ಕುಲಕರ್ಣಿ, ತಿಮ್ಮಣ್ಣ ಬಟಕುರ್ಕಿ, ಮಂಜುನಾಥ ಬಿಲಕೇರಿ, ರಾಜೇಂದ್ರ ಜಾಧವ, ಯಮನಪ್ಪ ಬೂದಿಹಾಳ, ಭೀಮಶಿ ಕರಡಿಗುಡ್ಡ, ಮಲ್ಲಪ್ಪ ಬಡಿಗೇರ, ಹಣಮಂತ ತಳವಾರ, ಬಸು ಬಡಿಗೇರ, ಭೀಮಣ್ಣ ದಾಸನ್ನವರ, ಸಿದ್ದು ಬಾಲರೆಡ್ಡಿ, ಸದಾಶಿವ ಪೂಜಾರಿ, ನಿಂಗಪ್ಪ ಜಮ್ಮನಕಟ್ಟಿ, ನಾಗರಾಜ ಗಿಡ್ಡಿ, ಅಶೋಕ ವಾಸ್ಟರ, ಹವಳೆಪ್ಪ ಮಾದರ, ತುಳಸಪ್ಪ ತಳವಾರ, ರಾಕೇಶ ಗುಂಜುಟಗಿ ಇದ್ದರು.



ಸಮನ್ಸ್ ವಾಪಸ್ ತೆಗೆದುಕೊಳ್ಳಿ

ಬಾಗಲಕೋಟೆಯಲ್ಲಿ ಫೆ.26ರಂದು ನಡೆಯುವ ಪ್ರತಿಭಟನೆ ಹಿನ್ನೆಲೆ ಗ್ರಾಮದ ಕೆಲವು ಹಿಂದೂಪರ ಕಾರ್ಯಕರ್ತರಿಗೆ ಪ್ರತಿಭಟನೆಯಲ್ಲಿ ಪಾಲ್ಗೊಳ್ಳದಂತೆ ನೋಟಿಸ್ ನೀಡಲಾಗಿತ್ತು. ಕೆಲವರು ಅದನ್ನು ತೆಗೆದುಕೊಳ್ಳದಿರುವುದರಿಂದ ಸಮನ್ಸ್ ನೀಡಲಾಗಿತ್ತು. ಸಮನ್ಸನಲ್ಲಿ ಹೆಸರಿರುವ ಹಿಂದೂಪರ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿ ಸಮನ್ಸ್ ನೀಡಿರುವ ಬಗ್ಗೆ ಪೊಲೀಸ್ ಠಾಣೆಗೆ ತೆರಳಿ ಪೊಲೀಸ್ ಅಧಿಕಾರಿಗಳೊಂದಿಗೆ ವಾಗ್ವಾದ ನಡೆಸಿ ಸಂಜೆಯೊಳಗಾಗಿ ನಮಗೆ ನೀಡಿರುವ ಸಮನ್ಸ್ ವಾಪಸ್ ತೆಗೆದುಕೊಳ್ಳಬೇಕು. ಇಲ್ಲವಾದರೆ ಪೊಲೀಸ್ ಠಾಣೆಯ ಮುಂದೆ ಧರಣಿ ಕೂಡಲಾಗುವುದು ಎಂದು ಹಿಂದೂಪರ ಮುಖಂಡರು ಎಚ್ಚರಿಕೆ ನೀಡಿದರು.

ಸ್ಟೋರ್ ರೂಮ್ ಆಯ್ತು ಮಲಗುವ ಕೋಣೆ ಕಚೇರಿ ವೇಳೆಯಲ್ಲಿ ನಿದ್ದೆಗೆ ಜಾರಿದ ಸಿಬ್ಬಂದಿ!

ಹುನಗುಂದ: ಕಚೇರಿಯ ವೇಳೆಯಲ್ಲಿಯೇ ಸರ್ಕಾರಿ ಕಚೇರಿಯನ್ನೇ ಬೆಡ್ ರೂಂ (ಮಲಗುವ ಕೋಣೆ) ಮಾಡಿಕೊಂಡು ಯಾರ ಅಂಜಿಕೆ, ಅಳುಕಿಲ್ಲದೆ ಶರ್ಟ್ ಬಿಚ್ಚಿ ಗೂಟಕ್ಕೆ ನೇತಾಕಿ ಸಿಬ್ಬಂದಿಯೋರ್ವ ನಿದ್ದೆಗೆ ಜಾರಿದ ಘಟನೆ ಕೃಷ್ಣಾ ಭಾಗ್ಯ ಜಲ ನಿಗಮದ ಉಪವಿಭಾಗ ಕಚೇರಿಯಲ್ಲಿ ನಡೆದಿದೆ.

ಎಫ್.ಡಿ.ಸಿ ಅಡಿವೆಪ್ಪ ಸಂಗಪ್ಪ ವಕ್ರ ಅವರ ಟೇಬಲ್ ಹಿಂಭಾಗದ ಸ್ಟೋರ್ ರೂಮ್ ಮಲಗುವ ಕೋಣೆಯಾಗಿದ್ದು, ಇಲ್ಲೊಂದು ಕಬ್ಬಿಣದ ಮಂಚ, ಹಾಸಿಗೆ ಎಲ್ಲ ವ್ಯವಸ್ಥೆ ಇದೆ. ಇವರಿಗೆ ಸ್ವಲ್ಪ ಸಮಯ ಸಿಕ್ಕರೂ ಸಾಕು ಈ ಮಂಚಕ್ಕೆ ಒರಗಿ ನಿದ್ದೆಗೆ ಜಾರುತ್ತಾರೆ ಎನ್ನುವುದು ಕೇಳಿ ಬಂದಿರುವ ಆರೋಪ. ಇಲ್ಯಾಕೆ ಮಲಗಿದ್ದೀರಾ ಸರ್ ಅಂತ ಕೇಳಿದರೇ ಸ್ವಲ್ಪ ಬೇಸರವಾಗಿತ್ತು ಅದಕ್ಕೆ ಮಲಗಿದ್ದೆ ಎಂದು ಸಮರ್ಥನೆ ಮಾಡಿಕೊಳ್ಳುತ್ತಾರಂತೆ ! ಎಫ್.ಡಿ.ಸಿ ಅಡಿಯಪ್ಪ ವಕ್ರ ಅವರು ಒಳಗಡೆ ಮಲಗಿ ನಿದ್ದೆ ಮಾಡುತ್ತಿದ್ದರೆ, ಕಚೇರಿಗೆ ಬರುವ ಸಾರ್ವಜನಿಕರಿಂದ ಅವರ ನಿದ್ದೆ ಭಂಗವಾಗಬಾರದೆಂದು ಹೊರಗಡೆ ಇಬ್ಬರು ಸಿಪಾಯಿಗಳು ಗಸ್ತು ತಿರುಗುತ್ತಿರುತ್ತಾರೆ. ಸಾರ್ವಜನಿಕರು ಕೆಲಸಕ್ಕೆ ಬಂದರೆ ನಾಳೆ ಬಾ ಎಂದು ಹೇಳಿ ಕಳಿಸಲಾಗುತ್ತದೆ ಎನ್ನುವುದು ಸಾರ್ವಜನಿಕರಿಂದ ಬಂದಿರುವ ಆರೋಪ. ಈ ಬಗ್ಗೆ ಇಲಾಖೆಯ ಕ್ರಮ ಏನು ಎಂದು ಜನ ಪ್ರಶ್ನಿಸುವಂತಾಗಿದೆ.



> **ಕಚೇರಿಯಲ್ಲಿ ಮಲಗಿಕೊಂಡಿರುವ ವಿಷಯ ನಿಮ್ಮಿಂದ ತಿಳಿದಿದೆ.ಕಚೇರಿಯಲ್ಲಿ ಕೆಲಸವಿದ್ದರೆ ಮಾಡಬೇಕು ಇಲ್ಲದಿದ್ದರೇ ಸುಮ್ನೆ ಕುಳಿತುಕೊಳ್ಳಬೇಕು. ಹಾಗೆಲ್ಲಾ ಮಲಗೋದು ತಪ್ಪು.ಈ ಬಗ್ಗೆ ಪರಿಶೀಲಿಸಿದ ನಂತರ ಮಾತನಾಡುವೆ**
>
> **■ ಮಂಜುನಾಥ ಗುತ್ತೇದಾರ, ಕಾರ್ಯಪಾಲಕ ಅಭಿಯಂತರ, ಕೃಷ್ಣಾ ಭಾಗ್ಯ ಜಲ ನಿಗಮ ಉಪವಿಭಾಗ ಕಚೇರಿ, ಹುನಗುಂದ.**

ಫೆ.28ರಂದು ಹೋಳಿ ಶಾಂತಿ ಸಭೆ

ಬಾಗಲಕೋಟೆ: ನಗರದಲ್ಲಿ ಮಾ.5ರಿಂದ 7ರ ವರೆಗೆ ಆಚರಿಸಲ್ಪಡುವ ಹೋಳಿ ಹಬ್ಬದ ಪ್ರಯುಕ್ತ ಮುಂಜಾಗ್ರತ ಕ್ರಮವಾಗಿ ಕಾನೂನು ಹಾಗೂ ಶಾಂತಿ ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಉಪಸ್ಥಿತಿಯಲ್ಲಿ ಫೆ.28ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಶಾಂತಿ ಸಮಿತಿ ಸಭೆ ಹಮ್ಮಿಕೊಳ್ಳಲಾಗಿದೆ.

ಮಾ.2ಕ್ಕೆ ತಾಲೂಕು 10ನೇ ಸಾಹಿತ್ಯ ಸಮ್ಮೇಳನ

ಬಾದಾಮಿ: ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಹಾಗೂ ತಾಲೂಕು ಘಟಕದ ವತಿಯಿಂದ ತಾಲೂಕು 10ನೇ ಕನ್ನಡ ಸಾಹಿತ್ಯ ಸಮ್ಮೇಳನ ಮಾ.2ರಂದು ಪಟ್ಟಣದ ವೀರಪುಲಿಕೇಶಿ ವಿದ್ಯಾ ಸಂಸ್ಥೆಯ ಬಸವ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ಎಫ್.ಹೊರಕೇರಿ ತಿಳಿಸಿದರು.

ಬುಧವಾರ ನಗರದ ತಾಲೂಕು ಕಾನಿಪ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು. ಅಂದು ಬೆಳಗ್ಗೆ 7.15 ಗಂಟೆಗೆ ಧ್ವಜಾರೋಹಣ ನಡೆಯಲಿದೆ. ಬೆಳಗ್ಗೆ 8 ಗಂಟೆಗೆ ಸಮ್ಮೇಳನಾಧ್ಯಕ್ಷರ ನೇತೃತ್ವದಲ್ಲಿ ಭುವನೇಶ್ವರಿ ಮೆರವಣಿಗೆಯು ಪಿಕಾರ್ಡ್ ಬ್ಯಾಂಕ್ ಆವರಣದಿಂದ ಆರಂಭವಾಗಿ ಬಸವ ಮಂಟಪದವರೆಗೆ ನಡೆಯಲಿದೆ. ಶಾಸಕ ಭೀಮಸೇನ ಚಿಮ್ಮನಕಟ್ಟಿ ಉದ್ಘಾಟಿಸುವರು. ಸಮ್ಮೇಳನದ ಉದ್ಘಾಟನಾ ಸಮಾರಂಭ ಬೆಳಿಗ್ಗೆ 10.30ಕ್ಕೆ ನಡೆಯಲಿದ್ದು, ಕೆರೂರ ಚರಂತಿ ಮಠದ ಡಾ.ಶಿವಕುಮಾರ ಶ್ರೀಗಳು ಸಾನಿಧ್ಯ ವಹಿಸುವರು. ಶಾಸಕ ಭೀಮಸೇನ ಚಿಮ್ಮನಕಟ್ಟಿ ಅಧ್ಯಕ್ಷತೆ ವಹಿಸುವರು. ಹಿರಿಯ ಸಾಹಿತಿ ವೈ.ಎಂ.ಯಾಕೊಳ್ಳಿ ಉದ್ಘಾಟಿಸುವರು. ಬೀಳಗಿ ಶಾಸಕ ಜೆ.ಟಿ.ಪಾಟೀಲ ಮಳಿಗೆಗಳನ್ನು ಉದ್ಘಾಟಿಸುವರು. ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ವಿಪ ಸದಸ್ಯ ಹನಮಂತ ನಿರಾಣಿ ಕೃತಿಗಳನ್ನು ಬಿಡುಗಡೆ ಮಾಡುವರು ಎಂದರು.

ಮಧ್ಯಾಹ್ನ 12.30ಕ್ಕೆ ಗೋಷ್ಠಿ-1ರಲ್ಲಿ ಬಾದಾಮಿ ತಾಲೂಕಿನ ಸಾಹಿತ್ಯಾವಲೋಕನ ನಡೆಯಲಿದ್ದು, ಶಿವಯೋಗಮಂದಿರ ಸಂಶೋಧಕ ಡಾ.ಜೆ.ಕೆ.ಹಿರೇಮಠ ಅಧ್ಯಕ್ಷತೆ ವಹಿಸುವರು. ಸೃಜನಶೀಲ ಸಾಹಿತ್ಯ ಕುರಿತು ಉಪನ್ಯಾಸಕ ಪ್ರೊ.ಚಂದ್ರಶೇಖರ ಹೆಗಡೆ ಉಪನ್ಯಾಸ ನೀಡುವರು. ಜನಪದ ಸಾಹಿತ್ಯ ಕುರಿತು ಪ್ರೊ.ನಾಗರಾಜ ಹೊಟ್ಟಿ ಉಪನ್ಯಾಸ ನೀಡುವರು. ಮಹಿಳಾ ಸಾಹಿತ್ಯ ಪ್ರೊ.ಶಾರದಾ ಮೇಟಿ ಉಪನ್ಯಾಸ ನೀಡುವರು. ಮಧ್ಯಾಹ್ನ 2 ಗಂಟೆಗೆ ಗೋಷ್ಠಿ-2 ಕವಿ ಸಮಯ ನಡೆಯಲಿದೆ. ಡಾ.ವಿ.ಬಿ.ಸಣ್ಣಸಕ್ಕರಗೌಡರ ಅಧ್ಯಕ್ಷತೆ ವಹಿಸುವರು. ಸಾಹಿತಿ ಕೆ.ವಿ.ವೀರಲಿಂಗನಗೌಡರ ಉದ್ಘಾಟಿಸುವರು. ಸಾಹಿತಿ ಚಂದ್ರಶೇಖರ ಪಾಟೀಲ ಆಶಯ ನುಡಿಗಳನ್ನಾಡುವರು. ಮಧ್ಯಾಹ್ನ 3.30 ಗಂಟೆಗೆ ಗೋಷ್ಟಿ-3 ನಡೆಯಲಿದ್ದು, ಸಮ್ಮೇಳನದ ಸರ್ವಾಧ್ಯಕ್ಷರ ಬದುಕು ಬರಹ ಅವರೊಂದಿಗೆ ಸಂವಾದ ನಡೆಯಲಿದೆ ಎಂದರು.

ಸಂಜೆ 4.30 ಗಂಟೆಗೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಮಹನೀಯರ ಸನ್ಮಾನ ಮತ್ತು ಸಮಾರೋಪ ಸಮಾರಂಭ ಜರುಗಲಿದೆ. ನವಗ್ರಹ ಹಿರೇಮಠ ಶಿವಾಚಾರ್ಯ ಶ್ರೀಗಳು ಸಾನಿಧ್ಯ ವಹಿಸುವರು. ಜಿ.ಬಿ.ಶೀಲವಂತರ ಸರ್ವಾಧ್ಯಕ್ಷರು ಅಧ್ಯಕ್ಷತೆವಹಿಸುವರು. ಶಾರದಾ ಮೇಟಿ ಇವರ ಮುಸ್ಸಂಜೆಯ ಹೊತ್ತಿನಲ್ಲಿ ಮತ್ತು ಇತರೆ ಲೇಖನಗಳು ಮತ್ತು ಅನಸೂಯಾ ಯಲಿಗಾರ ಇವರ ನನ್ನ ಕೂಸು ನನ್ನ ನನಸು ಮತ್ತು ರಾಘವೇಂದ್ರ ಕುಲಕರ್ಣಿ ಇವರ ಪರಿಕೃತ ಮೂರು ಕೃತಿಗಳು ಲೋಕಾರ್ಪಣೆಗೊಳ್ಳಲಿವೆ ಎಂದು ತಿಳಿಸಿದರು.

ಕಸಾಪ ಪದಾಧಿಕಾರಿಗಳಾದ ವಿ.ಎಸ್.ಶೆಟ್ಟರ, ಆರ್.ಎಂ.ಸಾರವಾಡ, ಆರ್.ಬಿ.ಸಂಕದಾಳ, ಮಹಾಂತೇಶ ಈಳಗೇರ, ಸಂಜು ಬರಗುಂಡಿ ಹಾಜರಿದ್ದರು.



ಮಾ.15ರಂದು ಹಿಂದೂ ಸಮ್ಮೇಳನ, ಬೃಹತ್ ಶೋಭಾಯಾತ್ರೆ

ಗುಳೇದಗುಡ್ಡ: ಪಟ್ಟಣದಲ್ಲಿ ಮಾ.15ರಂದು ಹಿಂದೂ ಸಮ್ಮೇಳನ ಹಾಗೂ ಬೃಹತ್ ಶೋಭಾಯಾತ್ರೆ ಹಮ್ಮಿಕೊಳ್ಳಲು ಪಟ್ಟಣದ ಎಲ್ಲಾ ಸಮಾಜದ ಮುಖಂಡರು, ಕಾರ್ಯಕರ್ತರ ಸಭೆಯಲ್ಲಿ ನಿರ್ಣಯಿಸಲಾಯಿತು.

ಪಟ್ಟಣದ ಸರಸ್ವತಿ ವಿದ್ಯಾಮಂದಿರದ ಮೈದಾನದಲ್ಲಿ ಮಂಗಳವಾರ ಸಂಜೆ ನಡೆದ ಹಿಂದೂ ಸಮ್ಮೇಳನದ ಪೂರ್ವಭಾವಿ ಸಭೆಯಲ್ಲಿ ಹಿಂದೂ ಸಮ್ಮೇಳನವನ್ನು ಪಟ್ಟಣದಲ್ಲಿ ಅತ್ಯಂತ ಯಶಸ್ವಿಯಾಗಿ ಹಮ್ಮಿಕೊಳ್ಳಲು ಪಟ್ಟಣದ ಎಲ್ಲಾ ಮನೆಗಳಿಗೆ ಸಮ್ಮೇಳನದ ಮಾಹಿತಿ ತಲುಪಿಸುವ ಕಾರ್ಯ ಮಾಡಬೇಕು. ಎಲ್ಲಾ ಸಮಾಜಗಳನ್ನು ಸಂಪರ್ಕಿಸುವ ಮೂಲಕ ಹಿಂದೂ ಸಮ್ಮೇಳನ ಹಾಗೂ ಬೃಹತ್ ಶೋಭಾಯಾತ್ರೆಯನ್ನು ಸಂಭ್ರಮದಿಂದ ಆಚರಿಸಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಯಿತು.

ಈ ವೇಳೆ ಆರ್‌ಎಸ್‌ಎಸ್‌ನ ವಿಜಯಪುರ ವಿಭಾಗದ ಪ್ರಮುಖ ಪ್ರಭು ಹೂಗಾರ ಮಾತನಾಡಿ, ಹಿಂದೂ ಸಮಾಜಕ್ಕಾಗಿ ಬದುಕುವ ಕಾರ್ಯಕರ್ತರು, ವ್ಯಕ್ತಿಗಳನ್ನು ನೆನಪು ಮಾಡಿಕೊಳ್ಳುವ ಸಮ್ಮೇಳನ ಹಿಂದೂ ಸಮ್ಮೇಳನ. ನಮ್ಮ ಹಳೆಯ ಪದ್ಧತಿ, ಪಾರಂಪರಿಕ ಕಲೆ, ಜ್ಞಾನ, ಕಾಯಕ, ಜಾನಪದ ಸಾಹಿತಿಗಳ, ಸಮಾಜಕ್ಕಾಗಿ ಸೇವೆಸಲ್ಲಿಸಿದವರನ್ನು ಸಮ್ಮೇಳನದ ನೆಪದಲ್ಲಿ ಅವರನ್ನು ವೇದಿಕೆಯ ಮೇಲೆ ಕರೆದು, ಸನ್ಮಾನಿಸುವುದರೊಂದಿಗೆ ಎಲ್ಲಾ ಸಮಾಜದವರನ್ನು ಬಂಧುಗಳನ್ನು ಕೂಡಿಸಿ, ಹಿಂದೂ ಸಮಾಜವನ್ನು ಒಗ್ಗೂಡಿಸಲು ಸಮಾಜವನ್ನು ಜಾಗೃತಗೊಳಿಸುವದೇ ಹಿಂದೂ ಸಮ್ಮೇಳನದ ಉದ್ದೇಶವಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಹಿಂದೂ ಸಮ್ಮೇಳನದ ಯಶಸ್ಸಿಗೆ ವಿವಿಧ ಸಮಿತಿಗಳನ್ನು ರಚಿಸಲಾಯಿತು.

ಪಟ್ಟಣದ ಎಲ್ಲ ಸಮಾಜಗಳ ಅಧ್ಯಕ್ಷರು, ಮುಖಂಡರು, ಹಿಂದೂಪರಿವಾರದ ಕಾರ್ಯಕರ್ತರು ಹಿಂದೂ ಸಮ್ಮೇಳನ ಯಶಸ್ವಿಗೊಳ್ಳಲು ಸಲಹೆ ಸೂಚನೆ ನೀಡಿದರು.



ಒಳಚರಂಡಿ ಕಾಮಗಾರಿ ಪೂರ್ಣಗೊಳಿಸಲು ಮನವಿ

ಗುಳೇದಗುಡ್ಡ: ಪಟ್ಟಣದ ವಾರ್ಡ್ 6ರ ತಾಯಮ್ಮ ನಗರದಲ್ಲಿ ಒಳಚರಂಡಿ ಅವ್ಯವಸ್ಥೆಯಿದ್ದು, ಇದನ್ನು ಕೂಡಲೇ ಸರಿಪಡಿಸುವಂತೆ ಆಗ್ರಹಿಸಿ ಅಲ್ಲಿನ ನಿವಾಸಿಗಳು ಪುರಸಭೆ ಎದರು ತಂಬಿಗೆ ಹಿಡಿದು ಪ್ರತಿಭಟನೆ ಮಾಡಿ ಬಳಿಕ ಮುಖ್ಯಾಧಿಕಾರಿ ಅಸ್ಲಂ ಮುಜಾವರ ಅವರಿಗೆ ಮನವಿ ಸಲ್ಲಿಸಿದರು.

ತಾಯಮ್ಮನಗರದಲ್ಲಿ ಮೊದಲ ಹಂತದ ಒಳಚರಂಡಿ ಕಾಮಗಾರಿ ಪೂರ್ಣಗೊಂಡಿದೆ ಆದರೆ ಎರಡನೇ ಹಂತದ ಕಾಮಗಾರಿ ಅರ್ಧಕ್ಕೆ ನಿಂತಿದ್ದು ಇದರಿಂದ ಇಲ್ಲಿನ ನಿವಾಸಿಗಳಿಗೆ ತೀವ್ರತೊಂದರೆಯಾಗಿದೆ. ಒಳಚರಂಡಿ ಸಮಸ್ಯೆಯಿಂದ ಇಲ್ಲಿನ ಜನರು ಬಯಲು ಶೌಚಾಲಯಕ್ಕೆ ಹೋಗುವಂತಾಗಿದೆ. ರಾತ್ರಿ ವೇಳೆ ಶೌಚಾಲಯಕ್ಕೆ ಹೋಗಲು ಹುಳುಹುಪ್ಪಡಿಗಳಿಂದ ಭಯ ಬೀಳುವಂತಾಗಿದೆ. ಆದ್ದರಿಂದ ಕೂಡಲೇ ಕಾಮಗಾರಿಯನ್ನು ಪೂರ್ಣಗೊಳಿಸಿ ನಿವಾಸಿಗಳಿಗೆ ಅನುಕೂಲಮಾಡಿಕೊಡುವಂತೆ ಅಲ್ಲಿನ ನಿವಾಸಿಗಳಾದ ಸಿ.ಐ. ತೆಗ್ಗಿನಮನಿ, ಎಂ.ಎಸ್.ಕೊಣ್ಣೂರ, ರವಿ ಗದಗಿನ, ಸಂಗಪ್ಪ ತಿಪ್ಪಾ, ಟಿ.ವೈ. ನಿಡಗುಂದಿ ಮತ್ತಿತರರು ಆಗ್ರಹಿಸಿದ್ದಾರೆ.



ಯುವ ಸಂಸತ್ ಉತ್ಸವಕ್ಕೆ ಆಹ್ವಾನ

ಜಮಖಂಡಿ: ಭಾರತ ಸರ್ಕಾರದ ಯುವಜನ ವ್ಯವಹಾರ ಮತ್ತು ಕ್ರೀಡಾ ಇಲಾಖೆಯ ಅಡಿಯಲ್ಲಿ ರಾಷ್ಟ್ರೀಯ ಯುವ ಸಂಸತ್ ಉತ್ಸವ ಆಯೋಜಿಸಿದ್ದು ಇದರಲ್ಲಿ 18ರಿಂದ 25 ವರ್ಷದ ವಿದ್ಯಾರ್ಥಿಗಳು ಭಾಗವಹಿಸಬೇಕು. ಈ ಉತ್ಸವವು ಜಿಲ್ಲೆ, ರಾಜ್ಯ ಮತ್ತು ರಾಷ್ಟ್ರಮಟ್ಟದ ಹಂತಗಳಲ್ಲಿ ಆಯೋಜನೆಗೊಳ್ಳಲಿದೆ. ಪ್ರತಿಯೊಬ್ಬ ಸ್ಪರ್ಧಿಯೂ ಮೂರು ನಿಮಿಷದೊಂದು ರಾಷ್ಟ್ರ ಒಂದು ಚುನಾವಣಾ ವಿಷಯದ ಮೇಲೆ ವಿಡಿಯೋ ಮಾಡಿ ಫೆ.26ರೊಳಗೆ ಅಪ್ಲೋಡ ಮಾಡಬೇಕು. ಇದರಲ್ಲಿ ಆಯ್ಕೆಯಾದ 10 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ರಾಜ್ಯಮಟ್ಟದ ಸ್ಪರ್ಧೆಗೆ ಕಳುಹಿಸಲಾಗುವುದು ಎಂದು ಸಂಯೋಜಕ ಡಾ.ಮಲ್ಲಿಕಾರ್ಜುನ ಮರಡಿ ತಿಳಿಸಿದ್ದಾರೆ.

ನೌಕರರ ಪೂರ್ವಭಾವಿ ಸಭೆ: ಹಲವು ನಿರ್ಣಯಗಳು

ಬಾದಾಮಿ: ತಾಲೂಕಿನ ಹಲಕುರ್ಕಿ ಗ್ರಾಮದ ಸರ್ಕಾರಿ, ಅರೆಸರ್ಕಾರಿ, ಸೇವಾ ನಿರತ ಮತ್ತು ನಿವೃತ್ತ ನೌಕರರ ಸಂಘದ ರಚನಾ ಪೂರ್ವಭಾವಿ ಸಭೆ ನಡೆಯಿತು.

ಸಂಘ ನೋಂದಣಿ ಮಾಡಿಸಿ, ಸಂಘದ ವತಿಯಿಂದ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳುವುದು. ಕಾರ್ತಿಕ ಮತ್ತು ಜಾತ್ರೆಯಲ್ಲಿ ತೀರ್ಮಾನ ತೆಗೆದುಕೊಳ್ಳುವುದು. ಜಿಪಂ, ತಾಪಂ ಅನುದಾನದಮುಖಾಂತರಗ್ರಂಥಾಲಯ ಅಭಿವೃದ್ಧಿ ಕಾರ್ಯ, ಗ್ರಂಥಾಲಯ ಡಿಜಿಟಲೀಕರಣ ದಿನಪತ್ರಿಕೆ ಸಹಿತ ಎಲ್ಲಾ ಮ್ಯಾಗ್ಜಿನ್ ಪುಸ್ತಕಗಳು ಗ್ರಂಥಾಲಯಕ್ಕೆ ಬರುವಂತೆ ವ್ಯವಸ್ಥೆ ಕಲ್ಪಿಸುವುದು. ರೈತರಿಗೆ ಆಧುನಿಕ ಕೃಷಿ ತರಬೇತಿ ಆಯೋಜನೆ, ಶಾಲಾ ಮಕ್ಕಳಿಗೆ ಬೇಸಿಗೆ ಶಿಬಿರಗಳನ್ನು ಹಮ್ಮಿಕೊಳ್ಳಲು ತೀರ್ಮಾನಿಸಲಾಯಿತು.

ಸಂಘದಿಂದ ಪ್ರತಿ ಹಬ್ಬಗಳನ್ನು ಅರ್ಥಪೂರ್ಣವಾಗಿ ಆಚರಿಸುವುದು. ಎಲ್ಲ ನೌಕರರಿಂದ ಮೂರು ತಿಂಗಳಿಗೊಮ್ಮೆ ಶಾಲೆ, ಗ್ರಂಥಾಲಯ, ಪ್ರಮುಖ ಸ್ಥಳಗಳಲ್ಲಿ ಸ್ವಚ್ಛತಾ ಕಾರ್ಯ ಆಯೋಜನೆ ಮಾಡುವುದು. ಶೌಚಾಲಯ ನಿರ್ಮಾಣ, ಡ ಮಕ್ಕಳಿಗೆ ಸರ್ಕಾರದಿಂದ ಸೌಲಭ್ಯ ತಿಳಿಸಿಕೊಡುವುದು. ಅರಿವು ನೆರವು ಕೇಂದ್ರ ತೆರೆಯುವುದು. ಧೂಮಪಾನ ಮಧ್ಯಪಾನ ದುಶ್ಚಟಗಳಿಗೆ ಬಲಿಯಾಗದಂತೆ ಮಕ್ಕಳಿಗೆ ಅರಿವು ಮೂಡಿಸುವ ಕಾರ್ಯ ಹಮ್ಮಿಕೊಳ್ಳುವುದು. ಎಲ್ಲ ನೌಕರರಿಂದ ಜಾಥಾ ಕಾರ್ಯಕ್ರಮ ಹಮ್ಮಿಕೊಳ್ಳುವುದು. ಸ್ವಾವಲಂಬಿ ಸ್ವಯಂ ಉದ್ಯೋಗದ ಪರಿಕಲ್ಪನೆಯನ್ನು ಜನರಲ್ಲಿ ಅರಿವು ಮೂಡಿಸುವುದು ಹೀಗೆ ವಿವಿಧ ನಿರ್ಣಯಗಳನ್ನು ತೀರ್ಮಾನಿಸಲಾಯಿತು.

ಷಡಕ್ಷರ ಶ್ರೀಗಳು, ಶಿವಾನಂದ ಮಠ ಹಂಸನೂರು ಶ್ರೀಗಳು ಸಾನ್ನಿಧ್ಯ ವಹಿಸಿದ್ದರು. ಮುಖಂಡರಾದ ದ್ಯಾವಣಗೌಡ ಪಾಟೀಲ, ಶಂಕರಪ್ಪ ಪೂಜಾರ, ಶಿವಪ್ಪ ನಾಯ್ಕರ, ಶಂಕ್ರಪ್ಪ ಕರಡಿ, ರಮೇಶ ಬಸರಕೋಡ, ಚಿನ್ನಪ್ಪ ಉದಗಟ್ಟಿ, ಚಿದಾನಂದ ಬೆನ್ನಪ್ಪನವರ, ಮಲ್ಲಪ್ಪ ಕರಡಿ, ಅಂದಪ್ಪ ಮುಚ್ಚಲಗುಡ್ಡ, ಮಂಜುನಾಥ ಹೂಲಗೇರಿ, ಪರಶುರಾಮ ತಳವಾರ, ಮಲ್ಲಪ್ಪ ಉಂಡಿ, ಹಣಮಂತ ಹಿರೇತಳವಾರ, ಬಸು ತೆಗ್ಗಿ, ಕವಿತಾ ಮಹಾಂತೇಶ ಹಿರೇತಳವಾರ, ಶೈಲಾ ಮುರುಡಿ, ನೀಲವ್ವ ಪಾರಪ್ಪ ಮುರಡಿ, ಮಂಜುನಾಥ ಅಂಗಡಿ, ಮಂಜುನಾಥ ಹೂಲಗೇರಿ, ಶಂಕ್ರಪ್ಪ ಪೂಜಾರ, ಕುಮಾರ ತುಂಬಲಗಡ್ಡಿ, ಮಂಜುನಾಥ ಬೈರಮಟ್ಟಿ, ಮಂಜುನಾಥ ಅಂಗಡಿ ಉಪಸ್ಥಿತರಿದ್ದರು.



ನಿವೃತ್ತರು ಸಮಾಜಕ್ಕೆ ಮಾದರಿಯಾಗಲಿ

ಹುನಗುಂದ: ನಿವೃತ್ತರು ತಮ್ಮ ಯಾವುದೇ ಕಾರ್ಯ ಅಡೆತಡೆ ಅಥವಾ ವಿಳಂಬ ಆದಲ್ಲಿ ಸಂಘದ ಪದಾಧಿಕಾರಿಗಳ ಮೂಲಕ ಭೇಟಿಯಾದಲ್ಲಿ ಕ್ರಮ ಕೈಗೊಳ್ಳುವುದಾಗಿ ತಹಶೀಲ್ದಾರ್ ಪ್ರದೀಪಕುಮಾರ ಹಿರೇಮಠ ಹೇಳಿದರು. ಇಲ್ಲಿನ ಗುರುಭವನದಲ್ಲಿ ಬುಧವಾರ ಹಮ್ಮಿಕೊಂಡಿದ್ದ ತಾಲೂಕು ಸರ್ಕಾರಿ ನಿವೃತ್ತ ನೌಕರರ ಹಿತವರ್ಧಕ ಸಂಘದ 27ನೇ ವಾರ್ಷಿಕ ಸರ್ವ ಸದಸ್ಯರ ಸಭೆ ಹಾಗೂ 70 ವರ್ಷ ಪೂರೈಸಿದ ಹಿರಿಯ ಚೇತನರ ಸನ್ಮಾನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ನೌಕರರ ಸಂಘದ ಅಧ್ಯಕ್ಷ ಸಂಗಮೇಶ ಪಾಟೀಲ ಮಾತನಾಡಿ, ನಿವೃತ್ತರು ಸದಾ ಲವಲವಿಕೆ ಹಾಗೂ ಕ್ರಿಯಾಶೀಲರಾಗಿರಬೇಕು. ಅದರಂತೆ ಮನೆ ಮಕ್ಕಳು ಹಾಗೂ ಸಮಾಜಕ್ಕೆ ಮಾರ್ಗದರ್ಶನ ನೀಡಬೇಕು ಎಂದರು. ಸಂಘದ ಅಧ್ಯಕ್ಷ ಎ.ಕೆ.ಉಪನಾಳ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ಬಿ.ಎನ್.ನಾಗನಗೌಡ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಿ.ಎಸ್.ಅಂಗಡಿ ವಾರ್ಷಿಕ ವರದಿ ಓದಿದರು. ಖಜಾಂಚಿ ವೈ.ವಿ. ಹೊಸಗೌಡರ, ನಿರ್ದೇಶಕರಾದ ಎ.ಎಸ್.ಮಠ, ಎನ್.ಎಂ.ನಾಡಗೌಡ, ಎಸ್.ಎಸ್.ಅಂಗಡಿ, ಎಲ್.ಜಿ.ದಿವಟಗಿ ಉಪಸ್ಥಿತರಿದ್ದರು. 70 ವರ್ಷ ಪೂರೈಸಿದ ನಿವೃತ್ತರನ್ನು ಸನ್ಮಾನ ಮಾಡಿದರು. ಪ್ರಧಾನ ಕಾರ್ಯದರ್ಶಿ ಬಿ.ವೈ.ಕೊಡಗಾನೂರ ಸ್ವಾಗತಿಸಿದರು. ನಾಗಪ್ಪ ಕರಂಡಿ ವಂದಿಸಿದರು. ಎಸ್.ಕೆ.ಕೊನೆಸಾಗರ ನಿರೂಪಿಸಿದರು.



ಅನುಮಾನ ಮೂಡಿಸಿದ ಜಿಲ್ಲಾಡಳಿತ ಕ್ರಮ: ಬೆಣ್ಣೂರ

ಬಾಗಲಕೋಟೆ: ನಗರದ ಹೆಮ್ಮೆಯ ನಾಗರಿಕರು ಸೌಹಾರ್ದತೆಯಿಂದ ರಾಷ್ಟ್ರೀಯ ನಾಯಕ ಛತ್ರಪತಿ ಶಿವಾಜಿ ಮಹಾರಾಜರ ಜಯಂತ್ಯುತ್ಸವ ನಿಮಿತ್ತ ಭಾವಚಿತ್ರ ಮೆರವಣಿಗೆ ನಡೆಸುವ ಸಂದರ್ಭದಲ್ಲಿ ಚಪ್ಪಲಿ ಎಸೆದು ಅಪಮಾನ ನಡೆಸಿರುವ ವ್ಯಕ್ತಿ ಗುಂಪುಗಳನ್ನು ಹದ್ದುಬಸ್ತಿನಲ್ಲಿಡುವಲ್ಲಿ ವಿಫಲತೆ ಹೊಂದಿರುವ ಜಿಲ್ಲಾಡಳಿತವು ಮತ್ತೊಂದು ಅಪಹಾಸ್ಯದ ಪ್ರಹಸನಕ್ಕೆ ಮುಂದಾಗಿ ನಗರದ ಇಡೀ ನಾಗರಿಕರಿಗೆ ಮತ್ತೊಮ್ಮೆ ಪೊಲೀಸ್ ಪಡೆಯನ್ನು ಬಳಸಿಕೊಂಡು ಹೆದರಿಸುತ್ತಿರುವುದು ಅತ್ಯಂತ ಬೇಸರದ ಕ್ರಮವಾಗಿದೆ. ಒಂದು ವರ್ಗ ಗುಂಪನ್ನು ಓಲೈಸಿಕೊಂಡು ಆಡಳಿತ ಮಾಡುವುದು ನಗರದ ನಾಗರಿಕರಿಗೆ ಅನುಮಾನಕ್ಕೆ ಪುಷ್ಟಿ ನೀಡುತ್ತಿದೆ ಎಂಬುದು ಎದ್ದು ಕಾಣುತ್ತಿದೆ ಎಂದು ಅಹಿಂದ ಒಕ್ಕೂಟ ಜಿಲ್ಲಾ ಸಂಚಾಲಕ ಮುತ್ತಣ್ಣ ವೈ.ಬೆಣ್ಣೂರ ತಿಳಿಸಿದ್ದಾರೆ.



ಜಿಲ್ಲೆಯ ಪೊಲೀಸ್ ವರಿಷ್ಠಾಕಾರಿಗಳು ಮುಗ್ಧರಿದ್ದಾರೆ. ಅವರಿಗೆ ಕೆಳಹಂತದ ಅಧಿಕಾರಿಗಳು ಸಂಪೂರ್ಣವಾಗಿ ದಾರಿ ತಪ್ಪಿಸಿದ್ದು ದೊಡ್ಡ ಪ್ರಮಾದವಾಗಿದೆ. ಈ ವೈಫಲ್ಯ ಮುಚ್ಚಿಕೊಳ್ಳಲು ಮಂಗಳೂರಿನಿಂದ ರ್‍ಯಾಪಿಡ್ ಪೊಲೀಸ್ ಪಡೆ ತೋರಿಸಿ ಜನತೆ ಹೆದರಿಸುವುದು ಖಂಡನೀಯ ಕ್ರಮ. ಇದೆಲ್ಲ ಅವಶ್ಯಕತೆಯೇ ಬರುವುದಿಲ್ಲ, ಇಲಾಖೆ ಕೆಲವು ಅಧಿಕಾರಿಗಳ ನಿಷ್ಕಾಳಜಿಯಿಂದ ನಡೆದಿರುವ ಘಟನೆಗೆ ತೇಪೆ ಹಚ್ಚೋದು ಸರಿಯಲ್ಲ. ಜಿಲ್ಲಾಡಳಿತಕ್ಕೆ ನಿಜವಾದ ಕಾಳಜಿ ಇದೆ ಎಂಬುದು ಸಾಬೀತುಪಡಿಸಲು ಮೆರವಣಿಗೆ ಸಂದರ್ಭದಲ್ಲಿ ಅಪಮಾನ ಮಾಡುವ ಕುಕೃತ್ಯ ಎಸಗಿರುವ ಗುಂಪು ಯಾರದು ಯಾವ ವ್ಯಕ್ತಿಯದು ಎಂಬುದು ಗೊತ್ತಿದ್ದರು ಕ್ರಮ ಜರುಗಿಸದೆ ಮುಚ್ಚಿ ಹಾಕುತ್ತಾ ಉಸ್ತುವಾರಿ ಸಚಿವರ ಮರ್ಜಿಯಂತೆ ವಿಷಯಾಂತರ ಮಾಡುತ್ತಾ ಸಾರ್ವಜನಿಕರಿಗೆ ತಪ್ಪು ಸಂದೇಶ ರವಾನಿಸುವ ಮೂಲಕ ಬೇಸರ ತರುತ್ತಿರುವ ಸಂಗತಿ. ಪಟ್ಟಣ ಮಾರ್ಕೆಟನಲ್ಲಿ ಲಾಠಿ ಚಾರ್ಜ್ ಮಾಡಿದ್ದು ಯಾವ ಸಮುದಾಯವನ್ನು ಸಂತೋಷ ಪಡಿಸಲು ಮುಂದಾಗಿದ್ದೀರಿ ಎಂಬುದನ್ನು ಸಾರ್ವಜನಿಕರಿಗೆ ತಿಳಿಸಿ. ಈ ಘಟನೆ ಮುಚ್ಚಿಹಾಕಲು ನಮ್ಮ ಬಾಗಲಕೋಟೆ ನಗರಕ್ಕೆ ಕಪ್ಪು ಚುಕ್ಕೆ ತರುವಲ್ಲಿಯೂ ಜಿಲ್ಲಾಡಳಿತವು ಮುಂದಾಗುತ್ತಿರುವಂತೆ ಭಾಸವಾಗುತ್ತದೆ ಎಂದಿದ್ದಾರೆ.

ಚಪ್ಪಲಿ ಎಸೆದಿರುವ ಗೂಂಡಾಗಳಿಗೆ ಗಡಿಪಾರು ಮಾಡಬೇಕು. ನಗರದ ನಾಗರಿಕರ ಭಾವನೆಗಳಿಗೆ ಗೌರವ ನೀಡಬೇಕು ಇಲ್ಲದಿದ್ದರೆ ಸ್ವತಃ ಸರಕಾರವೇ ಸಮಸ್ಯೆಗಳ ಮೇಲೆ ಸಮಸ್ಯೆಗೆ ಪ್ರಭಾವ ಬೀರಿದಂತಾಗುತ್ತದೆ ಎಂದು ಅಹಿಂದ ಒಕ್ಕೂಟ ಜಿಲ್ಲಾ ಸಂಚಾಲಕ ಮುತ್ತಣ್ಣ ಬೆಣ್ಣೂರ ಪ್ರಕಟಣೆಯ ಮೂಲಕ ಮನವಿ ಮಾಡಿದ್ದಾರೆ.

ಕಿರುಸುದ್ದಿ



ಕೊಲ್ಹಾರ: ಸಂಕೇತ ಸ್ವಯಂ ಸೇವಾ ಸಂಸ್ಥೆ(ರಿ), ವಿಜಯಪುರ ಸಂಸ್ಥೆಯ ದಶಮಾನೋತ್ಸವದ ಪ್ರಯುಕ್ತ ರಾಜ್ಯಮಟ್ಟದ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಪ್ರಶಸ್ತಿಯನ್ನು ಸಾಹಿತಿ ರುದ್ರಮ್ಮ ಗಿಡ್ಡಪ್ಪಗೋಳ ಕೊಲ್ಹಾರ ಅವರನ್ನು ಶಿಕ್ಷಣ ಮತ್ತು ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಶಾಲೆ ವಿರುದ್ಧ ರಾಜಕೀಯ ಪಿತೂರಿ: ಪ್ರತಿದೂರು



◆**ಮುದ್ದೇಬಿಹಾಳ:** ತಾಲೂಕಿನ ವಿದ್ಯಾಸ್ಫೂರ್ತಿ ಶಿಕ್ಷಣ ಸಂಸ್ಥೆ ವಿರುದ್ಧ ರಾಜಕೀಯ ದ್ವೇಷದಿಂದ ಕ್ರಮ ಕೈಗೊಳ್ಳಲಾಗುತ್ತಿದೆ ಎಂಬ ಆರೋಪದ ಹಿನ್ನೆಲೆ ತೀವ್ರ ಆಕ್ರೋಶ ವ್ಯಕ್ತಪಡಿಸಿ ತಾಲೂಕಿನ ವಿವಿಧ ದಲಿತ ಸಂಘಟನೆಗಳ ಮುಖಂಡರು ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎಸ್.ಸಾವಳಗಿ ಅವರಿಗೆ ಮನವಿ ಸಲ್ಲಿಸಿದರು.ಈ ವೇಳೆ ಮಾತನಾಡಿದ ಜಿಲ್ಲಾ ಸಂಚಾಲಕ ಹರೀಶ ನಾಟಿಕರ್, ಸಿ.ಜಿ.ವಿಜಯಕರ, ತಿಪ್ಪಣ್ಣ ದೊಡಮನಿ ಸೇರಿದಂತೆ ಹಲವು ಮುಖಂಡರು, 2015ರಿಂದ ನಿರಂತರವಾಗಿ ಶೈಕ್ಷಣಿಕ ಸೇವೆ ಸಲ್ಲಿಸುತ್ತಿರುವ ಸಂಸ್ಥೆ ಅನೇಕ ದಲಿತ ವಿದ್ಯಾರ್ಥಿಗಳನ್ನು ಸೇರಿ ಎಲ್ಲಾ ಸಮಾಜಗಳ ವಿದ್ಯಾರ್ಥಿಗಳನ್ನು ವೈದ್ಯರು ಹಾಗೂ ಇಂಜಿನಿಯರ್‌ಗಳಾಗಿ ರೂಪಿಸಿದೆ. ಉತ್ತಮ ತರಬೇತಿ ನೀಡುತ್ತಿದೆ. ಆದರೆ ಉದ್ದೇಶ ಪೂರ್ವಕವಾಗಿ ಸಂಸ್ಥೆಯ ಮಾನ್ಯತೆ ರದ್ದುಪಡಿಸಲು ಕೆಲವರು ಅಧಿಕಾರಿಗಳ ಮೇಲೆ ಒತ್ತಡ ಹೇರುತ್ತಿದ್ದಾರೆ. ಇದು ಕೇವಲ ಒಂದು ಶಾಲೆಯ ಮೇಲಿನ ದಾಳಿಯಲ್ಲ, ಬದಲಾಗಿ ಮಕ್ಕಳ ಶಿಕ್ಷಣ ಹಕ್ಕಿನ ಮೇಲಿನ ದಾಳಿ ಎಂದು ಅವರು ಆರೋಪಿಸಿದ್ದಾರೆ. ನಾವು ಯಾವುದೇ ಶಾಲೆಯ ಪರ ಅಥವಾ ವಿರೋಧ ಮಾಡುತ್ತಿಲ್ಲ, ಆದರೆ ಉದ್ದೇಶ ಪೂರ್ವಕವಾಗಿ ವಿದ್ಯಾಸ್ಫೂರ್ತಿ ಒಂದೇ ಶಾಲೆಯನ್ನು ಗುರಿಯಾಗಿಸಿಕೊಂಡು ಹೋರಾಟ ನಡೆಸಿ, ಮಾನ್ಯತೆ ರದ್ದು ಮಾಡಲು ಶಿಫಾರಸ್ಸು ಮಾಡಿರುವುದನ್ನು ಖಂಡಿಸುತ್ತೇವೆ ಎಂದು ಸ್ಪಷ್ಟಪಡಿಸಿದರು. ಸಂಸ್ಥೆ ಯಾವುದೇ ಗಂಭೀರ ತಪ್ಪು ಮಾಡಿಲ್ಲ, ಒಂದು ವೇಳೆ ಸಣ್ಣಪುಟ್ಟ ಲೋಪಗಳಿದ್ದರೆ ಅವುಗಳನ್ನು ಸರಿಪಡಿಸಲು ಸಮಯಾವಕಾಶ ನೀಡಬೇಕು. ರಾಜಕೀಯ ಒತ್ತಡಕ್ಕೆ ಮಣಿದು ಮಾನ್ಯತೆ ರದ್ದುಪಡಿಸಿದಲ್ಲಿ ಮುದ್ದೇಬಿಹಾಳ ಬಂದ್ ಮಾಡಿ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳುವುದಾಗಿ ಸಂಘಟನೆಗಳ ಪರವಾಗಿ ಮನವಿಯಲ್ಲಿ ಎಚ್ಚರಿಕೆ ನೀಡಲಾಗಿದೆ ಎಂದರು. ಸಿ.ಜಿ.ವಿಜಯಕರ, ಹರೀಶ ನಾಟಿಕರ್, ಪ್ರಕಾಶ ಸರೂರ, ತಿಪ್ಪಣ್ಣ ದೊಡಮನಿ, ಬಲರಾಮ ನಾಯಕಮಕ್ಕಳ, ದೇವರಾಜ ಹಂಗರಗಿ, ಸಿದ್ದು ಚಲವಾದಿ, ಪ್ರಶಾಂತ ಕಾಳೆ. ವಿವಿಧ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು.


ಫೆ.28ರಂದು ಮಹಾಸಮ್ಮೇಳನ

◆**ನಾಲತವಾಡ:** ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ(ರಿ) ಬೆಂಗಳೂರು ಅವರು ಫೆ.28ರಂದು ಬೆಂಗಳೂರಿನ ತ್ರಿಪುರವಾಸಿನಿ ಅರಮನೆ ಮೈದಾನದಲ್ಲಿ ಹಮ್ಮಿಕೊಂಡಿರುವ ರಾಜ್ಯಮಟ್ಟದ ಶೈಕ್ಷಣಿಕ ಮಹಾಸಮ್ಮೇಳನ, ಧನ್ಯತಾ ಸಮರ್ಪಣೆ ಹಾಗೂ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ತಾಲೂಕಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವುದರ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಪಟ್ಟಣದ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಬಸವರಾಜ ಮುದ್ನೂರ ಮನವಿ ಮಾಡಿದರು. ತಾಲೂಕು ಪ್ರಧಾನ ಕಾರ್ಯದರ್ಶಿ ಎನ್.ಎಸ್.ತುರಡಗಿ, ಉಪಾಧ್ಯಕ್ಷ ಶಾಂತು ಬಿರಾದಾರ, ಆರ್.ಎಸ್.ಹಿರೇಮಠ, ಖಜಾಂಚಿ ಎ.ಎಚ್.ಖಾಜಿ, ಸಹಕಾರ್ಯದರ್ಶಿ ಬಿ.ಎಸ್.ಹೊಳಿ, ಪಿ.ಎ.ಬೋವಿ, ಜ್ಯೋತಿ ಕುಂದರಗಿ ಹಾಗೂ ಸಂಘಟನಾ ಕಾರ್ಯದರ್ಶಿ ಐ.ಎ.ಹಿರೇಮಠ, ಎಸ್.ಎ.ಮೇರೆಖೋರ, ನಾಮನಿರ್ದೇಶಿತ ಸದಸ್ಯರು ಉಪಸ್ಥಿತರಿದ್ದರು.



ಜೆಡಿಎಸ್ ಸಮಾವೇಶದಲ್ಲಿ ಪಾಲ್ಗೊಳ್ಳಲು ಪಾಟೀಲ ಸಲಹೆ

◆**ಝಳಕಿ:** ಜೆಡಿಎಸ್ ಬೆಳ್ಳಿ ಮಹೋತ್ಸವದ ಸಮಾವೇಶ ಫೆ.27ರಂದು ವಿಜಯಪುರದಲ್ಲಿ ನಡೆಯುವುದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಯಾಗಿಸಿಬೇಕೆಂದು ಜೆಡಿಎಸ್ ಮುಖಂಡ ಬಸಗೂಂಡ ಪಾಟೀಲ ಹೇಳಿದರು. ಸ್ಥಳೀಯ ಪ್ರವಾಸ ಮಂದಿರ ಆವರಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಡಿಎಸ್ ಮುಖಂಡರಾದ ಮಾಜಿ ಪ್ರಧಾನಮಂತ್ರಿ ದೇವೇಗೌಡ, ಕೇಂದ್ರ ಸಚಿವ ಕುಮಾರಸ್ವಾಮಿ, ನಿಖಿಲ ಕುಮಾರಸ್ವಾಮಿ ಪಾಲ್ಗೊಳ್ಳುವರು ಎಂದು ತಿಳಿಸಿದ್ದಾರೆ.





ಮುದ್ದೇಬಿಹಾಳ: ತಾಲೂಕಿನ ಡವಳಗಿ ಗ್ರಾಮದ ಬಸವ ಭಾರತಿ ಪ್ರೌಢಶಾಲೆಯಲ್ಲಿ, ತರಣ ಸಾಹಿತ್ಯ ಪರಿಷತ್ ಹಾಗೂ ಕದಳಿ ವೇದಿಕೆಯ ಸಹಯೋಗದಲ್ಲಿ ದತ್ತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಬಸವರಾಜ ನಾಲತವಾಡ, ಕಾಶಿಬಾಯಿ ರಾಂಪುರ, ಎಸ್.ಎಸ್.ಹುನಗುಂದ ಸೇರಿದಂತೆ ಗ್ರಾಮಸ್ಥರು ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಭರತನಾಟ್ಯದ ಮೂಲಕ ವಚನಗಳನ್ನು ಪ್ರಸ್ತುತ ಪಡಿಸಲಾಯಿತು.

ಶರಣಬಸವೇಶ್ವರ, ಮಹಾದೇವಿ ಅದ್ದೂರಿ ಮದುವೆ

◆**ದೇವರಹಿಪ್ಪರಗಿ:** ತಾಲೂಕಿನ ಹುಣಶ್ಯಾಳ ಗ್ರಾಮದ ಪ್ರಮುಖ ದೇಶಮುಖ ಅವರ ಮನೆ ಆವರಣದಲ್ಲಿ ಮಹಾ ದಾಸೋಹಿ ಕಲಬುರ್ಗಿ ಶರಣಬಸವೇಶ್ವರ ಮಹಾತ್ಮೆ ಪುರಾಣದಲ್ಲಿ ಶರಣಬಸವೇಶ್ವರ ಮತ್ತು ಮಹಾದೇವಿ ಅಮ್ಮನವರ ಅದ್ದೂರಿ ಮದುವೆ ಸಮಾರಂಭ ನಡೆಯಿತು. ಪುರಾಣದಲ್ಲಿ ನಡೆದ ಮದುವೆಯು ವಧು ಮಾಶ್ಯಾಳ ಗ್ರಾಮದ ಮಹಾದೇವಿಯ ಕಡೆಯವರಾಗಿ ಶರಣ ದಂಪತಿಗಳಾದ ರಾಮನಗೌಡ ಬಾಪುಗೌಡ ಕರ್ನಾಳ ದಂಪತಿಗಳು ವಹಿಸಿಕೊಂಡರು. ವರನ ಕಡೆಯವರಾಗಿ ರಮೇಶ ಶರಣಪ್ಪ ಹಿಪ್ಪರಗಿ(ಪಡಶೆಟ್ಟಿ) ದಂಪತಿಗಳು ಮುಂದೇ ನಿಂತು ಮದುವೆ ಕಾರ್ಯಗಳನ್ನು ನಡೆಸಿಕೊಟ್ಟರು. ನಾನಾ ಕಾರ್ಯಕ್ರಮಗಳ ಜೊತೆ ವಧುವಿನ ಮನೆಗೆ ತೆರಳಿ ವಧುವಿನ ಜತೆಗೆ ಬೀಗರನ್ನು ಮದುವೆ ಮಂಟಪಕ್ಕೆ ಕರೆತರಲಾಯಿತು. ವಿ?ಳ್ಯೆ ಹಂಚುವ ಮೂಲಕ ಬೀಗ, ಬೀಗರು ಪರಸ್ಪರ ಸಿಹಿ ಹಂಚಿಕೊಂಡರು. ಶರಣಬಸವೇಶ್ವರ ಮದುವೆ ಸಮಾರಂಭದ ಪೂಜಾ ವಿಧಾನಗಳನ್ನು ಶಾಂತಯ್ಯ ಹಿರೇಮಠ ಮತ್ತು ರುದ್ರಯ್ಯ ಹಿರೇಮಠ ಸ್ವಾಮಿಗಳು ನಡೆಸಿಕೊಟ್ಟರು. ಪುರಾಣದ ಶಾಸ್ತ್ರಿಗಳು ಮಂತ್ರೊ?ಪದೇಶಗಳನ್ನು ನಡೆಸಿದರು. ಸಡಗರ ಸಂಭ್ರಮದ ಶರಣಬಸವೇಶ್ವರರ ಮದುವೆ ಮಾಶ್ಯಾಳದ ಮಹಾದೇವಿ ಜೊತೆ ನೆರವೇರಿತು. ನಂತರ ಪುರಾಣ ಆಲಿಸಲು ಬಂದ ನೂರಾರು ಭಕ್ತರು ಶಿರಾ, ಅನ್ನ ಸಾಂಬಾರ ಊಟದ ಪ್ರಸಾದವನ್ನು ಸವಿದು ಶರಣಬಸವೇಶ್ವರರ ಕೃಪೆಗೆ ಪಾತ್ರರಾದರು. ಮದುವೆಯ ಮಾತುಗಳನ್ನು ಮೆಲುಕು ಹಾಕುತ್ತಾ ತಮ್ಮ ತಮ್ಮ ಮನೆಗಳಿಗೆ ತೆರಳಿದರು.



ದೇವರಹಿಪ್ಪರಗಿ: ತಾಲೂಕಿನ ಹುಣಶ್ಯಾಳ ಗ್ರಾಮದ ಪ್ರಮುಖ ದೇಶಮುಖ ಅವರ ಮನೆ ಆವರಣದಲ್ಲಿ ಮಹಾ ದಾಸೋಹಿ ಕಲಬುರ್ಗಿ ಶರಣಬಸವೇಶ್ವರ ಮಹಾತ್ಮೆ ಪುರಾಣದಲ್ಲಿ ಶರಣಬಸವೇಶ್ವರ ಮತ್ತು ಮಹಾದೇವಿ ಅಮ್ಮನವರ ಅದ್ದೂರಿ ಮದುವೆ ಸಮಾರಂಭ ನಡೆಯಿತು.ವಂದಾಲದ ವೇ.ಮೂ ಪಂಡಿತ್ ಮಹಾಂತಯ್ಯ ಶಾಸ್ತ್ರಿಗಳು ಪುರಾಣ ಪಠಿಸಿದರು. ಜೇರಟಗಿಯ ವೇ.ಮೂ ಶಿವಯ್ಯಸ್ವಾಮಿ ಗವಾಯಿಗಳು ಮದುವೆಯ ಹಾಡುಗಳನ್ನು ಪ್ರಸ್ತುತಪಡಿಸಿದರು. ಮುದನೂರದ ಸೋಮಶೇಖರ(ವಿಶ್ವಕರ್ಮ) ತಬಲಾ ಸಾಥ್ ನೀಡಿದರು.

ಗ್ಯಾರಂಟಿ ಹೆಸರಲ್ಲಿ ಅಭಿವೃದ್ಧಿ ಕಾರ್ಯ ಮುಂದೂಡಿಕೆ | ಅಂಗಡಿ ಹೇಳಿಕೆ

ರಾಜ್ಯ ಸರ್ಕಾರದ ಖಜಾನೆ ಖಾಲಿ

◆**ವಿಜಯಪುರ:** ಸರ್ಕಾರಿ ಖಜಾನೆ ಸಂಪೂರ್ಣ ಬರಿದಾಗಿದೆ. ಗ್ಯಾರಂಟಿ ಹೆಸರಿನಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರ ಅಭಿವೃದ್ಧಿಯನ್ನು ಮುಂದೂಡುತ್ತಿದೆ. ಈ ರಾಜ್ಯ ಸರ್ಕಾರದ ವೈಫಲ್ಯ ಪಟ್ಟಿ ಮಾಡುತ್ತ ಹೋದರೆ ಅದಕ್ಕೆ ಅಂತ್ಯವೇ ಇಲ್ಲ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಜನರ ಕಾಳಜಿ ಇಲ್ಲ, ಕೇವಲ ಕುರ್ಚಿ ಕಾದಾಟದಲ್ಲಿಯೇ ಕಾಲಹರಣ ಮಾಡುತ್ತಿದೆ, ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದಾಗಿನಿಂದಲೂ ರಾಜ್ಯದ ಅಭಿವೃದ್ಧಿ ಸಂಪೂರ್ಣ ಮರೀಚಿಕೆಯಾಗಿದೆ, ಗ್ಯಾರಂಟಿ ಹೆಸರಿನಲ್ಲಿ ಅಭಿವೃದ್ಧಿಯನ್ನು ಮುಂದಕ್ಕೆ ದೂಡುತ್ತಿದೆ ಎಂದರು.

40 ಸಾವಿರ ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ ಎಂಬ ಸುಳ್ಳು ಹೇಳಿಕೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ, ಆದರೆ ಅಧಿವೇಶನದಲ್ಲಿ ಸರ್ಕಾರ 8 ಸಾವಿರ ಹುದ್ದೆಗಳನ್ನು ಭರ್ತಿ ಮಾಡಿದೆ ಎಂದು ಲಿಖಿತ ಹೇಳಿಕೆ ನೀಡಿದೆ, ಈ ರೀತಿ ಸುಳ್ಳು ಹೇಳಿ ದಿಕ್ಕು ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ ಎಂದರು.

ಗುತ್ತಿಗೆದಾರರಿಗೆ ಬಿಲ್ ಪಾವತಿಸಬೇಕು, ಅವರು ಸಂಕಷ್ಟಮಯ ಪರಿಸ್ಥಿತಿಯಲ್ಲಿದ್ದಾರೆ, ಅವರು



ಅನಿವಾರ್ಯವಾಗಿ ಕೆಲಸ ಸ್ಥಗಿತಗೊಳಿಸಿದರೆ ಕುಡಿಯುವ ನೀರು ಇತರೆ ವಿಷಯಕ್ಕೆ ಹಾಹಾಕಾರ ಉಂಟಾಗಲಿದೆ, ರಾಜ್ಯ ಸರ್ಕಾರ ಗುತ್ತಿಗೆದಾರರಿಗೆ ಬಿಲ್ ಪಾವತಿಸಬೇಕು ಎಂದು ಒತ್ತಾಯಿಸಿದರು.

ಬಿಜೆಪಿ ರಾಜ್ಯ ಕಾರ್ಯಕಾರಣಿ ಸದಸ್ಯ ಡಾ.ಸುರೇಶ ಬಿರಾದಾರ ಮಾತನಾಡಿ, ಶೂನ್ಯವೇ ಈ ಕಾಂಗ್ರೆಸ್ ಸರ್ಕಾರದ ಸಾಧನೆ, ಸರ್ಕಾರಿ ಹುದ್ದೆ ಭರ್ತಿಗಾಗಿ ವಿದ್ಯಾರ್ಥಿ- ಯುವಜನ ಸಮೂಹದಿಂದ ದೊಡ್ಡ ಪ್ರತಿಭಟನೆ ನಡೆಯುತ್ತಲೇ ಇದೆ, ಆಗ ಅಧಿಸೂಚನೆ ಹೊರಡಿಸುವುದಾಗಿ ಭರವಸೆ ನೀಡಿದ್ದ ಸರ್ಕಾರ ಈಗ 6 ತಿಂಗಳು ಉರುಳಿದರೂ ಯಾವ ನೇಮಕಾತಿ ಪ್ರಕ್ರಿಯೆ ಆರಂಭವಾಗಿಲ್ಲ ಎಂದರು.

ರಾಹುಲ್ ಗಾಂಧಿ ಯುವಜನತೆ ಬಗ್ಗೆ ದೊಡ್ಡ ದೊಡ್ಡ ಮಾತು ಹೇಳುತ್ತಾರೆ, ಆದರೆ ಅವರದ್ದೇ ಸರ್ಕಾರವಿರುವ ನಮ್ಮ ರಾಜ್ಯದಲ್ಲಿ ಯುವಕರಿಗೆ ನ್ಯಾಯ ಒದಗಿಸುವ

> **ಫಲಿತಾಂಶ ಹೆಶಿರಹಟ್ಟಿ ಶಾಸಕರ ಮೇಲಿನ ಪ್ರಕರಣ ಇನ್ನೂ ತನಿಖಾ ಹಂತದಲ್ಲಿದೆ, ಭ್ರಷ್ಟಾಚಾರ ಯಾರೂ ಮಾಡಿದರೂ ತಪ್ಪು, ಭ್ರಷ್ಟಾಚಾರವನ್ನು ನಾವು ಸಮರ್ಥಿಸಿಕೊಳ್ಳುವುದಿಲ್ಲ, ಆದರೆ ವಾಲ್ಮೀಕಿ ಹಗರಣದ ದುರಪಯೋಗ ಆಗಿರುವ ಬಗ್ಗೆ ಸ್ವತಃ ಮುಖ್ಯಮಂತ್ರಿಗಳೇ ಒಪ್ಪಿಕೊಂಡಿದ್ದಾರೆ, ಈ ಲಂಚಕ್ಕೆ ತಂದೆ- ತಾಯಿಯೇ ಕಾಂಗ್ರೆಸ್.**
>
> ■ **ಗುರುಲಿಂಗಪ್ಪ ಅಂಗಡಿ, ಜಿಲ್ಲಾಧ್ಯಕ್ಷ**

ಕೆಲಸ ಮಾಡುತ್ತಿಲ್ಲ, ಕೇವಲ ಪ್ರಧಾನಿ ಮೋದಿ ಅವರನ್ನು ಟೀಕೆ ಮಾಡುವುದರಲ್ಲಿಯೇ ಕಾಲಹರಣ ಮಾಡುತ್ತಿದ್ದಾರೆ ಎಂದರು.

ಇನ್ನೊಂದೆಡೆ ಹಳ್ಳಿ ಹಳ್ಳಿಗಳಲ್ಲಿ ಲಿಕ್ಕರ್ ಲೈಸನ್ಸ್ ಕೊಡಲು ಮುಂದಾಗಿದ್ದು, ಅಲ್ಲಿಯೂ ದೊಡ್ಡ ಭ್ರಷ್ಟಾಚಾರ ನಡೆದಿದೆ, ಇದರಿಂದಾಗಿ ಹಳ್ಳಿಗಳಲ್ಲಿ ಮಧ್ಯದ ಹಾವಳಿ ಅಧಿಕವಾಗಿದೆ. ಒಳಮೀಸಲಾತಿ ಮೊದಲಾದ ನೆಪ ಹೇಳದೇ ಯುವಕರಿಗೆ ನ್ಯಾಯ ಒದಗಿಸಲು ಸರ್ಕಾರಿ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕೆಂದು ಒತ್ತಾಯಿಸಿದರು.

ಬಿಜೆಪಿ ಮುಖಂಡ ರವಿ ಬಿರಾದಾರ, ಮಾಧ್ಯಮ ಪ್ರಮುಖ ವಿಜಯ ಜೋಶಿ ಇದ್ದರು.

ಫೆ.27ರಿಂದ ಆರೋಗ್ಯ ಶಿಬಿರ

◆ **ವಿಜಯಪುರ:** ನಗರದ ಪ್ರತಿಷ್ಠಿತ ಬಿಎಲ್‌ಡಿಇ ಸಂಸ್ಥೆಯ ಎವಿಎಸ್ ಆಯುರ್ವೇದ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದ ಕಾಯಚಿಕಿತ್ಸೆ ವಿಭಾಗದ ವತಿಯಿಂದ ಪುರುಷರಲ್ಲಿ ವೀರ್ಯಾಣು ಕೊರತೆಯ ಸಮಸ್ಯೆ ಕುರಿತು ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಫೆ.27, 28ರಂದು ಹಮ್ಮಿಕೊಳ್ಳಲಾಗಿದೆ. ಇಂಥ ಸಮಸ್ಯೆಯನ್ನು ಎದುರಿಸುತ್ತಿರುವ ಸಾರ್ವಜನಿಕರು ಈ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಡಾ. ಬದರಿನಾರಾಯಣ ಕುಲಕರ್ಣಿ ಮೊ. 8277524506, 8073518596 ಸಂಪರ್ಕಿಸಬಹುದಾಗಿದೆ ಎಂದು ಬಿಎಲ್‌ಡಿಇ. ಸಂಸ್ಥೆಯ ಆಯುರ್ವೇದ ಮಹಾವಿದ್ಯಾಲಯದ ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದ ಆಡಳಿತಾಧಿಕಾರಿ ಡಾ. ಸಂಜಯ ಕಡ್ಲಿಮಟ್ಟಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾಂತ್ವನ ಕೇಂದ್ರದ ಸಹಾಯ ಪಡೆಯಿರಿ

◆**ಸಿಂದಗಿ:** ಸಿಂದಗಿ ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರವು ನೊಂದು ಬಂದಂತಹ ಮಹಿಳೆಗೆ ಸಾಂತ್ವನ ಹೇಳುವ ಮೂಲಕ ಮಹಿಳೆಯರಿಗೆ ನ್ಯಾಯ ಒದಗಿಸುವ ದಿಸೆಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಮಹಿಳೆಯರು ಇದರಸದುಪಯೋಗಪಡೆದುಕೊಳ್ಳಬೇಕು ಎಂದು ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರದ ಸಮಾಜ ಕಾರ್ಯಕರ್ತೆ ವಿದ್ಯಾ ದೇಸಾಯಿ ಹೇಳಿದರು.

ಸಿಂದಗಿ ಮಹಿಳಾ ಸಾಂತ್ವನ ಮಹಿಳಾ ಸಹಾಯವಾಣಿ ಕೇಂದ್ರ ವತಿಯಿಂದ ಕೆರೂಟಗಿ ಗ್ರಾಮದಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಶ್ರೀಧರ ವಿದ್ಯಾವರ್ಧಕ ಸಂಘ, ವಿಜಯಪುರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಿಂದಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ ಹಾಗೂ ಸಂಗಮ ಸಮಾಜ ಸೇವಾ ಸಂಸ್ಥೆಯ ಸಹಯೋಗದಲ್ಲಿ ಹಮ್ಮಿಕೊಂಡ ಮಹಿಳಾ ಜಾಗೃತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ನಮ್ಮ ಕುಟುಂಬಗಳಲ್ಲಿ ಮಕ್ಕಳನ್ನು ನಾವು ಬೆಳೆಸುವಾಗ ಗಂಡು, ಹೆಣ್ಣು ಎಂಬ ಭೇದ ಭಾವವನ್ನು ತೆಗೆದುಹಾಕಿ



ಸಮಾನತೆಯಿಂದ ಬೆಳೆಸಬೇಕು. ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಸಮಾನ ಪ್ರಾಮುಖ್ಯತೆ ನೀಡಬೇಕು. ಒಬ್ಬ ವ್ಯಕ್ತಿಯ ಭವಿಷ್ಯ ತನ್ನ ಬಾಲ್ಯದ ಮೇಲೆ ಅವಲಂಬಿತವಾಗಿರುತ್ತದೆ. ಆ ವ್ಯಕ್ತಿ ಮಗುವಾಗಿದ್ದಾಗ ತಂದೆ-ತಾಯಿಯ ಸ್ನೇಹ, ಪ್ರೀತಿ, ವಾತ್ಸಲ್ಯ ಹಾಗೂ ಮಮತೆ ಸರಿಯಾದ ರೀತಿಯಲ್ಲಿ ಸಿಕ್ಕಿದ್ದಲ್ಲಿ ಮಕ್ಕಳಲ್ಲಿ ಒಳ್ಳೆಯ ಸಂಸ್ಕಾರ, ಸಂಸ್ಕೃತಿ ಮತ್ತು ಮಾನವೀಯ ಮೌಲ್ಯ ಬೆಳೆಯಲು ಸಾಧ್ಯವಾಗುತ್ತದೆ ಎಂದರು.

ಸಾಂತ್ವನ ಮಹಿಳಾ ಸಾಹಾಯವಾಣಿ ಕೇಂದ್ರದ ಸಮಾಜ ಕಾರ್ಯಕರ್ತೆ ರಶ್ಮಿ ನೂಲಾನವರ, ಮಲ್ಲಮ್ಮ ಗೊಬ್ಬೂರ, ದ್ರೌಪದಿ ಹಿರೇಮಠ, ಕಾವೇರಿ ಬೀಳಗಿ, ಚಂದ್ರಕಲಾ ಬೀಳಗಿ, ಕಲ್ಪನಾ ವಡ್ಡರ, ದೀಪಾ ತಳವಾರ, ಮಾದೇವಿ ತಳವಾರ, ಚನ್ನಮ್ಮ ತಳವಾರ, ರೇಣುಕಾ ತಳವಾರ, ಸುವರ್ಣ ವಾಲೀಕಾರ ಸೇರಿದಂತೆ ಮಹಿಳೆಯರು ಉಪಸ್ಥಿತರಿದ್ದರು.

ಪಿಎಚ್‌ಡಿ ಪ್ರದಾನ



◆ **ಆಲಮೇಲ:** ಪಟ್ಟಣದ ಶಿವಲಿಂಗಪ್ಪ ಎಸ್. ಹಳೆಮನಿ ಅವರಿಗೆ ಆಂಧ್ರಪ್ರದೇಶದ ಕುಪ್ಪಂನ ದ್ರಾವಿಡ ವಿಶ್ವವಿದ್ಯಾಲಯವು ಡಾಕ್ಟರೇಟ್ ಪದವಿ ನೀಡಿದೆ. ವಿವಿಯ ವಾಣಿಜ್ಯ ವಿಭಾಗದಲ್ಲಿ ಶಿವಲಿಂಗಪ್ಪ ಹಳೆಮನಿ ಅವರು ಮಂಡಿಸಿದ ಕರ್ನಾಟಕ ಸಹಕಾರ ಬ್ಯಾಂಕುಗಳ ಹಣಕಾಸಿನ ವಿಶ್ಲೇಷಣೆ;ವಿಜಯಪುರ ಡಿಸಿಸಿ ಬ್ಯಾಂಕ್ ಅನುಲಕ್ಷಿಸಿ ಎಂಬ ವಿಷಯದಲ್ಲಿ ಡಾ.ಪಂಡಿತ ಬಿಳಂಬಗೆ ಅವರ ಮಾರ್ಗದರ್ಶನದಲ್ಲಿ ಪ್ರಬಂಧ ಮಂಡಿಸಿದ್ದರು. ಸಿಂದಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಾಚಾರ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಯುವಕರು ಉದ್ಯೋಗಿಗಳಾಗಲಿ: ಪಾಟೀಲ

◆**ವಿಜಯಪುರ:** ಉತ್ತರ ಕರ್ನಾಟಕದ ಯುವಕರುಕೇವಲ ಉದ್ಯೋಗಾಂಕ್ಷಿಗಳಾಗದೆ ಉದ್ಯೋಗದಾತರೂ ಆಗಬೇಕು ಎಂದು ಬಿಎಲ್‌ಡಿಇ ಡೀಮ್ಡ್ ವಿವಿ ಕುಲಾಧಿಪತಿ ಬಸನಗೌಡ ಪಾಟೀಲ ಹೇಳಿದರು.

ನಗರದ ಬಿಎಲ್‌ಡಿಇ ಸಂಸ್ಥೆ ಎಸ್‌ಬಿ ಕಲಾ ಹಾಗೂ ಕೆಸಿಪಿ ವಿಜ್ಞಾನ ಮಹಾವಿದ್ಯಾಲಯದಲ್ಲಿ ಬುಧವಾರ ಹಮ್ಮಿಕೊಂಡ ಉತ್ತರ ಕರ್ನಾಟಕದಲ್ಲಿ ಉದ್ಯೋಗಾವಕಾಶಗಳು ಎಂಬ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಹಿಂದುಳಿದ, ಬರದ ಜಿಲ್ಲೆ ಎಂದು ಹೆಸರಾಗಿದ್ದ ವಿಜಯಪುರ ಜಿಲ್ಲೆ ಇಂದು ಬದಲಾಗಿದೆ. ಜಿಲ್ಲೆಯಲ್ಲಿ ಕೃಷಿ, ಹೈನುಗಾರಿಕೆ, ತೋಟಗಾರಿಕೆಗೆ ಹೆಚ್ಚಿನ ಅವಕಾಶಗಳುಇದ್ದು, ಇವುಗಳನ್ನು ಗ್ರಾಮೀಣ ಮಟ್ಟದಲ್ಲಿ ವೈಜ್ಞಾನಿಕ ಆಧಾರದ ಮೇಲೆ ಬಲಗೊಳಿಸಿ, ಉತ್ಪಾದನೆಯ ಅವಕಾಶ ಹೆಚ್ಚಿಸಲು ಬಿ.ಎಲ್.ಡಿ.ಇ ಸಂಸ್ಥೆ ಮೂಲಕ ಪ್ರಯತ್ನ ಆರಂಭಗೊಂಡಿವೆ ಎಂದರು.

ಬಿಎಲ್‌ಡಿಇ ಸಂಸ್ಥೆ ಶೈಕ್ಷಣಿಕ, ಸಾಮಾಜಿಕ ಮತ್ತು ಆರೋಗ್ಯ ಕ್ಷೇತ್ರಗಳಲ್ಲಿ ವಿನೂತನ ಕಾರ್ಯಗಳನ್ನು ಮಾಡುತ್ತಲಿದೆ. ನಮ್ಮ ತಂದೆ, ಕೈಗಾರಿಕೆ ಸಚಿವ ಎಂ.ಬಿ. ಪಾಟೀಲರು ಜಿಲ್ಲೆಯಲ್ಲಿ ಜಲ, ವೃಕ್ಷ, ಶಿಕ್ಷಣ, ಆರೋಗ್ಯ, ಹಾಗು ಕ್ಷೀರ ಕ್ರಾಂತಿಗೆ ಮುನ್ನುಡಿ ಬರೆದಿದ್ದಾರೆ. ಇದರೊಂದಿಗೆ ಫಾಕ್ಸ್ ಕಾನ್, ಟೊಯೊಟಾದಂತಹ ದೈತ್ಯ ಕಂಪನಿಗಳನ್ನು ಉತ್ತರ ಕರ್ನಾಟಕದಲ್ಲಿ ಯುವಕರಿಗೆ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಶ್ರಮಿಸುತ್ತಿದ್ದಾರೆ. ವಿಜಯಪುರದ ವಿಮಾನ ನಿಲ್ದಾಣ ವ್ಯಾಜ್ಯ ಸುಪ್ರಿಂಕೋರ್ಟನಲ್ಲಿ ಬಗೆಹರಿದು 2-3 ತಿಂಗಳಲ್ಲಿ ವಿಮಾನ ಸಂಪರ್ಕ ಆರಂಭವಾಗಲಿದೆ ಎಂದರು.

ಉದ್ಯಮಿವೀರೇಂದ್ರ ಗುಚ್ಚಟ್ಟಿ ಮಾತನಾಡಿ, ನೀರು ನಮಗೆ ಉತ್ತಮ ಅವಕಾಶಗಳನ್ನು ನೀಡಿದೆ. ಇದನ್ನು ಪರಿವರ್ತಿಸಿಕೊಳ್ಳುವುದು ನಮ್ಮ ಜವಾಬ್ದಾರಿಯಾಗಿದೆ ಎಂದರು.

ಕೈಗಾರಿಕೆ ಸಚಿವರ ಸಾರ್ವಜನಿಕ ಸಂಪರ್ಕಾಧಿಕಾರಿ ಡಾ.ಮಹಾಂತೇಶ ಬಿರಾದಾರ ಮಾತನಾಡಿ, ವಿಜಯಪುರದಲ್ಲಿ ಶಿಕ್ಷಣ ಪಡೆದು ಉನ್ನತ ಅಧಿಕಾರಿಗಳಾಗಿರುವವರು ಬೆರಣಿಕೆ. ಇದಕ್ಕೆ ಕಾರಣ ಬಡತನ ಮತ್ತು ಬರಗಾಲ. ಕೃಷಿ ಅವಲಂಭಿತರಾಗಿರುವ ನಾವು. ಆರ್ಥಿಕ ಸ್ಥಿತಿಗತಿ ಚೆನ್ನಾಗಿಲ್ಲದ ಕಾರಣ ಕೆಎಎಸ್, ಐಪಿಎಸ್ ಉನ್ನತ ಅಧಿಕಾರಿಗಳ ಸಂಖ್ಯೆ ಕಡಿಮೆ ಇದೆ. ಇಂದು ಕೃಷಿ ಸುಧಾರಣೆಯಾಗಿದೆ. ಯುವಕರ ಕೂಡ ಉದ್ಯೋಗದ ಬದಲಾಯಿಸಿಕೊಳ್ಳಬಹುದು ಎಂದರು.

ಪ್ರಾಚಾರ್ಯೆ ಡಾ.ಆರ್.ಎಂ. ಮಿರ್ದೆ, ಆಡಳಿತಾಧಿಕಾರಿ ವಿಲಾಸ ಬಗಲಿ, ಬಿಎಲ್‌ಡಿಇ ಸಂಸ್ಥೆ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ಸಂಯೋಜಕ ಸೂರ್ಯಕಾಂತ ಬಿರಾದಾರ, ಕಾಲೇಜು ಉಪನ್ಯಾಸಕರು, ವಿದ್ಯಾರ್ಥಿಗಳು ಇದ್ದರು.



ಪ್ರಜಾಸೌಧಕ್ಕೆ ಸ್ಥಳ ಬದಲಾವಣೆಗೆ ಆಗ್ರಹ: ತಾಳಿಕೋಟೆ ಬಂದ್‌ಗೆ ಬೆಂಬಲ

◆**ತಾಳಿಕೋಟೆ:** ನೂತನ ತಾಲೂಕು ಕೇಂದ್ರವಾದ ತಾಳಿಕೋಟೆ ಪಟ್ಟಣದಲ್ಲಿ ನಿರ್ಮಾಣಗೊಳ್ಳಲಿರುವ ತಾಲೂಕು ಆಡಳಿತ ಭವನ ಪ್ರಜಾಸೌಧ ಕಟ್ಟಡದ ನಿಯೋಜಿತ ಸ್ಥಳ ಬದಾಲಾವಣೆಗೆ ಆಗ್ರಹಿಸಿ ನಡೆದ ತಾಳಿಕೋಟೆ ಬಂದ್ ಯಶಸ್ವಿಯಾಗಿದ್ದು, ಇಂದಿನಿಂದ ಧರಣಿ ಸತ್ಯಾಗ್ರಹ ಆರಂಭವಾಗಿದೆ.

ಬಂದ್ ಹಿನ್ನಲೆಯಲ್ಲಿ ಇಂದು ಬೆಳಿಗ್ಗೆಯಿಂದಲೇ ಪಟ್ಟಣ ಬಿಕೋ ಎನ್ನುವ ಪರಸ್ಥಿತಿ ನಿರ್ಮಾಣವಾಗಿತ್ತು. ಎಲ್ಲಾ ಅಂಗಡಿ ಮುಂಗಟ್ಟುಗಳು, ಕಾಯಿಪಲ್ಲೆ ಬಜಾರ ಬಂದ್ ಆಗಿದ್ದವು. ಬಸ್ ಸಂಚಾರ ಎಂದಿನಂತೆ ಇತ್ತು. ಶಾಲಾ ಕಾಲೇಜುಗಳು ಪರೀಕ್ಷೆ ಹಿನ್ನಲೆಯಲ್ಲಿ ಆರಂಭವಾಗಿದ್ದವು. ಪಟ್ಟಣದ ಅಂಬೇಡ್ಕರ ವೃತ್ತದಿಂದ ಆರಂಭವಾದ ಪ್ರತಿಭಟನಾ ರ್ಯಾಲಿಯು ಕತ್ರಿ ಬಜಾರ, ಶಿವಾಜಿ ವೃತ್ತ ಮೂಲಕ ಹಾಯ್ದು ಬಸವೇಶ್ವರ ವೃತ್ತದ ಮೂಲಕ ಆಗಮಿಸಿ ಬಸವೇಶ್ವರ ವೃತ್ತದಲ್ಲಿ ಧರಣಿ ಸತ್ಯಾಗ್ರಹ ಆರಂಭಿಸಲಾಯಿತು.

ಈ ವೇಳೆ ಮಾತನಾಡಿದ ಮಾಜಿ ಬಿಜೆಪಿ ಜಿಲ್ಲಾ



ಅಧ್ಯಕ್ಷ ಆರ್.ಎಸ್.ಪಾಟೀಲ ಕೂಚಬಾಳ, ನಾವು ಯಾರು ವಿರುದ್ಧ ಅಲ್ಲ ಯಾರು ಪರ ಅಲ್ಲ ಇದರಲ್ಲಿ ರಾಜಕೀಯ ಇಲ್ಲ ನಾವು ಈ ಪ್ರತಿಭಟನೆಯಲ್ಲಿ ಒಂದೇ ಒಂದು ದಿಕ್ಕಾರ ಹಾಕಿಲ್ಲ ನಮ್ದೇ ಒಂದೇ ಒಂದು ಉದ್ದೇಶ ಸಾರ್ವಜನಿಕರ ಅನುಕೂಲಕ್ಕಾಗಿ ಪ್ರಜಾಸೌಧ ನಗರದಲ್ಲಿ ಆಗಬೇಕು ಎಂದರು.

ಸಮಿತಿ ಅಧ್ಯಕ್ಷ ದಶರಥಸಿಂಗ್ ಮಾತನಾಡಿ, ಈಗ ಗುರುತಿಸಿರುವ ಸ್ಥಳವು ಸಾರ್ವಜನಿಕರಿಗೆ ಅನುಕೂಲಕರವಲ್ಲ, ಆದ್ದರಿಂದ ಪ್ರಜಾಸೌಧ ಕಟ್ಟಡ ಪಟ್ಟಣದ ವ್ಯಾಪ್ತಿಯಲ್ಲಿಯೇ ನಿರ್ಮಿಸಬೇಕು ಎಂದು ಒತ್ತಾಯಿಸಿದರು.

ಬಂದ್‌ಗೆ ವ್ಯಾಪಾರಸ್ಥರು, ವಿವಿಧ ಸಂಘಟನೆಗಳ ಪದಾಕಾರಿಗಳು, ಸಂಘ-ಸಂಸ್ಥೆಗಳ ಪ್ರತಿನಿಗಳು, ಬೀದಿಬದಿ ವ್ಯಾಪಾರಸ್ಥರು ಎಲ್ಲಾ ಸಮುದಾಯಗಳ ಮುಖಂಡರು ಬೆಂಬಲ ಸೂಚಿಸಿದರು.

ತಾಲೂಕು ಹೋರಾಟ ಸಮಿತಿಯ ಅಧ್ಯಕ್ಷರಾದ ದಶರಥ ಸಿಂಗ್ ಮನಗೂಳಿ, ಗೌರಾವಾಧ್ಯಕ್ಷ ಎಸ್.ಬಿ.ಕಟ್ಟಿಮನಿ, ಕಾಶಿನಾಥ ಮುರಾಳ, ಮುತ್ತಪ್ಪ ಚಮಲಾಪುರ, ಎಂ.ಕೆ.ಚೋರಗಸ್ತಿ, ಮಾಸುಮಸಾಬ ಕೆಂಭಾವಿ, ಪರಶುರಾಮ ತಂಗಡಗಿ, ಪ್ರಕಾಶ್ ಹಜೇರಿ, ರವಿ ಕಟ್ಟಿಮನಿ,ದತ್ತು ಹೆಬಸೂರ,ರಾಜು ಹಂಚಾಟೆ, ಗಂಗಾಧರ್ ಕಸ್ತೂರಿ, ಮಂಜು ಶೆಟ್ಟಿ, ಸುರೇಶ ಹಜೇರಿ, ಸದ್ದಾಂ ಬೀಳಗಿ, ಲತೀಫ್ ಬೀಳಗಿ,ಅಮಿತ್ ಮನಗೂಳಿ, ನಾಗೇಶ ಕಟ್ಟಿಮನಿ,ತಿಪ್ಪಣ್ಣ ಸಜ್ಜನ, ಜುಮ್ಮಣ್ಣ ನಾಲತವಾಡ, ಮಹೇಶ್ ಚಲವಾದಿ, ಮಾನಸಿಂಗ ಕೋಕಟನೂರ, ಸಿರಸಕುಮಾರ ಹಜೇರಿ, ನಿತಿನ ವಿಜಾಪುರ್, ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಪಡಿತರ ವಿತರಕರ ಬದಲಾವಣೆಗೆ ಆಗ್ರಹ

◆**ಬಸವನಬಾಗೇವಾಡಿ:** ತಾಲೂಕಿನ ಕಣಕಾಲ ಗ್ರಾಮದ ಜನರಿಗೆ ಸರಿಯಾಗಿ ಪಡಿತರ ವಿತರಣೆ ಮಾಡುತ್ತಿಲ್ಲ, ಕೂಡಲೇ ವಿತರಕರನ್ನು ಬದಲಾವಣೆ ಮಾಡಬೇಕೆಂದು ಆಗ್ರಹಿಸಿ ಕಣಕಾಲ ಗ್ರಾಮಸ್ಥರು ಮಂಗಳವಾರ ಆಹಾರ ಇಲಾಖೆಯ ಶಿರಸ್ತೇದಾರ ಸಂಜಯ ಹಳ್ಳೂರ ಅವರಿಗೆ ಮನವಿ ಸಲ್ಲಿಸಿದ್ದರು.

ಕಣಕಾಲ ಗ್ರಾಮದ ನ್ಯಾಯ ಬೆಲೆ ಅಂಗಡಿಯಲ್ಲಿ ಗ್ರಾಮಸ್ಥರಿಗೆ ಸರಿಯಾದ ಸಮಯಕ್ಕೆ ಪಡಿತರ ವಿತರಣೆ ಮಾಡುತ್ತಿಲ್ಲ, ಪಡಿತರ ಬಂದಿರುವ ಮಾಹಿತಿ ಗ್ರಾಮಸ್ಥರಿಗೆ ಡಂಗೂರ ಸಾರುವ ಮೂಲಕ ತಿಳಿಸದೇ ಪಡಿತರ ಹಂಚಲು ಆರಂಭಿಸಿ ಎರಡು ದಿನಗಳಲ್ಲಿ ಹಂಚಿಕೆ ನಿಲ್ಲಿಸುತ್ತಾರೆ. ಇದರಿಂದ ಗ್ರಾಮದ ಎಲ್ಲ ಪಡಿತರ ಚೀಟಿ ಹೊಂದಿದ ಜನರಿಗೆ ಪಡಿತರ ಹಂಚಿಕೆ ಆಗುವುದಿಲ್ಲ, ಇದ್ದರಿಂದ ಬಹಳಷ್ಟು ಕುಟುಂಬದವರು ಈ ಸೌಲಭ್ಯದಿಂದ ವಂಚಿತರಾಗುತ್ತಿದ್ದಾರೆ. ಪ್ರತಿ ತಿಂಗಳು ನಿಯಮಿತ ಸಮಯಕ್ಕೆ ನಿಯಮಿತ ಪಡೀತರ ಹಂಚಿಕೆ ಮಾಡುವುದಿಲ್ಲ, ಪಡೀತರ ಹಂಚಿಕೆ ಆರಂಭ ಆಗಿರುವ ವಿಷಯ ಗ್ರಾಮಸ್ಥರಿಗೆ ಗೊತ್ತಾಗುವುದಿಲ್ಲ, ಈ ವಿಷಯವಾಗಿ 5, 6 ತಿಂಗಳುಗಳಿಂದ ಗ್ರಾಮಸ್ಥರು ತಕರಾರು ಮಾಡಿ ಮೌಖಿಕವಾಗಿ ಹೇಳಿದ್ದಾರೆ. ಆದರೂ ಸಹ ಗ್ರಾಮಸ್ಥರ



ಸಮಸ್ಯೆಗೆ ಸ್ಪಂದಿಸದೆ, ಜನರಿಗೆ ಹರಿಕೆ ಉತ್ತರ ನೀಡುತ್ತಿದ್ದಾರೆ. ರೇಷನ್ ಪಡೆದುಕೊಂಡವರು ಬೇರೆ ಕಡೆ ತೂಕ ಮಾಡಿದಾಗ ಕಡಿಮೆ ಇರುವುದು ಕಂಡು ಬಂದಿದೆ. ಗ್ರಾಮಸ್ಥರಿಗೆ ಪಡಿತರವನ್ನು ಕೊಡದೆ ದವಸ ದಾನ್ಯಗಳನ್ನು ಬೇರೆ ಕಡೆ ಮಾರಾಟ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಕೂಡಲೇ ಗ್ರಾಮದಲ್ಲಿ ಪಡಿತರವನ್ನು 5 ದಿನಗಳಲ್ಲಿ ಡಂಗೂರ ಸಾರುವುದರ ಮೂಲಕ ಪಡಿತರ ವಿತರಣೆ ಮಾಡಬೇಕೆಂದು ಆಗ್ರಹಿಸಿದರು.

ದೇವರಹಿಪ್ಪರಗಿ ಬಿಜೆಪಿ ಒಬಿಸಿ ಮೋರ್ಚಾ ಅಧ್ಯಕ್ಷ ಮುತ್ತುರಾಜ ಹಾಲಿಹಾಳ, ಮಲ್ಲು ಗೋನಾಳ, ಸಾಹೇಬಗೌಡ ನನ್ನೂರ, ಬಸವರಾಜ ಕೋಲಕಾರ, ಜಕ್ಕು ವಾಸೇದಾರ ಸೇರಿ ಇತರರು ಇದ್ದರು.

ರಾಜಕೀಯದಲ್ಲಿ ಇನ್ನೂ ಸಕ್ರಿಯವಾಗಿರುವೆ: ಜಿಗಜಿಣಗಿ

◆**ಇಂಡಿ:** ನನ್ನ ರಾಜಕೀಯ ಜೀವನದಲ್ಲಿ ಇಂಡಿ ಜನರನ್ನು ಎಂದು ಮರೆಯಲು ಸಾಧ್ಯವಿಲ್ಲ. ಜಿಲ್ಲೆಯಲ್ಲಿ ನನಗೆ ಅತಿ ಹೆಚ್ಚು ಮತ ನೀಡಿದ್ದು ಇಂಡಿ ತಾಲೂಕಿನ ಜನ ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೆನೆ ಎಂದು ಸಂಸದ ರಮೇಶ ಜಿಗಜಿಣಗಿ ಹೇಳಿದರು.

ತಾಲೂಕಿನ ಹಿರೇಬೇವನೂರ ಗ್ರಾಮದಲ್ಲಿ ಬಿಜೆಪಿ ಇಂಡಿ ಮಂಡಲ ವತಿಯಿಂದ ಇಂಡಿ ವಿಧಾನಸಭಾ ಮತಕ್ಷೇತ್ರದಲ್ಲಿ ಹಮ್ಮಿಕೊಂಡ ವಿಬಿ ಐ ರಾಮ ಜಿ ಜನ ಜಾಗೃತಿ ಪಾದಯಾತ್ರೆಯಲ್ಲಿ ಮಾತನಾಡಿದರು. ನನ್ನ ತಾಲೂಕಿನ ಜನ ಎಂದು ನನ್ನ ಕೈ ಬಿಟ್ಟಿಲ್ಲ, ನಿಮ್ಮ ಆಶೀರ್ವಾದಿಂದ ಇಂದು 40 ವರ್ಷಗಳ ಕಾಲ ರಾಜಕೀಯ ಮಾಡುತ್ತಿದ್ದೆನೆ. ನನಗೆ ವಯಸ್ಸಾಗಿದೆ ಎಂದು ಜನ ಮಾತನಾಡುತ್ತಿರುವುದು ಸಹಜ. ಆದರೆ ನನಗೆ ಇನ್ನೂ ರಾಜಕಿಯದಲ್ಲಿ ಸಕ್ರಿಯವಾಗಿರಬೇಕು ಎಂಬ ಸದಾಶಯದಿಂದ ಇನ್ನಷ್ಟು ಹುಮ್ಮಸ್ಸು ಉಕ್ಕಿ ಬರುತ್ತಿದೆ. ಆ ಶಕ್ತಿ ಕೊಟ್ಟವರು ಬೇರಾರು ಅಲ್ಲ ನಿವೂ ಹಾಗಾಗಿ ನಿಮ್ಮ ಸೇವೆ ನನ್ನ ಜೀವನದುದ್ದಕ್ಕೂ ಮಾಡಿಕೊಂಡಿರಬೇಕು ಎಂಬ ಮಹಾದಾಸೆ ನನ್ನದು ಎಂದರು.

ಮಹಾತ್ಮಾಗಾಂಧಿಜಿಯವರು ತಮ್ಮ ಜೀವನದ ಕೊನೆ ಕ್ಷಣದಲ್ಲಿ ರಾಮ ರಾಮ ಎಂದವರು ಈಗ ಕಾಂಗ್ರೆಸ್‌ನವರು ರಾಮನ ಹೆಸರು ಬೇಡ ಎನ್ನುತ್ತಿದ್ದಾರೆ. ಕಾಂಗ್ರೆಸ್ ಪಕ್ಷ 75ವರ್ಷ ಆಳಿದರು ಯಾವುದೆ ಅಭಿವೃದ್ಧಿ ಕೆಲಸ



ಮಾಡಲು ಆಗಲಿಲ್ಲಾ, ಆದರೆ ನಮ್ಮ ಮೋದಿಯವರು ದಿನ 16ರಿಂದ 18 ಗಂಟೆ ದೇಶಕ್ಕಾಗಿ ಹಗಲು ರಾತ್ರಿ ಎನ್ನದೆ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಳುಗೌಡ ಪಾಟೀಲ, ಬಿಜೆಪಿ ಮುಖಂಡ ಕಾಸುಗೌಡ ಬಿರಾದಾರ, ಬಿ.ಎಸ್.ಪಾಟೀಲ, ಶೀಲವಂತ ಉಮರಾಣಿ, ಎಸ್.ಎ.ಪಾಟೀಲ. ರವಿ ವಗ್ಗೆ, ಮಂಡಲ ಅಧ್ಯಕ್ಷ ಹಣಮಂತರಾಯಗೌಡ ಪಾಟೀಲ, ಆರ್.ಡಿ.ಪಾಟೀಲ ಮಾತನಾಡಿದರು.

ಮಲ್ಲಿಕಾರ್ಜುನ ಕೀವಡೆ, ದೇವೆಂದ್ರ ಕುಂಬಾರ, ವಿಜಯಲಕ್ಷ್ಮಿ ರೂಗಿಮಠ, ವೇಂಕಟೇಶ ಕುಲಕರ್ಣಿ, ರಾಘವೇಂದ್ರ ಕಾಪಸೆ, ಭಿಮರಾಯಗೌಡ ಬಿರಾದಾರ, ಸೋಮನಾಥ ಕುಂಬಾರ, ಗಂಗಾಧರ ನಾವಿ, ರಫೀಕ ಶೇಖ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಬಸ್ ನಿಲ್ದಾಣದಲ್ಲಿ ಸ್ವಚ್ಛತಾ ಕಾರ್ಯ

◆**ಕೊಲ್ಹಾರ:** ತ್ಯಾಜ್ಯ ಮುಕ್ತ ಪಟ್ಟಣ ಆರೋಗ್ಯಯುತ ಪಟ್ಟಣ ನಿರ್ಮಾಣ ಪ್ರತಿಯೊಬ್ಬ ನಾಗರಿಕನ ಕರ್ತವ ಎಂದು ಪಟ್ಟಣದ ದಿಗಂಬರೇಶ್ವ ಮಠದ ಕಲ್ಲಿನಾಥ ದೇವರು ಹೇಳಿದರು.

ಪಟ್ಟಣದಲ್ಲಿ ಬುಧವಾರ ಪಟ್ಟಣ ಪಂಚಾಯತಿ ಸಹಯೋಗದಲ್ಲಿ ಎರಡು ಬಸ್ ನಿಲ್ದಾಣಗಳಲ್ಲಿ ಸ್ವಚ್ಛೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಪಟ್ಟಣದಲ್ಲಿ ಇರುವಂತಹ ಪ್ರತಿಯೊಬ್ಬ ನಾಗರಿಕನ ಕರ್ತವ್ಯ ನಮ್ಮ ಪಟ್ಟಣ ತ್ಯಾಜ್ಯ ಮುಕ್ತ ಪಟ್ಟಣ ಆರೋಗ್ಯಯುತ ಪಟ್ಟಣಕ್ಕೆ ಶ್ರಮಿಸೋಣ ಎಂದು ಹೇಳಿದರು.

ಪಪಂ ಮುಖ್ಯಾಧಿಕಾರಿ ವಿರೇಶ ಹಟ್ಟಿ ಮಾತನಾಡಿ, ಪಟ್ಟಣದ ಪ್ರತಿಯೊಂದು ವಾರ್ಡ್ ಸ್ವಚ್ಛ ಸುಂದರ ಆರೋಗ್ಯಯುತ ಹಾಗೂ ತ್ಯಾಜ್ಯ ಮುಕ್ತಿ ವಾಗಿಸುವ ಉದ್ದೇಶದಿಂದ ಸ್ವಚ್ಛೋತ್ಸವ ಕಾರ್ಯ ಹಮ್ಮಿಕೊಳ್ಳಲಾಗಿದೆ ಹೇಳಿದರು.

ಸ್ವಚ್ಛೋತ್ಸವ ಕಾರ್ಯದಲ್ಲಿ ಕಸ ಸುರಿಯುವ ಇಂತಹ ಸ್ಥಳಗಳನ್ನು ಗುರುತಿಸಿ ಸ್ವಚ್ಛತಾ ಕಾರ್ಯ ಕೈಗೊಳ್ಳಲಾಗುವುದು, ಜನರಿಗೆ ತಾಜ್ಯ ಎಸೆಯುವ ರೂಡಿ ತಪ್ಪಿಸಲಾಗುವುದು, ಸಾರ್ವಜನಿಕರಿಗೆ ಜಾಗೃತಿ ಮೂಡಿಸಿ, ಪ್ಲಾಸ್ಟಿಕ್ ಮುಕ್ತವಾಗಿಸಲು ಸ್ವಚ್ಛೋತ್ಸವ ಕಾರ್ಯವಾಗಿದೆ.

ಪಟ್ಟಣ ಪಂಚಾಯತಿ ಅಧ್ಯಕ್ಷ ಚನ್ನಮಲ್ಲಪ್ಪ ಗಿಡ್ಡಪ್ಪಗೋಳ, ಸದಸ್ಯರು, ಸಿಬ್ಬಂದಿ ಮತ್ತು ಪೌರಕಾರ್ಮಿಕರು ಪಾಲ್ಗೊಂಡಿದ್ದರು.



ಮಳೇಂದ್ರ ಶ್ರೀಗಳ 39ನೇ ಪುಣ್ಯಸ್ಮರಣೋತ್ಸವ

◆**ಆಲಮೇಲ:** ಸಮೀಪದ ಬಮ್ಮನಹಳ್ಳಿ ಗ್ರಾಮದ ಆಲಮೇಲದ ಗುರು ಸಂಸ್ಥಾನ ಹಿರೇಮಠ ಶಾಖಾ ಮಠದಲ್ಲಿ ಮಳೆಂದ್ರ ಶಿವಾಚಾರ್ಯರ 39ನೇ ಪುಣ್ಯಸ್ಮರಣೆ ಮತ್ತು ಮಹಾಮಂಗಲ ಹಾಗೂ ಧರ್ಮ ಸಭೆ ನಡೆಯಿತು.

ಈ ವೇಳೆ ಸಿಂದಗಿ ಬಿಜೆಪಿ ಮುಖಂಡ ಶ್ರೀಶೈಲಗೌಡ ಬಿರಾದಾರ (ಮಾಗಲಗೇರಿ) ಮಾತನಾಡಿ, ಬಸವಾದಿ ಶರಣರು ಹೇಳಿದಂತೆ ನಾವು-ನೀವು ಸತ್ಯನುಡಿಯುದು ಕಲಿಯಬೇಕು. ನಮ್ಮ ಮಕ್ಕಳಲಿ ಸಂಸಾರ ಮತ್ತು ಶಿಕ್ಷಣ ಇಂದಿನ ಯುವಕರಿಗೆ ಅತ್ಯವಶ್ಯಕ ಎಂದು ಹೇಳಿದರೆ ತಪ್ಪಾಗಲಾರದು. ಕಾಯಕ ಮಾಡಿ ನಮ್ಮ ಜೀವನ ಅತ್ಯಂತ ಸರಳ ರೀತಿಯಲ್ಲಿ ಕೊಂಡುವವಯಬೇಕು. ಒಳ್ಳೆಯದನ್ನು ನಮ್ಮ ಜೀವನದಲ್ಲಿ ಜೀವನ ಸಾಗಿಸುದರ ಜೊತೆಗೆ. ಮಠ ಮತ್ತು ಪ್ರವಚನಗಳ ಮುಖಾಂತರ ಎಂದು ಹೇಳಿದರು.

ಸಿಂದಗಿ ಮಾಜಿ ಶಾಸಕ ರಮೇಶ ಭೂಸನೂರ ಮಾತನಾಡಿ, ಗುರುಕುಲ ಶಿಕ್ಷಣ ಪಡೆದು ಮತ್ತು ಸಂಸ್ಕಾರವಂತ ಮಕ್ಕಳುವಾಗುತ್ತಿದವು. ಇವತ್ತಿನ ಮಕ್ಕಳು ಯಾಂತ್ರಿಕ ವಿದ್ಯೆಯೆಲ್ಲಿ ಸಿಕ್ಕು ನರಳುವಂತಾಗಿದೆ. ಉನ್ನತ ಶಿಕ್ಷಣ ಪಡೆದರು ಭಯೋತ್ಪಾದನೆ ಹಾಗೂ ಕಳ್ಳರ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದು ನಾವು ನೋಡುತ್ತಿದ್ದೇವೆ ಎಂದರು.

ಚಂದ್ರಶೇಖರ ಶಿವಾಚಾರ್ಯ ಆಶೀರ್ವಚನ ನೀಡಿ, 15 ದಿನಗಳ ಪ್ರವಚನ ಆಲಿಸಿದ್ದಿರಿ. ಒಬ್ಬ ವ್ಯಕ್ತಿಗೆ ಶಿಕ್ಷಣ



ಪಡೆದರೆ ಸಾಲದು. ಆದರ ಜೊತೆಗೆ ಸಂಸ್ಕಾರ ಬೇಕು ಸಂಸ್ಕಾರ ಎಲ್ಲಿ ಬೇಕಾದಲ್ಲಿ ಸಿಗುವಂತ ವಸ್ತು ಅಲ್ಲ.ಮಠ ಮತ್ತು ಪ್ರವಚನಗಳಿಂದ ಪಡೆಯಲು ಸಾಧ್ಯ. ಶಿಕ್ಷಣದಿಂದ ನಮ್ಮ ಬದುಕು ಕಟ್ಟಿಕೊಳ್ಳಬಹುದು. ಆದರೆ ಸಂಸ್ಕಾರದಿಂದ ಬದುಕನ್ನು ರೂಪಿಸಿಕೊಳ್ಳ ಬಹುದು ಎಂದು ಹೇಳಿದರು.

ಮಠಾಧೀಶರು ಮಾತನಾಡಿದರು. ರುದ್ರಮುನಿ ಶಿವಾಚಾರ್ಯರು ಕಡಕೋಳ, ಅಭಿನವ ಮುರುಘೇಂದ್ರ, ಶ್ರೀಗಳು ಮಮದಾಪುರ, ಮುರಗೇಂದ್ರ ಸ್ವಾಮಿಗಳು ವಿರಕ್ತ ಮಠ ಅತರ್ಗಾ, ಜಿಪಂ ಸದಸ್ಯ ಶ್ರೀಮಂತ ನಾಗೂರ, ವಿಜಯಪುರ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಾಕೇಶ ಕಲ್ಲೂರು, ಜಿಪಂ ಸದಸ್ಯರು ಶಂಕರ್ ಬಗಲಿ, ಸಿದ್ದೇಶ್ವರ ಆಸ್ಪತ್ರೆ ವಿಜಯಪುರ ಡಾ.ದಯಾನಂದ ಎಸ್.ಬಿರಾದರ್, ಡಾ. ಶಿವಕುಮಾರ ಪಶುಪತಿಮಠ, ಡಾ.ವರುಣ್ ಪಾಟೀಲ್, ಮೋಟಗಿ ಕಲ್ಪವೃಕ್ಷ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಸ್.ಎಸ್.ಬಿರಾದರ ಉಪಸ್ಥಿತರಿದ್ದರು.

ಕಿರುಸುದ್ದಿ

ಸೂಕ್ತ ಕ್ರಮ ಕೈಗೊಳ್ಳಲು ಮನವಿ



ಯಲಬುರ್ಗಾ: ಎಚ್. ಶಿವರಾಮೇಗೌಡರ ಕರ್ನಾಟಕ ರಕ್ಷಣಾ ವೇದಿಕೆ ಯಲಬುರ್ಗಾ ತಾಲೂಕು ಘಟಕದಿಂದ ಯಲಬುರ್ಗಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ನಡೆದಿರುವ ಪವನ ವಿದ್ಯುತ್ ವಿಂಡ್ ಫ್ಯಾನ್ ಕಂಪನಿಗಳಿಂದ ಗ್ರಾಮ ಪಂಚಾಯತಿಗಳ ಅನುಮತಿ ಪಡೆಯದೆ ಗ್ರಾಮ ಪಂಚಾಯತಿಗಳಿಗೆ ಸರಿಯಾದ ತೆರಿಗೆ ಕಟ್ಟದೆ ಅನ್ಯಾಯ ಮಾಡುತ್ತಿರುವ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ ತಾಲೂಕ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಬುಧವಾರ ಸದರಿ ವಿಷಯದ ಬಗ್ಗೆ ಪತ್ರಿಕಾಗೋಷ್ಠಿ ಮಾಡಲಾಯಿತು. ಶಿವರಾಮೇಗೌಡರ ಕರ್ನಾಟಕ ರಕ್ಷಣಾ ವೇದಿಕೆ ರಾಜಶೇಖರ ಶ್ಯಾಗೋಟಿ ತಾಲೂಕು ಪಂಚಾಯತಿ ಯಲಬುರ್ಗಾ ಕರವೇ ಸಂಘಟನೆಯ ತಾಲೂಕಿನ ಪದಾಧಿಕಾರಿಗಳಾದ ಗೌಡಪ್ಪ ಬಲಕುಂದಿ, ಶಿವರಾಜ ಚಿಕೊಪ್ಪ, ಮಲ್ಲೇಶ ಕುಲಕರ್ಣಿ, ಕಲ್ಲಿನಾಥ ಹಡಪದ, ತಾಯಪ್ಪ ಮನ್ನಾಪುರ್, ಮಂಜುನಾಥ ಕುದರಿಕೋಟಗಿ ಪಾಲ್ಗೊಂಡಿದ್ದರು.

ಶರಣರ ತೊಟ್ಟಿಲು ಸೇವೆ



ಹನುಮಸಾಗರ: ಪಟ್ಟಣದ ಕರಿಸಿದ್ದೇಶ್ವರ ಜಾತ್ರೆಯ ಪ್ರಯುಕ್ತ ಮಠದ ಬಸವ ಮಂಗಲ ಭವನದಲ್ಲಿ ಎಮ್ಮಿಗನೂರು ಜಡೆಸಿದ್ದೇಶ್ವರ ಸ್ವಾಮೀಜಿಯವರ ಪ್ರವಚನದಲ್ಲಿ ಸಿದ್ದೇಶ್ವರ ತೊಟ್ಟಿಲು ಸೇವೆ ಸನ್ನಿವೇಶ ಕಾರ್ಯಕ್ರಮ ನಡೆಯಿತು. ಕುದರಿಮೋತಿ ವಿಜಯಮಹಾಂತ ಸ್ವಾಮೀಜಿ ಮಾತನಾಡಿ, ಎಲ್ಲರನ್ನೂ ಸಮಾನವಾಗಿ ಕಾಣುವ, ಸರ್ವರನ್ನೂ ಸನ್ಮಾರ್ಗದಲ್ಲಿ ನಡೆಯುವಂತೆ ಪ್ರೇರಣೆ ನೀಡುವ ಧರ್ಮ ಶರಣ ಧರ್ಮವಾಗಿದೆ. 12ನೇ ಶತಮಾನದಲ್ಲಿ ಬಸವಣ್ಣನವರು ಶರಣ ಧರ್ಮವು ಉದಾರ, ವೈಚಾರಿಕ ಹಾಗೂ ಸಾಮಾಜಿಕ ಕಳಕಳಿ ಹೊಂದಿದವರು ಎಂದರು.

ಮುತ್ತೈದೆಯರು ಶರಣರ ತೊಟ್ಟಿಲು ಸೇವೆ ನೆರವೇರಿಸಿದರು. ಶಿವಕುಮಾರ ಹಿರೇಮಠ ದೇವರು ಸಾನ್ನಿಧ್ಯ ವಹಿಸಿದ್ದರು. ಶ್ರೀದೇವಿ ಕನ್ನೂರ, ಪುಷ್ಪ ಚಿನಿವಾಲರ, ಕಾವೇರಿ ಅಗಸಿಮುಂದಿನ, ಸುನಿತಾ ಕೋಮಾರಿಬಸಮ್ಮ ಹಿರೇಮಠ, ರೇಣುಕಾ ಪುರದ, ನಾಗರತ್ನ ಪಾಟೀಲ್, ಶ್ರುತಿ ಕಂಠಿ, ಕಾವೇರಿ ಕರಂಡಿ, ನೀತು ಪಾಟೀಲ್, ಗಂಗಮ್ಮ ಹುಬ್ಬಳ್ಳಿ ಇದ್ದರು.

ಸದ್ಭಾವನಾ ರಾಷ್ಟ್ರೀಯ ಪ್ರಶಸ್ತಿಗೆ ಆಯ್ಕೆ

ಹನುಮಸಾಗರ: ಪಟ್ಟಣದ ನಿಸರ್ಗ ಸಂಗೀತ ವಿದ್ಯಾಲಯ ಹಾಗೂ ರಂಗ ಕಲಾವಿದರ ಸಂಘದ ಅಧ್ಯಕ್ಷ ಮಲ್ಲಯ್ಯ ಕೋಮಾರಿ ಅವರು ಡಾಕ್ಟರ್ ಬಾ.ವಿ. ಹಿರೇಮಠ ಮೆಮೋರಿಯಲ್ ಪ್ರತಿಷ್ಠಾನ (ರಿ), ಗದಗ ಹಾಗೂ ಅಶ್ವಿನಿ ಪ್ರಕಾಶನದ ವೇದಿಕೆ ವತಿಯಿಂದ ನೀಡಲಾಗುವ ಗುರು ಪುಟ್ಟರಾಜ ಕವಿ ಗವಾಯಿಗಳವರ ಸದ್ಭಾವನಾ ರಾಷ್ಟ್ರೀಯ ಆಯ್ಕೆಯಾಗಿದ್ದಾರೆ. ಪ್ರಶಸ್ತಿಗೆ



ಇವರ ಕನ್ನಡ ನಾಡು ನುಡಿ, ನೆಲ-ಜಲ, ಕಲೆ, ಸಂಗೀತ, ಸಾಹಿತ್ಯ, ಸಂಸ್ಕೃತಿ, ರಂಗಭೂಮಿ, ಜಾನಪದ, ಕೃಷಿ, ವೈದ್ಯಕೀಯ, ಸಾಮಾಜಿಕ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಯನ್ನು ಗುರುತಿಸಿ ಸಾಧಕರಿಗೆ ಪ್ರಶಸ್ತಿ ನೀಡಲಾಗುತ್ತಿದ್ದು, ಮಲ್ಲಯ್ಯ ಅವರಿಗೆ ಸಾಂಸ್ಕೃತಿಕ ಸಂಘಟನೆಗಾಗಿ ಈ ಪ್ರಶಸ್ತಿ ನೀಡಲಾಗುತ್ತಿದೆ ಎಂದು ಸಂಸ್ಥಾಪಕ ಅಧ್ಯಕ್ಷ ಡಾ. ವಿ. ವಿ. ಹಿರೇಮಠ ತಿಳಿಸಿದರು.

ಇವರಿಗೆ ಮಂಗಳವಾರ ಗದಗದಲ್ಲಿ ಡಾ. ಬಿ.ವಿ. ಹಿರೇಮಠ ಮೆಮೋರಿಯಲ್ ಪ್ರತಿಷ್ಠಾನ ರಿ. ಗದಗ ಹಾಗೂ ಅಶ್ವಿನಿ ಪ್ರಕಾಶನ ಗದಗ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿರುವ ಡಾ. ಪಂಡಿತ್ ಪುಟ್ಟರಾಜ ಕವಿ ಗವಾಯಿಗಳವರ 112ನೇ ಜಯಂತ್ಯುತ್ಸವ ಸಮಾರಂಭದ ಸಾಂಸ್ಕೃತಿಕ ಕಾರ್ಯಕ್ರಮದ ಪ್ರಶಸ್ತಿ ಪುರಸ್ಕಾರ ಸಮಾರಂಭದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಗುವದೆಂದು ಅವರು ತಿಳಿಸಿದರು.



ಕುರುಗೋಡು: ಪಟ್ಟಣದ ಪೊಲೀಸ್ ಠಾಣೆ ಆವರಣದಲ್ಲಿ ಬುಧವಾರ ಮಾ.3ರಂದು ನಡೆಯುವ ಐತಿಹಾಸಿಕ ಶ್ರೀ ದೊಡ್ಡ ಬಸವೇಶ್ವರ ಸ್ವಾಮಿ ಮಹಾರಥೋತ್ಸದ ಪೂರ್ವಭಾವಿ ಸಭೆ ನಡೆಯಿತು. ಈ ವೇಳೆ ಡಿವೈಎಸ್ಪಿ ಪ್ರಸಾದ ಗೋಕುಲೆ, ಧಾರ್ಮಿಕ ದತ್ತಿ ಇಲಾಖೆ ಅಧಿಕಾರಿ ಹನುಮಂತಪ್ಪ, ಅಧ್ಯಕ್ಷ ಚಾನಳು ಆನಂದ, ಸಿಪಿಐ ಬಾಳನಗೌಡ ಮಾನತೆಟ್ಟಿ ಪಿಎಸ್ಐ ಸುಪ್ರೀತ್ ವಿರುಪಕ್ಷಪ್ಪ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನರು ಇದ್ದರು.

ನಿಸ್ವಾರ್ಥ ಸೇವಾ ಮನೋಭಾವ ರೂಢಿಸಿಕೊಳ್ಳಿ

ಮಸ್ಕಿ: ತಾಲೂಕಿನ ಬುದ್ದಿನ್ನಿ ಎಸ್ ಗ್ರಾಮದಲ್ಲಿ ಕರ್ನಾಟಕ ಸರ್ಕಾರಿ ಕಾಲೇಜು ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆ, ಆದಿ ಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ರಾಯಚೂರು, ದೇವನಾಂಪ್ರಿಯ ಅಶೋಕ ಸರಕಾರಿ ಪ್ರಥಮ ದರ್ಜೆ ಕಾಲೇಜು ಮಸ್ಕಿ, ರಾಷ್ಟ್ರೀಯ ಸೇವಾ ಯೋಜನೆ ಘಟಕ ಸಹಯೋಗದಲ್ಲಿ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರ ಹಮ್ಮಿಕೊಳ್ಳಲಾಯಿತು.

ಈ ವೇಳೆ ಮಾಜಿ ಶಾಸಕ ಪ್ರತಾಪ್ ಗೌಡ ಪಾಟೀಲ್ ಮಾತನಾಡಿ, ರಾಷ್ಟ್ರೀಯ ಸೇವಾ ಯೋಜನೆಯಂತಹ ಕಾರ್ಯಕ್ರಮಗಳ ಯುವಕರಲ್ಲಿ ದೇಶಪ್ರೇಮ ಮತ್ತು ಸೇವಾ ಮನೋಭಾವವನ್ನು ಮೂಡಿಸುತ್ತದೆ. ಆದರಿಂದ ಪ್ರತಿಯೊಬ್ಬರೂ ನಿಸ್ವಾರ್ಥ ಸೇವಾ ಮನೋಭಾವ ರೂಢಿಸಿಕೊಳ್ಳಿ ಎಂದು ಶಿಬಿರದ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

ತಹಶೀಲ್ದಾರ್ ಮಂಜುನಾಥ ಭೋಗಾವತಿ ಮಾತನಾಡಿ, ಎನ್‌ಎಸ್‌ಎಸ್ ಶಿಬಿರ ವಿದ್ಯಾರ್ಥಿಗಳಲ್ಲಿ ಅಡಗಿರುವ ಶಿಸ್ತು ಮತ್ತು ನಾಯಕತ್ವ ಗುಣ ಬೆಳೆಸಲು ಎನ್‌ಎಸ್‌ಎಸ್ ಸಹಕಾರಿಯಾಗಿದೆ ಎಂದರು. ಡಾ.ಶಿವಶರಣಪ್ಪ ಇತ್ಲಿ, ವೆಂಕಟೇಶ ಕನಸಾವಿ, ಮಾಜಿ ತಾಪಂ ಸದಸ್ಯ ಮೌನೇಶ, ಬಸವರಾಜ ಈಳಿಗೇರ, ರಮೇಶ ಮೇರನಾಳ ಹಾಗೂ ಪ್ರಾಧ್ಯಾಪಕರಾದ ಇಮಾಮಸಾಬ, ಯಾಳಗಿ ಶ್ರೀನಿವಾಸ, ರೋಹಿಣಿ ಮೂರ್ತಿ, ಕನ್ಯಾಕುಮಾರಿ, ಮುಖ್ಯ ಅಧೀಕ್ಷಕರಾದ ಗಿರಿಯಮ್ಮ, ಡಾ.ಜಗನ್ನಾಥ ಬಿ.ಆರ್, ಡಾ.ಹನುಮಂತಪ್ಪ, ಡಾ.ವಿರುಪನಗೌಡ ಜಿನ್ನಾಪೂರು, ಡಾ.ಪಂಪಾಪತಿ ನಾಯಕ, ಶಿಬಿರಾಧಿಕಾರಿ ಡಾ.ವೀರೇಶ, ವರದಿಗಾರ ಸಿದ್ದಯ್ಯ ಹಿರೇಮಠ ಹಾಗೂ ಶಿಬಿರಾರ್ಥಿಗಳು, ವಿದ್ಯಾರ್ಥಿಗಳು ಇತರರು ಉಪಸ್ಥಿತರಿದ್ದರು.



ಮಸ್ಕಿ: ತಾಲೂಕಿನ ಬುದ್ದಿನ್ನಿ ಎಸ್ ಗ್ರಾಮದಲ್ಲಿ ಕರ್ನಾಟಕ ಸರ್ಕಾರಿ ಕಾಲೇಜು ಹಾಗೂ ತಾಂತ್ರಿಕ ಶಿಕ್ಷಣ ಇಲಾಖೆ, ಆದಿ ಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ರಾಯಚೂರು, ದೇವನಾಂಪ್ರಿಯ ಅಶೋಕ ಸರಕಾರಿ ಪ್ರಥಮ ದರ್ಜೆ ಕಾಲೇಜು ಮಸ್ಕಿ, ರಾಷ್ಟ್ರೀಯ ಸೇವಾ ಯೋಜನೆ ಘಟಕ ಸಹಯೋಗದಲ್ಲಿ ಎನ್‌ಎಸ್‌ಎಸ್ ವಾರ್ಷಿಕ ವಿಶೇಷ ಶಿಬಿರ ಹಮ್ಮಿಕೊಳ್ಳಲಾಯಿತು.

ಗ್ರಂಥಾಲಯ, ಶುದ್ಧ ಕುಡಿಯುವ ನೀರಿನ ಘಟಕದ ಬಾಗಿಲಲ್ಲೇ ಬಟ್ಟೆ ಒಗೆತ

ಬೂದಗುಂಪಾದಲ್ಲಿ ಸಾರ್ವಜನಿಕ ಆಸ್ತಿಗಳ ದುಸ್ಥಿತಿ

▸ಸಂಗಮೇಶ ಹೇಮಗುಡ್ಡ

ಮುನಿರಾಬಾದ್: ಬೂದಗುಂಪಾದಲ್ಲಿ ಜ್ಞಾನದ ದೇಗುಲವಾಗಬೇಕಿದ್ದ ಗ್ರಂಥಾಲಯ ಈಗ ಅಕ್ಷರಶಃ ಅನಾಥವಾಗಿದೆ. ಪ್ರಮುಖ ಗ್ರಾಮವಾದ ಈ ಊರಲ್ಲಿ ಸಾರ್ವಜನಿಕ ಸೌಲಭ್ಯಗಳು ಅಧಿಕಾರಿಗಳ ನಿರ್ಲಕ್ಷ್ಯ ಮತ್ತು ಕೆಲವರ ದುರ್ವರ್ತನೆಯಿಂದಾಗಿ ಹಳ್ಳ ಹಿಡಿದಿವೆ. ಇಲ್ಲಿನ ಗ್ರಂಥಾಲಯ, ಧಾರ್ಮಿಕ ಕೇಂದ್ರಗಳು ಮತ್ತು ಕುಡಿಯುವ ನೀರಿನ ಘಟಕದ ಸುತ್ತಲಿನ ವಾತಾವರಣವು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ.

ಗ್ರಂಥಾಲಯದ ಮುಂದೆ ವಾಷಿಂಗ್ ಘಾಟ್: ಗ್ರಾಮೀಣ ಭಾಗದದಲ್ಲಿ ಯುವಕರು ವಿದ್ಯಾರ್ಥಿಗಳ ಭವಿಷ್ಯ ರೂಪಿಸಬೇಕಾದ ಸರ್ಕಾರಿ ಗ್ರಂಥಾಲಯವು ಓದುವ ಹವ್ಯಾಸದವರಿಗೆ ಇಂದು ಬಳಕೆ ಆಗದೆ ನಿರ್ಲಕ್ಷತೆಗೆ ಒಳಗಾಗಿದೆ. ಇದಕ್ಕೆ ಕಾರಣ ಗ್ರಂಥಾಲಯದ ಮುಂದಿನ ಜಾಗವನ್ನು ಮಹಿಳೆಯರು ಬಟ್ಟೆ ಒಗೆಯುವ ತಾಣವನ್ನಾಗಿ ಮಾರ್ಪಡಿಸಿರುವುದು. ಪ್ರತಿದಿನ ಬೆಳಂಬೆಳಿಗ್ಗೆ ಗ್ರಂಥಾಲಯದ ಮುಂಭಾಗದಲ್ಲೇ ಸಾಲು ಸಾಲಾಗಿ ಕುಳಿತು ಬಟ್ಟೆ ಒಗೆಯುವುದರಿಂದ, ಗ್ರಂಥಾಲಯದ ಒಳಗೆ ಹೋಗಲು ದಾರಿಯೇ ಇಲ್ಲದಂತಾಗಿದೆ.

ಅಕ್ರಮ ಮದ್ಯ ಮಾರಾಟ: ಊರಿಗೊಂದು ಒಂದು ಗ್ರಂಥಾಲಯವಿದ್ದರೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ ಎಂಬ ಉದ್ದೇಶದಿಂದ ಸಾಕಷ್ಟು ಸವಲತ್ತು ಕೊಟ್ಟಿರುತ್ತಾರೆ ಆದರೆ ಇಲ್ಲಿನ ಗ್ರಂಥಾಲಯ ಮುಂದೆಯೇ ಯಾರ ಭಯವಿಲ್ಲದೆ ಅಕ್ರಮ ಮದ್ಯ ಮಾರಾಟ ಮಾಡುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಈ ಗ್ರಂಥಾಲಯದ ಪಕ್ಕದಲ್ಲೇ ಐತಿಹಾಸಿಕ ಶಿವನ ದೇವಾಲಯ ಮತ್ತು ಮಸೀದಿ ಇದ್ದೂ ಸಹ ಇಲ್ಲಿ ಕುಡುಕರ ಗುಂಪುಗಾರಿಕೆ ಮಿತಿಮೀರಿದೆ.

ಭಕ್ತರ ಆತಂಕ: ವ್ಯಸನದ ಜನಗಳಿಂದ ಹಾಗೂ ಅಶ್ಲೀಲ ಮಾತುಗಳಿಂದ ದೇವಾಲಯಕ್ಕೆ ಬರುವ ಭಕ್ತರು ಹಾಗೂ ಮಸೀದಿಗೆ ಬರುವ ಪ್ರಾರ್ಥನಾ ನಿರತರು ಭಯಭೀತರಾಗಿದ್ದಾರೆ. ಹಾಗೂ ಪವಿತ್ರ ಸ್ಥಳಗಳ ಆವರಣದಲ್ಲೇ ಮದ್ಯದ ಬಾಟಲಿಗಳು ಬಿದ್ದಿರುವುದು ಗ್ರಾಮದ ಸಂಸ್ಕೃತಿಗೆ ಕಪ್ಪುಚುಕ್ಕೆಯಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಕುಳಿತು ಮದ್ಯಪಾನ ಮಾಡುವವರ ಮೇಲೆ ಕಾನೂನು ಕ್ರಮ ಜರುಗಿಸಬೇಕಾಗಿದೆ.



ಈ ವಿಷಯ ಈಗಾಗಲೇ ನನ್ನ ಗಮನಕ್ಕೆ ಬಂದಿದ್ದು ಗ್ರಂಥಾಲಯದ ಸಿಬ್ಬಂದಿ ಸರಿಯಾಗಿ ಗ್ರಂಥಾಲಯಕ್ಕೆ ಬರಲಾರದೆ ಇದಕ್ಕೆಲ್ಲ ಕಾರಣವೆಂದು ಸಾರ್ವಜನಿಕರ ಮಾತಾಗಿದ್ದು, ಇನ್ನು ಮುಂದೆ ಸರಿಯಾಗಿ ಓದುಗರಿಗೆ ಅನುಕೂಲ ಮಾಡಿಕೊಡಬೇಕು. ಇಲ್ಲಿನ ಯುವಕರಿಗೆ ಓದುವ ಹವ್ಯಾಸ ಹೆಚ್ಚಾಗಬೇಕು. ಸಮಯಕ್ಕೆ ಸರಿಯಾದ ನಮ್ಮ ಸಿಬ್ಬಂದಿ ಬಾಗಿಲು ತೆರೆಯದಿದ್ದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು.

■ ಗುರುಸಿದ್ದಪ್ಪ, ಅಭಿವೃದ್ಧಿ ಅಧಿಕಾರಿ ಬೂದುಗುಂಪಾ

ಕುಡಿಯುವ ನೀರಿನ ಘಟಕ: ಇನ್ನು ಗ್ರಾಮಸ್ಥರ ಆರೋಗ್ಯದ ದೃಷ್ಟಿಯಿಂದ ನಿರ್ಮಿಸಲಾದ ಶುದ್ಧ ಕುಡಿಯುವ ನೀರಿನ ಘಟಕ ಜನರ ಪಾಲಿಗೆ ಗಗನಕುಸುಮವಾಗಿದೆ. ಈ ಘಟಕ ಸ್ಥಾಪನೆಯಾಗಿ ಬರೋಬ್ಬರಿ ಐದು ವರ್ಷಗಳಾದರೂ, ಇಲ್ಲಿಯವರೆಗೆ ಒಂದು ಹನಿ ಶುದ್ಧ ನೀರು ಕೂಡ ಸಾರ್ವಜನಿಕರಿಗೆ ದೊರೆತಿಲ್ಲ.ಮನೆಗಳಲ್ಲಿ ಪೈಪ್ ಮೂಲಕ ಬರುವ ನೀರು ಕುಡಿಯಲು ಯೋಗ್ಯವಾಗಿಲ್ಲ, ಘಟಕವಿದ್ದರೂ ನಾವು ದೂರದ ಊರುಗಳಿಂದ ಅಥವಾ ಖಾಸಗಿ ಮೂಲಗಳಿಂದ ನೀರು ತರಬೇಕಾದ ಅನಿವಾರ್ಯತೆ ಇದೆ ಎಂದು ಗ್ರಾಮಸ್ಥರು ಅಳಲು ತೋಡಿಕೊಂಡಿದ್ದಾರೆ.

ಸರ್ಕಾರಿ ಹಣ ನೀರಿನಂತೆ ವ್ಯಯವಾಗಿದ್ದರೂ, ಜನರ ಬಾಯಾರಿಕೆ ಮಾತ್ರ ಇಂಗಿಲ್ಲ ಬೂದಗುಂಪ ಗ್ರಾಮದ ಈ ಅವ್ಯವಸ್ಥೆಗಳು ಅಧಿಕಾರಿಗಳ ಕಣ್ಣಿಗೆ ಕಾಣುತ್ತಿಲ್ಲವೇ? ಅಕ್ಷರ, ಆಧ್ಯಾತ್ಮ ಮತ್ತು ಆರೋಗ್ಯ ಈ ಮೂರೂ ರಂಗಗಳಲ್ಲಿ ಗ್ರಾಮ ಹಿಂದುಳಿಯುತ್ತಿರುವುದು ಆತಂಕಾರಿ. ಇನ್ನಾದರೂ ಸಂಬಂಧಪಟ್ಟ ಅಧಿಕಾರಿಗಳು ಎಚ್ಚೆತ್ತುಕೊಂಡು ಈ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡಬೇಕಿದೆ.

ಹಾವು ಕಡಿತದ ಜೀವಹಾನಿ ತಡೆಗೆ ಜಾಗೃತಿ ಮೂಡಿಸಿ

ಕೊಪ್ಪಳ: ಹಾವು ಕಡಿತದಿಂದ ಉಂಟಾಗುವ ಜೀವ ಹಾನಿಯನ್ನು ತಡೆಗಟ್ಟಲು ಸಾರ್ವಜನಿಕರಿಗೆ ಸೂಕ್ತ ಜಾಗೃತಿ ಮೂಡಿಸಬೇಕೆಂದು ಜಿಲ್ಲಾಧಿಕಾರಿ ಡಾ. ಸುರೇಶ ಬಿ. ಇಟ್ನಾಳ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೊಪ್ಪಳ ಜಿಲ್ಲೆಯಲ್ಲಿ ಹಾವು ಕಡಿತ ತಡೆಗಟ್ಟುವಿಕೆ ಮತ್ತು ನಿಯಂತ್ರಣ ಕಾರ್ಯಕ್ರಮದ ಕುರಿತು ಚರ್ಚಿಸಲು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇತ್ತೀಚೆಗೆ ಜರುಗಿದ ಸಭೆಯಲ್ಲಿ ಮಾತನಾಡಿ, ನಮ್ಮ ಭಾರತ ಹೆಚ್ಚೆಚ್ಚು ಹಳ್ಳಿಗಳನ್ನು ಹೊಂದಿರುವ ದೇಶ ಮತ್ತು ಶೇ.70 ಕ್ಕಿಂತಲೂ ಹೆಚ್ಚು ಜನರು ಕೃಷಿಯಲ್ಲಿ ಅವಲಂಬಿತರಾಗಿದ್ದಾರೆ. ಹೊಲಗದ್ದೆಗಳಲ್ಲಿ ಸಾಮಾನ್ಯವಾಗಿ ಹಾವುಗಳ ತಿರುಗಾಟ ಹೆಚ್ಚಿರುತ್ತದೆ. ಕೃಷಿ ಮತ್ತು ಕುರಿ, ಕೋಳಿ ಸಾಕಾಣಿಕೆ, ಹೈನುಗಾರಿಕೆಯಂತಹ ಕೃಷಿ ಕುಲಕಸುಬುಗಳಲ್ಲಿ ತೊಡಗಿರುವ ರೈತರು ಮತ್ತು ಗ್ರಾಮೀಣ ಭಾಗದ ಜನರಿಗೆ ಹಾವು ಕಡಿತ ತಡೆಗಟ್ಟುವಿಕೆ ಮತ್ತು ನಿಯಂತ್ರಣಗಳ ಕುರಿತು ಅರಿವು ಮೂಡಿಸಬೇಕು ಎಂದರು.

ಮನೆಗಳ ಸುತ್ತ ಮುತ್ತಲಿನ ತಾಣಗಳಲ್ಲಿ ಕಸದ ರಾಶಿ ಇದ್ದರೆ ಅದು ಹೆಚ್ಚು ಹಾವುಗಳನ್ನು ಆಕರ್ಷಿಸುತ್ತದೆ. ಗಿಡಗಂಟೆಗಳು ತುಂಬಿದ ದಾರಿ ಹಾವು ಕಡಿತದ ಅಪಾಯವನ್ನು ಹೆಚ್ಚಿಸುತ್ತದೆ. ಹಾಗಾಗಿ ಸಾರ್ವಜನಿಕರು ತಮ್ಮ ಮನೆ ಸುತ್ತಲಿನ ವಾತಾವರಣವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಹಾವು ಕಡಿತಕ್ಕೆ ಉಚಿತವಾಗಿ ಚಿಕಿತ್ಸೆ ಲಭ್ಯವಿದ್ದು, ಜಿಲ್ಲೆಯ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ 24★7 ಚಿಕಿತ್ಸೆಯನ್ನು ನೀಡಲು ಎಲ್ಲಾ ಆಸ್ಪತ್ರೆಗಳು ಅಗತ್ಯ ಕ್ರಮ ಕಯಗೊಳ್ಳಬೇಕು. ಹಾವು ಕಡಿತ ಉಂಟಾದ ಸಂದರ್ಭದಲ್ಲಿ ಸಾರ್ವಜನಿಕರು ಯಾವುದೇ ನಾಟಿ ವೈದ್ಯರ ಬಳಿ ಹೋಗದೇ ಕೂಡಲೇ 40 ನಿಮಿಷದೊಳಗೆ ಹತ್ತಿರದ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ಚಿಕಿತ್ಸೆ ಪಡೆಯದುಕೊಳ್ಳುವಂತೆ ಜನರಿಗೆ ಮಾಹಿತಿ ನೀಡಬೇಕು ಎಂದರು.

ಸಭೆಯಲ್ಲಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಮಹಾಂತೇಶ ಎಸ್. ದರಗದ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಟಿ.ಲಿಂಗರಾಜು, ಆರ್.ಸಿ.ಹೆಚ್. ಅಧಿಕಾರಿ ಹಾಗೂ ಕುಟುಂಬ ಕಲ್ಯಾಣಾಧಿಕಾರಿ ಡಾ. ಪ್ರಕಾಶ ವಿ., ಆರೋಗ್ಯ ಇಲಾಖೆಯ ಜಿಲ್ಲಾ ಅನುಷ್ಠಾನಾಧಿಕಾರಿ ಡಾ. ರವಿಂದ್ರನಾಥ ಎಂ.ಹೆಚ್., ಜಿಲ್ಲಾ ಅಸಾಂಕ್ರಾಮಿಕ ರೋಗಗಳ ನಿಯಂತ್ರಣಾಧಿಕಾರಿ ಡಾ ಪ್ರಕಾಶ ಹೆಚ್. ಸೇರಿದಂತೆ ತಾಲೂಕು ವೈದ್ಯಾಧಿಕಾರಿಗಳು, ತಜ್ಞ ವೈದ್ಯರು ಮತ್ತು ಆರೋಗ್ಯ ಇಲಾಖೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಸ್ಥಿತರಿದ್ದರು.



ಕಾಮಗಾರಿ ಗುಣಮಟ್ಟದಲ್ಲಿ ರಾಜೀ ಇಲ್ಲ



ಕುಷ್ಟಗಿ: ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಹಾಗೂ ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ ಸಹಯೋಗದಲ್ಲಿ ಪೊಲೀಸ್ ಗೃಹ 2025 (ಹಂತ-5) ಯೋಜನೆ ಪ್ಯಾಕೇಜ್ ಸಂಖ್ಯೆ 86ರ ಅಡಿಯಲ್ಲಿ ಅಂದಾಜು ಮೊತ್ತ 395.10 ಲಕ್ಷ ಅನುದಾನದಲ್ಲಿ 12 ಪಿ.ಸಿ. ಕ್ವಾರ್ಟರ್ ಕಟ್ಟಡದ ಕಾಮಗಾರಿಯ ಶಂಕುಸ್ಥಾಪನೆ (ಭೂಮಿಪೂಜೆ) ಕಾರ್ಯಕ್ರಮ ನಡೆಯಿತು.

ವಿಧಾನಸಭೆಯ ವಿರೋಧ ಪಕ್ಷದ ಮುಖ್ಯ ಸಚೇತಕ ಹಾಗೂ ಶಾಸಕ ದೊಡ್ಡನಗೌಡ ಪಾಟೀಲ್ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಪೊಲೀಸ್ ಸಿಬ್ಬಂದಿಗಳಿಗೆ ವಸತಿ ಸೌಲಭ್ಯ ಕಲ್ಪಿಸಿಕೊಡಲು 12 ಪಿ.ಸಿ. ಕ್ವಾರ್ಟರ್ ಕಟ್ಟಡವನ್ನು ಅಂದಾಜು ಮೊತ್ತ 395.10 ಲಕ್ಷ ರೂಗಳಲ್ಲಿ ಕಾಮಗಾರಿ ನಡೆಯಲಿದೆ. ಹೀಗಾಗಿ ಕಾಮಗಾರಿ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ, ಬೆಂಗಳೂರಿನ ಓಂಕಾರ್ ಇಂಫ್ರಾ ಎಂಬ ಕಂಪನಿ ಕಟ್ಟಡ ನಿರ್ಮಾಣದ ಕಾಮಗಾರಿ ಟೆಂಡರ್ ಪಡೆದುಕೊಂಡಿದ್ದು, ಗುತ್ತಿಗೆ ಪಡೆದುಕೊಂಡ ಗುತ್ತೇದಾರರಾದ ಗ್ರೌಂಡ್ ಫ್ಲೋರ್ ಜೊತೆಗೆ ಎರಡು ಮಹಡಿಗಳ ಕಟ್ಟಡ ನಿರ್ಮಾಣ ಮಾಡಲಿದ್ದಾರೆ. ಆದರೆ ಗುಣಮಟ್ಟದ ಜೊತೆಗೆ ನಿಗದಿತ 11 ತಿಂಗಳ ಒಳಗಾಗಿ ಸಂಪೂರ್ಣವಾಗಿ ಕಟ್ಟಡವನ್ನು ಪೂರ್ಣಗೊಳಿಸುವ ವಿಶ್ವಾಸವಿದ್ದು, ಕಟ್ಟಡ ಮುಗಿದ ಬಳಿಕ ಪೊಲೀಸ್ ಸಿಬ್ಬಂದಿಗಳಿಗೆ ಹಸ್ತಾಂತರಿಸಲು ಎಲ್ಲಾ ರೀತಿಯ ಅಗತ್ಯತೆ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದರು.

ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್. ಎಲ್.ಅರಸಿದ್ದಿ ಮಾತನಾಡಿ, ಕುಷ್ಟಗಿ ಪೊಲೀಸ್ ಠಾಣೆ ಆವರಣದಲ್ಲಿರುವಂತ ಹಳೆ ಕ್ವಾರ್ಟಸ್‌ಗಳು ಸಂಪೂರ್ಣವಾಗಿ ಉಪಯೋಗಕ್ಕೆ ಬಾರದಂತಹ ಸ್ಥಿತಿ ನಿರ್ಮಾಣವಾಗಿದ್ದು, ವಾಸಕ್ಕೆ ಯೋಗ್ಯವಲ್ಲ, ನೆಲಸಮಗೊಳಿಸಲು ಈಗಾಗಲೇ ಪತ್ರ ವ್ಯವಹಾರ ಮಾಡಲಾಗಿದೆ. ಆದರೆ ಸಂಬಂಧಿಸಿದ ಅಧಿಕಾರಿಗಳು ತಿಳಿಸಿದ ರೀತಿ 23 ವರ್ಷಗಳಾಗಿದ್ದು, ಈ ಕ್ವಾಟ್ರಸ್ 25 ವರ್ಷ ಮುಗಿದ ನಂತರ ಕ್ವಾಟ್ರಸ್ ನೆಲಸಮಗೊಳಿಸಲು ಬರುತ್ತದೆ ಎಂದರು. ಕುಷ್ಟಗಿ ಪಟ್ಟಣದಲ್ಲಿ ಈಗಾಗಲೇ ಸಿಸಿಟಿವಿಗಳನ್ನು ಅಳವಡಿಸಲಾಗಿದ್ದು, ಇದರ ಜೊತೆಗೆ ಎಲ್ಲ ಸಾರ್ವಜನಿಕರಿಗೆ ತಮ್ಮ ಮನೆಗಳಿಗೆ ಅಂಗಡಿ ಮುಂಗಟ್ಟುಗಳಿಗೆ ಮತ್ತು ಇನ್ನಿತರಕಡೆಗಳಲ್ಲಿ ಸಿಸಿಟಿವಿ ಅಳವಡಿಸಿಕೊಳ್ಳುವಂತೆ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಸಿಪಿಐ ವಿಶ್ವನಾಥ ಹಿರೇಗೌಡ್ರು, ಪಿಎಸ್ಐ ಹನುಮಂತಪ್ಪ ತಳವಾರ, ವಿಜಯ ಕುಮಾರ ಮದ್ದಾನಿ ಹಿರೇಮಠ, ಪುರಸಭೆ ಮಾಜಿ ಸದಸ್ಯ ಕಲ್ಲೇಶ ತಾಳದ, ಸಂಗನಗೌಡ ಜೈನರ, ಉಮೇಶ್ ಮಂಗಳೂರು, ಶಶಿಧರ್ ಕವಲಿ, ಅಶೋಕ ಬಳೂಟಗಿ, ಪರಶುರಾಮ ನಾಗರಾಳ, ಸಂಗಪ್ಪ ಲಮಾಣಿ ಇದ್ದರು.

ಬೇಸಿಗೆಯಲ್ಲಿ ನೀರಿನ ಅಭಾವ ಆಗದಂತೆ ಕ್ರಮ ವಹಿಸಿ

ಕುಕನೂರ: ಬೇಸಿಗೆಯಲ್ಲಿ ಯಾವುದೇ ನೀರಿನ ಅಭಾವ ಆಗದಂತೆ ಕ್ರಮ ಕೈಗೊಳ್ಳಬೇಕು ಎಂದು ಪಟ್ಟಣ ಪಂಚಾಯತಿ ಮುಖ್ಯಾಧಿಕಾರಿ ನಾಗೇಶ್ ಹೇಳಿದರು.



ಪಟ್ಟಣ ಪಂಚಾಯತಿಯಲ್ಲಿ ಕೆಲವು ಸದಸ್ಯರು ಬೇಸಿಗೆ ಇನ್ನೂ ಶುರುವಾಗುತ್ತಿದ್ದಂತೆ ನೀರಿನ ಅಭಾವದ ಕುರಿತು ಸಮಸ್ಯೆಗಳನ್ನು ಹಂಚಿಕೊಂಡ ವೇಳೆ ಮುಖ್ಯಾಧಿಕಾರಿ ಮಾತನಾಡಿ, ಕೂಡಲೇ ವಾಟರ್ ಮ್ಯಾನ್ ಕರೆದು ಮುಂದಿನ ಮೂರು ತಿಂಗಳಲ್ಲಿ ಯಾವುದೇ ರೀತಿಯಾದ ನೀರಿನ ಅಭಾವ ಆಗದಂತೆ ಕೈಗೊಳ್ಳಬೇಕು. ಯಾವುದೇ ವಾರ್ಡಿನ ಸದಸ್ಯರು ನೀರಿನ ಕುರಿತು ಸಮಸ್ಯೆಗಳನ್ನು ಪಟ್ಟಣಪಂಚಾಯತಿಗೆ ಬರಬಾರದು. ಸ್ಥಳೀಯ 19 ವಾರ್ಡ್‌ಗಳಲ್ಲಿ ನೀರಿನ ಬರಬಾರದು ಆ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು. ಒಟ್ಟಾರೆಯಾಗಿ ಕುಡಿಯುವ ನೀರು ಶುಚಿಯಿಂದ ಪೂರೈಕೆಯಾಗಬೇಕು. ಕುಡಿಯುವ ನೀರು ಪೋಲಾಗದಂತೆ ಕ್ರಮಕೈಗೊಳ್ಳಲು ಮುಂದಾಗಬೇಕು. ಸ್ವಲ್ಪ ಜನರ ಸಮಸ್ಯೆಗಳನ್ನು ಕೂಡಲೇ ನಿರ್ವಹಿಸಲು ಮುಂದಾಗಬೇಕು ಎಂದು ಸೂಚನೆ ನೀಡಿದರು.

ಈ ವೇಳೆ ಪಟ್ಟಣ ಪಂಚಾಯತಿ ಸದಸ್ಯ ಮಂಜುನಾಥ್ ವಾಲ್ಮೀಕಿ ಹಾಗೂ ಮಂಜುನಾಥ ಮಾಲಗಿತ್ತಿ, ವಾಹಿದ್ ಪಾಷಾ ಖಾಜಿ, ಶರಣಯ್ಯ ಸಸಿಮಠ ಹಾಗೂ ಇತರರು ಇದ್ದರು.

ಮಾ.1ರಂದು ತಾಲೂಕು ಮಟ್ಟದ ನಿವೃತ್ತ ನೌಕರರ ಸಮಾವೇಶ

ಮಾನ್ವಿ: ತಾಲೂಕಿನಲ್ಲಿ ವಿವಿಧ ಇಲಾಖೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ 600ಕ್ಕೂ ಹೆಚ್ಚು ಸದಸ್ಯರನ್ನು ಹೊಂದಿರುವ ಸಂಘವು ನಿವೃತ್ತ ನೌಕರರ ಜೀವನ ಸುಖಕಾರವಾಗಿರ ಬೇಕು ಹಾಗೂ ಇಳಿವಯಸ್ಸಿನಲ್ಲಿ ಅವರ ಮೇಲೆ ಶೋಷಣೆ ನಡೆದಾಗ ನ್ಯಾಯವನ್ನು ಒದಗಿಸಬೇಕು ಎನ್ನುವ ಉದ್ದೇಶದಿಂದ ಮಾ.1 ರಂದು ಪಟ್ಟಣದ ಶ್ರೀ ನೀಲಕಂಠೇಶ್ವರ ಕಲ್ಯಾಣ ಮಂಟಪದಲ್ಲಿ ಬೆಳಿಗ್ಗೆ 10-30ಕ್ಕೆ ಹಿರಿಯ ನಾಗರಿಕರ ದಿನಾಚರಣೆ, 2 ನೇ ತಾಲೂಕು ಮಟ್ಟದ ನಿವೃತ್ತ ನೌಕರರ ಸಮಾವೇಶ ಹಾಗೂ ಸಾಧಕರಿಗೆ ಸನ್ಮಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ನಿವೃತ್ತ ನೌಕರರ ಸಂಘ ತಾ.ಅಧ್ಯಕ್ಷ ರೇವಣಸಿದ್ದಯ್ಯ ಹಿರೇಮಠ ಹೇಳಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಮಾತನಾಡಿದ ಅವರು, ರಾಜ್ಯ ಸಣ್ಣ ನೀರಾವರಿ ಸಚಿವ ಎನ್.ಎಸ್.ಬೋಸರಾಜು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕನ್ನಡಾಂಬೆಯ ಭಾವಚಿತ್ರಕ್ಕೆ ಮಾಲಾರ್ಪಣೆಯನ್ನು ಕೆ.ಕೆ.ಆರ್.ಡಿ.ಬಿ. ಅಧ್ಯಕ್ಷ ಡಾ.ಅಜಯ್ ಸಿಂಗ್ ನೆರವೇರಿಸಲಿದ್ದಾರೆ. ಕರ್ನಾಟಕ ರಾಜ್ಯ ನಿವೃತ್ತ ನೌಕರರ ಸಂಘದ ರಾಜ್ಯಾಧ್ಯಕ್ಷ ಎಲ್.ಭೈರಪ್ಪ, ಶಾಸಕ ಹಂಪಯ್ಯನಾಯಕ ಸೇರಿದಂತೆ ಮಾಜಿ ಶಾಸಕರು, ತಾಲೂಕು ಮಟ್ಟದ ಅಧಿಕಾರಿಗಳು, ಗಣ್ಯರು ಭಾಗವಹಿಸಲಿದ್ದಾರೆ. ನಿವೃತ್ತ ನೌಕರರ ಸಮಸ್ಯೆಗಳು ಮತ್ತು ಪರಿಹಾರಗಳ



ಕುರಿತು ಜಿಲ್ಲಾಧ್ಯಕ್ಷ ಮಹಾದೇವಪ್ಪ ಏಗನೂರು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ಸಮಾಜ ಮುಖಿಯಾಗಿ ಸೇವೆ ಸಲ್ಲಿಸುತ್ತಿರುವ ತಾಲೂಕಿನ ವಿವಿಧ ಸಂಘ ಸಂಸ್ಥೆಗಳವರನ್ನು ಗುರುತಿಸಿ ಸನ್ಮಾನಿಸಲಾಗುತ್ತಿದೆ. ಭೂದಾನಿ ವಿ.ರವಿಬಾಬು ದಂಪತಿಗಳಿಗೆ ಸನ್ಮಾನ, ಸಂಘದ 70 ವರ್ಷ ಮೇಲ್ಪಟ್ಟ ನಿವೃತ್ತ ನೌಕರರಿಗೆ, ಮಾಜಿ ಯೋಧರಿಗೆ ಸನ್ಮಾನ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಪ್ರ.ಕಾರ್ಯದರ್ಶಿ ಮಡಿವಾಳಯ್ಯ ನಂದಿಕೋಲಮಠ, ಉಪಾಧ್ಯಕ್ಷ ಕೆ.ವೀರಪ್ಪ, ಖಜಾಂಚಿ ಚಂದ್ರಶೇಖರಯ್ಯ ಗಡ್ಡಿಮಠ, ಪದಾಧಿಕಾರಿಗಳಾದ ಡಿ.ಜಿ.ಕರ್ಕಿಹಳ್ಳಿ, ಶ್ರೀಶೈಲಗೌಡ, ಮೂಕಪ್ಪ ಕಟ್ಟಿಮನಿ, ರಾಮಲಿಂಗಪ್ಪ, ಕುಬೇರಪ್ಪ, ಹುಸೇನಪ್ಪ, ಶಾಂತಪ್ಪ, ಪರಪ್ಪ ಬೆನಕನಾಳ್ ಸೇರಿದಂತೆ ಇನ್ನಿತರರು ಇದ್ದರು.

ಕ್ಯಾನ್ಸರ್, ತಾಯಿ-ಮಕ್ಕಳ ಆಸ್ಪತ್ರೆ ಕಾಮಗಾರಿ ಶೀಘ್ರ ಪೂರ್ಣ

ಕಲಬುರಗಿ: ನಗರದ ಜಿಮ್ಸ್ ಆಸ್ಪತ್ರೆ ಆವರಣದಲ್ಲಿ ಸುಮಾರು 76 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ 210 ಹಾಸಿಗೆಯ ಕ್ಯಾನ್ಸರ್ ಆಸ್ಪತ್ರೆಯ ವಿಸ್ತರಣಾ ಕಟ್ಟಡ ಬರುವ ಆಗಸ್ಟ್ ಮಾಹೆಗೆ ಮತ್ತು 92 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿರುವ 200 ಹಾಸಿಗೆಯ ತಾಯಿ-ಮಕ್ಕಳ ಆಸ್ಪತ್ರೆ ಬರುವ ಅಕ್ಟೋಬರ್ ಮಾಹೆಗೆ ಕಟ್ಟಡ ಕಾಮಗಾರಿ ಪೂರ್ಣಗೊಳ್ಳಲಿವೆ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಪಾಟೀಲ ತಿಳಿಸಿದರು.

ಬುಧವಾರ ಜಿಮ್ಸ್ ಆಸ್ಪತ್ರೆ ಆವರಣದಲ್ಲಿ ನಿರ್ಮಿಸಲಾಗುತ್ತಿರುವ ಕ್ಯಾನ್ಸರ್ ಆಸ್ಪತ್ರೆ, ತಾಯಿ-ಮಕ್ಕಳ ಆಸ್ಪತ್ರೆ, ಸುಟ್ಟ ಗಾಯಗಳ ಘಟಕ, ತೀವ್ರ ನಿಗಾ ಘಟಕ ಕಟ್ಟಡ ಕಾಮಗಾರಿಗಳನ್ನು ಪರಿಶೀಲಿಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಮಗಾರಿ



ಗುಣಮಟ್ಟ ಕಾಯ್ದುಕೊಳ್ಳುವುದರ ಜೊತೆಗೆ ಕಾಲಾವಧಿ ವರೆಗೆ ಕಾಯದೆ ಸಾಧ್ಯವಾದಷ್ಟು ಬೇಗ ಕಾಮಗಾರಿ ಮುಗಿಸಬೇಕು ಎಂದ ಗುತ್ತಿಗೆದಾರನಿಗೆ ಸೂಚನೆ ನೀಡಲಾಗಿದೆ ಎಂದರು.

ಈಗಾಗಲೆ ಇರುವ ಕ್ಯಾನ್ಸರ್ ಆಸ್ಪತ್ರೆಯ 90 ಹಾಸಿಗೆ ಜೊತೆಗೆ 210 ಹಾಸಿಗೆ ಸೇರಿದಲ್ಲಿ 300 ಹಾಸಿಗೆ ಸಾಮರ್ಥ್ಯದೊಂದಿಗೆ ಕಲಬುರಗಿ ಕ್ಯಾನ್ಸರ್ ಆಸ್ಪತ್ರೆ ಉತ್ತರ ಕರ್ನಾಟಕದ ಸೆಂಟರ್ ಆಗಿ ಗುರುತಿಸಿಕೊಳ್ಳಲಿದೆ ಎಂದರು.

22 ಕೋಟಿ ರೂ. ವೆಚ್ಚದಲ್ಲಿ ಸ್ಥಾಪಿಸಲಾಗುತ್ತಿರುವ 50 ಹಾಸಿಗೆಯ ತೀವ್ರ ನಿಗಾ ಘಟಕ ಕಾಮಗಾರಿ ಸಹ ಅಕ್ಟೋಬರ್‌ನಲ್ಲಿ ಮುಗಿಯಲಿದೆ. 9.80 ಕೋಟಿ ರೂ. ಮೊತ್ತದ ಸಿವಿಲ್ ಕಾಮಗಾರಿ ಮತ್ತು 5 ಕೋಟಿ ರೂ. ವೈದ್ಯಕೀಯ ಉಪಕರಣಗಳೊಂದಿಗೆ ಸ್ಥಾಪನೆಯಾಗುತ್ತಿರುವ 30 ಹಾಸಿಗೆಯ ಸುಟ್ಟ ಗಾಯ ಘಟಕ ಬಹುತೇಕ ಕಾಮಗಾರಿ ಮುಗಿದಿದ್ದು, ಮುಂದಿನ ಎರಡು ತಿಂಗಳಿನಲ್ಲಿ ಇದನ್ನು ಲೋಕಾರ್ಪಣೆಗೊಳಿಸಲಾಗುವುದು ಎಂದರು.

ಇದಲ್ಲದೆ ಗುಲ್ಬರ್ಗಾ ವಿ.ವಿ. ಆವರಣದಲ್ಲಿ 92 ಕೋಟಿ ರೂ. ವೆಚ್ಚದಲ್ಲಿ 150 ಹಾಸಿಗೆಯ ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆಯ ಶಾಖೆ ತೆರೆಯಲಾಗುತ್ತಿದ್ದು, ಕೆಲಸ ಪ್ರಾರಂಭವಾಗಿದೆ. 50 ಕೋಟಿ ರೂ. ವೆಚ್ಚದಲ್ಲಿ 50 ಹಾಸಿಗೆಯ ಇನ್ಸ್ಟಿಟ್ಯೂಟ್ ಆಫ್ ಡಯಾಬೆಟಾಲೋಜಿ ಸೆಂಟರ್ ಸ್ಥಾಪಿಸಲಾಗುತ್ತಿದೆ. 100 ಕೋಟಿ ರೂ. ವೆಚ್ಚದಲ್ಲಿ 100 ಹಾಸಿಗೆ ಸಾಮರ್ಥ್ಯದ ನಿಮ್ಹಾನ್ಸ್ ಶಾಖೆ ನಿರ್ಮಾಣಕ್ಕೆ ಟೆಂಡರ್ ಪ್ರಕ್ರಿಯೆ ಮುಕ್ತಾಯವಾಗಿದ್ದು, ಇನ್ನಷ್ಟೆ ಕೆಲಸ ಆರಂಭವಾಗಬೇಕಿದೆ ಎಂದರು.

ಜಿಮ್ಸ್ ನಿರ್ದೇಶಕ ಡಾ.ಉಮೇಶ ಎಸ್.ಆರ್., ವೈದ್ಯಕೀಯ ಅಧೀಕ್ಷಕ ಡಾ.ಶಿವಕುಮಾರ ಸಿ.ಆರ್., ಜಿಲ್ಲಾ ಆಸ್ಪತ್ರೆಯ ಸರ್ಜನ್ ಡಾ.ಅಸ್ಮಾ ರುಕಿಯಾ ರಬಾ ಸೇರಿದಂತೆ ಇನ್ನಿತರ ಅಧಿಕಾರಿಗಳು ಇದ್ದರು. ತದನಂತರ ಸಚಿವ ಡಾ.ಶರಣಪ್ರಕಾಶ ಪಾಟೀಲ ಅವರು ಸೂಪರ್ ಸ್ಪೆಶಾಲಿಟಿ ಆಸ್ಪತ್ರೆಯ ಪ್ರಗತಿ ಪರಿಶೀಲನೆ ನಡೆಸಿದರು.

ಖತರ್ನಾಕ್ ಕಳ್ಳರ ಬಂಧನ: 26,54 ಲಕ್ಷ ಮೌಲ್ಯದ ಸ್ವತ್ತು ವಶ

ಕಲಬುರಗಿ: ಜಿಲ್ಲೆಯ ಸೇಡಂ ಹಾಗೂ ಮಳಖೇಡ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ನಡೆದ ಸರಣಿ ಮನೆಕಳ್ಳತನ ಪ್ರಕರಣಗಳನ್ನು ಭೇದಿಸಿರುವ ಪೊಲೀಸರು, ಐದು ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಬಂಧಿಸಿ, ಬಂಧಿತರಿಂದ 26.54 ಲಕ್ಷ ಮೌಲ್ಯದ ಚಿನ್ನ, ಬೆಳ್ಳಿ ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಡ್ಡೂರು ಶ್ರೀನಿವಾಸುಲು ತಿಳಿಸಿದರು.

ನಗರದ ಪೊಲೀಸ್ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ನ.28ರಂದು ಗಣೇಶ ನಗರ, ಸೇಡಂ ನಿವಾಸಿ ಸಿದ್ದಾರೂಢ ತಮ್ಮ ಮನೆಯಲ್ಲಿ 70 ಗ್ರಾಂ ಚಿನ್ನದ ಆಭರಣ ಕಳ್ಳತನವಾಗಿರುವ ಕುರಿತು ದೂರು ನೀಡಿದ್ದು, ಈ ಸಂಬಂಧ ಸೇಡಂ ಪೊಲೀಸ್ ಠಾಣೆಯಲ್ಲಿ ಅಪರಾಧ ಸಂಖ್ಯೆ 212/2025 ಅಡಿ ಪ್ರಕರಣ ದಾಖಲಾಗಿತ್ತು.

ಪ್ರಕರಣದ ತನಿಖೆಯನ್ನು ಚಿಂಚೋಳಿ ಉಪವಿಭಾಗದ ಡಿವೈಎಸ್‌ಪಿ ಸಂಗಮೇಶ ಹಿರೇಮಠ ಅವರ ಮಾರ್ಗದರ್ಶನದಲ್ಲಿ, ಸಿಪಿಐ ಮಹಾದೇವ ಡಿ. ನೇತೃತ್ವದ ತಂಡ ಕೈಗೊಂಡು, ಆರೋಪಿಗಳಾದ ಕರಣ (26), ರಾಮದಾಸ್ (45) ಇಬ್ಬರು

ಆಭರಣಗಳ ವಶ

ಅಂದಾಜು 25,57,500 ಮೌಲ್ಯದ 155 ಗ್ರಾಂ ಚಿನ್ನದ ಆಭರಣಗಳು ಹಾಗೂ ಅಂದಾಜು 96,900 ಮೌಲ್ಯದ 340 ಗ್ರಾಂ ಬೆಳ್ಳಿ ಆಭರಣಗಳು ಸೇರಿದಂತೆ ಒಟ್ಟು 26,54,40 ರೂ.ಗಳ ಮೌಲ್ಯದ ಚಿನ್ನ, ಬೆಳ್ಳಿ ಆಭರಣಗಳನ್ನು ವಶಪಡಿಸಿಕೊಳ್ಳಲಾಗಿದೆ.

ಅನುಮಾನಾಸ್ಪದವಾಗಿ ಸಂಚರಿಸುತ್ತಿದ್ದವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕಳ್ಳತನ ಮಾಡಿರುವುದಾಗಿ ಒಪ್ಪಿಕೊಂಡಿದ್ದಾರೆ. ಪ್ರಕರಣದ ಇನ್ನೂಳಿದ ಮೂವರ ಆರೋಪಿಗಳ ಪತ್ತೆಗಾಗಿ ಜಾಲ ಬೀಸಲಾಗಿದೆ ಎಂದರು. ಆರೋಪಿಗಳು ಸೇಡಂ ಮತ್ತು ಮಳಖೇಡ ಠಾಣಾ ವ್ಯಾಪ್ತಿಯ ನಾಲ್ಕು ಮನೆಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿರುವುದು ಪತ್ತೆಯಾಯಿತು. ವಿವಿಧ ಪ್ರಕರಣಗಳಲ್ಲಿ ಕಳವಾಗಿದ್ದ ಆಭರಣಗಳಲ್ಲಿ ಬಹುಪಾಲು ವಸ್ತುಗಳನ್ನು ಪೊಲೀಸರು ವಶಪಡಿಸಿ ಕೊಂಡಿದ್ದಾರೆ. ಈ ಯಶಸ್ವಿ ಕಾರ್ಯಾಚರಣೆಯಲ್ಲಿ ಭಾಗವಹಿಸಿದ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಯನ್ನು ಕಲಬುರಗಿ ಜಿಲ್ಲಾ ಪೊಲೀಸ್ ಅಧೀಕ್ಷಕರು ಪ್ರಶಂಸಿಸಿದ್ದಾರೆ. ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ, ಮುಂದಿನ ತನಿಖೆ ಮುಂದುವರಿಸಿದ್ದಾರೆ.

ಹಗಲು ರಾತ್ರಿ ವೇಳೆ ಬೀಗ ಹಾಕಿದ ಮನೆಗಳನ್ನು ಗುರಿ ಮಾಡಿಕೊಂಡು ಕಳ್ಳತನ ಮಾಡುತ್ತಿರುವುದು ತನಿಖೆ ವೇಳೆ ಬಯಲಾಗಿದೆ. ಆರೋಪಿ ರಾಮದಾಸ್ ಎಂಬುವವರ ಮೇಲೆ ಈ ಹಿಂದೆ ವಿಜಯಪುರ, ಅಫಜಲಪುರ ಠಾಣೆಯಲ್ಲಿ 8 ಪ್ರಕರಣಗಳು ದಾಖಲಾಗಿದ್ದು, ಎ-1 ಆರೋಪಿ ಮೇಲೆ ಇಲ್ಲಿಯವರೆಗೆ ಯಾವುದೇ ಪ್ರಕರಣ ಪತ್ತೆಯಾಗಿಲ್ಲ. ಕದ್ದ ಮಾಲನ್ನು ಕಳ್ಳರು ಹಂಚಿಕೊಳ್ಳುವ ಪ್ರವೃತ್ತಿ ಹೊಂದಿದ್ದು, ತನಿಖೆ ವೇಳೆ ಬಯಲಾಗಿದೆ.

■ ಅಡ್ಡೂರು ಶ್ರೀನಿವಾಸುಲು, ಎಸ್ಪಿ, ಕಲಬುರಗಿ

ಪತ್ರಿಕಾಗೋಷ್ಠಿಯಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ಮಹೇಶ್ ಮೇಘಣ್ಣನವರ, ಚಿಂಚೋಳಿ ಉಪವಿಭಾಗದ ಡಿವೈಎಸ್ಪಿ ಸಂಗಮೇಶ ಹಿರೇಮಠ, ಸೇಡಂ ಸಿಪಿಐ ಮಹಾದೇವ, ಪಿಎಸ್ಐ ಉಪೇಂದ್ರ ಕುಮಾರ್, ಶರಣಪ್ಪ, ಎಎಸ್ಐ ಮನೋಹರ ರೆಡ್ಡಿ, ಯಲಗೋರೇಶ ಹಾಗೂ ಇತರರು ಉಪಸ್ಥಿತರಿದ್ದರು.

ಕಿರುಸುದ್ದಿ

ರಾಗಿ ಖರೀದಿ ಕೇಂದ್ರಕ್ಕೆ ಚಾಲನೆ

ಕೊಟ್ಟೂರು: 2025-26ನೇ ಸಾಲಿನ ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ ನೊಂದಣಿ ಮಾಡಿದ ರೈತರ ರಾಗಿ ಖರೀದಿ ಕೇಂದ್ರವನ್ನು ಬುಧವಾರ ಕೊಟ್ಟೂರಿನ ಎಪಿಎಂಸಿ ಯಾರ್ಡ್‌ನಲ್ಲಿ ಬಿ. ಡಿ.ಸಿ.ಸಿ.ಬ್ಯಾಂಕ್ ಉಪಾಧ್ಯಕ್ಷ ಐ.ಎಂ. ದಾರುಕೇಶ್ ಹಾಗೂ ಎಪಿಎಂಸಿ ಉಪಾಧ್ಯಕ್ಷ ಎಂ.ಶಿವಣ್ಣ ಚಾಲನೆ ನೀಡಿದರು. ನೋಂದಣಿ ಮಾಡಿದ ರೈತರು ನೋಂದಣಿ ಕ್ರಮ ಸಂಖ್ಯೆ ಪ್ರಕಾರ ಮಾರಾಟಕ್ಕೆ ತರಲು ಖರೀದಿ ಅಧಿಕಾರಿಗಳು ತಿಳಿಸಿದರು. ಈ ವೇಳೆ ಎಪಿಎಂಸಿ ಸದಸ್ಯ ಚಿರಿಬಿ ಕೊಟ್ರೇಶ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಐಯನಹಳ್ಳಿ ಅಧ್ಯಕ್ಷ ಎನ್. ಸತೀಶಕುಮಾರ್, ಸದಸ್ಯರಾದ ಎ. ಜನಾರ್ಧನ, ಕೊಟ್ರೇಶ ಮರೂರು ಬಿ. ಹಂಪಣ್ಣ, ರೈತ ಸಂಘದ ಉಪಾಧ್ಯಕ್ಷ ಭರಮಣ್ಣ, ಎಪಿಎಂಸಿ ಕಾರ್ಯದರ್ಶಿ ಎ.ಕೆ. ವೀರಣ್ಣ ಸೇರಿದಂತೆ ಇತರರಿದ್ದರು.

ಡಾಕ್ಟರೇಟ್ ಪದವಿ ಪ್ರದಾನ

ಬಳ್ಳಾರಿ: ಜಿಲ್ಲೆಯ ಕಂಪ್ಲಿ ತಾಲೂಕಿನ ನಂಬರ್ 1. ಇಟಿಗಿ ಗ್ರಾಮದ ನಿವಾಸಿ, ಪತ್ರಕರ್ತ ಗಿರೀಶ್ ಕುಮಾರ್.ಜಿ ಅವರಿಗೆ ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಕಮಲಾಪುರದ ಕನ್ನಡ ವಿಶ್ವವಿದ್ಯಾಲಯ ಹಂಪಿಯಿಂದ ಪಿಎಚ್.ಡಿ ಪದವಿ ನೀಡಲಾಯಿತು.



ಶ್ರೀ ಸಿದ್ಧಾರ್ಥ ಮಾಧ್ಯಮ ಅಧ್ಯಯನ ಕೇಂದ್ರ, ತುಮಕೂರಿನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ನಾಗೇಂದ್ರ ಅವರು ಮಾರ್ಗದರ್ಶನದಲ್ಲಿ ಕನ್ನಡ ಮುದ್ರಣ ಮಾಧ್ಯಮಗಳಲ್ಲಿ ಸೈಬರ್ ಅಪರಾಧಗಳ ಪ್ರತಿನಿಧಿಕರಣ (ಬಳ್ಳಾರಿ ಜಿಲ್ಲೆಯ ಅನುಲಕ್ಷಿಸಿ) ಎಂಬ ವಿಷಯದ ಕುರಿತು ಮಂಡಿಸಿದ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿ ನೀಡಲಾಗಿದೆ. ಬಳ್ಳಾರಿ, ವಿಜಯನಗರ, ಕೊಪ್ಪಳ ಜಿಲ್ಲೆಯ ಹಿರಿಯ ಪತ್ರಕರ್ತರು, ಪೊಲೀಸ್ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ, ಕುಟುಂಬದ ಸದಸ್ಯರು, ಸ್ನೇಹಿತರು ಶುಭ ಕೋರಿದ್ದಾರೆ.

ರಾಯರ ವರ್ಧಂತಿ ಮಹೋತ್ಸವ: ವಿಶೇಷ ಪೂಜೆ

ಸಿರುಗುಪ್ಪ: ನಗರದ ವೇಣುಗೋಪಾಲ ರಾಘವೇಂದ್ರ ಸ್ವಾಮಿಯ ದೇವಸ್ಥಾನದಲ್ಲಿ ರಾಘವೇಂದ್ರ ಗುರುಸಾರ್ವಭೌಮರ 431ನೇ ವರ್ಧಂತಿ ಮಹೋತ್ಸವದ ನಿಮಿತ್ತ ಮಂಗಳವಾರ ವಿವಿಧ ಪೂಜೆಗಳು ವಿಜೃಂಭಣೆಯಿಂದ ನೆರವೇರಿದವು.



ವೇಣುಗೋಪಾಲ ರಾಘವೇಂದ್ರ ಸ್ವಾಮಿಯ ಬೃಂದಾವನಕ್ಕೆ ಪಂಚಾಮೃತ ಅಭಿಷೇಕ, ಪುಷ್ಪಾಭಿಷೇಕ, ಹಾಗೂ ವಿಶೇಷ ಪೂಜೆಗಳನ್ನು ನೆರವೇರಿಸಿ ಅತ್ಯಂತ ಶ್ರದ್ಧಾಭಕ್ತಿಗಳಿಂದ ಆಚರಿಸಲಾಯಿತು. ಬೆಂಗಳೂರಿನ ವಿದ್ಯಾಸಿಂಧು ಮಾಧವ ತೀರ್ಥರು ಶ್ರೀಕೃಷ್ಣ ಚಾರಿತ್ರ್ಯ ಮಂಜರಿ ಹಾಗೂ ರಾಘವೇಂದ್ರ ಗುರುಸಾರ್ವಭೌಮರ ವೈಭವ ಕುರಿತು ಪ್ರವಚನ ನೀಡಿದರು. ದೇವಸ್ಥಾನದ ಮುಖ್ಯ ವ್ಯವಸ್ಥಾಪಕ ಜ್ಯೋಯಸ ಶ್ರೀನಿವಾಸಚಾರ್, ಅಖಿಲ ಕರ್ನಾಟಕ ಪುರೋಹಿತರ ಸಂಘ ಹಾಗೂ ಸಿರುಗುಪ್ಪ ತಾಲೂಕು ಬ್ರಾಹ್ಮಣ ಸಂಘದ ಮತ್ತು ಸಮಾಜದ ಬಂಧುಗಳು ಭಾಗವಹಿಸಿದ್ದರು. ಎಲ್ಲ ಭಕ್ತರಿಗೂ ತೀರ್ಥ ಪ್ರಸಾದ ವಿತರಿಸಲಾಯಿತು.

ಬೆಂಬಲ ಬೆಲೆ ಯೋಜನೆಯಡಿ ಕಡಲೆಕಾಳು ಖರೀದಿ

ವಿಜಯನಗರ: ಬೆಂಬಲ ಬೆಲೆ ಯೋಜನೆಯಡಿ ಜಿಲ್ಲೆಯಾದ್ಯಂತ ಪ್ರಸಕ್ತ ಸಾಲಿನ ಹಿಂಗಾರು ಹಂಗಾಮಿನಲ್ಲಿ ಎಫ್.ಎ.ಕ್ಯೂ ಗುಣಮಟ್ಟದ ಕಡಲೆಕಾಳು ಖರೀದಿ ಕೇಂದ್ರ ಆರಂಭಗೊಂಡಿದೆ. ಜಿಲ್ಲೆಯಲ್ಲಿ ಒಟ್ಟು 4 ಖರೀದಿ ಕೇಂದ್ರ ಸ್ಥಾಪಿಸಲಾಗಿದ್ದು, ಸಹಕಾರ ಮಾರಾಟ ಮಹಾಮಂಡಳಿ ವತಿಯಿಂದ ಪ್ರತಿ ಕ್ವಿಂಟಾಲ್‌ಗೆ 5875 ರೂ.ಗಳಂತೆ ಪ್ರತಿ ರೈತರಿಂದ ಎಕರೆಗೆ 4 ಕ್ವಿಂಟಾಲ್ ನಂತೆ ಗರಿಷ್ಠ 40 ಕ್ವಿಂಟಾಲ್ ಉತ್ಪನ್ನವನ್ನು ಖರೀದಿಸಲಾಗುತ್ತದೆ. ಈಗಾಗಲೇ ನೊಂದಣಿ ಪ್ರಕ್ರಿಯೆ ಪ್ರಾರಂಭವಾಗಿದ್ದು, ಪ್ರತಿದಿನ ಬೆಳಿಗ್ಗೆ 9 ರಿಂದ ಸಂಜೆ 5 ಗಂಟೆಯವರೆಗೆ ಉತ್ಪನ್ನ ಖರೀದಿಸಲಾಗುತ್ತದೆ.

ಬೆಂಬಲಬೆಲೆ ಯೋಜನೆಯಡಿ ಗುಣಮಟ್ಟದ ಕಡಲೆಕಾಳು ಖರೀದಿಗೆ ಮತ್ತು ನೊಂದಣಿಗಾಗಿ ಜಿಲ್ಲೆಯ ಕೋಗಳಿ, ಹರಪನಹಳ್ಳಿ, ಹಿರೇಹಡಗಲಿ ಮತ್ತು ಹಗರಿಬೊಮ್ಮನಹಳ್ಳಿಯಲ್ಲಿ ಖರೀದಿ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ರೈತರು ನೋಂದಣಿ ಮತ್ತು ಖರೀದಿಗಾಗಿ ಪ್ರಸಕ್ತ ಸಾಲಿನ ಪಹಣಿ, ಆಧಾರ್ ಕಾರ್ಡ್, ಬ್ಯಾಂಕ್ ಖಾತೆ ಪುಸ್ತಕ, ಎಫ್‌ಐಡಿ ದಾಖಲೆಗಳೊಂದಿಗೆ ಫ್ರೂಟ್ಸ್ ತಂತ್ರಾಂಶದಲ್ಲಿ ನೊಂದಾಯಿಸಿಕೊಳ್ಳಬಹುದಾಗಿದೆ. ಈ ಬಗ್ಗೆ ತಾಂತ್ರಿಕ ದೋಷಗಳಿದ್ದಲ್ಲಿ ಸಮೀಪದ ಕೃಷಿ ಇಲಾಖೆ ಸಂಪರ್ಕಿಸಿ ಮಾಹಿತಿ ಪಡೆದುಕೊಳ್ಳಬಹುದು. ಜಿಲ್ಲೆಯ ಎಲ್ಲಾ ರೈತರು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಟಾಸ್ಕ್ ಫೋರ್ಸ್ ಸಮಿತಿ ಅಧ್ಯಕ್ಷ ಕವಿತಾ ಎಸ್. ಮನ್ನಿಕೇರಿ ತಿಳಿಸಿದ್ದಾರೆ.



ಕೊಟ್ಟೂರು: 2025-26ನೇ ಸಾಲಿನ ಬೆಂಬಲ ಬೆಲೆ ಯೋಜನೆ ಅಡಿಯಲ್ಲಿ ನೊಂದಣಿ ಮಾಡಿದ ರೈತರ ರಾಗಿ ಖರೀದಿ ಕೇಂದ್ರವನ್ನು ಬುಧವಾರ ಕೊಟ್ಟೂರಿನ ಎಪಿಎಂಸಿ ಯಾರ್ಡ್‌ನಲ್ಲಿ ಬಿ. ಡಿ.ಸಿ.ಸಿ.ಬ್ಯಾಂಕ್ ಉಪಾಧ್ಯಕ್ಷ ಐ.ಎಂ. ದಾರುಕೇಶ್ ಹಾಗೂ ಎಪಿಎಂಸಿ ಉಪಾಧ್ಯಕ್ಷ ಎಂ.ಶಿವಣ್ಣ ಚಾಲನೆ ನೀಡಿದರು.

ರೈತ ಮನೆತನದ ಸಾಮಾಜಿಕ ನಾಟಕ ಪ್ರದರ್ಶನ

ಹೂವಿನ ಹಡಗಲಿ: ಪಟ್ಟಣದ ತೇರು ಹನುಮಪ್ಪ ಸ್ವಾಮಿ ಜಾತ್ರಾ ಮಹೋತ್ಸವದ ಅಂಗವಾಗಿ ಪತ್ರಿ ಬಸವೇಶ್ವರ ನಾಟ್ಯ ಸಂಘ ಎಂ.ಪಿ.ಪ್ರಕಾಶ ನಗರ ಹೂವಿನಹಡಗಲಿ ಇವರು ನಟಿಸಿದ ರೈತ ಮನೆತನದ ಸಾಮಾಜಿಕ ನಾಟಕ ಪಟ್ಟಣದಲ್ಲಿ ಜರುಗಿತು.

ಕೌಟುಂಬಿಕ ಸಾಮಾಜಿಕ ಕಳಕಳಿಯ ಸಂದೇಶವನ್ನು ನೀಡಿ ನೆರೆದಿದ್ದ ಪ್ರೇಕ್ಷಕರನ್ನು ಮೂಕ ಪ್ರೇಕ್ಷಕರನ್ನಾಗಿ ಮಾಡಿತು. ಪ್ರಶಾಂತ ಎ ಎಂ ಪಿ.ಟಿ ಚಂದ್ರಪ್ಪ, ಸಿ. ಸಿದ್ದೇಶ, ಬಿ. ವೀರಭದ್ರಪ್ಪ, ಟಿ. ಆಶೋಕ, ಬಿ. ರವಿಚಂದ್ರಟಿ ಜ್ಯೋತೇಂದ್ರ, ಕೆ. ಮಲ್ಲಿಕಾರ್ಜುನ, ಎನ್. ಪ್ರವೀಣ್.ರವಿಕಿರಣ್, ಎ ಎಂಪಿ, ಅವರ ಅಭಿನಯ ಅವರವರ ಪಾತ್ರಕ್ಕೆ ಜೀವ ತುಂಬಿದ್ದಾರೆ.

ಇಂದಿನ ಆಧುನಿಕ ಜೀವನಶೈಲಿಯಲ್ಲಿ ಜನರಿಗೆ ಸಮಯದ ಅಭಾವವಿದೆ. ಟಿವಿ, ಸಿನಿಮಾ, ಮೊಬೈಲ್ ಮತ್ತು ಇಂಟರ್‌ನೆಟ್‌ನಂತಹ ತಂತ್ರಜ್ಞಾನಗಳ ಬೆಳವಣಿಗೆಯಿಂದ ಮನರಂಜನೆಯ ಹೊಸ ಮಾರ್ಗಗಳು ದೊರಕಿವೆ. ಆನ್‌ಲೈನ್ ವೇದಿಕೆಗಳು ಜನರಿಗೆ ಮನೆಯಲ್ಲಿ ಕುಳಿತುಕೊಂಡೇ ಮನರಂಜನೆ ಪಡೆಯುವ ಅವಕಾಶ ನೀಡುತ್ತಿವೆ. ಇದರಿಂದ ನಾಟಕ ಮಂದಿರಗಳಿಗೆ ಹೋಗುವವರ ಸಂಖ್ಯೆ ಕುಸಿದಿದೆ. ಆದರೂ ನಮ್ಮ ಸಂಸ್ಕೃತಿಯ ಅಮೂಲ್ಯ ಪರಂಪರೆಯಾಗಿರುವ ನಾಟಕಕಲೆಯನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಕಲಾವಿದ ಎಂಪಿ ಪ್ರಶಾಂತ ಹೇಳಿದ್ದಾರೆ. ಈ ವೇಳೆ ನಾಟಕದ ಉದ್ಘಾಟನೆಯನ್ನು ಶಾಸಕ ಕೃಷ್ಣನಾಯಕ, ಗವಿಮಠ ಶ್ರೀಗಳು ಹಿರೇಮಲ್ಲನಕೇರೆ ಶ್ರೀಗಳು ರಾಮಸ್ವಾಮಿ ರಾಕೇಶಯ್ಯ ಶ್ರೀಗಳು ಚೌಕಿ ಮಠದ ಶ್ರೀಗಳು ನೆರವೇರಿಸಿದರು. ಆಂಜನೇಯ ಸ್ವಾಮಿ ದೈವಸ್ಥರು ಎಂಪಿ ಪ್ರಕಾಶ್ ನಗರದ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಹೂವಿನ ಹಡಗಲಿ: ಪಟ್ಟಣದ ತೇರು ಹನುಮಪ್ಪ ಸ್ವಾಮಿ ಜಾತ್ರಾ ಮಹೋತ್ಸವದ ಅಂಗವಾಗಿ ಪತ್ರಿ ಬಸವೇಶ್ವರ ನಾಟ್ಯ ಸಂಘ ಎಂ.ಪಿ.ಪ್ರಕಾಶ ನಗರ ಹೂವಿನಹಡಗಲಿ ಇವರು ನಟಿಸಿದ ರೈತ ಮನೆತನದ ಸಾಮಾಜಿಕ ನಾಟಕ ಪಟ್ಟಣದಲ್ಲಿ ಜರುಗಿತು. ಕೌಟುಂಬಿಕ ಸಮಾಜಿಕ ಕಳಕಳಿಯ ಸಂದೇಶವನ್ನು ನೀಡಿ ನೆರೆದಿದ್ದ ಪ್ರೇಕ್ಷಕರನ್ನು ಮೂಕ ಪ್ರೇಕ್ಷಕರನ್ನಾಗಿ ಮಾಡಿತು.

ಸಿರಿಧಾನ್ಯ ನಡಿಗೆಗೆ ಚಾಲನೆ | ಶಾಸಕ ಚನ್ನಾರಡ್ಡಿ ಪಾಟೀಲ ಸಲಹೆ

ಸಿರಿಧಾನ್ಯ ಉಪಯೋಗದ ಅರಿವು ಮೂಡಿಸಿ

ಯಾದಗಿರಿ: ಸಿರಿಧಾನ್ಯಗಳನ್ನು ಬಳಕೆ ಮಾಡುವುದರಿಂದ ಆರೋಗ್ಯಕ್ಕೆ ಆಗುವ ಲಾಭಗಳ ಬಗ್ಗೆ ವ್ಯಾಪಕ ಜಾಗೃತಿ ಮೂಡಿಸಬೇಕೆಂದು ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ ಹೇಳಿದರು.

ಜಿಲ್ಲಾಡಳಿತ, ಜಿಪಂ, ಕೃಷಿ ಇಲಾಖೆ ಮತ್ತು ಜಿಲ್ಲಾ ಕೃಷಿಕ ಸಮಾಜ ಸಂಯುಕ್ತವಾಗಿ ಬುಧವಾರ ನಗರದ ಹೊಸ ಬಸ್ ನಿಲ್ದಾಣದ ಆವರಣದಲ್ಲಿ ಆಯೋಜಿಸಿದ್ದ ಸಿರಿಧಾನ್ಯ ನಡಿಗೆಗೆ ಚಾಲನೆ ನೀಡಿ ಮಾತನಾಡಿ, ಬಿಳಿ ಜೋಳ, ಸಜ್ಜೆ ನವಣಿ, ಕಣವಿ ಸೇರಿದಂತೆಯೇ ಸಿರಿಧಾನ್ಯದ ಸಕಲ ಪದಾರ್ಥಗಳು ಆರೋಗ್ಯಕ್ಕೆ ಉತ್ತಮ ಔಷಧಿಗಳಾಗಿವೆ. ಹಿಂದಿನ ಕಾಲದಲ್ಲಿ ಹಿರಿಯರು ಇವುಗಳನ್ನೇ ಬಳಸಿ ಗಟ್ಟಿಮುಟ್ಟಾದ ಆರೋಗ್ಯ ಹೊಂದಿದ್ದರು. ಆದರೆ ಬಾಯಿರುಚಿಯ ಚಟ ಅಂಟಿಸಿಕೊಂಡ ಇಂದಿನ ಬಹುತೇಕರು ಜಂಕ್‌ಫುಡ್ ಸೇವಿಸಿ ಆರೋಗ್ಯ ಕೆಡಿಸಿಕೊಳ್ಳುತ್ತಿದ್ದಾರೆಂದು ವಿಷಾಧಿಸಿದರು.

ಪ್ರತಿ ಊರಿನ ಎಲ್ಲ ಮನೆಗಳಿಗೆ, ಶಾಲಾ, ಕಾಲೇಜುಗಳಿಗೆ ಈ ಬಗ್ಗೆ ಸೂಕ್ತ ಮಾಹಿತಿ ರವಾನಿಸುವ ಕೆಲಸ ಆಗಬೇಕು. ಹಲವು ರೋಗಗಳಿಗೆ ಈ ಧಾನ್ಯಗಳು ವರವಾಗಿವೆ. ಉತ್ಪಾದಕರಿಗೆ ಉತ್ತಮ ಧಾರಣೆಯೂ ಸಿಗುತ್ತದೆ. ಹೀಗಾಗಿ ಇದನ್ನು ಹೆಚ್ಚೆಚ್ಚು ಬೆಳೆಯಬೇಕೆಂದು ಸೂಚಿಸಿದರು.

ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಮಾತನಾಡಿ, ಈ ಹಿಂದೆ ನಮ್ಮ ನೆಲದ ಕೃಷಿಕರು ಸಿರಿಧಾನ್ಯಗಳನ್ನೇ ಬೆಳೆಯುತ್ತಿದ್ದರು. ಈಗ ಬೆಳೆಯುವುದು ಕಷ್ಟಕರವಾಗಿದೆ. ಕಾರಣ, ಕಡಿಮೆ ಖರ್ಚಿನಲ್ಲಿ ಹೆಚ್ಚು ಬೆಳೆ ಪಡೆಯಬೇಕೆಂಬ ಇಚ್ಚೆ ಹೆಚ್ಚಾಗಿದೆ. ಕಲುಷಿತ ಮತ್ತು ವಿಷಪೂರಿತ ಆಹಾರ ಧಾನ್ಯಗಳ ಬದಲಿಗೆ ಸಿರಿಧ್ಯಾನಗಳನ್ನೆ ಬಳಸಿ. ಇದಕ್ಕೆ ಸರ್ಕಾರಗಳು ಸಾಕಷ್ಟು ಪ್ರೋತ್ಸಾಹ ನೀಡುತ್ತಿದೆ ಎಂದರು.

ಹಿರಿಯ ಮುಖಂಡ ರಾಚಣ್ಣಗೌಡ ಮುದ್ನಾಳ್ ಮಾತನಾಡಿ, ಜೋಳ, ತೊಗರಿ, ಸಜ್ಜೆ, ನವಣೆಯಂತಹ ಆಹಾರಗಳಲ್ಲಿ ಪವಿತ್ರತೆ ಇದೆ. ಗಟ್ಟಿತನವಿದೆ. ರೋಗ ನಿರೋಧಕ ಶಕ್ತಿ ಇದೆ. ಆದರೇ ಇವುಗಳ ಉತ್ಪಾದನೆಗೆ ರೈತ ಮುಂದಾದರೇ ನಿರೀಕ್ಷೆ ಮಾಡಿದಷ್ಟು ಲಾಭ ಆಗುತ್ತಿಲ್ಲ. ಇದಕ್ಕೆ ಸರ್ಕಾರವೇ ಹೆಚ್ಚಿನ ಆನುಕೂಲ ಮಾಡಿಕೊಡಬೇಕು ಎಂದರು.

ಎಸ್‌ಪಿ ಪೃಥ್ವಿಕ ಶಂಕರ, ಕೃಷಿ ಇಲಾಖೆ ಜಂಟಿ ನಿರ್ದೇಶಕ ರತೇಂದ್ರನಾಥ ಸೂಗುರ ಪ್ರಾಸ್ತಾವಿಕವಾಗಿ ಮಾತನಾಡಿ, ನಮ್ಮ ನಡೆ ಸಿರಿಧಾನ್ಯ, ರೈತರ ಸಬಲಿಕರಣ ಮತ್ತು ಈ ಧಾನ್ಯಗಳ ಬಗ್ಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸರ್ಕಾರ ಈ ಕಾರ್ಯಕ್ರಮ ಹಮ್ಮಿಕೊಂಡಿದೆ. ಸಿರಿಧಾನ್ಯ ಬಳಸಿ ಆರೋಗ್ಯ ಕಾಪಾಡಿಕೊಳ್ಳಿ ಎಂದರು.



ನಗರದ ಜಾಥಾದಲ್ಲಿ ಸಾವಿರಾರು ಜನ ಭಾಗಿ

ಹೊಸ ಬಸ್ ನಿಲ್ದಾಣದಿಂದ ಆರಂಭಗೊಂಡ ಸಿರಿಧಾನ್ಯ ಜಾಥಾ ಶಾಸ್ತ್ರಿ ಚೌಕ್, ಸುಭಾಷಚಂದ್ರ ಬೋಸ್ ವೃತ್ತದ ಮೂಲಕ ಸರ್ಕಾರಿ ಪದವಿ ಕಾಲೇಜಿಗೆ ಬಂದು ಸಮಾಪ್ತಿಯಾಯಿತು. ಅಲ್ಲಿ ಎಲ್ಲರಿಗೂ ಸಿರಿಧಾನ್ಯದ ಜೂಸ್ ನೀಡಲಾಯಿತು. ಹೆಚ್ಚುವರಿ ಎಸ್‌ಪಿ ಧರಣೇಶ, ಡಿವೈಎಸ್ ಪಿ ಭರತಕುಮಾರ ತಳವಾರ, ಉಪ ಕೃಷಿ ನಿರ್ದೇಶಕ ಹಂಪಣ್ಣ ವೈ.ಎಲ್., ವಿವಿಧ ತಾಲೂಕು ಕೃಷಿ ಅಧಿಕಾರಿಗಳಾದ ರಾಜಕುಮಾರ, ಸುರೇಶ ಬಿ., ರಾಮಣ್ಣಗೌಡ, ಸುನೀಲಕುಮಾರ, ರವಿಕುಮಾರ, ವಿಶ್ವಾರಾಧ್ಯ, ಎನ್‌ಎಬಿಎಆರ್ ಡಿ ಅಧಿಕಾರಿ ಯಮುನಾ, ಡಿಎಚ್‌ಒ ಡಾ.ಮಹೇಶ ಬಿರಾದಾರ, ಕೃಷಿ ಇಲಾಖೆ ತಾಂತ್ರಿಕ ಅಧಿಕಾರಿ ಯಾಮರೆಡ್ಡಿ, ಕಚೇರಿ ಅಧಿಕ್ಷಕರಾದ ವೆಂಕಟೇಶ ಹಿರೆನೂರ್, ಮುಖಂಡರಾದ ಶರಣಗೌಡ ಮಾಲಿಪಾಟೀಲ್, ಬಸವರಾಜ ಮೊಟನಳ್ಳಿ, ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ವೆಂಕಟರೆಡ್ಡಿ ತಂಗಡಗಿ, ಶರಣಗೌಡ ಬಲಕಲ್, ಕೃಷಿ ಇಲಾಖೆ ಸಿಬ್ಬಂದಿ ಸೇರಿದಂತೆ ಇತರರಿದ್ದರು.

> **ಜಿಲ್ಲೆಯಲ್ಲಿ ಸಿರಿಧಾನ್ಯ ಉತ್ಪಾದನೆ, ಬಳಕೆಗೆ ಕೃಷಿ ಇಲಾಖೆ ಅಧಿಕಾರಿಗಳು ಸಾಕಷ್ಟು ಒತ್ತು ನೀಡುತ್ತಿರುವ ಪರಿಣಾಮ 25 ಸಾವಿರ ಎಕರೆ ಭೂಮಿಯಲ್ಲಿ ಸಿರಿಧಾನ್ಯಗಳು ಬೆಳೆಯಲಾಗುತ್ತಿದೆ ಎಂಬ ಮಾಹಿತಿ ಸಂತಸ ತಂದಿದೆ. ಇದು ಹೆಚ್ಚಾಗಬೇಕು.**
> ■ ಚನ್ನಾರಡ್ಡಿ ಪಾಟೀಲ್ ತುನ್ನೂರ, ಶಾಸಕ

ಸಮಗ್ರ ಮಾಹಿತಿ ಒದಗಿಸಿ: ಈ.ತುಕಾರಾಂ

ಬಳ್ಳಾರಿ: ಅಧಿಕಾರಿಗಳು ತಮ್ಮ ಇಲಾಖೆಗಳ ಸಮಗ್ರ ಮಾಹಿತಿಯನ್ನು ಕನ್ನಡಿಯಂತೆ ಸಿದ್ದವಿಟ್ಟುಕೊಂಡು ಸಭೆಗಳಲ್ಲಿ ಪ್ರಸ್ತುತಪಡಿಸಬೇಕು. ಕಥೆ ಹೇಳಿದರೆ ಕೇಳೋಲ್ಲ ಎಂದು ಸಂಸದ ಈ.ತುಕಾರಾಂ ಹೇಳಿದರು.

ನಗರದ ಜಿಪಂ ನಜೀರ್ ಸಾಬ್ ಸಭಾಂಗಣದಲ್ಲಿ ಬುಧವಾರ ನಡೆದ ಜಿಲ್ಲಾ ಅಭಿವೃದ್ಧಿ ಸಮನ್ವಯ ಉಸ್ತುವಾರಿ ಸಮಿತಿ 'ದಿಶಾ' ಸಮಿತಿಯ 3ನೇ ತ್ರೈಮಾಸಿಕ ಸಭೆಯಲ್ಲಿ ಮಾತನಾಡಿ, ಅಧಿಕಾರಿಗಳು ಸಭೆಗೆ ಸತ್ಯಾಂಶ, ಸಮರ್ಪಕ ಮಾಹಿತಿ ನೀಡಿದರೆ, ಜನರ ಅಭಿವೃದ್ಧಿಗೆ ಬೇಕಾದ ಅನುದಾನ ಕುರಿತು ಸರ್ಕಾರಗಳ ಮುಂದೆ ಪ್ರಸ್ತಾಪಿಸಲು ಸಾಧ್ಯವಾಗಲಿದೆ ಎಂದು ಸೂಚಿಸಿದರು.

ಅಸಂಘಟಿತ ವಲಯದಲ್ಲಿನ ಸಣ್ಣ ಆಹಾರ ಸಂಸ್ಕರಣಾ ಘಟಕಗಳನ್ನು ಉತ್ತೇಜಿಸಲು, ಅವರಿಗೆ ಸಾಲ ಸೌಲಭ್ಯ ನೀಡಲು ಪ್ರಧಾನ ಮಂತ್ರಿ ಸೂಕ್ಷ್ಮ ಆಹಾರ ಸಂಸ್ಕರಣಾ ಉದ್ಯಮಗಳ ಯೋಜನೆಯಡಿ ಸಾಲಕ್ಕಾಗಿ ಸಲ್ಲಿಸಿದ ಅರ್ಜಿಗಳಲ್ಲಿ ಮಂಜೂರಾತಿಗಳಿಗಿಂತ ತಿರಸ್ಕಾರಗೊಂಡಿರುವ ಅರ್ಜಿಗಳೇ ಹೆಚ್ಚಾಗಿವೆ. ಯಾವ ಕಾರಣಕ್ಕೆ, ಜನರಿಗೆ ಸರಿಯಾದ ಮಾಹಿತಿ ನೀಡಿಲ್ಲ. ಯಾವ ಕಾರಣಕ್ಕಾಗಿ ತಿರಸ್ಕಾರಗೊಂಡಿವೆ ಎಂದು ಖಾರವಾಗಿ ಪ್ರಶ್ನಿಸಿದರು.

ಬ್ಯಾಂಕ್ ಅಧಿಕಾರಿಗಳಿಗೆ ರೈತರ ಮೇಲೆ ಕಾಳಜಿ ಇಲ್ಲ, ಅವರ ಹಣದಿಂದಲೇ ಬ್ಯಾಂಕ್‌ಗಳು ವ್ಯವಹಾರ ನಡೆಸುತ್ತಿವೆ. ಮುಖ್ಯವಾಗಿ ಜಿಲ್ಲಾ ಲೀಡ್ ಬ್ಯಾಂಕ್ ಅಧಿಕಾರಿಗಳ ಸಭೆಗಳು ನಡೆಯುತ್ತಿಲ್ಲ, ಕೃಷಿ, ತೋಟಗಾರಿಕೆ ಅಧಿಕಾರಿಗಳು ರೈತರ ಲೋನ್ ಅರ್ಜಿಗಳಿಗೆ ಸಂಬಂಧಿಸಿದಂತೆ ಬೇಕಾದ ಪೂರಕ ದಾಖಲೆಗಳ ಮಾಹಿತಿ ನೀಡಬೇಕು. ಬೆಳೆವಿಮೆ ನೋಂದಣಿಗೆ ಹೆಚ್ಚಾಗಿ ಕಾಳಜಿ ವಹಿಸಬೇಕು. ರೈತರ ಪ್ರೋತ್ಸಾಹಕ್ಕೆ ಬೆನ್ನೆಲುಬಾಗಬೇಕು. ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಅತ್ಯಾಧುನಿಕ ಕೃಷಿ ಉತ್ಪನ್ನ ಮಾರುಕಟ್ಟೆ ನಿರ್ಮಾಣ ಮಾಡಲು ಮಾಸ್ಟರ್ ಪ್ಲಾನ್ ರೂಪಿಸಬೇಕು ಎಂದು ಸೂಚಿಸಿದರು.

ಡಿಹೆಚ್‌ಒ ಡಾ.ಯಲ್ಲಾ ರಮೇಶ್ ಬಾಬು, ಜಿಲ್ಲೆಯಲ್ಲಿ ಔಷಧಿಗಳ ಕೊರತೆ ಕಂಡುಬಂದಿಲ್ಲ ಎಂದು ಸಭೆಗೆ ತಿಳಿಸಿದರು. ರಾಜ್ಯ ಸಭೆ ಸದಸ್ಯ ಡಾ.ಸೈಯದ್ ನಾಸೀರ್ ಹುಸೇನ್ ಮಾತನಾಡಿದರು. ಸಂಡೂರು ಶಾಸಕಿ ಈ.ಅನ್ನಪೂರ್ಣ, ವಿಪ ಶಾಸಕ ವೈ.ಎಂ.ಸತೀಶ್, ಬಳ್ಳಾರಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ, ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್. ಕೆ., ಜಿಪಂ ಸಿಇಒ ಮಹಮ್ಮದ್ ಹಾರಿಸ್ ಸುಮೇರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಸುಮನ್ ಡಿ. ಪೆನ್ನೇಕರ್, ಬಳ್ಳಾರಿ ವಲಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಡಾ. ಕೆ.ಎನ್. ಬಸವರಾಜ, ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್.ಮಂಜುನಾಥ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಸಾವಯವ ಕೃಷಿ ರೈತರಿಗೆ ವರದಾನ

ಹಗರಿಬೊಮ್ಮನಹಳ್ಳಿ: ಹವಮಾನ ವೈಪರೀತ್ಯದಿಂದ ಬೆಲೆ ಇಳಿಕೆಯಿಂದ ಸಂಕಷ್ಟಕ್ಕೆ ಸಿಲುಕುವ ರೈತರಿಗೆ ಸಾವಯವ ಕೃಷಿ ಅಳವಡಿಸಿಕೊಂಡಲ್ಲಿ ವರದಾನವಾಗುತ್ತದೆ ಎಂದು ಡಾ. ಮಹೇಶ್ವರ ಸ್ವಾಮೀಜಿ ಹೇಳಿದರು.

ಮಂಗಳವಾರ ತಾಲೂಕಿನ ಪುಣ್ಯಕ್ಷೇತ್ರ ನಂದಿಪುರ ಶ್ರೀಗುರು ದೊಡ್ಡಬಸವೇಶ್ವರ ಮಠದ ಆವರಣದಲ್ಲಿ ಆಯೋಜಿಸಿದ್ದ ಸಾವಯವ ಪದ್ಧತಿಯಲ್ಲಿ ನುಗ್ಗೆಕಾಯಿ ಬೆಳೆ ಬೆಳೆಯುವ ರೈತರಿಗೆ ಒಂದು ದಿನದ ಕಾರ್ಯಾಗಾರದಲ್ಲಿ ಮಾತನಾಡಿ, ಸಾವಯವ ಕೃಷಿಯಿಂದ ಮಣ್ಣಿನ ಫಲವತ್ತತೆಯ ಜೊತೆಗೆ ಆರೋಗ್ಯವೃದ್ಧಿಗೆ ಸಹಕಾರಿಯಾಗುತ್ತದೆ.


ಭೂಮಿಯ ಪೋಷಕಾಂಶಗಳು ಸಮೃದ್ಧವಾಗುವುದಲ್ಲದೆ, ಆ ಭೂಮಿಯಲ್ಲಿ ಬೆಳೆದ ಆಹಾರ ಪದಾರ್ಥಗಳ ಸೇವನೆಯಿಂದ ಆರೋಗ್ಯಯುತ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ ಎಂದರು.

ನುಗ್ಗೆ ಮೌಲ್ಯವರ್ಧಕರಾದ ಕೊಪ್ಪಳದ ಬಸಯ್ಯ ಹಿರೇಮಠ ಮಾತನಾಡಿ, ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಾವಯವ ಕೃಷಿ ಪದಾರ್ಥಗಳಿಗೆ ಭಾರಿ ಬೇಡಿಕೆ ಇದೆ. ನಾವು ತಿನ್ನುವ ಆಹಾರ ಹೇಗಿದೆ ಎಂಬ ಅರಿವು ಪ್ರತಿಯೊಬ್ಬರಿಗೂ ಇರಬೇಕು. ಎಫ್‌ಎಸ್ ಎಸ್‌ಎಐ ಮಾನದಂಡಗಳಿಗೆ ಅನುಗುಣವಾಗಿ ಉತ್ಪಾದನೆ ಮಾಡುವುದು ಅಗತ್ಯ ಎಂದರು.

ಕೃಷಿ ವಿಜ್ಞಾನಿ ಮಹಾಂತೇಶ್ ಪಾಟೀಲ್ ಮಾತನಾಡಿ, ಬೆಳೆ ಮಾತ್ರವಲ್ಲದೆ ಸಂಪೂರ್ಣ ತೋಟವನ್ನು ಸಾವಯವವಾಗಿ ರೂಪಿಸುವುದು ಅಗತ್ಯ. ರೈತರನ್ನು ದಿಕ್ಕು ತಪ್ಪಿಸುವ ಕೆಲಸಗಳು ನಡೆಯುತ್ತಿದ್ದು, ಸರಕಾರಕ್ಕಿಂತ ಸಮಾಜ ದೊಡ್ಡದು ಎಂದು ಅಭಿಪ್ರಾಯಪಟ್ಟರು.

ಲೇಖಕ ಸ್ವರೂಪ್ ಕೊಟ್ಟೂರು ಪ್ರಾಸ್ತಾವಿಕ ಮಾತನಾಡಿದರು. ಈ ವೇಳೆ ಸಂಖ್ಯಾಶಾಸ್ತ್ರದ ಎಂ. ಶಿವಮೂರ್ತಿ, ಸಾವಯವ ಕೃಷಿಕ ಬಿ.ಎಂ. ವೀರಪ್ಪಯ್ಯ, ಬಿದರಕೇರಿ ಶಿವರಾಜ, ಆದಿತ್ಯ ಚಿಕ್ಕಣ್ಣ, ಬೆಂಗಳೂರಿನ ವಿಷ್ಣು, ನಿಯಾಜಿ, ಕುಮಾರಗೌಡ, ವಸಂತ ಮಾಲವಿ ಸೇರಿದಂತೆ ಹಲವರು ಉಪಸ್ಥಿತರಿದ್ದರು. ಆಡಳಿತಾಧಿಕಾರಿ ಕೊಟ್ರುದೇವ್ರು ನಿರ್ವಹಿಸಿದರು.

> **ಅತಿಯಾದ ರಾಸಾಯನಿಕ ಬಳಕೆಯಿಂದ ಭೂಮಿಯ ಫಲವತ್ತತೆ ಕುಂಠಿತಗೊಂಡಿದ್ದು, ಬೆಳೆದ ಆಹಾರ ಪದಾರ್ಥಗಳು ವಿಷಪೂರಿತವಾಗುತ್ತಿರುವುದು ಚಿಂತಾಜನಕ. ರೈತರು ಕೇವಲ ಹಣ ಸಂಪಾದನೆಗಿಂತ ಆರೋಗ್ಯ ಸಂಪತ್ತಿನ ಕಡೆ ಹೆಚ್ಚು ಗಮನ ಹರಿಸಬೇಕು.**
> ■ ಡಾ.ಮಹೇಶ್ವರ ಸ್ವಾಮೀಜಿ, ನಂದಿಪುರ, ಹಗರಿಬೊಮ್ಮನಹಳ್ಳಿ



ಬಸ್ಸಿನ ಸಮಸ್ಯೆ ಬಗೆಹರಿಸಲು ಮನವಿ



ಕಂಪ್ಲಿ: ಎಬಿವಿಪಿ ಬಳ್ಳಾರಿ ಜಿಲ್ಲೆಯ ಕಂಪ್ಲಿ ಶಾಖೆ ವತಿಯಿಂದ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜ್ ವಿದ್ಯಾರ್ಥಿಗಳ ಬಸ್ಸಿನ ಸಮಸ್ಯೆ ಪರಿಹರಿಸುವಂತೆ ಪ್ರತಿಭಟನೆ ಮಾಡಿ ಕಂಪ್ಲಿ ಬಸ್ ನಿಲ್ದಾಣದ ನಿಯಂತ್ರಣಾಧಿಕಾರಿಗಳಿಗೆ ಮನವಿ ಪತ್ರ ನೀಡಲಾಯಿತು.

ಸಪ್ತಗಿರಿ ಮಂಚಿಕಂಠಿ-ರಾಜ್ಯ ಕಾರ್ಯಕರಣಿ ಸದ್ಯಸ ತಾಳ್ವರ ಭರತ್ -ಬಳ್ಳಾರಿ ಜಿಲ್ಲಾ ಸಂಘಟನ ಕಾರ್ಯದರ್ಶಿ, ವಿದ್ಯಾರಥಿಗಳಾದ ಕಾರ್ತಿಕ್, ಶಶಾಂಕ್, ರಾಮು, ಅನು ಮತ್ತು ಇನ್ನಿತರರು ಇದ್ದರು. ಹೊಸಪೇಟೆ ಬೈಪಾಸ್ ರಸ್ತೆಯಲ್ಲಿರುವ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಿಂದ ಕಂಪ್ಲಿಯ ಹೊಸ ಬಸ್ ನಿಲ್ದಾಣದವರೆಗೂ ಪಾದಯಾತ್ರೆ ಮೂಲಕ ಪ್ರತಿಭಟನೆ ಮಾಡಲಾಯಿತು.



ಬಳ್ಳಾರಿ: ಸಮೀಪದ ದಮ್ಮೂರು ಗ್ರಾಮದ, ರೈತಾಪಿ ಕುಟುಂಬದ ಪ್ರತಿಭಾನ್ವಿತ ಲೆಕ್ಕ ಪರಿಶೋಧಕ ಪುರುಷೋತ್ತಮ ರೆಡ್ಡಿ ಅವರು, ಬಳ್ಳಾರಿ ಶಾಖೆಯ ಐಸಿಎಐ ಅಧ್ಯಕ್ಷರಾಗಿ ಆಯ್ಕೆಯಾಗಿದ್ದು, ಕರ್ನಾಟಕ ರೆಡ್ಡಿ ಜನ ಸಂಘ ಬೆಂಗಳೂರು ನಿರ್ದೇಶಕ ಗಣಪಾಲ್ ಐನಾಥ್ ರೆಡ್ಡಿ ಅವರು ಅಭಿನಂದನೆ ಸಲ್ಲಿಸಿದ್ದಾರೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮುಖಂಡರಾದ ಕಾಟ್ಲಾ ಗೋವಿಂದ ರೆಡ್ಡಿ, ಶ್ರೀನಿವಾಸ್ ರೆಡ್ಡಿ, ಸುರೇಶ್ ರೆಡ್ಡಿ, ಕೆ.ತಿಮ್ಮಾರೆಡ್ಡಿ ಇತರರು, ನೂತನ ಅಧ್ಯಕ್ಷರಿಗೆ ಶುಭ ಹಾರೈಸಿದ್ದಾರೆ.


ಆಡಳಿತ ಸೌಧ ನಿರ್ಮಾಣಕ್ಕೆ ಅಡ್ಡಿಪಡಿಸುವವರ ವಿರುದ್ಧ ಕ್ರಮ

ಕೊಟ್ಟೂರು: ಪಟ್ಟಣದಲ್ಲಿ ರೂ. 7 ಕೋಟಿಗೂ ಹೆಚ್ಚು ಅನುದಾನದಲ್ಲಿ ನಿರ್ಮಾಣವಾಗುತ್ತಿರುವ ಆಡಳಿತ ಸೌಧದ ನಿರ್ಮಾಣ ಕಾರ್ಯವು ತ್ವರಿತ ಗತಿಯಲ್ಲಿ ಸಾಗಿದ್ದು, ಆಡಳಿತ ಸೌಧ ನಿರ್ಮಾಣ ಕಾರ್ಯವು ಕಳಪೆಯಾಗಿದೆ ಎಂದು ಆರೋಪಿಸಿ ಕೆಲವು ಸಂಘಟನೆಗಳ ಹೆಸರಿನಲ್ಲಿ ಕಾಮಗಾರಿ ನಿಲ್ಲಿಸುತ್ತಿರುವುದು ಸರಿಯಲ್ಲ, ಅಂತಹವರ ವಿರುದ್ಧ ಕಾನೂನಿನ ಕ್ರಮ ಕೈಗೊಳ್ಳಲು ಮುಂದಾಗಿ ಎಂದು ಶಾಸಕ ಕೆ. ನೇಮಿರಾಜ್ ನಾಯ್ಕ್ ಅವರು ತಹಶೀಲ್ದಾರ್ ಹಾಗೂ ಪೊಲೀಸ್ ಅಧಿಕಾರಿಗಳಿಗೆ ಸೂಚಿಸಿದರು.

ಪಟ್ಟಣದ ಸರ್ಕಾರಿ ಸಮುದಾಯ ಆರೋಗ್ಯ ಕೇಂದ್ರದ ಪಕ್ಕದಲ್ಲಿ ನಡೆಯುತ್ತಿರುವ ಆಡಳಿತ ಸೌಧದ ಕಾಮಗಾರಿ ನಿರ್ಮಾಣ ಸ್ಥಳಕ್ಕೆ ಭೇಟಿ ನೀಡಿ ಮಾತನಾಡಿದರು. ಇತ್ತೀಚೆಗೆ ಕೆಲವರು ಕಾಮಗಾರಿ ನಡೆಯುತ್ತಿರುವ ಸ್ಥಳಕ್ಕೆ ಭೇಟಿ ನೀಡಿ ಕಳಪೆ ಕಾಮಗಾರಿ ನಡೆಯುತ್ತಿದೆ ಎಂದು ಆರೋಪಿಸಿ ಕಾಮಗಾರಿ ನಿಲ್ಲಿಸಲು ಮುಂದಾಗಿದ್ದಾರೆ. ಕಾಮಗಾರಿ ಕಳಪೆಯಾಗಿದ್ದರೆ ಕ್ವಾಲಿಟಿ ಕಂಟ್ರೋಲರ್‌ಗೆ ದೂರು ನೀಡಲಿ. ಆದರೆ ಕಾಮಗಾರಿ ನಿಲ್ಲಿಸಿದರೆ ನಿಗದಿತ ಅವಧಿ ಒಳಗೆ ಆಡಳಿತ ಸೌಧ ನಿರ್ಮಾಣ ಸಾಧ್ಯವಾಗುವುದಿಲ್ಲ ಎಂದು ತಿಳಿಸಿದರು.

ಕ್ಷೇತ್ರದಾದ್ಯಂತ ನಡೆಯುವ ಅಭಿವೃದ್ಧಿ ಕಾಮಗಾರಿಗಳ ಗುಣಮಟ್ಟದಲ್ಲಿ ರಾಜಿಯಾಗುವ ಪ್ರಶ್ನೆಯೇ ಇಲ್ಲ ಹಾಗೂ ಕಳಪೆ ಕಾಮಗಾರಿ ಕಂಡು ಬಂದರೆ ಸಂಬಂಧಿಸಿದ ಗುತ್ತಿಗೆದಾರರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಶಾಸಕ ಕೆ. ನೇಮಿರಾಜ್ ನಾಯ್ಕ್ ತಿಳಿಸಿದರು.

ಈ ವೇಳೆ ತಹಶೀಲ್ದಾರ್ ಜಿ.ಕೆ. ಅಮರೇಶ್, ಪಪಂ ಮುಖ್ಯ ಅಧಿಕಾರಿ ನಸರುಲ್ಲಾ, ತಾಪಂ ಸಹಾಯಕ ನಿರ್ದೇಶಕ ಹೆಚ್.ವಿಜಯ್ ಕುಮಾರ್, ಪೊಲೀಸ್ ಅಧಿಕಾರಿಗಳು, ಮುಖಂಡರಾದ ಬೂದಿ ಶಿವಕುಮಾರ್, ಭಾವಿಕಟ್ಟಿ ಶಿವಾನಂದ್, ತಿಮಲಾಪುರ ಕೊಟ್ರೇಶ್, ಹೆಚ್. ಗುರು ಬಸವರಾಜ್, ಗಂಗಮ್ಮಳ್ಳಿ ಬಸವರಾಜ್, ಗುರುಮೂರ್ತಿ, ಉಮೇಶ್ ಗೌಡ ಇತರರು ಇದ್ದರು.



ಪುಸ್ತಕ ಮಾರಾಟದ ಹಣದಲ್ಲಿ ಅನ್ನ ಸಂತರ್ಪಣೆ

ಹೂವಿನ ಹಡಗಲಿ: ತಾಲೂಕಿನ ಕಾಗನೂರು (ಕೊಟ್ನಿಕಲ್ ಕ್ಯಾಂಪ್) ಗ್ರಾಮದಲ್ಲಿ ಶ್ರೀ ಶಿವಲಿಂಗೇಶ್ವರನ 15ನೇ ವರ್ಷದ ಜಾತ್ರಾ ಮಹೋತ್ಸವ ಕಾರ್ಯಕ್ರಮದ ಅಂಗವಾಗಿ ಅನ್ನ ಸಂತರ್ಪಣೆ ಸೇವೆಯನ್ನು ಗೌಡ್ರು ಹಾಲಮ್ಮ ಗೌಡ್ರು ಶಿವಕುಮಾರ ಪತ್ರಕರ್ತರು ಹಾಗೂ ಸಮಾಜ ಸೇವಕರು ಇವರು ಜಾತ್ರೋತ್ಸವಕ್ಕೆ ಆಗಮಿಸಿದ್ದಂತಹ ಭಕ್ತಾದಿಗಳಿಗೆ ತಾವು ರಚಿಸಿದಂತಹ ಪುಸ್ತಕಗಳನ್ನು ಮಾರಿ ಅದರಿಂದ ಬಂದಂತಹ ಹಣದಲ್ಲಿ ನೆರೆದ ಭಕ್ತರಿಗೆ ಅನ್ನದಾಸೋಹ ಕಾರ್ಯಕ್ರಮ ಏರ್ಪಡಿಸಿದ್ದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಒಡೆಯರ್ ಚಂದ್ರಶೇಖರ ಶಿವಾಚಾರ್ಯ ಶ್ರೀಗಳು, ಹೊನ್ನಾಳಿ-ಪುರ ಇವರ ಕೃಪಾಶೀರ್ವಾದದಿಂದ ಪಟ್ಟದ ಅಭಿನವ ಸಿದ್ದವೀರ ಶಿವಾಚಾರ್ಯ ಶ್ರೀಗಳು, ಸೋಗಿ ಪುರವರ್ಗಮಠ, ಪುರ ನವಲಿ ಹಿರೇಮಠದ ಸಿದ್ದಲಿಂಗ ಶ್ರೀಗಳು, ಸದ್ಗುರು ಮಹಾದೇವತಾತನ ಕೃಪಾಸಂಜಾತರು, ಉಘಾಮಠ ಹಂಪಸಾಗರ, ಮ.ನಿ.ಪ್ರ. ಹಿರಿಶಾಂತವೀರ ಶ್ರೀಗಳು, ಗವಿಮಠ ಹೂವಿನಹಡಗಲಿ, ಸದ್ಗುರು ಗಾಡಿತಾತನವರು ಚೌಕಿಮಠ, ಕೊಂಬಳಿ ಕಾರ್ಯಕ್ರಮ ಉದ್ಘಾಟಿಸಿದರು. ಶಿವಲಿಂಗ ರುದ್ರಮುನಿ ಶಿವಾಚಾರ್ಯ ಶ್ರೀಗಳು ನವಲಿ ಹಿರೇಮಠ ಕಾಗನೂರು ನವಲಿ ನರೆಗಲ್ ಬಿಜಾಪುರ ಕರೂರು ಹಂಪಸಾಗರ ಸಾನಿಧ್ಯ ವಹಿಸಿದ್ದರು.

ಶಾಸಕ ಎಲ್.ಕೃಷ್ಣನಾಯಕ ಮಾತನಾಡಿ, ಇಂದಿನ ಕಾಲದಲ್ಲಿ ಶ್ರೀಮಂತ ವ್ಯಕ್ತಿಗಳು ಆರ್ಥಿಕವಾಗಿ ಎಂತಹ ಬಲಿಷ್ಠವಾಗಿದ್ದರು ಕೂಡ ಬಡವರಿಗೆ, ಹಸಿದವರಿಗೆ, ಭಕ್ತರಿಗೆ ಅನ್ನ ದಾಸೋಹ, ಅನ್ನ ಸಂತರ್ಪಣೆ ಕಾರ್ಯಕ್ರಮಗಳನ್ನು ಮಾಡುವುದು ಕಷ್ಟ ಸಾಧ್ಯ ವಿಷಯ ಆದರೆ ಕಾಗನೂರು ಗ್ರಾಮದ ಶಿವಕುಮಾರ್ ಎಂಬಾತನು ಬಡ ಕುಟುಂಬದಿಂದ ಜನಿಸಿ. ಕಷ್ಟ ದುಃಖಗಳ ನಡುವೆ ಏಳು, ಬೀಳುಗಳನ್ನು ಕಂಡು. ಇಂತಹ ಸನ್ನಿವೇಶದಲ್ಲಿ ತಾನು ಬರೆದ ಪುಸ್ತಕಗಳನ್ನ ಮಾರಿ ಅದರಿಂದ ಬಂದಂತಹ ಹಣದಲ್ಲಿ ಭಕ್ತರ ಸೇವೆ ಮಾಡುತ್ತಿರುವುದು ನಿಜಕ್ಕೂ ಶ್ಲಾಘನೀಯವಾದದ್ದು. ಆ ದೇವರು ಅವರಿಗೆ ಇನ್ನೂ ಹೆಚ್ಚಿನ ಮಟ್ಟದಲ್ಲಿ ಜನರ ಸೇವೆಯನ್ನು ಮಾಡುವಂತ ಶಕ್ತಿ ನೀಡಲಿ ಎಂದು ಶುಭ ಹಾರೈಸಿದರು.



ಮಹೋತ್ಸವದ ವೈದಿಕ ಪೌರೋಹಿತ್ಯವನ್ನು ಆಳವುಂಡಿಮಠದ ಹಾಲಪ್ಪಯ್ಯಶಾಸ್ತ್ರಿಗಳು ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು ಸೋಗಿ ಹಾಗೂ ಶರಣಪ್ಪಯ್ಯ ಶಾಸ್ತ್ರಿ, ಹೂವಿನಹಡಗಲಿ ನೆರವೇರಿಸಿಕೊಟ್ಟರು.

ಗ್ರಾಮದ ಸರ್ವ ಸದಸ್ಯರು, ದೇವಸ್ಥಾನದ ಕಮಿಟಿ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು, ಭಕ್ತರು, ಇತರರಿದ್ದರು.

ಅರ್ಜಿ ಆಹ್ವಾನ

ವಿಜಯನಗರ: ಸಮಾಜ ಕಲ್ಯಾಣ ಇಲಾಖೆ ವತಿಯಿಂದ 2026-27ನೇ ಸಾಲಿಗೆ ಡಾ.ಬಾಬು ಜಗಜೀವನ ರಾಂ ಮತ್ತು ಡಾ.ಬಿ.ಆರ್. ಅಂಬೇಡ್ಕರ್ ರವರ ಜನ್ಮದಿನಾಚರಣೆ ಅಂಗವಾಗಿ ಡಾ.ಬಾಬು ಜಗಜೀವನ ರಾಂ ಹಾಗೂ ಡಾ.ಬಿ.ಆರ್. ಅಂಬೇಡ್ಕರ್ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ವಿಜಯನಗರ ಜಿಲ್ಲಾ ವ್ಯಾಪ್ತಿಯಲ್ಲಿನ ಅರ್ಹರು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಕಚೇರಿಯಿಂದ ಅರ್ಜಿಗಳನ್ನು ಪಡೆದು ಭರ್ತಿ ಮಾಡಿದ ಅರ್ಜಿಗಳನ್ನು ಆಯಾ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆಗೆ ಸಲ್ಲಿಸಲು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ವೈ.ಎ.ಕಾಳೆ ತಿಳಿಸಿದ್ದಾರೆ.

ಶಿವಶರಣ ಹನುಮಪ್ಪ ತಾತನವರ ದೇವಾಲಯ ಉದ್ಘಾಟನೆ ಇಂದು

▸ ಪುಷ್ಪವತಿ ಜಿಎಂ ಬಸಯ್ಯ

ಕುರುಗೋಡು: ಪವಾಡ ಪುರುಷ ಹನುಮಪ್ಪ ತಾತಾ ಎಂಟು ವರ್ಷದ ಹುಡುಗನಿದ್ದಾಗ, ಹಳೇ ನೆಲ್ಲುಡಿ ಗ್ರಾಮದಲ್ಲಿ ಸಹಪಾಠಿಗಳೊಂದಿಗೆ ಆಟ ಆಡುತ್ತಿರುವಾಗ ದೇವರ ಸ್ವರೂಪಿಯಾಗಿ ಬಂದ ಶರಣರು, ಬೀಡಿ ಸೇದುವ ನೆಪದಲ್ಲಿ ಹನುಮಪ್ಪ ತಾತನೊಳಗೊಂಡ ಮಕ್ಕಳಲ್ಲಿ ಬೆಂಕಿ ಕೊಳ್ಳಿ ಇದ್ದರೆ ಕೊಡಿ ಎಂದಾಗ ಮಕ್ಕಳೆಲ್ಲರೂ ಓಡಿ ಹೋಗಾಗ, ತಾತ ಮನೆಗೆ ಓಡಿ ಹೋಗಿ ಒಲೆಯಲ್ಲಿದ್ದ ಕೊಳ್ಳಿಯನ್ನು ತಂದಿದ್ದಾನೆ.




ಕೊಳ್ಳಿ ತರುವುದೊರಳಗಾಗಿ ಶರಣರು ಊರು ದಾಟಿ ಹೊರಗಡೆ ಹೊರಟು ಹೋಗುತ್ತಿರುವುದು ತಿಳಿದಿದೆ. ತಕ್ಷಣ ಹನುಮಪ್ಪ ಇವರು ಓಡೋಡಿ ಹೋಗಿ ಶರಣರಿದ್ದ ಸ್ಥಳಕ್ಕೆ ತೆರಳಿ ಕೊಳ್ಳಿ ನೀಡಿದ್ದಾನೆ. ಇತನ ಸೇವಾ ಕಾರ್ಯವನ್ನು ನೋಡಿದ ಶರಣರು ನೀನು ನುಡಿದಂತ ನುಡಿಗಳು ಸತ್ಯವಾಗಲಿವೆ. ನಿನ್ನ ಪವಾಡ ಅತ್ಯದ್ಭುತವಾಗಿದೆ. ತಾತನಿಗೆ ಓಂಕಾರದ ಮೂಲಕ ಆಶೀಸಿದ್ದಾರೆ.

ಇದರಿಂದ ಭಕ್ತರು ನಿಮ್ಮ ಸೇವೆ ಮಾಡಲಿದ್ದಾರೆ. ನೀವು ಜಗಜ್ಯೋತಿಯಾಗಿ ಪ್ರಜ್ವಲಿಸಲಿದ್ದೀರಿ ಎಂಬ ಆಶೀರ್ವಾದಂತೆ ಹನುಮಪ್ಪ ಅರಿತ ಇಲ್ಲಿನ ನೆಲ್ಲುಡಿಯ ಭಕ್ತರು ದಿನನಿತ್ಯ ನಡೆದುಕೊಳ್ಳುತ್ತಿದ್ದಾರೆ. ಇಲ್ಲಿನ ಭಲುವಾದಿ ಕಾಲೋನಿಯಲ್ಲಿನೆಲೆಸಿರುವಹನುಮಪ್ಪತಾತನನ್ನು ಭಕ್ತರು ಪೂಜಿಸಿ, ಆರಾಧಿಸುತ್ತಿದ್ದಾರೆ. ಈತನ ಪವಾಡಕ್ಕೆ ಸಾಕಷ್ಟು ಜನರು ಮನಸೋತಿದ್ದಾರೆ. ಹೀಗಾಗಿ ಇಲ್ಲಿನ ಹಳೇ ನೆಲ್ಲುಡಿಯಲ್ಲಿ ಭಕ್ತರಿಂದ ನೂತನ ದೇವಾಲಯ ಹಾಗೂ ಮೂರ್ತಿ ಪ್ರತಿಷ್ಠಾಪನೆಗೆ ಸಿದ್ದತೆ ಮಾಡಿಕೊಂಡಿದ್ದಾರೆ.

ನೂತನ ದೇವಾಲಯ, ಮೂರ್ತಿ ಪ್ರತಿಷ್ಠಾಪನೆ

ಹಳೇ ನೆಲ್ಲುಡಿ ಗ್ರಾಮದ 1 ನೇ ವಾರ್ಡಿನ ಭಲವಾದಿ ಕಾಲೋನಿಯಲ್ಲಿ ನೆಲೆಸಿರುವ ಶಿವ ಶರಣ ಹನುಮಪ್ಪ ತಾತನ ನೂತನ ದೇವಾಲಯ ಹಾಗೂ ಶಿಲಾ ಮೂರ್ತಿ ಪ್ರತಿಷ್ಠಾಪನೆ ಅಂಗವಾಗಿ ಸತತ ನಾಲ್ಕು ದಿನಗಳ ಕಾಲ ವಿವಿಧ ಧಾರ್ಮಿಕ ಕಾರ್ಯಕ್ರಮದೊಂದಿಗೆ ಉದ್ಘಾಟನೆಗೊಳ್ಳಲು ಸಿದ್ಧವಾಗಿದೆ.



ಫೆ.26ರಂದು ಬೆಳಿಗ್ಗೆ ಎಮ್ಮಿಗನೂರು ವಾಮದೇವ ಮಹಾಂತ ಶಿವಾಚಾರ್ಯ ಮಹಾಸ್ವಾಮಿಯ ಅಮೃತ ಹಸ್ತದಿಂದ ನೂತನ ಶಿಲಾ ಮೂರ್ತಿ ಪ್ರತಿಷ್ಠಾಪನೆ ಹಾಗೂ ದೇವಾಲಯ ಉದ್ಘಾಟನೆಯೊಂದಿಗೆ ವಿವಿಧ ಧಾರ್ಮಿಕ ಕಾರ್ಯ ಜರುಗಲಿದೆ. ನಂತರ ಸಾಮೂಹಿಕ ವಿವಾಹ ಕಾರ್ಯಕ್ರಮಗಳು ನಡೆಯಲಿವೆ. ಬುಕ್ಕಸಾಗರದ ಕರಿಸಿದ್ದೇಶ್ವರ ವಿಶ್ವಾರಾಧ್ಯ ಶಿವಾಚಾರ್ಯ ಮಹಾಸ್ವಾಮಿ ಹಾಗೂ ನೆಲ್ಲುಡಿ ಎನ್. ಎಂ.ಕೊಟ್ರಯ್ಯ ತಾತನವರ ಸಾನ್ನಿಧ್ಯದಲ್ಲಿ ವಿವಿಧ ಧಾರ್ಮಿಕ ಕೈಂಕಾರ್ಯಗಳು ಶ್ರದ್ಧೆಯಿಂದ ನಡೆಯಲಿವೆ. ಶಾಸಕ ಜೆ.ಎನ್. ಗಣೇಶ್ ಉದ್ಘಾಟಿಸಲಿದ್ದಾರೆ. ಜನಪ್ರತಿನಿಧಿಗಳು, ವಿಶೇಷ ಆಹ್ವಾನಿತರು, ಅತಿಥಿಗಳು ಭಾಗವಹಿಸಲಿದ್ದಾರೆ. ಈ ಎಲ್ಲಾ ಕಾರ್ಯಕ್ರಮಗಳು ಶಿವ ಶರಣ ಹನುಮಪ್ಪ ತಾತಾನವರ ದೇವಸ್ಥಾನ ಸೇವಾ ಸಮಿತಿ ನೇತೃತ್ವದಲ್ಲಿ ಸಮಸ್ತ ಭಕ್ತರೊಂದಿಗೆ ನೆರವೇರಲಿವೆ.